DISE CODE: 29261000103 ಸ್ಥಾಪನೆ:2010–11 SCHOOL CODE: EE0596

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

# ಸರ್ಕಾರಿ ಪ್ರೌಢಶಾಲೆ ಅತ್ತಿಗೋಡು,ಪಿರಿಯಾಪಟ್ಟಣ ತಾಲ್ಲೂಕು ಮೈಸೂರು ಜಿಲ್ಲೆ. 571102

## 10ನೇ ತರಗತಿ ನೂತನ ಪಠ್ಯಕ್ರಮ ಆಧಾರಿತ

ಇ–ಮೇಲ್–ghsattigodu@gmail.com ಬ್ಲಾಗ್– ghsattigodublogspot.in




# ಸಕ್ಸಸ್(SUCCESS)

**"ಮಕ್ಕಳ ರಕ್ಷಣೆ ಶಿಕ್ಷಣ ಬಲವರ್ಧನೆ ನಮ್ಮೆಲ್ಲರ ಹೊಣೆ"**

"ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ ಸಾಧಿಸುವ ಛಲ ಮನುಷ್ಯನಿಗಿರಬೇಕು "

## ಇತಿಹಾಸ
## ಅಧ್ಯಾಯ-1,
## ಭಾರತಕ್ಕೆ ಯೂರೋಪಿಯನ್ನರ ಆಗಮನ

**ಮುಖ್ಯಾಂಶಗಳು:**

- 17ನೇ ಶತಮಾನದವರಗೆ ಭಾರತದಲ್ಲಿ ಯುರೋಪಿನ ವ್ಯಾಪಾರವು **ಪೋರ್ಚುಗೀಸರ** ಏಕಸ್ವಾಮ್ಯತೆಗೆ ಒಳಪಟ್ಟಿತ್ತು.
- ಕರ್ನಾಟಿಕ್ ಯುದ್ಧಗಳು **ಇಂಗ್ಲಿಷರ** ಮತ್ತು **ಪ್ರೆಂಚರ** ನಡುವೆ ನಡೆದವು.
- ಪ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಇಂಗ್ಲಿಷರ ಸೇನಾಧಿಕಾರಿ **ಸರ್ ಐರ್‌ಕೂಟ.**
- ಪ್ಲಾಸಿಕದನದಲ್ಲಿ ಇಂಗ್ಲಿಷ ಸೇನೆಯ ನೇತೃತ್ವವಹಿಸಿದ್ದವನು **ರಾಬರ್ಟಕ್ಲೈವ್.**
- ಬಂಗಾಳದಲ್ಲಿ ದ್ವಿ-ಸರಕಾರವನ್ನು ಜಾರಿಗೆ ತಂದವನು **ರಾಬರ್ಟ್‌ಕ್ಲೈವ್**
- ಪೋರ್ಚುಗೀಸ್ ನಾವಿಕ **ವಾಸ್ಕೋಡಿಗಾಮ** ಕ್ರಿಶ **1498** ರಲ್ಲಿ ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿದನು.
- ವಾಸ್ಕೋಡಿಗಾಮ ಭಾರತದ **ಕಲ್ಲಿಕೋಟೆಗೆ** ಮೊದಲು ಬಂದು ತಲುಪಿದನು.
- ಕ್ರಿಶ **1453** ರಲ್ಲಿ **ಅಟೋಮನ್ ಟರ್ಕರು** ಕಾನ್‌ಸ್ಟಾಂಟಿನೋಪಲ್‌ನ್ನು ವಶಪಡಿಸಿಕೊಂಡರು.
- ಮೊಘಲ್ ಚಕ್ರವರ್ತಿಯಾದ **ಫರೂಕ್ ಸಿಯಾರ**ನು ಕಲ್ಕತ್ತಾ ಸಮೀಪದ ಕೆಲವು ಹಳ್ಳಿಗಳನ್ನು ಬ್ರಿಟಿಷರಿಗೆ ದತ್ತಿಯಾಗಿ ನೀಡಿದನು.
- ಮೊದಲ ಕರ್ನಾಟಿಕ್ ಯುದ್ದದ ಸಂದರ್ಭದಲ್ಲಿ ಇದ್ದ ಕರ್ನಾಟಿಕ್‌ದ ನವಾಬ **ಅನ್ವರುದ್ದೀನ್.**
- ಇಂಗ್ಲಿಷರು : ರಾಬರ್ಟಕ್ಲೈವ್ : : ಪ್ರೆಂಚರು : **ಡೂಪ್ಲೆ.**
- ಬ್ರಿಟಿಷರ ಸೇನಾಮುಖಂಡನಾಗಿದ್ದ **ಸರ್ ಐರ್‌ಕೂಟ್**ನು ವಾಂಡಿವಾಷ ಕದನದಲ್ಲಿ **ಪ್ರೆಂಚರ**ನ್ನು ಸಂಪೂರ್ಣವಾಗಿ ಸೋಲಿಸಿದನು.
- ಸಿರಾಜುದ್ದೌಲನ ನಂತರ ಬಂಗಾಳದ ನವಾಬನಾದವನು **ಮೀರ್‌ಜಾಫರ್**
- ಮೀರಜಾಫರನ ನಂತರ ಬಂಗಾಳದ ನವಾಬನಾದವನು **ಮೀರ್‌ಕಾಸಿಂ**
- ಪ್ಲಾಸಿ ಕದನ : 1757 : : ಬಕ್ಸಾರ ಕದನ : **1764**

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. 1453ರಲ್ಲಿ ಆಟೋಮನ್ ಟರ್ಕ್‌ರು **ಕಾನ್‌ಸ್ಟಾಂಟಿನೋಪಲ್** ನಗರವನ್ನು ವಶಪಡಿಸಿಕೊಂಡರು.
2. ಭಾರತ ಹಾಗೂ ಯೂರೋಪ್ ನಡುವೆ ಹೊಸ ಜಲಮಾರ್ಗವನ್ನು **ವಾಸ್ಕೋಡಗಾಮ**ನು ಕಂಡುಹಿಡಿದನು.
3. ಭಾರತದಲ್ಲಿ ಫ್ರೆಂಚರ ರಾಜಧಾನಿ **ಪಾಂಡಿಚೇರಿ**
4. ರಾಬರ್ಟ್ ಕ್ಲೈವ್‌ನು 1757ರಲ್ಲಿ ಸಿರಾಜುದ್ದೌಲನ **ಮೇಲೆ ಪಾಸ್ಲೀ ಕದನ** ಸಾರಿದನು.
5. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ದಿವಾನಿ ಹಕ್ಕನ್ನು **ಎರಡನೇ ಷಾ ಆಲಂ** ನೀಡಿದನು.
6. ಬಂಗಾಳದಲ್ಲಿ ದ್ವಿ ಪ್ರಭುತ್ವವನ್ನು ಜಾರಿಗೆ ತಂದವನು **ರಾಬರ್ಟ ಕ್ಲೈವ್.**

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಮಧ್ಯಕಾಲದಲ್ಲಿ ಭಾರತ ಮತ್ತು ಯೂರೋಪ್ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?**

ಮಧ್ಯದಲ್ಲಿ ಭಾರತದೊಂದಿಗೆ ಯೂರೋಪಿಯನ್ನರ ವ್ಯಾಪಾರವು ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ಜರುಗುತ್ತಿತ್ತು. ಅರಬ್ಬರು ಭಾರತದ ವ್ಯಾಪಾರೀ ಸರಕುಗಳನ್ನು ಕಾನ್‌ಸ್ಟಾಂಟಿನೋಪಲ್‌ಗೆ ತರುತ್ತಿದ್ಧರು. ಇಟಲಿಯ ವ್ಯಾಪಾರಿಗಳು ಈ ಸರಕುಗಳನ್ನು ಖರೀದಿಸಿ ಯೂರೋಪ್ ಖಂಡದಲ್ಲಿ ಮಾರುತ್ತಿದ್ದರು.

**2. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಸಹಾಯಕವಾದ ಅಂಶಗಳನ್ನು ಚರ್ಚಿಸಿ.**

- ➢ ಕಾನ್‌ಸ್ಟಾಂಟಿನೋಪಲ್ ನಗರದ ಪತನ.
- ➢ ಭಾರತೀಯ ಮಸಾಲೆ ಪದಾರ್ಥಗಳಿಗಿದ್ದ ಅಪಾರ ಬೇಡಿಕೆ.
- ➢ ನಾವಿಕರ ದಿಕ್ಸೂಚಿ, ಸಿಡಿಮದ್ದು, ಬಂದೂಕು, ಭೂಪಟಗಳ ಅನ್ವೇಷಣೆ.
- ➢ ಕ್ರೈಸ್ತ ಧರ್ಮದ ಪ್ರಸಾರ.

**3. ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯೂರೋಪಿಯನ್ನರನ್ನು ಪಟ್ಟಿ ಮಾಡಿ.**

ಪೋರ್ಚುಗೀಸರು. ಡಚ್ಚರು,ಬ್ರೀಟಿಷರು ಹಾಗೂ ಫ್ರೆಂಚರು.

**4. ಎರಡನೇ ಕರ್ನಾಟಿಕ್ ಯುದ್ಧವನ್ನು ವಿವರಿಸಿ.**

ಫ್ರೆಂಚರ ನೆರವಿನೊಂದಿಗೆ ಹೈದರಾಬಾದಿನಲ್ಲಿ ಸಲಬತ್‌ಜಂಗ್ ನಿಜಾಮ ಹುದ್ದೆಗೂ ಹಾಗೂ ಕರ್ನಾಟಕ್‌ನಲ್ಲಿ ಚಂದಾಸಾಹೇಬ್ ನವಾಬನ ಹುದ್ದೆಗೂ ನೇಮಿಸಲ್ಪಟ್ಟರು. ಚಂದಾಸಾಹೇಬನು ತಿರುಚನಾಪಳ್ಳಿ ಕೋಟೆ ಮೇಲೆ ಧಾಳಿ ಮಾಡಿದಾಗ ಚಾಣಕ್ಷನಾದ ರಾಬರ್ಟ್‌ಕ್ಲೈವ್‌ನು ಆರ್ಕಾಟಿನ ಮೇಲೆ ಧಾಳಿಮಾಡಿದನು. ಆರ್ಕಾಟಿನಲ್ಲಿ ನೆಡದ ಯುದ್ದದಲ್ಲಿ ಚಂದಾಸಾಹೇಬನನ್ನು ಕೊಲೆಮಾಡಲಾಯಿತು. ಮಹಮ್ಮದ್ ಆಲಿಯು ಅರ್ಕಾಟಿನ ನವಾಬನಾಗಿ ನೇಮಿಸಲ್ಪಟ್ಟನು

**5. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಕಾರಣಗಳು :–**

- ದಸ್ತಕ್‌ಗಳ ದುರುಪಯೋಗ.
- ನವಾಬನ ಅನುಮತಿಯಿಲ್ಲದೇ ಬ್ರಿಟಿಷರು ಪೋರ್ಟ್ ವಿಲಿಯಂ ಕೋಟೆ ಬಲಪಡಿಸಿಕೊಂಡಿದ್ದು.
- ಕಪ್ಪು ಕೋಣೆ ದುರಂತ.

**ಪರಿಣಾಮಗಳು :–**

- ಸಿರಾಜುದ್ದೌಲನ ಕೊಲೆಯಾಯಿತು.
- ಮೀರ್ ಜಾಫರ್ ಬಂಗಾಳದ ನವಾಬನಾದನು.
- ಬ್ರಿಟಿಷರಿಗೆ 24 ಪರಗಣ ಪ್ರದೇಶ ಬಳುವಳಿಯಾಗಿ ದೊರೆಯಿತು.

**6. ಬಕ್ಸಾರ್ ಕದನದ ಫಲಿತಾಂಶಗಳನ್ನು ವಿವರಿಸಿ.**

- ಮೀರ್ ಖಾಸಿಂನ ಒಕ್ಕೂಟ ಸೇನೆಗೆ ಸೋಲಾಯಿತು.
- ಎರಡನೇ ಷಾ ಆಲಂ ಬ್ರಿಟಿಷರಿಗೆ ಬಂಗಾಳದ ದಿವಾನಿ ಹಕ್ಕನ್ನು ಹಸ್ತಾಂತರಿಸಿದನು.
- ಬಂಗಾಳದಲ್ಲಿ ಬ್ರಿಟಿಷರು ಭದ್ರವಾಗಿ ನೆಲೆಯೂರಿದರು.
- ಔದ್‌ನ ನವಾನನು 50 ಲಕ್ಷ ರೂಗಳನ್ನು ಯುದ್ಧ ಪರಿಹಾರವಾಗಿ ಬ್ರಿಟಿಷರಿಗೆ ನೀಡಬೇಕಾಯಿತು.

**7. ದ್ವಿಸರ್ಕಾರ ಪದ್ಧತಿಯನ್ನು ವ್ಯಾಖ್ಯಾನಿಸಿ**

ರಾಬರ್ಟ್‌ಕ್ಲೈವ್ ಜಾರಿಗೆ ತಂದ ದ್ವಿಸರ್ಕಾರ ಪದ್ಧತಿಯು ಎರಡು ಬಗೆಯ ಅಧಿಕಾರವನ್ನು ಹೊಂದಿತ್ತು

- **ದಿವಾನಿ ಹಕ್ಕು** : ಇದು ಬ್ರಿಟಿಷರು ಭೂಕಂದಾಯ ಸಂಗ್ರಹಿಸುವ ಹಕ್ಕಾಗಿತ್ತು.
- **ನಿಜಾಮಿ ಹಕ್ಕು** ; ಇದು ನವಾಬನಿಗಿದ್ದ ದೈನಂದಿನ ಆಡಳಿತ, ನ್ಯಾಯ ತಿರ್ಮಾನ ಮಾಡುವ ಹಕ್ಕಾಗಿತು.

(ರಾಬರ್ಟ್‌ಕ್ಲೈವ್‌ನು 1765 ರಲ್ಲಿ ದ್ವಿಸರ್ಕಾರ ಪದ್ಧತಿಯನ್ನು ಜಾರಿಗೆ ತಂದನು.)

**8. ಫ್ರಾನ್ಸಿಸ್ಕೊ ಡಿ ಆಲ್ಮೇಡನ ಸಾಧನೆಗಳನ್ನು ವಿವರಿಸಿ.**

- ವಾಸ್ಕೊಡಗಾಮನ ನಂತರ ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ್ ಆಗಿ ಫ್ರಾನ್ಸಿಸ್ಕೊ ಡಿ ಆಲ್ಮೇಡ ಭಾರತಕ್ಕೆ ಬಂದನು.
- ಭೂಮಿಯ ಮೇಲಿನ ಅಧಿಪತ್ಯಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' ಯನ್ನು ಜಾರಿಗೆ ತಂದನು.

**8. ಆಲ್ಫೋನ್ಸೊ ಆಲ್ಬುಕರ್ಕ್ ಸಾಧನೆಗಳನ್ನು ವಿವರಿಸಿ.**

- ಆಲ್ಮೇಡನ ನಂತರ ಬಂದ ಆಲ್ಫೋನ್ಸೊ ಆಲ್ಬುಕರ್ಕ್ ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕನೆಂದು ಪ್ರಸಿದ್ಧನಾಗಿದ್ದಾನೆ.
- ಇವನು ಸಾ.ಶ. 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದನು

**9. ಮೊದಲ ಕಾರ್ನಾಟಿಕ್ ಯುದ್ಧವನ್ನು ವಿವರಿಸಿ.**

- ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ಬ್ರಿಟಿಷರಿಂದ ಮದ್ರಾಷ್‌ನ್ನು ವಶಪಡಿಸಿಕೊಂಡನು.
- ಅಸಹಾಯಕರಾದ ಬ್ರಿಟಿಷರು ಕಾರ್ನಾಟಿಕ್ ನವಾಬನಾದ ಅನ್ವರುದ್ದೀನನಲ್ಲಿ ಮೊರೆ ಇಟ್ಟರು.
- ಮದ್ರಾಸ್‌ನಿಂದ ಫ್ರೆಂಚರನ್ನು ಹೊರಗಟ್ಟಲು ಅನ್ವರುದ್ದೀನ್ ಕಳುಹಿಸಿಕೊಟ್ಟ ಸೇನೆಯು ಸೋತಿತು.
- ಕೊನೆಗೆ ಲಾಬೋರ್ಡಿನನು ಡೂಪ್ಲೆಗೆ ತಿಳಿಸದೆ ಬ್ರಿಟಿಷರಿಂದ ಹಣಪಡೆದು ಮದ್ರಾಷ್‌ನ್ನು ಬಿಟ್ಟುಕೊಟ್ಟು ಮಾರಿಶಿಷ್‌ಗೆ ಹೊರಟುಹೋದನು.
- ಇದರಿಂದ ಕೋಪಗೊಂಡ ಡೂಪ್ಲೆಯು ಮದ್ರಾಸನ್ನು ಮತ್ತೆ ಪಡೆಯುವ ವಿಫಲ ಪ್ರಯತ್ನ ನಡೆಸಿದನು.
- ಅಂತಿಮವಾಗಿ ಈ ಯುದ್ಧವು ಯುರೋಪಿನಲ್ಲಿ ಪ್ರಿನ್ಸ್ ಮತ್ತು ಇಂಗ್ಲೇಂಡಿನ ನಡುವೆ ಆದ 'ಏಕ್ಸ್–ಲಾ– ಚಾಪೆಲ್' ಒಪ್ಪಂದದೊಂದಿಗೆ ಮುಕ್ತಾಯವಾಯಿತು

**10. ಮೂರನೇ ಕಾರ್ನಾಟಿಕ್ ಯುದ್ಧವನ್ನು ವಿವರಿಸಿ.**

- ಫ್ರೆಂಚರ 'ಕೌಂಟ್ ಡಿ ಲಾಲಿ'ಯು ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು.
- ಈ ನಿರ್ಣಾಯಕ ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೇನಾಧಿಕಾರಿ ಸರ್. ಐರ್‌ಕೂಟನು ಫ್ರೆಂಚರನ್ನು ಸೋಲಿಸಿದನಲ್ಲದೆ, ಬುಸ್ಸಿಯನ್ನು ಸೆರೆಹಿಡಿದನು.

- ಲಾಲಿಯು ತಪ್ಪಿಸಿಕೊಂಡು ಪಾಂಡಿಚೇರಿಯಲ್ಲಿ ತಲೆಮರೆಸಿಕೊಂಡನು. ಅಂತಿಮವಾಗಿ ಐರ್‌ಕೂಟನು ಪಾಂಡಿಚೇರಿಗೂ ಮುತ್ತಿಗೆ ಹಾಕಿದಾಗ ಲಾಲಿಯು 1761 ರಲ್ಲಿ ಬೇಷರತ್ತಾಗಿ ಶರಣಾದನು.

**11. ಕಪ್ಪುಕೋಣೆ ದುರಂತವನ್ನು ವಿವರಿಸಿ.**

- ಸಿರಾಜುದ್ದೌಲನು ಫೋರ್ಟ್ ವಿಲಿಯಂ ಕೋಟೆಯನ್ನು ಸುಲಭವಾಗಿ ಗೆದ್ದು ಕೆಲವರನ್ನು ಸೆರೆಹಿಡಿದನು.
- ಆಕ್ರಮಣದಲ್ಲ ಸೆರೆ ಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲ ಬಂಧಿಸಟ್ಟನು.
- ಅವರಲ್ಲಿ 123 ಮಂದಿ ಅಸುನೀಗಿದರು ಎಂಬುದಾಗಿತ್ತು. ಇದನ್ನು ಕಪ್ಪುಕೋಣೆಯ ದುರಂತ ಎಂದು ಕರೆಯಲಾಗಿದೆ.

**12. ಬಕ್ಸಾರ್ ಕದನಕ್ಕೆ ಕಾರಣಗಳು ಯಾವುವು?**

- ಮೀರ್ ಖಾಸಿಂ ಒಬ್ಬ ಸಮರ್ಥ ಆಡಸಿತಗಾರ. ಈತನು ಸಹ ಆರಂಭದಲ್ಲಿ ಕಂಪನಿಗೆ ನಿಷ್ಠೆಯಿಂದಿದ್ದನು.
- ಎರಡು ಲಕ್ಷ ಪೌಂಡ್ ಹಣದ ಜೊತೆಗೆ ಕೆಲವು ಪ್ರದೇಶಗಳನ್ನು ಕಂಪನಿಗೆ ಬಿಟ್ಟುಕೊಟ್ಟನು.
- ಆದರೆ, ಶೀಘ್ರವೇ ಮೀರ್ ಖಾಸಿಂ ತನ್ನನ್ನು ಸ್ವತಂತ್ರ ರಾಜನೆಂದು ಭಾವಿಸಿದನು.
- ದಸ್ತಕ್‌ನ ದುರ್ಬಳಕೆಯನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತ ಎಂದು ಘೋಷಿಸಿದನು.
- ಇದರಿಂದಾಗಿ ಭಾರತೀಯರು ಸುಂಕವಿಲ್ಲದೆ ವ್ಯಾಪಾರ ನಡೆಸುವ ಮೂಲಕ ಬ್ರಿಟಿಷರೊಡನೆ ನೇರ ಸ್ಪರ್ಧೆಗಿಳಿದನು. ಪರಿಣಾಮ, ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಒಡೆತ ಬಿದ್ದಿತು.
- ಬ್ರಿಟಿಷರು ಮೀರ್ ಖಾಸಿಂನನ್ನು ಇಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನಾಗಿ ಮಾಡಿದರು.
- ಬ್ರಿಟಿಷರ ಕುಟಿತೆಯನ್ನೆ ಅರಿತಿದ್ದ ಮೀರ್ ಖಾಸಿಮನು ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು.
- ಈ ನಿಟ್ಟಿನಲ್ಲಿ ಮುಂದುವರೆದ ಮೀರ್ ಖಾಸಿಮನು ಮೊಗಲ್ ದೊರೆ 'ಎರಡನೇ ಷಾ ಆಲಂ' ಮತ್ತು ಔದ್‌ನ ನವಾಬ 'ಷೂಜ್–ಉದ್–ದೌಲ'ರೊಂದಿಗೆ ಒಪ್ಪಂದ ಮಾಡಿಕೊಂಡನು.

**13. ಫ್ರೆಂಚರ ವ್ಯಾಪಾರ ಕೇಂದ್ರಗಳು ಯಾವುವು?**

ಸೂರತ್,ಮಚಲೀಪಟ್ಟಣ,ಚಂದ್ರನಗರ,ಮಾಹೆ,ಕಾರ್‍ೈಕಲ್ಲು,ಕಾಸಿಂಬಜಾರ್,ಬಾಲಸೂರ್

**14. ಭಾರತದಲ್ಲಿ ಡಚ್ಚರ ವ್ಯಾಪಾರ ಕೋಠಿಗಳು ಯಾವುವು?**

ಸೂರತ್,ಬ್ರೋಚ್,ಕ್ಯಾಂಬೆ,ಕೊಚ್ಚಿನ್,ನಾಗಪಟ್ಟಣ,ಮಚಲಿಪಟ್ಟಣ,ಚಿನ್ಸೂರ್.

**15. ಭಾರತದಲ್ಲಿ ಬ್ರಿಟಿಷರ ವ್ಯಾಪಾರ ಕೋಠಿಗಳು ಯಾವುವು?**

ಸೂರತ್,ಕಲ್ಕತ್ತಾ,ಮುಂಬಯಿ,ಅಹಮದಾಬಾದ್,ಆಗ್ರಾ,ಮದ್ರಾಸ್.

| ಯುದ್ಧಗಳು | ವರ್ಷ | ಕಾರಣಗಳು | ಪರಿಣಾಮಗಳು |
|---|---|---|---|
| 1ನೇ ಕಾರ್ನಾಟಿಕ್ ಯುದ್ಧ | 1746 ರಿಂದ 1748 | * ಫ್ರೆಂಚ್ ಸೇನಾ ಮುಖ್ಯಸ್ಥ ಲಾಬೋರ್ಡಿನಾ ಬ್ರಿಟಿಷರ ಮದ್ರಾಸ್ ನ್ನು ವಶಪಡಿಸಿಕೊಂಡಿದ್ದು.<br>* ಅಸಹಾಯಕರಾದ ಬ್ರಿಟಿಷರು ಕಾರ್ನಾಟಿಕ್ ನವಾಬನಾದ ಅನ್ವರುದ್ದೀನನಲ್ಲಿ ಮೊರೆ ಇಟ್ಟರು. | * ಯುರೋಪಿನಲ್ಲಿ ಫ್ರಿನ್ಸ್ ಮತ್ತು ಇಂಗ್ಲೇಂಡಿನ ನಡುವೆ ಆದ 'ಏಕ್ಸ್–ಲಾ– ಚಾಪೆಲ್' ಒಪ್ಪಂದದೊಂದಿಗೆ ಯುದ್ಧ ಅಂತ್ಯ.<br>* ಫ್ರೆಂಚರ ವಿರುದ್ಧ ಅನ್ವರುದ್ಧಿನನ ಸೋಲು. |
| 2ನೇ ಕಾರ್ನಾಟಿಕ್ ಯುದ್ಧ | 1749 ರಿಂದ 1754 | ಫ್ರೆಂಚರು ಸಲಾಬತ್‌ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮತ್ತು ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನನ್ನಾಗಿ ಮಾಡಿ ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಂಡರು. | * ಚಂದಾಸಾಹೇಬನನ್ನು ಬಂಧಿಸಿ ಹತ್ಯೆ ಮಾಡಲಾಯಿತು<br>* 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು<br>* ಈ ಯುದ್ಧವು ಫ್ರೆಂಚರಿಗೆ ರಾಜಕೀಯ ಹಿನ್ನಡೆಯನ್ನು, ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು. |
| 3ನೇ ಕಾರ್ನಾಟಿಕ್ ಯುದ್ಧ | 1756 ರಿಂದ 1763 | ಫ್ರೆಂಚರ 'ಕೌಂಟ್ ಡಿ ಲಾಲಿ'ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ್ದು. | * ಲಾಲಿಯು 1761ರಲ್ಲಿ ಬೇಷರತ್ತಾಗಿ ಶರಣಾದನು.<br>* ಫ್ರೆಂಚರು ಭಾರತದಲ್ಲಿ ತಮ್ಮ ಎಲ್ಲ ನೆಲೆಗಳನ್ನು ಕಳೆದುಕೊಂಡರು.<br>* 'ಪ್ಯಾರಿಸ್ ಒಪ್ಪಂದ'ದೊಂದಿಗೆ ಯುದ್ಧ ಕೊನೆಗೊಂಡಿತು. * ಪಾಂಡಿಚೇರಿಯನ್ನು ಫ್ರೆಂಚರಿಗೆ ಹಿಂತಿರುಗಿಸಲಾಯಿತು. |

| ಯುದ್ಧಗಳು | ವರ್ಷ | ಯಾರೊಂದಿಗೆ | ಕಾರಣಗಳು | ಪರಿಣಾಮಗಳು |
|---|---|---|---|---|
| ಪ್ಲಾಸಿ ಕದನ | **1757** | ಸಿರಾಜ್–ಉದ್–ದೌಲನಿಗೂ ಮತ್ತು ರಾಬರ್ಟ್ ಕ್ಲೈವ್. | * ದಸ್ತಕ್‌ಗಳ ದುರುಪಯೋಗ<br>* ನವಾಬನ ಅನುಮತಿ ಇಲ್ಲದೆ ಕೋಟೆಯ ದುರಸ್ಥಿ<br>* ಕಪ್ಪುಕೋಣೆ ದುರಂತ 123 ಜನ ಬ್ರಿಟಿಷರ ಸಾವು. | * ಮೀರ್ ಜಾಫರ್ ಬಂಗಾಳದ ನವಾಬನಾದನು.<br>* ಸಿರಾಜ್ ಉದ್ ದೌಲನ ಕೊಲೆಯಾಯಿತು.<br>*.ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆಯನ್ನು ಪ್ರದರ್ಶಿತು.<br>*ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು. |
| ಬಕ್ಸಾರ್ ಕದನ | **1764** | ‘ಮೀರ್ ಖಾಸಿಂ’ ನೇತೃತ್ವದ ಒಕ್ಕೂಟ ಸೈನ್ಯ ಮತ್ತು ‘ಹೆಕ್ಟರ್ ಮನ್ರೋ’ ನೇತೃತ್ವದ ಬ್ರಿಟಿಷ್ ಸೇನೆ. | * ಮೀರ್ ಖಾಸಿಂನು ಸ್ವತಂತ್ರರಾಜನೆಂದು ಭಾವಿಸಿದ್ದು.<br>* ನವಾಬನು ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕ ಮುಕ್ತ ಎಂದು ಘೋಷಿಸಿದ್ದು.<br>* ಬ್ರಿಟಿಷರು ಮೀರ್ ಖಾಸಿಂ ಬದಲಿಗೆ ಮೀರ್ ಜಾಫರ್ ನನ್ನು ಬಂಗಾಳದ ನವಾಬನನ್ನಾಗಿ ಮಾಡಿದ್ದು. | * ಷಾ ಆಲಂ ಕಂಪನಿಯು ಬಂಗಾಳದ ಮೇಲಿನ ‘ದಿವಾನಿ’ ಹಕ್ಕನ್ನು ಪಡೆಯಿತು.<br>* ಷಾ ಆಲಂ ವಾರ್ಷಿಕ 26 ಲಕ್ಷ ರೂ. ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡ ಬೇಕಾಯಿತು.<br>* ಷುಜ್–ಉದ್–ದೌಲನು ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ನೀಡಿದನು.<br>* ಬಂಗಾಳದ ಪೂರ್ಣ ಆಡಳಿತ ಕಂಪನಿಗೆ ಸೇರಿತು.<br>* ಮೀರ್‌ಜಾಫರ್ ನ ಮಗನಿಗೆ ವಿಶ್ರಾಂತಿ ವೇತನ ನೀಡಲಾಯಿತು. |

# ಅಧ್ಯಾಯ-2
## ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಮೊದಲನೇ ಆಂಗ್ಲೋ ಮರಾಠ ಯುದ್ಧದ ಅಂತ್ಯದಲ್ಲಿ ಮರಾಠರು ಮತ್ತು ಬ್ರಿಟಿಷರ ಮಧ್ಯ __________ಒಪ್ಪಂದ ಆಯಿತು. **(ಸಾಲಬಾಯ್)**
2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು ____________ . **(ಲಾರ್ಡ್ ವೆಲ್ಲೆಸ್ಲಿ)**
3. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ______________ ರಲ್ಲಿ ಜಾರಿಗೆ ತರಲಾಯಿತು.**(1848)**
4. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವನು __________**(ಲಾರ್ಡ ಡಾಲ್‌ಹೌಸಿ)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತಂದವರು ಯಾರು?**
ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತಂದವರು ಲಾರ್ಡ ಡಾಲ್‌ಹೌಸಿ.

**2. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂದರೇನು?**
ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ,ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ.ಇದನ್ನು ದತ್ತು ಮಕ್ಕಳಿಗೆ ಹಕ್ಕಿಲ್ಲ ಎನ್ನುವರು.

**3. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ ಯಾವಾಗ ಜಾರಿಗೆ ಬಂದಿತು?**
ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ 1848ರಲ್ಲಿ ಜಾರಿಗೆ ಬಂದಿತು.

**4. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ ಯಾವುದು?**
ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ ಹೈದರಾಬಾದ್ ಸಂಸ್ಥಾನ.

**5. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ರಾಜ್ಯಗಳು ಯಾವುವು?**
ಹೈದರಾಬಾದ್‌ಸಂಸ್ಥಾನ,ಮೈಸೂರು,ಔದ್,ತಂಜಾವೂರು,ಮರಾಠ,ಆರ್ಕಾಟ್,ಪೂನಾ,ಬಿರಾರ್, ಗ್ವಾಲಿಯರ್.

**6. ಎರಡನೇ ಆಂಗ್ಲೋ-ಮರಾಠ ಯುದ್ಧಕ್ಕೆ ಮುಖ್ಯ ಕಾರಣವೇನು?**
ಎರಡನೇ ಆಂಗ್ಲೋ-ಮರಾಠ ಯುದ್ಧಕ್ಕೆ ಮುಖ್ಯ ಕಾರಣ ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷ.

**7. ಎರಡನೇ ಆಂಗ್ಲೋ-ಮರಾಠ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?**
ಎರಡನೇ ಆಂಗ್ಲೋ-ಮರಾಠ ಯುದ್ಧ ಬೆಸ್ಸಿನ್ ಒಪ್ಪಂದದೊಂದಿಗೆ ಕೊನೆಗೊಂಡಿತು.

**8. ಹೋಳ್ಕರ್,ಭೋಂಸ್ಲೆ,ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಲು ಕಾರಣವೇನು?**
ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್,ಭೋಂಸ್ಲೆ,ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಿದರು.

**9. ಸಿಖ್ಖರ ಸೋಲಿಗೆ ಕಾರಣವಾದ ಅವಮಾನಕರ ಒಪ್ಪಂದ ಯಾವುದು?**
ಸಿಖ್ಖರ ಸೋಲಿಗೆ ಕಾರಣವಾದ ಅವಮಾನಕರ ಒಪ್ಪಂದ ಲಾಹೋರ್ ಒಪ್ಪಂದ.

**10. ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ಬ್ರಿಟಿಷರ ವಿರುದ್ಧ ಪ್ರತಿಭಟನೆಯ ನೇತೃತ್ವ ವಹಿಸಿದ ಪಂಜಾಬಿಗಳು ಯಾರು?**
ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ಬ್ರಿಟಿಷರ ವಿರುದ್ಧ ಪ್ರತಿಭಟನೆಯ ನೇತೃತ್ವ ವಹಿಸಿದ ಪಂಜಾಬಿಗಳು ಚಟ್ಟಾರ್ ಸಿಂಗ್ ಅಟ್ಟಾರಿವಾಲ ಮತ್ತು ಮೂಲರಾಜ್.

**11. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡವನು ಯಾರು?**
ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡವನು ಲಾರ್ಡ ಡಾಲ್‌ಹೌಸಿ.

**12. ಮೊದಲ ಆಂಗ್ಲೋ-ಮರಾಠ ಯುದ್ಧದ ನಂತರ ಮರಾಠರ ಪೇಶ್ವೆ ಆಗಿ ನೇಮಕಗೊಂಡವನು ಯಾರು?**
ಮೊದಲ ಆಂಗ್ಲೋ-ಮರಾಠ ಯುದ್ಧದ ನಂತರ ಮರಾಠರ ಪೇಶ್ವೆ ಆಗಿ ನೇಮಕಗೊಂಡವನು ಮಾಧವರಾವ್.

**13. ಲಾರ್ಡ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಏಕೆ ಜಾರಿಗೆ ತಂದನು?**
ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಲಾರ್ಡ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು.

**14. ಲಾರ್ಡ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಯಾವಾಗ ಜಾರಿಗೆ ತಂದನು?**
ಲಾರ್ಡ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು 1798ರಲ್ಲಿ ಜಾರಿಗೆ ತಂದನು.

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

**1. ಮೊದಲನೇ ಆಂಗ್ಲೋ-ಮರಾಠ ಯುದ್ಧದ ಕಾರಣಗಳನ್ನು ವಿವರಿಸಿ**

- ರಘುನಾಥರಾಯನಿಂದ ಪೇಶ್ವೆ ನಾರಾಯಣರಾವ್‌ನ ಕೊಲೆ.
- ಮರಾಠ ಒಕ್ಕೂಟದಿಂದ ಪೇಶ್ವೆ ಹುದ್ದೆಗೆ ಮಾದವರಾವ್‌ನ ನೇಮಕ.
- ಇದರಿಂದ ವಿಚಲಿತನಾದ ರಘುನಾಥರಾಯನು ಬ್ರಿಟಿಷರ ನೆರವುಯಾಚಿಸಿದ್ದು.
- ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ಮರಾಠರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದ್ದು.

**2. ಸಹಾಯಕ ಸೈನ್ಯ ಪದ್ದತಿಯ ನಿಬಂಧನೆಗಳಾವುವು? ವಿವರಿಸಿ**

- ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
- ಸೈನ್ಯದ ವೆಚ್ಚವನ್ನು ದೇಶಿಯ ರಾಜರೇ ನೋಡಿಕೊಳ್ಳಬೇಕಾಗಿತ್ತು.
- ಬ್ರಿಟಿಷರ ಅನುಮತಿಯಿಲ್ಲದೆ ಈ ಸೈನ್ಯವನ್ನು ಬಳಸುವಂತಿರಲಿಲ್ಲ.
- ದೇಶಿಯ ರಾಜರು ತಮ್ಮ ಆಸ್ಥಾನದಲ್ಲಿ ಬ್ರಿಟಿಷ್ 'ರೆಸಿಡೆಂಟ್' ನನ್ನು ನೇಮಿಸಿಕೊಳ್ಳಬೇಕು.
- ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಲು ಗವರ್ನರ್ ಜನರಲ್‌ನ ಸಮ್ಮತಿ ಬೇಕು.
- ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

**3. ಮೂರನೇ ಆಂಗ್ಲೋ–ಮರಾಠ ಯುದ್ದವನ್ನು ವಿವರಿಸಿ.**

ಮೂರನೇ ಆಂಗ್ಲೋ–ಮರಾಠ ಯುದ್ದದಲ್ಲಿ ಪೇಶ್ವೇ ಎರಡನೇ ಬಾಜಿರಾಯನು ಪುಣೆಯಲ್ಲಿನ ಬ್ರಿಟಿಷ್ ರೆಸಿಡೆನ್ಸಿ ಮತ್ತು ಕೋರೆಗಾವ್ ಹಾಗೂ ಆಷ್ಟಿಗಳ ಮೇಲೆ ಧಾಳಿಮಾಡಿ ಸೋಲಿಸಲ್ಪಟ್ಟನು. ಇಂಗ್ಲೀಷರು ಪೇಶ್ವೆ ಹುದ್ದೆಯನ್ನು ರದ್ದು ಪಡಿಸಿದರಲ್ಲದೆ ಪೇಶ್ವೆ ಎರಡನೇ ಬಾಜಿರಾಯನಿಗೆ ವಿಶ್ರಾಂತಿ ವೇತನವನ್ನು ನೀಡಿದರು. ಶಿವಾಜಿಯ ವಂಶಸ್ಥ ಪ್ರತಾಪ್‌ಸಿಂಹನನ್ನು ಮರಾಠರ ಮುಖಂಡರಾಗಿ ನೇಮಿಸಿದರು.

**4. ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು?**

ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ವಯ ದೇಶಿಯ ರಾಜನಿಗೆ ಸ್ವಾಭಾವಿಕ ಮಕ್ಕಳು ಇಲ್ಲದಿದ್ದರೆ ಆತ ತನ್ನ ಸಾಮ್ರಾಜ್ಯವನ್ನು ದತ್ತು ಮಕ್ಕಳಿಗೆ ಹಸ್ತಾಂತರ ಮಾಡುವಂತಿರಲಿಲ್ಲ,ಈ ನೀತಿಯ ಅನುಸಾರ ಸತಾರ, ಝಾನ್ಸಿ, ನಾಗಪುರ, ಜೈಪುರ, ಸಂಬಲ್‌ಪುರ, ಉದಯಪುರಗಳನ್ನು ಡಾಲ್ ಹೌಸಿ ವಶಪಡಿಸಿಕೊಂಡನು. ಈ ನೀತಿಯನ್ನು ಜಮೀನ್ದಾರರಿಗೂ ಅನ್ವಯಿಸಿದ್ದರಿಂದ ಜಮೀನ್ದಾರರು ತಮ್ಮ ಹಕ್ಕಗಳನ್ನು ಕಳೆದುಕೊಂಡರು, ಈ ನೀತಿಯು ರಾಜಕೀಯ ಅಸ್ತ್ರವಾಗಿ ಬಳಸಲ್ಪಟ್ಟಿತು

**5. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ರಾಜ್ಯಗಳಾವುವು?**

ಸತಾರ, ಝಾನ್ಸಿ, ನಾಗಪುರ, ಜೈಪುರ, ಸಂಬಲ್‌ಪುರ, ಉದಯಪುರಗಳು ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ರಾಜ್ಯಗಳಾಗಿವೆ.

**6. ಎರಡನೇ ಆಂಗ್ಲೋ ಮರಾಠ ಯುದ್ಧವನ್ನು ವಿವರಿಸಿ.**

- ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು. ಹೊಳ್ಕರ್ ಮನೆತನದ ಯಶವಂತರಾವ್ ಒಂದು ಕಡೆಯಾದರೆ ಸಿಂಧಿಯಾ ಮನೆತನದ ದೌಲತ್ ರಾವ್ ಹಾಗೂ ಪೇಶ್ವೆ ಎರಡನೇ ಬಾಜಿರಾವ್ ಇನ್ನೊಂದು ಕಡೆಗಿದ್ದರು.
- ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು.
- ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದನು. ಲಾರ್ಡ್ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ಸಿಕ್ಕಿತು.
- ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.
- ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ, ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಿದರು
- ಮರಾಠ ಮನೆತನಗಳ ಸೇನೆಯನ್ನು ವೆಲ್ಲೆಸ್ಲಿಯು ಅನೇಕ ಯುದ್ಧಗಳಲ್ಲಿ ಮಣಿಸಿದನು.

## ಅಧ್ಯಾಯ – 3
## ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

**I ಖಾಲಿಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ದಿವಾನಿ ಅದಾಲತ್ ಎಂಬ ನಾಗರೀಕ ನ್ಯಾಯಾಲಯವನ್ನು ಸ್ಥಾಪಿಸಿದವನು **ಲಾರ್ಡ್ ವಾರನ್ ಹೇಸ್ಟಿಂಗ್ಸ್**
2. ಸೂಪರಿಡೆಂಟ್ಂಟ್ ಆಫ್ ಪೋಲೀಸ್ ಹುದ್ದೆಯನ್ನು ಸೃಷ್ಟಿಸಿದವನು **ಲಾರ್ಡ್ ಕಾರ್ನವಾಲೀಸ್**
3. ಖಾಯಂ ಜಮೀನ್ದಾರಿ ಪದ್ಧತಿಯನ್ನು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ **1793** ರಲ್ಲಿ ಜಾರಿಗೆ ತರಲಾಯಿತು
4. ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ **ರೈತವಾರಿ ಪದ್ಧತಿ**
5. ಆಧುನಿಕ ಶಿಕ್ಷಣ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ **ಲಾರ್ಡ್ ವಾರನ್ ಹೇಸ್ಟಿಂಗ್ಸ್**
6. ರೇಗ್ಯೂಲೇಟಿಂಗ್ ಕಾಯಿದೆಯು ಜಾರಿಗೆ ಬಂದ ವರ್ಷ **1773**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದವರು ಯಾರು?**
ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದವರು ಲಾರ್ಡ ಕಾರ್ನವಾಲೀಸ್.

**2. ರೆಗ್ಯುಲೇಟಿಂಗ್ ಕಾಯ್ದೆಯ ಉದ್ದೇಶವೇನು?**
ರೆಗ್ಯುಲೇಟಿಂಗ್ ಕಾಯ್ದೆಯ ಉದ್ದೇಶ ನಿಯಂತ್ರಣ ಹೇರುವುದು.

**3. ಕಲ್ಕತ್ತಾದಲ್ಲಿ ಫೋರ್ಟ ವಿಲಿಯಂ ಕಾಲೇಜನ್ನು ಸ್ಥಾಪಿಸಿದವರು ಯಾರು?**
ಕಲ್ಕತ್ತಾದಲ್ಲಿ ಫೋರ್ಟ ವಿಲಿಯಂ ಕಾಲೇಜನ್ನು ಸ್ಥಾಪಿಸಿದವರು ಲಾರ್ಡ ಕಾರ್ನವಾಲೀಸ್.

**4. ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲನಿವಾಸಿಯೂ ಭ್ರಷ್ಟ ಎಂದು ಪ್ರತಿಪಾದಿಸಿದವರು ಯಾರು?**
'ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲನಿವಾಸಿಯೂ ಭ್ರಷ್ಟ ' ಎಂದು ಪ್ರತಿಪಾದಿಷದವರು ಲಾರ್ಡ ಕಾರ್ನವಾಲೀಸ್.

**5. ದಿವಾನಿ ಅದಾಲತ್ ಮತ್ತು ಫೌಜದಾರಿ ಅದಾಲತ್‌ಗಳನ್ನು ಜಾರಿಗೆ ತಂದವರು ಯಾರು?**
ದಿವಾನಿ ಅದಾಲತ್ ಮತ್ತು ಫೌಜದಾರಿ ಅದಾಲತ್‌ಗಳನ್ನು ಜಾರಿಗೆ ತಂದವರು ವಾರನ್ ಹೇಸ್ಟಿಂಗ್ಸ್.

**6. ದಿವಾನಿ ಅದಾಲತ್ ಎಂದರೇನು?**
ದಿವಾನಿ ಅದಾಲತ್ ಎಂದರೆ ನಾಗರೀಕ ನ್ಯಾಯಾಲಯ.

**7. ಫೌಜದಾರಿ ಅದಾಲತ್ ಎಂದರೇನು?**
ಫೌಜದಾರಿ ಅದಾಲತ್ ಎಂದರೆ ಅಪರಾಧ ನ್ಯಾಯಾಲಯ.

**8. ನಾಗರೀಕ ನ್ಯಾಯಾಲಯಗಳು ಯಾರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು?**
ನಾಗರೀಕ ನ್ಯಾಯಾಲಯಗಳು ಯುರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

**9. ಪ್ರಥಮತಃ ವ್ಯವಸ್ಥಿತವಾದ ಪೋಲಿಸ್ ವಿಭಾಗವನ್ನು ಅಸ್ಥಿತ್ವಕ್ಕೆ ತಂದವನು ಯಾರು?**
ಲಾರ್ಡ ಕಾರ್ನವಾಲೀಸ್.

**10. ಸೂಪರಿಡೆಂಟೆಂಟ್ ಆಫ್ ಪೋಲಿಸ್ ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದವನು ಯಾರು?**
ಲಾರ್ಡ ಕಾರ್ನವಾಲೀಸ್.

**11. ಕೊತ್ವಾಲರ ಕಾರ್ಯಗಳೇನು?**
ಹಳ್ಳಿಗಳ ಮಟ್ಟದಲ್ಲಿ ಕಳ್ಳತನ,ಅಪರಾಧಗಳು,ದರೋಡೆಗಳ ನಿಯಂತ್ರಣ.

**12. 1902ರ ಪೋಲಿಸ್ ಕಮಿಷನ್ ಕಾಯ್ದೆಯ ಮಹತ್ವವೇನು?**
1902ರ ಪೋಲಿಸ್ ಕಮಿಷನ್ ಕಾಯ್ದೆಯ ಮಹತ್ವ ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸಿತು.

**13. ಬ್ರಿಟಿಷರ ಕಾಲದಲ್ಲಿ ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆ ಯಾವುದು?**
ಬ್ರಿಟಿಷರ ಕಾಲದಲ್ಲಿ ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆ ಸುಬೇದಾರ್ ಸ್ಥಾನ.

**14. ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲು ನೇಮಕವಾದ ಸಮಿತಿ ಯಾವುದು?**
ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲು ನೇಮಕವಾದ ಸಮಿತಿ ಪೀಲ್ ಎಂಬುವವರ ನೇತೃತ್ವದ ಸಮಿತಿ.

**15. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು ಯಾರು?**
ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು ಲಾರ್ಡ ಕಾರ್ನವಾಲೀಸ್.

**16. ಖಾಯಂ ಜಮೀನ್ದಾರಿ ಪದ್ಧತಿ ಎಂದರೇನು?**
ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದ ಹೊಸ ಕಂದಾಯ ಪದ್ಧತಿಯನ್ನು ಖಾಯಂ ಜಮೀನ್ದಾರಿ ಪದ್ಧತಿ ಎನ್ನುವರು.

**17. "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದವರು ಯಾರು?**
"ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದವರು ಚಾರ್ಲ್ಸ್ ಮೆಟಕಾಫ್.

**18. ಭಾರತದ ರೈತರು ಸಾಲದಲ್ಲೇ ಹುಟ್ಟಿ,ಸಾಲದಲ್ಲೇ ಬದುಕಿ,ಸಾಲದಲ್ಲೇ ಸಾಯಲು ಕಾರಣವೇನು?**
ಭಾರತದ ರೈತರು ಸಾಲದಲ್ಲೇ ಹುಟ್ಟಿ,ಸಾಲದಲ್ಲೇ ಬದುಕಿ,ಸಾಲದಲ್ಲೇ ಸಾಯಲು ಕಾರಣ ಬ್ರಿಟಿಷ್ ಭೂಕಂದಾಯ ನೀತಿ.

**19. ಮಹಲ್ ಎಂದರೇನು?**
ಮಹಲ್ ಎಂದರೆ ತಾಲ್ಲೂಕು.

**20. ಮಹಲ್‌ವಾರಿ ಪದ್ಧತಿಯನ್ನು ಪ್ರಯೋಗಿಸಿದವರು ಯಾರು?**
ಮಹಲ್‌ವಾರಿ ಪದ್ಧತಿಯನ್ನು ಪ್ರಯೋಗಿಸಿದವರು ಆರ್.ಎಂ.ಬರ್ಡ ಮತ್ತು ಜೇಮ್ಸ್ ಥಾಮ್ಸನ್

**21. ರೈತವಾರಿ ಪದ್ಧತಿಯನ್ನು ಮೊದಲು ಜಾರಿಗೊಳಿಸಿದವನು ಯಾರು?**
ರೈತವಾರಿ ಪದ್ಧತಿಯನ್ನು ಮೊದಲು ಜಾರಿಗೊಳಿಸಿದವನು ಅಲೆಗ್ಸಾಂಡರ್ ರೀಡ್.

**22. ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಎಲ್ಲಿ ಜಾರಿಗೊಳಿಸಲಾಯಿತು?**
ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಲ್ ಪ್ರಾಂತ್ಯದಲ್ಲಿ ಜಾರಿಗೊಳಿಸಲಾಯಿತು.

**23. ರೈತವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದವನು ಯಾರು?**
ರೈತವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದವನು ಥಾಮಸ್ ಮನ್ರೋ.

**24. ಯಾವ ಪದ್ಧತಿಯಿಂದ ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದರು?**
ರೈತವಾರಿ ಪದ್ಧತಿಯಿಂದ ಪದ್ಧತಿಯಿಂದ ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದರು.

**25. ಆಧುನಿಕ ಶಿಕ್ಷಣ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ಯಾರು?**
ಆಧುನಿಕ ಶಿಕ್ಷಣ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ವಾರನ್ ಹೇಸ್ಟಿಂಗ್ಸ್.

**26. ಕಲ್ಕತ್ತಾ ಮದರಸಾವನ್ನು ಪ್ರಾರಂಭಿಸಿದವರು ಯಾರು?**
ಕಲ್ಕತ್ತಾ ಮದರಸಾವನ್ನು ಪ್ರಾರಂಭಿಸಿದವರು ವಾರನ್ ಹೇಸ್ಟಿಂಗ್ಸ್.

**27. ಬನಾರಸ್ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದವರು ಯಾರು?**
ಬನಾರಸ್ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದವರು ಜೋನಾಥನ್ ಡಂಕನ್.

**28. ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವರು ಯಾರು?**
ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವರು ಚಾರ್ಲ್ಸ್ ಗ್ರಾಂಟ್.

**29. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಕಾನೂನು ಸದಸ್ಯನನ್ನಾಗಿ ಯಾರನ್ನು ನೇಮಕ ಮಾಡಲಾಯಿತು?**
ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಕಾನೂನು ಸದಸ್ಯನನ್ನಾಗಿ ಮೆಕಾಲೆಯನ್ನು ನೇಮಕ ಮಾಡಲಾಯಿತು.

**30. ಸಾರ್ವಜನಿಕ ಶಿಕ್ಷಣ ಸಮಿತಿಯ ಅಧ್ಯಕ್ಷರು ಯಾರು?**
ಸಾರ್ವಜನಿಕ ಶಿಕ್ಷಣ ಸಮಿತಿಯ ಅಧ್ಯಕ್ಷರು ಮೆಕಾಲೆ.

**31. ಆಧುನಿಕ ಭಾರತ ಶಿಕ್ಷಣ ವ್ಯವಸ್ಥೆಗೆ ತಳಹದಿ ಯಾವುದು?**
ಆಧುನಿಕ ಭಾರತ ಶಿಕ್ಷಣ ವ್ಯವಸ್ಥೆಗೆ ತಳಹದಿ ಮೆಕಾಲೆ ವರದಿ

**32. "ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ, ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವುದು" ಯಾರ ಯೋಜನೆ ಆಗಿತ್ತು?**
ಮೆಕಾಲೆ ಯೋಜನೆ ಆಗಿತ್ತು.

**33. ಕಲ್ಕತ್ತಾ,ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದವನು ಯಾರು?**
ಕಲ್ಕತ್ತಾ,ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದವನು ಲಾರ್ಡ ಡಾಲ್‌ಹೌಸಿ

**34. ಲಾರ್ಡ ಡಾಲ್‌ಹೌಸಿಯು ಕಲ್ಕತ್ತಾ,ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದವರು ಯಾರು?**
ಚಾರ್ಲ್ಸ್ ವುಡ್ಸ್ ಆಯೋಗ.

**35. ಈಸ್ಟ್ ಇಂಡಿಯಾ ಕಂಪೆನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿ ಟೀಕಿಸಿದವನು ಯಾರು?**
ಎಡ್ಮಂಡ್ ಬರ್ಕ.

**36. ಯಾವ ಶಾಸನದ ಮೇರೆಗೆ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟನ್ನು ಸ್ಥಾಪನೆ ಮಾಡಲಾಯಿತು?**
ರೆಗ್ಯುಲೇಟಿಂಗ್ ಶಾಸನದ ಮೇರೆಗೆ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟನ್ನು ಸ್ಥಾಪನೆ ಮಾಡಲಾಯಿತು.

**37. ಪಿಟ್ಸ್ ಇಂಡಿಯಾ ಕಾಯ್ದೆ ಯಾವಾಗ ಜಾರಿಗೆ ಬಂತು?**
ಪಿಟ್ಸ್ ಇಂಡಿಯಾ ಕಾಯ್ದೆ 1784 ರಲ್ಲಿ ಜಾರಿಗೆ ಬಂತು.

**38. ನಿಯಂತ್ರಣ ಮಂಡಳಿಯ ಸ್ಥಾಪನೆಗೆ ಅವಕಾಶ ನೀಡಿದ ಕಾಯ್ದೆ ಯಾವುದು?**
ನಿಯಂತ್ರಣ ಮಂಡಳಿಯ ಸ್ಥಾಪನೆಗೆ ಅವಕಾಶ ನೀಡಿದ ಕಾಯ್ದೆ ಪಿಟ್ಸ್ ಇಂಡಿಯಾ ಕಾಯ್ದೆ .

**39. ಭಾರತದಲ್ಲಿದ್ದ ಕಂಪೆನಿಯ ಅಧೀನದ ಪ್ರದೇಶಗಳಿಗೆ ಇಂಗ್ಲೆಂಡಿನ ಸರ್ಕಾರವೇ ಅಂತಿಮ ಸಾರ್ವಭೌಮ ಎಂದು ಘೋಷಣೆ ಮಾಡಿದ ಕಾಯ್ದೆ ಯಾವುದು?**
ಪಿಟ್ಸ್ ಇಂಡಿಯಾ ಕಾಯ್ದೆ

**40. ಚರ್ಚಗಳಿಗೆ ಭಾರತಕ್ಕೆ ಪ್ರವೇಶ ಮಾಡಲು ಅಧಿಕೃತ ಅವಕಾಶವನ್ನು ನೀಡಿದ ಶಾಸನ ಯಾವುದು?**
1813ರ ಚಾರ್ಟರ್ ಕಾಯ್ದೆ
**41. ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಿದ ಶಾಸನ ಯಾವುದು?**
1833ರ ಚಾರ್ಟರ್ ಕಾಯ್ದೆ
**42. ಗವರ್ನರ್ ಜನರಲ್ ಪದನಾಮವನ್ನು ಬದಲಾಯಿಸಿ ವೈಸರಾಯ್ ಎಂಬ ಪದನಾಮ ನೀಡಿದ ಶಾಸನ ಯಾವುದು?**
ಭಾರತ ಸರ್ಕಾರದ ಕಾಯ್ದೆ–1858
**43. ಭಾರತದ ಮೊದಲ ವೈಸರಾಯ್ ಯಾರು?**
ಭಾರತದ ಮೊದಲ ವೈಸರಾಯ್ ಲಾರ್ಡ ಕ್ಯಾನಿಂಗ್
**44. 1909 ಭಾರತೀಯ ಪರಿಷತ್ ಕಾಯ್ದೆಯ ಮತ್ತೊಂದು ಹೆಸರೇನು?**
1909 ಭಾರತೀಯ ಪರಿಷತ್ ಕಾಯ್ದೆಯ ಮತ್ತೊಂದು ಹೆಸರು ಮಿಂಟೊ ಮಾರ್ಲೆ ಸುಧಾರಣಾ ಕಾಯ್ದೆ
**45. ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತಂದ ಶಾಸನ ಯಾವುದು?**
ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತಂದ ಶಾಸನ 1909 ಭಾರತೀಯ ಪರಿಷತ್ ಕಾಯ್ದೆ
**46. 1919 ಭಾರತೀಯ ಪರಿಷತ್ ಕಾಯ್ದೆಯ ಮತ್ತೊಂದು ಹೆಸರೇನು?**
1919 ಭಾರತೀಯ ಪರಿಷತ್ ಕಾಯ್ದೆಯ ಮತ್ತೊಂದು ಹೆಸರು ಮಾಂಟೆಗೂ–ಚೆಮ್ಸ್‌ಫರ್ಡ ಸುಧಾರಣಾ ಕಾಯ್ದೆ
**47. ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಭಾರತೀಯರನ್ನು ಯುಧ್ಧದಲ್ಲಿ ಬ್ರಿಟಿಷರ ಪರವಾಗಿ ಭಾಗವಹಿಸಲು ಪ್ರೇರೇಪಿಸಿದ ಹಿನ್ನಲೆಯಲ್ಲಿ ಜಾರಿಗೆ ತರಲಾದ ಶಾಸನ ಯಾವುದು?**
1919 ಭಾರತೀಯ ಪರಿಷತ್ ಕಾಯ್ದೆ
**48. 'ಭಾರತೀಯರಿಗೆ ಹಂತ ಹಂತವಾಗಿ ಜವಾಬ್ದಾರಿ ಸರಕಾರವನ್ನು ನೀಡುವುದೇ ಬ್ರಿಟಿಷ್ ಸರಕಾರದ ಗುರಿ' ಎಂದು ಘೋಷಿಸಿದವರು ಯಾರು?**
ಮಾಂಟೆಗೋ ಚೆಮ್ಸ್‌ಫರ್ಡ್.
**49. ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರ ಪದ್ಧತಿಗೆ ಅವಕಾಶ ನೀಡಿದ ಶಾಸನ ಯಾವುದು?**
1919 ಭಾರತೀಯ ಪರಿಷತ್ ಕಾಯ್ದೆ.
**50.ಭಾರತದ ಸಂವಿಧಾನ ರಚನೆಗೆ ಬುನಾದಿಯಾದ ಶಾಸನ ಯಾವುದು?**
1935ರ ಭಾರತ ಸರ್ಕಾರದ ಕಾಯ್ದೆ.
**51.ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿದ ಶಾಸನ ಯಾವುದು?**
1935ರ ಭಾರತ ಸರ್ಕಾರದ ಕಾಯ್ದೆ
**52. ಭಾರತದಲ್ಲಿ ಫೆಡರಲ್ ಕೋರ್ಟ ಸ್ಥಾಪನೆಗೆ ಅವಕಾಶ ನೀಡಿದ ಶಾಸನ ಯಾವುದು?**
1935ರ ಭಾರತ ಸರ್ಕಾರದ ಕಾಯ್ದೆ.

**III ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಈಸ್ಟ್ ಇಂಡಿಯಾ ಕಂಪನಿ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿರಿ.**
**ದಿವಾನಿ ಅದಾಲತ್:**–ಇದು ನಾಗರೀಕ ನ್ಯಾಯಾಲಯವಾಗಿದ್ದು ಹಿಂದೂಗಳಿಗೆ ಹಿಂದೂ ಧರ್ಮಶಾಸ್ತ್ರದ ಪ್ರಕಾರ ಮುಸಲ್ಮಾನರಿಗೆ ಷರಿಯತ್ ಕಾನೂನಿನ ಪ್ರಕಾರ ನ್ಯಾಯ ತಿರ್ಮಾನ ಮಾಡಲಾಗುತ್ತಿತ್ತು. ಈ ನ್ಯಾಯಾಲುಗಳ ಅಧ್ಯಕ್ಷತೆಯನ್ನು ಯೊರೋಪಿನ ಅಧಿಕಾರಿಗಳು ವಹಿಸುತ್ತಿದ್ದರು.
**ಫೌಜದಾರಿ ಅದಾಲ್:**–ಇದು ಅಪರಾಧಿಕ ನ್ಯಾಯಾಲಯವಾಗಿದ್ದು 'ಖಾಜಿ'ಗಳು ನ್ಯಾಯ ತೀರ್ಮಾನ ಮಾಡುತ್ತಿದ್ದರು. ಇದರ ಅಧ್ಯಕ್ಷತೆಯನ್ನು ಯೂರೋಪಿಯನ್ನರೇ ವಹಿಸಿಕೊಳ್ಳುತ್ತಿದ್ದರು.

**2. ಬ್ರಿಟಿಷರ ಕಾಲದಲ್ಲಿ ಪೋಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?**
- ಪ್ರತೀ ಜಿಲ್ಲೆಗಳನ್ನು ಅನೇಕ ಪೋಲೀಸ್‌ಠಾಣೆ' ಗಳನ್ನಾಗಿ ವಿಭಜಿಸಲಾಯಿತು
- ಪ್ರತೀ ಠಾಣೆಯ ಉಸ್ತುವಾರಿಗೆ 'ಕೊತ್ವಾಲ್'ರನ್ನು ನೇಮಿಸಲಾಯಿತು.
- ಪೋಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ರ ಅಧೀನಕೊಳ್ಳಪಟ್ಟರು
- 1902 ರಲ್ಲಿ 'ಪೋಲೀಸ್ ಕಮಿಷನ್ ಕಾಯ್ದೆ'ಯನ್ನು ಜಾರಿಗೆ ತರಲಾಯಿತು

**3. ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು 'ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ' ಮಾಡಿತು. ಹೇಗೆ? ವಿಮರ್ಶಿಸಿ.**
- ಈ ಪದ್ದತಿಯು ರೈತರ ಭೂ ಮಾಲಿಕತ್ವವನ್ನು ಕಸಿದುಕೊಂಡಿತು.
- ಜಮೀನ್ದಾರರು ನಿಗಧಿತ ದರಕ್ಕಿಂತ ಹೆಚ್ಚಿನ ತೆರಿಗೆಯನ್ನು ರೈತರಿಂದ ಸಂಗ್ರಹಿಸುತ್ತಿದ್ದರು.
- ರೈತರು ಜಮೀನ್ದಾರರ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸಬೇಕಾಗಿತ್ತು.
- ಜಮೀನ್ದಾರರು ರೈತರನ್ನು ಶೋಷಣೆಗೊಳಪಡಿಸಿದರಲ್ಲದೇ ರೈತರ ಜೀವನ ಆಭದ್ರತೆಯಿಂದ ಕೂಡಿತು.

ಈ ಎಲ್ಲಾ ಕಾರಣಗಳಿಂದ ಈ ಪದ್ದತಿಯು ರೈತರನ್ನು'ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ' ಮಾಡಿತು.

**4. ರೈತವಾರಿ ಪದ್ದತಿಯು ಒಳಗೊಂಡ ಪ್ರಮುಖಾಂಶಗಳಾವುವು?**

- ಉಳುವವನನ್ನೇ ಭೂಮಿಯ ಒಡೆಯನೆಂದು ಗುರುತಿಸಿತು
- ಭೂ ಮಾಲಿಕನು ಒಟ್ಟು ಉತ್ಪನ್ನದ 50% ರಷ್ಟು ಕಂದಾಯವನ್ನು ತೆರಿಗೆಯಾಗಿ ನೀಡಬೇಕಾಗಿತ್ತು.
- ಭೂ ಕಂದಾಯದ ಪರಿಷ್ಕರಣೆಯ ಅವಧಿ 30 ವರ್ಷಗಳಾಗಿತ್ತು.
- ತೆರಿಗೆ ಸಂಗ್ರಹಿಸಲು ಬ್ರಿಟಿಷರು ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದ್ದರು.

**5. ಬ್ರಿಟಿಷರ ಕಂದಾಯ ನೀತಿಗಳಿಂದಾದ ಪರಿಣಾಮಗಳಾವುವು?**

- ಈ ಪದ್ದತಿಯಿಂದ ಕಂಪನಿಗೆ ನಿರಂತರವಾಗಿ ನಿಗಧಿತ ಕಂದಾಯ ಸಂದಾಯವಾಗತೊಡಗಿತು.
- ಕಂಪನಿಯು ಭಾರತೀಯ ರೈತರನ್ನು ಶೋಷಣೆ ಮಾಡಿತು.
- ರೈತರು ಭೂ ಮಾಲಿಕತ್ವವನ್ನು ಕಳೆದುಕೊಂಡರು.
- ನಿಗಧಿತ ದರಕ್ಕಿಂತ ಹೆಚ್ಚಿನ ಕಂದಾಯವನ್ನು ಅಧಿಕಾರಿಗಳು ಸಂಗ್ರಹಿಸುತ್ತಿದ್ದರು.

**6. ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿಮಾಡಿ.**

- ಇಂಗ್ಲೀಷ್ ಶಿಕ್ಷಣವು ಜಾರಿಗೆ ಬಂದಿತು.
- ಭಾರತೀಯರಲ್ಲಿ ಪ್ರಜಾಪ್ರಭುತ್ವ, ರಾಷ್ಟ್ರೀಯತೆ ಹಾಗೂ ವಿಮರ್ಶಾತ್ಮಕ ಜ್ಞಾನ ಬೆಳೆಯಿತು
- ಸ್ಥಳೀಯ ಭಾಷೆ ಹಾಗೂ ಸಾಹಿತ್ಯ ಪೋಷಿಸಲ್ಪಟ್ಟಿತು.
- ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪೂರ್ತಿ ಲಭಿಸಿತು.

**7. ರೆಗ್ಯೂಲೇಟಿಂಗ್ ಕಾಯ್ದೆ ಹೊಂದಿದ್ದ ನಿಬಂಧನೆಗಳಾವುವು?**

- ಬಂಗಾಳ ಪ್ರೆಸಿಡೆನ್ಸಿಯು ಇತರ ಎಲ್ಲಾ ಪ್ರೆಸಿಡೆನ್ಸಿಗಳ ಮೇಲೆ ನಿಯಂತ್ರಣ ಹೊಂದಿತು.
- ಬಂಗಾಳದ ಗವರ್ನರ್ ಹುದ್ದೆಯನ್ನು ಭಾರತದ ಗವರ್ನರ್ ಜನರಲ್ ಎಂದು ಬದಲಾಯಿಸಲಾಯಿತು.
- ಕೋಲ್ಕತ್ತಾದಲ್ಲಿ ಸುಪ್ರೀಂಕೋರ್ಟನ್ನು ಸ್ಥಾಪಿಸಲಾಯಿತು.
- ಲಾರ್ಡ್ ವಾರನ್ ಹೇಸ್ಟಿಂಗ್ಸ್ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿ ನೇಮಕಗೊಂಡನು.

**8. 1858ರ ಭಾರತ ಸರ್ಕಾರ ಕಾಯ್ದೆಯ ಪ್ರಮುಖ ಅಂಶಗಳಾವುವು?**

- ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರ ಸನ್ನದನ್ನು ರದ್ದುಪಡಿಸಲಾಯಿತು.
- ಭಾರತದ ಆಳ್ವಿಕೆಯನ್ನು ಬ್ರಿಟನ್ನಿನ ರಾಣಿಯ ನಿಯಂತ್ರಣಕ್ಕೆ ಒಪ್ಪಿಸಲಾಯಿತು.
- ಗವರ್ನರ್ ಜನರಲ್ ಹುದ್ದೆಯನ್ನು 'ವೈಸರಾಯ್' ಎಂದು ಬದಲಾಯಿಸಲಾಯಿತು.

* ಲಾರ್ಡ್ ಕ್ಯಾನಿಂಗ್ ಪ್ರಥಮ ವೈಸರಾಯ್ ಆಗಿ ನೇಮಿಸಲ್ಪಟ್ಟನು.

**9. 1935ರ ಭಾರತ ಸರ್ಕಾರದ ಕಾಯ್ದೆ 'ಭಾರತ ಸಂವಿಧಾನದ ಬುನಾದಿ' ಸಮರ್ಥಿಸಿ.**

- ಭಾರತ ಸಂವಿಧಾನದ ಅನೇಕ ನಿಬಂಧನೆಗಳಿಗೆ ಈ ಕಾಯ್ದೆಯೇ ಆಧಾರವಗಿದೆ.
- ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚನೆಗೆ ಈ ಕಾಯಿದೆ ಅವಕಾಶ ನೀಡಿತು.
- ದೇಶಿಯ ಸಂಸ್ಥಾನಗಳು, ಬ್ರಿಟಿಷ್ ಸಂಸ್ಥಾನಗಳನ್ನೊಳಗೊಂಡ ಒಕ್ಕೂಟ ರಚನೆಗೆ ಅವಕಾಶ ನೀಡಿತು.
- ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ ನೀಡಿತು.

**10. 1919ರ ಭಾರತ ಸರ್ಕಾರ ಕಾಯ್ದೆಯ ಪ್ರಮುಖ ಅಂಶಗಳಾವುವು?**

- ಕೇಂದ್ರದಲ್ಲಿ ದ್ವಿ ಸದನ ಶಾಸಕಾಂಗ ರಚನೆಗೆ ಅವಕಾಶ ನೀಡಿತು.
- ಭಾರತಕ್ಕೆ ಒಬ್ಬ ಹೈ ಕಮಿಷನರ್ ನೇಮಕ ಮಾಡಲು ಸೂಚಿಸಿತು.
- ಪ್ರಾಂತೀಯ ಆಯವ್ಯಯವನ್ನು ಕೇಂದ್ರ ಆಯವ್ಯಯದಿಂದ ಪ್ರತ್ಯೇಕಿಸಲಾಯಿತು.
- ಮುಸಲ್ಮಾನರು, ಸಿಖ್ಖರು ಹಾಗೂ ಆಂಗ್ಲೋ ಇಂಡಿಯನ್ನರಿಗೆ 'ಪ್ರತ್ಯೇಕ ಚುನಾವಣಾ ಮತಗಟ್ಟೆ'ಗಳನ್ನು ನಿಗಧಿಪಡಿಸಿತು.

**11. ಮಹಲ್ವಾರಿ ಪದ್ಧತಿಯನ್ನು ವಿವರಿಸಿ.**

- ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಮಹಲ್ಲುಗಳೇ ಸಾಮೂಹಿಕ ಒಪ್ಪಂದಗಳನ್ನು ಮಾಡಿಕೊಂಡು, ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿಯನ್ನು ಜಾರಿಗೆ ತರಲಾಯಿತು.
- ಈ ಪದ್ಧತಿಯನ್ನು ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು.
- 'ಮಹಲ್' ಎಂದರೆ ತಾಲ್ಲೂಕು ಎಂದರ್ಥ.

• ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಈ ಪದ್ಧತಿಯ ಅನುಷ್ಠಾನದಲ್ಲಿ ವ್ಯತ್ಯಾಸಗಳಿದ್ದವು.

• ದೊಡ್ಡ ಮತ್ತು ಸಣ್ಣ ಪ್ರಮಾಣದ ಜಮೀನ್ದಾರರು ಈ ಪದ್ಧತಿಯ ಭಾಗವಾಗಿದ್ದರು.

• ಕಂಪನಿಯ ಸರ್ಕಾರದ ಅಧಿಕಾರಿಗಳು ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ಮೊತ್ತದ ವಾರ್ಷಿಕ ಪಾವತಿಗಳನ್ನು ನಿರ್ಧರಿಸಿದ್ದರಿಂದ ಅನೇಕ ಜಮೀನ್ದಾರರು ತಮ್ಮ ಭೂಮಾಲಿಕತ್ವವನ್ನು ಕಳೆದುಕೊಂಡರು.

• ಅವರನ್ನೇ ನೆಚ್ಚಿ ಬದುಕುತ್ತಿದ್ದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರು ನಿರ್ಗತಿಕರಾದರು.

**12. ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ತಂದ ಸುಧಾರಣೆಗಳು ಯಾವುವು?**

• ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿಯೆಂದರೆ ವಾರನ್ ಹೇಸ್ಟಿಂಗ್ಸ್.

• ಅವನು 'ಕಲ್ಕತ್ತಾದಲ್ಲಿ ಮದರಸ'ವನ್ನು ಪ್ರಾರಂಭಿಸಿದನು.

• ಜೊನಾಥನ್ ಡಂಕನ್ ಎಂಬ ಮತ್ತೊಬ್ಬ ಬ್ರಿಟಿಷ್ ವ್ಯಕ್ತಿಯು ಬನಾರಸ್‌ನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು.

• ಆದರೆ ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವನು ಚಾರ್ಲ್ಸ್ ಗ್ರಾಂಟ್.

• ವಿಲಿಯಂ ಬೆಂಟಿಂಕನು ಗವರ್ನರ್ ಜನರಲ್ ಆಗಿ ನೇಮಕಗೊಂಡ ನಂತರ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಮತ್ತಷ್ಟು ವಿಶೇಷ ಪ್ರೋತ್ಸಾಹ ದೊರೆಯಿತು.

• ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೇಮಕವಾದ ಸಮಿತಿಗೂ ಅಧ್ಯಕ್ಷನನ್ನಾಗಿ ನೇಮಕ ಮಾಡಲಾಯಿತು.

• ಇಂಗ್ಲೀಷ್ ಶಿಕ್ಷಣ ಸಂಬಂಧಿಸಿದಂತೆ ಮೆಕಾಲೆಯು ಕೊಟ್ಟ ವರದಿಯೆ ಅಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.

• ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದನು.

**13. 1813ರ ಚಾರ್ಟರ್ ಕಾಯ್ದೆಯು ಚಾರಿತ್ರಿಕವಾದದು.ಏಕೆ?**

• ಈ ಕಾಯ್ದೆಯು ಈಸ್ಟ್ ಇಂಡಿಯಾ ಕಂಪನಿಗೆ ಮುಂದಿನ 20 ವರ್ಷಗಳು ಭಾರತದಲ್ಲಿರುವ ಅಧಿಕಾರವನ್ನು ನೀಡಿತು. ಈ ಕಾಯ್ದೆಯು ಜಾರಿಗೊಳ್ಳುವ ಪೂರ್ವದಲ್ಲಿ ಭಾರತದಲ್ಲಿ ವ್ಯಾಪಾರ ಮಾಡುವ ಅಧಿಕಾರವನ್ನು ಕಂಪನಿಗೆ ಮಾತ್ರವಲ್ಲದೆ ಇಚ್ಛೆಯುಳ್ಳವರೆಲ್ಲರಿಗೂ ನೀಡಬೇಕೆಂದು ದೊಡ್ಡ ಹೋರಾಟ ನಡೆಯಿತು.

• ಅನುಮತಿ ಮತ್ತು ಪರವಾನಿಗೆಯ ಹೊಸ ಕಾಲ ಆರಂಭವಾಯಿತು.

• ಇನ್ನು ಮುಂದೆ ಗವರ್ನರ್ ಜನರಲ್ ಮತ್ತು ಸೇನೆಯ ಮಹಾಮುಖ್ಯಸ್ಥರನ್ನು ನಿರ್ದೇಶಕ ಮಂಡಳಿಯು ನೇಮಿಸುವ ಅಧಿಕಾರವನ್ನು ಹೊಂದಿತು.

• ಚರ್ಚ್‌ಗಳಿಗೆ ಭಾರತಕ್ಕೆ ಪ್ರವೇಶಿಸುವ ಅಧಿಕೃತ ಅವಕಾಶವನ್ನು ನೀಡಲಾಯಿತು.

• ಭಾರತೀಯರಲ್ಲಿ ಹೊಸ ಜ್ಞಾನವನ್ನು ಪಸರಿಸುವ, ಅವರ ನೈತಿಕ ಮತ್ತು ಧಾರ್ಮಿಕ ಬದುಕನ್ನು ಎತ್ತರಿಸುವ ಜವಾಬ್ದಾರಿಯನ್ನು ಮಿಶನರಿ ಸಂಸ್ಥೆಗಳು ವಹಿಸಿಕೊಳ್ಳಬೇಕು ಎಂಬ ನಿರ್ದೇಶನವನ್ನು ನೀಡಲಾಯಿತು.

• ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಕ್ರೈಸ್ತ ಮಿಶನರಿಗಳು ಭಾರತಕ್ಕೆ ಬರತೊಡಗಿದರು.

• ಕ್ರೈಸ್ತ ಧರ್ಮದ ಪ್ರಚಾರ ಮತ್ತು ಇಂಗ್ಲಿಷ್ ವಿದ್ಯಾಭ್ಯಾಸದ ವಿಸ್ತರಣೆ ಹೆಚ್ಚಾಯಿತು.

**14. 1909 ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳು ಯಾವುವು?**

• ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16 ರಿಂದ 60ಕ್ಕೆ ಹೆಚ್ಚಿಸಲಾಯಿತು.

• ಪ್ರಾಂತ್ಯಗಳಲ್ಲೂ ಶಾಸನ ಸಭೆಗಳ ಸದಸ್ಯರ ಸ್ಥಾನಗಳನ್ನು ಹೆಚ್ಚಿಸಲಾಯಿತು.

• ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ ನೀಡಲಾಯಿತು.

• ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ 'ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆ'ಯನ್ನು ಜಾರಿಗೆ ತರಲಾಯಿತು.

# ಅಧ್ಯಾಯ-4
## ಕರ್ನಾಟಕದಲ್ಲಿ ಬ್ರಿಟಿಷರ ಆಳ್ವಿಕೆಗೆ ಪ್ರತಿರೋಧಗಳು

**I ಖಾಲಿಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಮೊದಲನೇ ಆಂಗ್ಲೋ-ಮೈಸೂರು ಯುದ್ದವು **ಹೈದರಾಲಿ** ಮತ್ತು **ಬ್ರಿಟಿಷರ** ನಡುವೆ ನಡೆಯಿತು.
2. ಎರಡನೇ ಆಂಗ್ಲೋ-ಮೈಸೂರು ಯುದ್ಧವು **ಮಂಗಳೂರು** ಒಪ್ಪಂದದೊಂದಿಗೆ ಕೊನೆಗೊಂಡಿತು.
3. ಕಿತ್ತೂರು ಚೆನ್ನಮ್ಮ **ಶಿವಲಿಂಗಪ್ಪ** ಎಂಬ ಹುಡುಗನನ್ನು ದತ್ತು ಪಡೆದ್ದಿದಳು.
4. ಕಿತ್ತೂರು ಸಂಸ್ಥಾನದ ರಾಯಣ್ಣನ ಊರು **ಸಂಗೊಳ್ಳಿ.**
5. ಸುರಪುವು ಈಗಿನ **ಯಾದಗಿರಿ** ಜಿಲ್ಲೆಯಲ್ಲಿದೆ.
6. ಈಗಿನ ಬಾಗಲಕೋಟೆ ಜಿಲ್ಲೆಯ **ಹಲಗಲಿಯ** ಬೇಡರು ಬ್ರಿಟಿಷರ ವಿರುದ್ದ ದಂಗೆಯೆದ್ದಿದ್ದರು.
7. ಅಮರ ಸುಳ್ಯ ಬಂಡಾಯವು ಮೂಲತಃ **ರೈತರ** ಬಂಡಾಯ.

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಹೈದರಾಲಿ ಹೇಗೆ ಅಧಿಕಾರಕ್ಕೆ ಬಂದನು?**

- ಹೈದರಾಲಿಯು ಮೈಸೂರು ಸೇನೆಗೆ ಸೇರ್ಪಡೆಗೊಂಡನು
- ದೇವನಹಳ್ಳಿ ಕೋಟೆಯ ಧಾಳಿಯಲ್ಲಿ ಹೈದರಾಲಿಯು ವೀರಾವೇಶದಿಂದ ಹೋರಾಡಿ ಪ್ರಸಿದ್ಧಿಗೆ ಬಂದನು.
- ಆರ್ಕಾಟಿನ ನಿಜಾಮನ ಮೇಲೆ ಯಶಸ್ವಿ ಧಾಳಿ ನಡೆಸಿದನು.
- ಸೈನಿಕರ ಮನಸನ್ನು ಗೆದ್ದು ದಳವಾಯಿಗಳನ್ನು ಬದಿಗೊತ್ತಿ ನವಾಬ ಹೈದರಾಲಿಯಾದನು.
- ಕೃಷ್ಣರಾಜ ಒಡೆಯರ ಅಸಮರ್ಥತೆಯು ಹೈದರಾಲಿ ಏಳಿಗೆಗೆ ಬರಲು ಸಹಾಯಕವಾಯಿತು.

**2. ಎರಡನೇ ಆಂಗ್ಲೋ-ಮೈಸೂರು ಯುದ್ಧದಿಂದ ಉಂಟಾದ ಪರಿಣಾಮಗಳೇನು?**

- ಖಾಯಿಲೆಯಿಂದಾಗಿ ಹೈದರಾಲಿಯು ಮರಣ ಹೊಂದಿದನು.
- ಯುದ್ದವನ್ನು ಮುನ್ನಡೆಸಿದ ಟಿಪ್ಪುವು ಮಂಗಳೂರು ಬಳಿ ಬ್ರಿಟಿಷರನ್ನು ಸೋಲಿಸಿದನು.
- ಬ್ರಿಟಿಷರು ಹಾಗೂ ಟಿಪ್ಪು ಮಂಗಳೂರು ಒಪ್ಪಂದಕ್ಕೆ ಸಹಿ ಹಾಕಿದರು.
- ಬ್ರಿಟಿಷರು ಟಿಪ್ಪುವಿಗೆ ಮಂಗಳೂರನ್ನು ಬಿಟ್ಟುಕೊಟ್ಟರು.

**3. ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳಾವುವು?**

- ಇದರ ಪರಿಣಾಮವಾಗಿ ತನ್ನ ಅರ್ಧರಾಜ್ಯವನ್ನು ಬ್ರಿಟಿಷರಿಗೆ ನೀಡಬೇಕಾಯಿತು.
- 3 ಕೋಟಿ ರೂಪಾಯಿಗಳನ್ನು ಯುದ್ಧ ಪರಿಹಾರವಾಗಿ ನೀಡಬೇಕಾಯಿತು
- ಹಣ ಸಂದಾಯವಾಗುವವರೆಗು ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿ ಇಡಬೇಕಾಯಿತು.
- ಯುದ್ಧಖೈದಿಗಳನ್ನು ಯಾವುದೇ ಷರತ್ತುಗಳು ಇಲ್ಲದೇ ಬಿಡುಗಡೆಮಾಡಬೇಕಾಯಿತು.
- ಬ್ರಿಟಿಷರು ಶ್ರೀರಂಗಪಟ್ಟಣದಿಂದ ತಮ್ಮ ಸೈನ್ಯವನ್ನು ಹಿಂದಕ್ಕೆ ಪಡೆದರು.

**4. ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧವು ಬ್ರಿಟಿಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು. ಸಮರ್ಥಿಸಿ**

- ಈ ಯುದ್ಧದಲ್ಲಿ ಬ್ರಿಟಿಷರು ಟಿಪ್ಪುವನ್ನು ಕೊಂದರು.
- ಸಾಮ್ರಾಜ್ಯವನ್ನು ಬ್ರಿಟಿಷರು, ಮರಾಠರು ಹಾಗೂ ನಿಜಾಮರು ಪರಸ್ಪರ ಹಂಚಿಕೊಂಡರು.
- ಸಣ್ಣ ಪ್ರಾಂತ್ಯವನ್ನು ಮೈಸೂರು ಒಡೆಯರಿಗೆ ಹಿಂದರುಗಿಸಲಾಯಿತು.
- ಬ್ರಿಟಿಷರ ಸಹಾಯಕ ಸೈನ್ಯಪದ್ಧತಿಗೆ ಮೈಸೂರು ಒಡೆಯರು ಸಹಿಹಾಕಿದರು.

**5. ದೋಂಡಿಯ ವಾಘನು ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿಶ್ಲೇಷಿಸಿ.**

- ದೊಂಡಿಯ ವಾಘನು ತನ್ನದೇ ಆದ ಖಾಸಗಿ ಸೈನ್ಯವನ್ನು ಹೊಂದಿದ್ದನು.
- ಕುಡಲೂರು ಕೋಟೆಯ ಮೇಲೆ ಧಾಳಿ ಮಾಡುವ ಪ್ರಯತ್ನ ಮಾಡಿದನು.
- ಶಿವಮೊಗ್ಗ ಹಾಗೂ ಚಿತ್ರದುರ್ಗ ಕೋಟೆಗಳ ಮೇಲೂ ಧಾಳಿ ಮಾಡಿದನು.
- ಬ್ರಿಟಿಷರ ವಿರುದ್ಧ ಹೊರಾಡಲು ಪಾಳೆಯಗಾರರು ವಾಘನಿಗೆ ಬೆಂಬಲ ನೀಡಿದರು.
- ಫ್ರೆಂಚರ ನೆರವನ್ನು ಸಹ ವಾಘನು ಪಡೆದುಕೊಂಡನು.

**6. ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.**

- ರಾಯಣ್ಣನು ತನ್ನದೇ ಆದ ಸೈನ್ಯವನ್ನು ಸಂಘಟಿಸಿದನು.
- ರಹಸ್ಯ ಸಭೆಗಳನ್ನು ಆಯೋಜಿಸಿ ಯೋಜನೆ ರೂಪಿಸಿಕೊಂಡರು.
- ಸೈನ್ಯದಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸಿದನು.
- ಬ್ರಿಟಿಷರ ಖಜಾನೆ ತಾಲ್ಲೂಕು ಕಛೇರಿಗಳನ್ನು ಲೂಟಿ ಮಾಡಿದನು.

**7. ಸ್ವಾತಂತ್ರ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದ ಪುಟ್ಟಬಸಪ್ಪನ ಪಾತ್ರವನ್ನು ವಿವರಿಸಿ.**

- ಪುಟ್ಟಬಸಪ್ಪನು 'ಕಲ್ಯಾಣಸ್ವಾಮಿ' ಹಾಗೂ ಸ್ವಾಮಿ ಅಪರಂಪರ' ಎಂದೇ ಪರಿಚಿತರಾಗಿದ್ದರು.
- ದಂಗೆಕೋರರನ್ನು ಪುಟ್ಟಬಸಪ್ಪನು ಸಂಘಟಿಸಿದನು.
- ತಂಬಾಕು ಹಾಗೂ ಉಪ್ಪಿನ ಮೇಲಿನ ತೆರಿಗೆಯನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿದನು.
- ಬಳ್ಳಾರಿಯ ಸರ್ಕಾರಿ ಕಛೇರಿಯನ್ನು ಲೂಟಿಮಾಡಿದನು.
- ಅಮಲ್ದಾರನೊಬ್ಬನನ್ನು ಕೊಂದು ಭಂಟ್ವಾಳದ ಖಜಾನೆ ಹಾಗೂ ಸೆರೆಮನೆಯನ್ನು ಲೂಟಿಮಾಡಿದನು.

**8. ಸುರಪುರದ ದಂಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

- 1857ರ ದಂಗೆಯ ಸಮಯದಲ್ಲಿ ವೆಂಕಟಪ್ಪ ನಾಯಕನು ಸುರಪುರ ದಂಗೆಯನ್ನು ಪ್ರಾರಂಭಿಸಿದನು.
- ನಾನಾ ಸಾಹೇಬನ ಪ್ರತಿನಿಧಿಗಳು ವೆಂಕಟಪ್ಪ ನಾಯಕನ ದಂಗೆಯನ್ನು ಬೆಂಬಲಿಸಿದರು.
- ಬ್ರಿಟಿಷರು ವೆಂಕಟಪ್ಪ ನಾಯಕನನ್ನು ಅನುಮಾನದಿಂದ ನೋಡಿದರು.
- ವೆಂಕಟಪ್ಪ ನಾಯಕ ಕುರಿತು ವರದಿ ನೀಡಲು ಕ್ಯಾಂಪ್‌ಬೆಲ್ ಎಂಬ ಅಧಿಕಾರಿಯನ್ನು ನೇಮಿಸಲಾಯಿತು.
- ಹೈದರಾಬಾದಿನ ರೆಸಿಡೆಂಟನಿಗೆ ನೀಡಿದ ವರದಿಯಲ್ಲಿ ಸುರಪುದ ದುರಾಡಳಿತಕ್ಕೆ ವೆಂಕಟಪ್ಪ ಕಾರಣವೆಂದು ತಿಳಿಸಲಾಯಿತು
- ಬ್ರಿಟಿಷರು ವೆಂಕಟಪ್ಪ ನಾಯಕನನ್ನು ಅಧೀಕಾರದಿಂದ ಕೆಳಗಿಳಿಸಿದರು.

**9. ಮೊದಲನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣಗಳೇನು?**

- ದಕ್ಷಿಣ ಭಾರತದಲ್ಲಿ ಹೈದರಾಲಿಯ ಏಳಿಗೆಯು ಬ್ರಿಟಿಷರು, ನಿಜಾಮರ ಮತ್ತು ಮರಾಠರಲ್ಲಿ ರಾಜಕೀಯ ಅಸಹನೆ ಮೂಡಿಸಿತು.
- ಹೀಗಾಗಿ ಬ್ರಿಟಿಷರು ತಮ್ಮ ಸಾಮ್ರಾಜ್ಯಶಾಹಿ ಧೋರಣೆಗೆ ಮುಳ್ಳಾಗಿ ಪರಿಣಮಿಸಿದ್ದ ಹೈದರಾಲಿಯನ್ನು ರಾಜಕೀಯವಾಗಿ ಹಣಿಯಲು ತಂತ್ರಗಳನ್ನು ಮಾಡಲಾರಂಭಿಸಿದರು.
- ಮರಾಠರ ದಾಳಿಯಿಂದ ರಾಜಕೀಯ ಮತ್ತು ಆರ್ಥಿಕ ನಷ್ಟವನ್ನು ಅನುಭವಿಷದ ಹೈದರಾಲಿ ಮರಾಠರು ಮತ್ತು ನಿಜಾಮನನ್ನು ತನ್ನೆಡೆಗೆ ಸೆಳೆದುಕೊಳ್ಳಲು ಯತ್ನಿಸಿದನಾದರೂ ಈ ಪ್ರಯತ್ನದಲ್ಲಿ ವಿಫಲನಾದನು.
- ಹೈದರ್ ಆಲಿಯ ವಿರುದ್ಧ ಬ್ರಿಟಿಷರು, ಮರಾಠರು ಮತ್ತು ನಿಜಾಮನೊಂದಿಗೆ ಒಪ್ಪಂದ ಮಾಡಿಕೊಂಡರು.
- ಇದರನ್ವಯ ತ್ರಿಪಕ್ಷ ಒಕ್ಕೂಟ ರಚಿಸಲ್ಪಟ್ಟಿತು.
- ಆದರೆ ಹೈದರಾಲಿ ತನ್ನ ಚಾಣಾಕ್ಷ್ಯ ರಾಜಕೀಯ ತಂತ್ರಗಳನ್ನು ಪ್ರಯೋಗಿಸುವ ಮೂಲಕ ತನ್ನ ವಿರುದ್ಧ ರಚನೆಯಾಗಿದ್ದ ಮಿತ್ರಕೂಟವನ್ನು ಒಡೆದು ಮರಾಠರು ಮತ್ತು ನಿಜಾಮನನ್ನು ಬ್ರಿಟಿಷರ ವಿರುದ್ಧ ಎತ್ತಿಕಟ್ಟುವಲ್ಲಿ ಯಶಸ್ವಿಯಾದನು.

**10. ಎರಡನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ & ಪರಿಣಾಮಗಳೇನು?**

- ಆದರೆ ಬ್ರಿಟಿಷರು ಮದ್ರಾಸ್ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಲು ಯತ್ನಿಸಿದರು.
- ಬ್ರಿಟಿಷರು ಮದರಾಸು ಒಪ್ಪಂದಕ್ಕೆ ವಿರುದ್ಧವಾಗಿ ನಡೆದುಕೊಂಡರು.
- ಮಾಹೆಯು ಫ್ರೆಂಚರ ವಸಾಹತುವಾಗಿದ್ದು, ಹೈದರಾಲಿಯ ನಿಯಂತ್ರಣಕ್ಕೊಳಪಟ್ಟಿತ್ತು.
- ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು.
- ಈ ಯುದ್ದವು ಮಂಗಳೂರು ಒಪ್ಪಂದದೊಂದಿಗೆ 1784 ರಲ್ಲಿ ಕೊನೆಗೊಂಡಿತು.

**11. 3ನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ & ಪರಿಣಾಮಗಳೇನು?**

- ಟಿಪ್ಪು ಇಂಗ್ಲಿಷರ ಸ್ನೇಹಿತನಾದ ತಿರುವಾಂಕೂರಿನ ದೊರೆಯ ಮೇಲೆ ದಾಳಿಮಾಡಿದಾಗ 3ನೇ ಆಂಗ್ಲೋ–ಮೈಸೂರು ಯುದ್ಧವು ಆರಂಭವಾಯಿತು.
- ಟಿಪ್ಪುವನ್ನು ಸೋಲಿಸಲು ಬ್ರಿಟಿಷರು ಹೈದರಬಾದಿನ ನಿಜಾಮ ಮತ್ತು ಮರಾಠರ ಸಹಾಯ ಕೋರಿದನು.
- ಟಿಪ್ಪುವಿನ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡರು.
- ಅಂತಿಮವಾಗಿ ಕ್ರಿಶ 1791 ರಲ್ಲಿ ಇಂಗ್ಲಿಷರ ಗವರ್ನರ್ ಲಾರ್ಡ ಕಾರ್ನವಾಲಿಸ್‌ನು ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡನು.

- ಆಗ ಅನಿವಾರ್ಯವಾಗಿ ಟಿಪ್ಪು 1792 ರಲ್ಲಿ ಶ್ರೀರಂಗಪಟ್ಟಣ ಒಪ್ಪಂದಕ್ಕೆ ಸಹಿ ಹಾಕಿದನು.

**12. ಶ್ರೀರಂಗಪಟ್ಟಣ ಒಪ್ಪಂದವು ಟಿಪ್ಪುವಿಗೆ ಅನಿವಾರ್ಯವಾಗಿತ್ತು. ವಿಮರ್ಶಿಸಿ.**

- ಬ್ರಿಟಿಷ್ ಸೈನ್ಯ ಕಾರ್ನ್‌ವಾಲೀಸನ ನೇತೃತ್ವದಲ್ಲಿ ಕೋಲಾರ ಮತ್ತು ಹೊಸಕೋಟೆಗಳನ್ನು ವಶಪಡಿಸಿಕೊಂಡನು.
- ಕಾರ್ನ್‌ವಾಲೀಸ್ ಟಿಪ್ಪುವಿನ ನಿರ್ನಾಮಕ್ಕಾಗಿ ನಿಜಾಮ ಮತ್ತು ಮರಾಠರ ನೆರವನ್ನು ಕೋರಿದನು.
- 1792ರಲ್ಲಿ ಕಾರ್ನ್‌ವಾಲೀಸ್‌ನು ಟಿಪ್ಪುನನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು.
- ಇದರಿಂದ ವಿಚಲಿತಗೊಂಡ ಟಿಪ್ಪುವು ಸಾಮ್ರಾಜ್ಯದ ಉಳವಿಗಾಗಿ ಬ್ರಿಟಿಷರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವುದು ಅನಿವಾರ್ಯವಾಯಿತು.

**13. ಹಲಗಲಿಯ ಬೇಡರ ದಂಗೆಯನ್ನು ವಿವರಿಸಿ.**

ಬಾಗಲಕೋಟೆ ಜಿಲ್ಲೆ ಮುದೋಳ ತಾಲ್ಲೂಕಿನಲ್ಲಿ ಹಲಗಲಿ ಎಂಬುದು ಒಂದು ಪುಟ್ಟಗ್ರಾಮ. ಹಿಂದೆ ಇದು ಮುದೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತು. 1857ರ ಬಂಡಾಯದ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು. ಇದನ್ನು ಹಲಗಲಿಗೂ ಸಹ ಅನ್ವಯಿಸಲಾಯಿತು. ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ದರಿರಲಿಲ್ಲ. ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರ ವಿರುದ್ದ ಸಿಡಿದೆದ್ದರು.
ಈ ದಂಗೆಯನ್ನು ಇಂಗ್ಲಿಷರು ಹತ್ತಿಕ್ಕಿದರು.

**14. ಕಿತ್ತೂರಿನ ವೀರರಾಣಿ ಚೆನ್ನಮ್ಮನ ಸಾಧನೆಗಳು ಯಾವುವು?**

- ಮಲ್ಲಸರ್ಜನ ಮರಣಾನಂತರ ಚೆನ್ನಮ್ಮ ಕಿತ್ತೂರಿನ ಆಡಳಿತ ವ್ಯವಹಾರಗಳಲ್ಲಿ ಹೆಚ್ಚು ಆಸಕ್ತಿ ವಹಿಸಿತೊಡಗಿದಳು.
- ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದಳು. ಇದಕ್ಕೆ ಧಾರವಾಡ ಕಲೆಕ್ಟರ್ ಥ್ಯಾಕರೆ ವಿರೋಧ ವ್ಯಕ್ತಪಡಿಸಿದನು.
- ಕಿತ್ತೂರಿನ ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ದಾಳಿಮಾಡಿ ಥ್ಯಾಕರೆಯನ್ನು ಕೊಂದರು.
- ಲೆಫ್ಟಿನೆಂಟ್ ಕರ್ನಲ್ ಡೀಕ್‌ನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಕಿತ್ತೂರಿಗೆ ಮುತ್ತಿಗೆ ಹಾಕಿ ರಾಣಿ ಚೆನ್ನಮ್ಮಳ ಸೈನ್ಯವನ್ನು ಸೋಲಿಸಿತು.
- ಚೆನ್ನಮ್ಮ ಮತ್ತು ಮೊದಲಾದವರನ್ನು ಬೈಲಹೊಂಗಲ ಕೋಟೆಯ ಸೆರೆಮನೆಯಲ್ಲಿ ಇರಿಸಲಾಯಿತು.
- ಚೆನ್ನಮ್ಮ ಮರಣ ಹೊಂದಿದರು. ಇಂದಿಗೂ ಕೂಡಾ ನಾಡಿಗೆ ಅವಳು ಆದರ್ಶಪ್ರಾಯಳಾಗಿದ್ದಾಳೆ.

**15. ಕಿತ್ತೂರಿನ ಬಂಡಾಯವನ್ನು ಬರೆಯಿರಿ.**

- ಕಿತ್ತೂರು ಸಂಸ್ಥಾನವನ್ನು ದೇಸಾಯಿ ಮನೆತನದವರು ಆಳ್ವಿಕೆ ಮಾಡುತ್ತಿದ್ದರು.
- ಮಲ್ಲಸರ್ಜನ ಮರಣಾನಂತರ ಚೆನ್ನಮ್ಮ ಕಿತ್ತೂರಿನ ಆಡಳಿತ ವ್ಯವಹಾರಗಳಲ್ಲಿ ಹೆಚ್ಚು ಆಸಕ್ತಿ ವಹಿಸಿತೊಡಗಿದಳು.
- ಕಿತ್ತೂರಿನ ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ದಾಳಿಮಾಡಿ ಥ್ಯಾಕರೆಯನ್ನು ಕೊಂದರು.
- ಲೆಫ್ಟಿನೆಂಟ್ ಕರ್ನಲ್ ಡೀಕ್‌ನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಕಿತ್ತೂರಿಗೆ ಮುತ್ತಿಗೆ ಹಾಕಿ ರಾಣಿ ಚೆನ್ನಮ್ಮಳ ಸೈನ್ಯವನ್ನು ಸೋಲಿಸಿತು.
- ಚೆನ್ನಮ್ಮ ಮತ್ತು ಮೊದಲಾದವರನ್ನು ಬೈಲಹೊಂಗಲ ಕೋಟೆಯ ಸೆರೆಮನೆಯಲ್ಲಿ ಇರಿಸಲಾಯಿತು
- ಸಂಗೊಳ್ಳಿ ರಾಯಣ್ಣನ ಮರಣ ನಂತರ ಕಿತ್ತೂರು ಬಂಡಾಯ ಅಂತ್ಯವಾಯಿತು.

**16.ಕೊಪ್ಪಳದ ವೀರಪ್ಪನ ಸಾಧನೆಗಳನ್ನು ವಿವರಿಸಿ.**

- ವೀರಪ್ಪ ಜಮೀನ್ದಾರನಾಗಿದ್ದು ಬಂಡೆದ್ದು ಕೊಪ್ಪಳ ಮತ್ತು ಸನಿಹದ ಕೋಟೆಗಳನ್ನು ತನ್ನ ಸುಪರ್ದಿಗೆ ವಹಿಸಿಕೊಂಡನು.
- ವೀರಪ್ಪನ ಈ ಉದ್ದೇಶದ ಮರ್ಮ ಅರಿತ ಅನೇಕ ರೈತರು ಮತ್ತು ಜಮೀನ್ದಾರರು ಆತನೊಂದಿಗೆ ಕೈ ಜೋಡಿಸಿದರು. ನಿಜಾಮರೊಂದಿಗೆ ಸಂಪರ್ಕವನ್ನು ಸಾಧಿಸಿದ ಬ್ರಿಟಿಷರು ವೀರಪ್ಪನ ನೇತೃತ್ವದಲ್ಲಿನ ಬಂಡಾಯವನ್ನು ಸದೆಬಡಿಯಲು ಸೈನ್ಯವನ್ನು ನಿಯೋಜಿಸಿದರು.
- ಕಡಿಮೆ ಸೈನಿಕರ ಬೆಂಬಲವನ್ನು ಹೊಂದಿದ್ದ ವೀರಪ್ಪ ಸತತವಾಗಿ ಹೋರಾಟವನ್ನು ನಡೆಸಿ ಮರಣ ಹೊಂದಿದನು.
- ತರುವಾಯ ಬ್ರಿಟಿಷರು ಕೊಪ್ಪಳದ ಕೋಟೆಯನ್ನು ವಶಪಡಿಸಿಕೊಂಡರು.

# ಅಧ್ಯಾಯ – 5

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. 19ನೇ ಶತಮಾನವನ್ನು **ಭಾರತೀಯ ನವೋದಯ** ಕಾಲವೆಂದು ಕರೆಯಲಾಗಿದೆ.
2. ರಾಮ್ ಮೋಹನರಾಯರು **ಸಂವಾದ ಕೌಮುದಿ** ಪತ್ರಿಕೆಯನ್ನು ಪ್ರಾರಂಭಿಸಿದರು.
3. ಪ್ರಾರ್ಥನಾ ಸಮಾಜದ ಸ್ಥಾಪಕರು **ಡಾ.ಆತ್ಮಾರಾಂ ಪಾಂಡುರಂಗ.**
4. ಯುವ ಬಂಗಾಳಿ ಚಳುವಳಿಯನ್ನು ಪ್ರಾರಂಭಿಸಿದವರು **ಹೆನ್ರಿ ಲೂಯಿಸ್ ವಿವಿಯನ್ ಡಿರೋಜಿಯೋ.**
5. ಸ್ವಾಮಿ ವಿವೇಕಾನಂದರ ಗುರುಗಳಾಗಿದ್ದವರು **ಶ್ರೀ ರಾಮಕೃಷ್ಣ ಪರಮಹಂಸರು.**
6. ಆಂಗ್ಲೋ–ಓರಿಯಂಟಲ್ ಕಾಲೇಜನ್ನು **ಆಲಿಘಡ** ಎಂಬಲ್ಲಿ ಸ್ಥಾಪಿಸಲಾಗಿದೆ.

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಬ್ರಹ್ಮ ಸಮಾಜದ ಬೋಧನೆಗಳಾವುವು?**

- ಏಕದೇವತಾರಾಧನೆಗೆ ಪ್ರೋತ್ಸಾಹ.
- ಬಾಲ್ಯ ವಿವಾಹಕ್ಕೆ ವಿರೋಧ.
- ಮಹಿಳಾ ಶಿಕಣ್ಷಕ್ಕೆ ಪ್ರೋತ್ಸಾಹ.
- ಸತಿ ಪದ್ಧತಿಗೆ ವಿರೋಧ.
- ಬಹುಪತ್ನಿತ್ವ ಪದ್ಧತಿಯನ್ನು ವಿರೋದಿಸಿತು.
- ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು ನೀಡಿತು.

**2. ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆಯನ್ನು ವಿಶ್ಲೇಷಿಸಿ.**

ವೇದಗಳು ಸತ್ಯ ಮತ್ತು ಜ್ಞಾನದ ಪ್ರತೀಕ ಅದ್ದರಿಂದ ಆಧುನಿಕ ಭಾರತದ ಸಮಸ್ಯೆಗಳಿಗೆ ಪರಿಹಾರಗಳು ವೇದಗಳಲ್ಲಿವೆ ಎಂಬ ಹಿನ್ನೆಲೆಯಲ್ಲಿ ಅವರು 'ವೇದಗಳಿಗೆ ಮರಳಿ' ಎಂಬ ಘೋಷಣೆಯನ್ನು ನೀಡಿದರು.

**3. ಸತ್ಯ ಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.**

- ಶೂದ್ರರು ಹಾಗೂ ಮಹಿಳೆಯರಿಗೆ ಶಾಲೆಗಳ ಸ್ಥಾಪನೆ.
- ಸಮಾನತೆಯ ಹಕ್ಕಿಗಾಗಿ ಪ್ರೋತ್ಸಾಹ.
- ಜಾತಿ ಪದ್ಧತಿಯನ್ನು ವಿರೋಧಿಸುವುದು.
- ಮಾನವ ಹಕ್ಕುಗಳ ನಿರಾಕರಣೆಯನ್ನು ಖಂಡಿಸುವುದು.
- ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಲಾಯಿತು.

**4. ಆಲಿಘರ್ ಚಳುವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ..(ಸರ್ ಸಯ್ಯದ್ ಅಹಮದ್ ಖಾನ್‌ರ ಕೊಡುಗೆಗಳು)**

- ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡುವುದು.
- ಬಹುಪತ್ನಿತ್ವಕ್ಕೆ ವಿರೋಧ.
- ಮುಸ್ಲಿಂ ಸಮಾಜದಲ್ಲಿ ಇಂಗ್ಲೀಷ್ ಶಿಕ್ಷಣಕ್ಕೆ ಪ್ರೋತ್ಸಾಹಿಸುವುದು.
- ಪಾಶ್ಚಿಮಾತ್ಯ ವಿಜ್ಞಾನ ಹಾಗೂ ಸಂಸ್ಕೃತಿಯನ್ನು ಪ್ರಸಾರ ಮಾಡುವುದು.
- ಮುಸ್ಲಿಂ ಸಮುದಾಯದಲ್ಲಿದ್ದ ಪರದಾಪದ್ಧತಿಯನ್ನು ಬೆಂಬಲಿಸಲಿಲ್ಲ.
- ಸಂಪ್ರದಾಯ, ಮೌಢ್ಯಗಳು, ಅಜ್ಞಾನ ಮತ್ತು ಅವೈಜ್ಞಾನಿಕ ಮನೋಧರ್ಮದ ವಿರುದ್ಧ ಹೋರಾಡಿದರು.

5. **ರಾಮಕೃಷ್ಣ ಮಿಷನ್‌ನ ದೃಷ್ಟಿಕೋನವನ್ನು ವಿವರಿಸಿ.**

- ರಾಮಕೃಷ್ಣ ಪರಮಹಂಸರ ಬೋಧನೆಗಳ ಪ್ರಸಾರ.
- ಭಾರತೀಯ ತತ್ವಜ್ಞಾನದ ಮಹತ್ವವನ್ನು ತಿಳಿಸುವುದು. ಮತ್ತು ಪಾಶ್ಚಿಮಾತ್ಯ ಅಂಧಾನುಕರಣೆಯನ್ನು ತಿರಸ್ಕರಿಸಿತು.
- ಜಾತಿರಹಿತ ಸಮಾಜದ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು.
- ಬಡತನ, ಶೊಷಣೆ, ಅನಕ್ಷರತೆ, ಅಜ್ಞಾನ ನಿರ್ಮೂಲನೆ ಮಾಡುವುದು.

**6. ಸ್ವಾಮಿ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು ಹೇಗೆ ಎಂಬುದನ್ನು ವಿವರಿಸಿ.**

- ಇವರು ಯುವಕರಿಗೆ "ಏಳಿ,ಎದ್ದೇಳಿ,ಗುರಿ ಮುಟ್ಟುವ ತನಕ ನಿಲ್ಲದಿರಿ."ಎಂದು ಕರೆ ನೀಡಿದರು.
- ವ್ಯಕ್ತಿಯಲ್ಲಿರುವ ಸಾಮರ್ಥ್ಯದ ಪೂರ್ಣ ಬಳಕೆಯನ್ನು ಪ್ರೇರೇಪಿಸಿದರು.
- ಮೊದಲು ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಮತ್ತು ಆ ಮೂಲಕ ಅವರೇ ಸುಧಾರಣೆಯನ್ನು ಬಯಸುತ್ತಾರೆ.
- ಸಮಾಜ ಸೇವೆಯ ಮಹತ್ವವನ್ನು ತಿಳಿಸಿದರು.
- ಪಾಶ್ಚಿಮಾತ್ಯರ ಅಂಧಾನುಕರಣೆಯನ್ನು ಬಿಡಬೇಕೆಂದರು.
- ಭಾರತದ ಸಂಸ್ಕೃತಿಯ ಮಹತ್ವವನ್ನು ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ ವಿಶ್ವಕ್ಕೆ ಸಾರಿದರು.

**7. ಅನಿಬೆಸೆಂಟರ ಸುಧಾರಣಾ ಕ್ರಮಗಳಾವುವು?**

- ಸಮಾನತೆ ಹಾಗೂ ಸಹೋದರತೆಯನ್ನು ವೃದ್ಧಿಸುವುದು.
- ವಿಶ್ವಭ್ರಾತೃತ್ವದ ನಿರ್ಮಾಣ.
- ಮಾನವನ ಸುಪ್ತಶಕ್ತಿಗಳನ್ನು ಪತ್ತೆ ಹಚ್ಚುವುದು.
- ಸ್ವಾತಂತ್ರ ಚಳುವಳಿಯನ್ನು ಬೆಂಬಲಿಸುವುದು.

**8. ನಾರಾಯಣ ಗುರು ಧರ್ಮಪರಿಪಾಲನ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.**

- ಹಿಂದುಳಿದ ಹಾಗೂ ಶೋಷಿತ ಸಮುದಾಯಗಳನ್ನು ಬಲಪಡಿಸುವುದು
- ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಹಾಗೂ ಒಂದೇ ದೇವರು.
- ಶಿಕ್ಷಣವನ್ನು ಪ್ರೋತ್ಸಾಹಿಸುವುದು.
- ಹಿಂದುಳಿದ ವರ್ಗದವರಿಗಾಗಿ ದೇವಾಲಯಗಳ ನಿರ್ಮಾಣ.
- 'ವೈಕಂ' ಎಂಬ ಸತ್ಯಾಗ್ರಹ ನಡೆಸುವುದು.

**9. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿಮಾಡಿ.**

- ಆರ್ಯರು ಬ್ರಾಹ್ಮಣರ ಹೆಸರಿನಲ್ಲಿನ ಜನಾಂಗೀಯ ತಾರತಮ್ಯವನ್ನು ವಿರೋಧಿಸುವುದು.
- ಸಂಸ್ಕೃತ ಸಾಹಿತ್ಯ ಹಾಗೂ ಭಾಷೆಗೆ ವಿರೋಧ.
- ಜಾತಿ, ಲಿಂಗಾಧಾರಿತ ತಾರತಮ್ಯಕ್ಕೆ ವಿರೋಧ ಹಾಗೂ ಸಮಾನತೆಗೆ ಆದ್ಯತೆ ನೀಡುವುದು.
- ಜಾತಿ. ಲಿಂಗ ಹಾಗೂ ಧಾರ್ಮಿಕ ತಾರತಮ್ಯವನ್ನು ವಿರೋಧಿಸುವುದು.
- "ದ್ರಾವಿಡ ಕಳಗಂ" ಎಂಬ ಸಂಘಟನೆಯನ್ನು ಹುಟ್ಟುಹಾಕಿದರು.

**10. ಪ್ರಾರ್ಥನಾ ಸಮಾಜದ ಉದ್ದೇಶಗಳೇನು?**

- ಇದು ವಿಧವಾ ವಿವಾಹವನ್ನು ಪ್ರೋತ್ಸಾಹಿಸಿತು.
- ಸ್ತ್ರೀ ಶಿಕಣ್ಷ ಕ್ಕೆ ಆದ್ಯತೆ ನೀಡಿತು.
- ಅಂತರ್ಜಾತಿಯ ವಿವಾಹವನ್ನು ಪ್ರೋತ್ಸಾಹಿಸಿತು.
- ಸಹ ಭೋಜನವನ್ನು ಪ್ರೇರೇಪಿಸಿತು.
- ನಿರ್ಗತಿಕರಿಗೆ ಬದುಕುವ ಆಸರೆಯನ್ನು ಕಲ್ಪಿಸುವುದು.

**11. ಭಾರತೀಯ ನವೋದಯದ ಜನಕ ಎಂದು ಯಾರನ್ನು ಕರೆಯಲಾಗುತ್ತದೆ? ಏಕೆ?**

ರಾಮಮೋಹನ ರಾಯರನ್ನು ಭಾರತೀಯ ನವೋದಯದ ಜನಕ ಎಂದು ಕರೆಯಲಾಗುತ್ತದೆ. ಇವರು ಭಾರತದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣಾ ಚಳುವಳಿಯನ್ನು ಆರಂಭಿಸಿದ ಮೊದಲ ವ್ಯಕ್ತಿಯಾಗಿರುವುದರಿಂದ ಹಾಗೆ ಕರೆಯಲಾಗುತ್ತದೆ.

**12. ಆರ್ಯ ಸಮಾಜದ ಉದ್ದೇಶಗಳು ಯಾವುವು?**

- ಎಲ್ಲ ಹಿಂದುಗಳು ರೂಪವಿಲ್ಲದ ಒಬ್ಬನೇ ದೇವರಲ್ಲಿ ನಂಬಿಕೆಯಿಡಬೇಕು.
- ಹುಟ್ಟಿನಿಂದ ಯಾರೂ ಶೂದ್ರರೂ ಅಲ್ಲ ಅಥವಾ ಬ್ರಾಹ್ಮಣರೂ ಅಲ್ಲವೆಂದು ಜಾತಿ ಆಧಾರವನ್ನು ತಿರಸ್ಕರಿಸಿತು.
- ಅಂತರ್ಜಾತೀಯ ವಿವಾಹಗಳನ್ನು ಪ್ರೋತ್ಸಾಹಿಸುವುದು.
- ಬಹುಪತ್ನಿತ್ವ ಮತ್ತು ಬಾಲ್ಯವಿವಾಹ ಪದ್ಧತಿಯನ್ನು ತಿರಸ್ಕರಿಸುವುದು.
- ಸ್ತ್ರೀ ಮತ್ತು ಪುರುಷರು ಸಮಾನರು.
- ವೇದಗಳು ಮಾತ್ರ ಶ್ರೇಷ್ಠ. ಪ್ರಾಚೀನ ಪವಿತ್ರ ಗ್ರಂಥಗಳನ್ನು ಅಧ್ಯಯನ ಮಾಡಬೇಕು ಮತ್ತು ಬೋಧಿಸಬೇಕು.

**13. ಯುವಬಂಗಾಳಿ ಚಳವಳಿಯನ್ನು ವಿವರಿಸಿ.**

- 'ಯುವಬಂಗಾಳಿ ಚಳುವಳಿ'. ಇದನ್ನು ಪ್ರಾರಂಭಿಸಿದವರು ಹೆನ್ರಿ ವಿವಿಯನ್ ಡಿರೋಜಿಯೋ
- ಯುವಬಂಗಾಳಿ ಚಳುವಳಿಯು ಪ್ರಕೃತಿ, ಮಾನವೀಯತೆ, ದೇವರು ಮುಂತಾದ ವಿಷಯಗಳನ್ನು ಕುರಿತು ಚರ್ಚೆ ಮತ್ತು ಸಂವಾದಗಳನ್ನು ನಡೆಸಿತು.
- ಮೂಢನಂಬಿಕೆಗಳು ಮತ್ತು ಕಂದಾಚಾರಗಳನ್ನು ಖಂಡಿಸಿತು.
- ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಿತು.
- ಜಾತಿಪ್ರೇರಿತ ಶೋಷಣೆಯ ವಿರೋಧಿಸಿತು.

# ಅಧ್ಯಾಯ – 6

# ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. 1857ರ ದಂಗೆಯನ್ನು ಬ್ರಿಟಿಷ್ ಇತಿಹಾಸಕಾರರು **ಸಿಪಾಯಿದಂಗೆ** ಎಂದು ಕರೆದಿದ್ದಾರೆ.
2. ಡಾಲ್‌ಹೌಸಿಯು ಜಾರಿಗೆ ತಂದ ನೀತಿ **ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ.**
3. 1857ರ ದಂಗೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು **ಮಂಗಲ ಪಾಂಡೆ.**
4. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ದದ ಯುದ್ಧದಲ್ಲಿ **ಗ್ವಾಲೀಯರ**ನ್ನು ವಶಕ್ಕೆ ಪಡೆದಳು.

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದಾದ ಪರಿಣಾಮಗಳಾವುವು? ಅಥವಾ 1857 ದಂಗೆಯ ರಾಜಕೀಯ ಕಾರಣಗಳನ್ನು ಪಟ್ಟಿಮಾಡಿ.**

- ದೇಶಿಯ ಸಂಸ್ಥಾನಗಳು ತಮ್ಮ ಅಸ್ಥಿತ್ವಗಳನ್ನು ಕಳೆದುಕೊಂಡವು.
- ಸತಾರ, ಜೈಪುರ ಹಾಗೂ ಝಾನ್ಸಿಗಳು ಬ್ರಿಟಿಷರ ವಶವಾದವು.
- ತಂಜಾವೂರು ಹಾಗೂ ಕರ್ನಾಟಿಕ್ ನವಾಬರಿಗಿದ್ದ ರಾಜಪದವಿಗಳು ರದ್ಧಾದವು.
- ಮೊಘಲ್ ಚಕ್ರವರ್ತಿಯನ್ನು ಪದಚ್ಯುತಗೊಳಿಸಿದರು.
- ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.
- 1857ರ ದಂಗೆಗೆ ಪ್ರೇರಣೆಯನ್ನು ನೀಡಿತು.

**2. 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.**

- ಇಂಗ್ಲೇಂಡಿನ ಕೈಗಾರಿಕಾ ಕ್ರಾಂತಿಯಿಂದ ಭಾರತದ ಕೈಗಾರಿಕೆಗಳು ನಶಿಸಿದವು.
- ಭಾರತವು ಇಂಗ್ಲೇಂಡಿಗೆ ಕಚ್ಚಾ ಸಾಮಾಗ್ರಿಗಳನ್ನು ಪೂರೈಸುವ ದೇಶವಾಯಿತು.
- ಇಂಗ್ಲೇಂಡಿನ ಸಿದ್ಧವಸ್ತುಗಳನ್ನು ಮಾರುವ ಮಾರುಕಟ್ಟೆಯಾಗಿ ಭಾರತವನ್ನು ಬಳಸಿಕೊಂಡರು.
- ಲಕ್ಷಾಂತರ ಜನರು ನಿರುದ್ಯೋಗಿಗಳಾದರು.
- ಭಾರತೀಯ ಸರಕಿನ ಮೇಲೆ ದುಬಾರಿ ಸುಂಕಗಳನ್ನು ಹೇರಲಾಯಿತು.
- ಇನಾಂ ಕಮಿಷನ್ ಮೂಲಕ ಕೊಡುಗೆ ಭೂಮಿಗಳನ್ನು ಹಿಂಪಡೆದರು.
- ಜಮಿನ್ದಾರರು ರೈತರನ್ನು ಶೋಷಣೆ ಮಾಡಿದರು.

**3. 1857ರ ದಂಗೆಯಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವುವು?**

- ಸೈನಿಕರನ್ನು ಸಾಗರದಾಚೆಗಿನ ಸೇವೆಗೆ ಒತ್ತಾಯ ಪಡಿಸಲಾಯಿತು.
- ರಾಯಲ್ ಎನ್‌ಫೀಲ್ಡ್ ಬಂದೂಕಿನ ತುಪಾಕಿಗಳಿಗೆ ಹಂದಿ ಮತ್ತು ದನದ ಕೊಬ್ಬನ್ನು ಲೇಪಿಸಲಾಗಿತ್ತು.

**4. ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣಗಳಾವುವು?**

ಬ್ರಿಟಿಷರು ಹೊಸ ಮಾದರಿಯ ರಾಯಲ್ ಎನ್‌ಫೀಲ್ಡ್ ಬಂದೂಕುಗಳನ್ನು ಪರಿಚಯಿಸಿದರು. ಈ ಬಂದೂಕಿನ ತುಪಾಕಿಗಳಿಗೆ ಹಂದಿ ಮತ್ತು ದನದ ಕೊಬ್ಬನ್ನು ಲೇಪಿಸಲಾಗಿತ್ತು, ಇದನ್ನು ಬಳಸಲು ಸೈನಿಕರಿಗೆ ಒತ್ತಾಯ ಪಡಿಸಿದ್ದರಿಂದ ದಂಗೆ ಸ್ಪೋಟಗೊಂಡಿತು.

**5. 1857 ರ ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿಮಾಡಿ.**

- ಇದು ದೇಶದಾದ್ಯಂತ ವ್ಯಾಪಿಸಿರಲಿಲ್ಲ.
- ಕೆಲವರ ವೈಯುಕ್ತಿಕ ಕಾರಣಗಳ ಈಡೇರಿಕೆಗಾಗಿ ದಂಗೆ ಸಂಭವಿಸಿತು.
- ಸಂಘಟನೆಯ ಕೊರತೆಯು ಹೆಚ್ಚಾಗಿತ್ತು.
- ಭಾರತೀಯ ಸೈನಿಕರಲ್ಲಿ ಒಗ್ಗಟ್ಟಿನ ಕೊರತೆ ಇತ್ತು.
- ದಂಗೆಯು ಸೂಕ್ತ ನಿರ್ದೇಶನ ಹಾಗೂ ನಾಯಕತ್ವದ ಕೊರತೆಯನ್ನು ಹೊಂದಿತ್ತು.
- ಬ್ರಿಟಿಷರು ಆಧುನಿಕ ಶಸ್ತ್ರಾಸ್ತ್ರಗಳನ್ನು ಪರಿಣಾಮಕಾರಿಯಾಗಿ ಬಳಸಿದರು.
- ದೇಶಿಯ ರಾಜರು ಬ್ರಿಟಿಷರಿಗೆ ನಿಷ್ಠರಾಗಿ ಉಳಿದುಕೊಂಡರು.
- ಭಾರತೀಯ ಸಿಪಾಯಿಗಳು ಆಧುನಿಕ ಶಸ್ತ್ರಾಸ್ತ್ರಗಳ ಕೊರತೆ ಹೊಂದಿದ್ದರು.

**6. 1857 ರ ದಂಗೆಯ ಪರಿಣಾಮಗಳನ್ನು ಪಟ್ಟಿಮಾಡಿ. ಅಥವಾ '1858 ರ ಬ್ರಿಟನ್ನಿನ ರಾಣಿಯ ಘೋಷಣೆ'ಯಲ್ಲಿದ್ದ ಅಂಶಗಳಾವುವು?**

- ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯು ಅಂತ್ಯಗೊಂಡಿತು.
- ಭಾರತದ ಆಳ್ವಿಕೆಯು ಬ್ರಿಟನ್ನಿನ ರಾಣಿಯ ನಿಯಂತ್ರಣಕ್ಕೆ ಒಳಪಟ್ಟಿತು.

- ರಾಣಿಯು ಭಾರತದ ಆಡಳಿತದ ಜವಾಬ್ದಾರಿಯನ್ನು ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ವಹಿಸಿದಳು.
- 1858ರಲ್ಲಿ ಬ್ರಿಟನ್ ರಾಣಿಯ ಘೋಷಣೆಗಳು ಜಾರಿಗೆ ಬಂದವು.
- ಮುಂದಿನ ಸ್ವಾತಂತ್ರಹೋರಾಟಕ್ಕೆ ಹೊಸ ಸ್ಫೂರ್ತಿಯನ್ನು ನೀಡಿತು.
- ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
- ಕಾನೂನಿನ ಮುಂದೆ ಸಮಾನತೆ.
- ಧಾರ್ಮಿಕ ಸಹಿಷ್ಣುತೆಯೊಂದಿಗೆ ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

**7. 1857ರ ದಂಗೆಯ ಕಾರಣಗಳನ್ನು ಪಟ್ಟಿಮಾಡಿ. ಒಂದನ್ನು ವಿವರಿಸಿ.**

- ರಾಜಕೀಯ ಕಾರಣಗಳು.
- ಆರ್ಥಿಕ ಕಾರಣಗಳು.
- ಸಾಮಾಜಿಕ ಕಾರಣಗಳು.
- ಆಡಳಿತಾತ್ಮಕ ಕಾರಣಗಳು.
- ಸೈನಿಕ ಕಾರಣಗಳು.
- ತತ್‌ಕ್ಷಣದ ಕಾರಣಗಳು.

**1857ರ ದಂಗೆಯ ಆಡಳಿತಾತ್ಮಕ ಕಾರಣಗಳು.**

- ಇಂಗ್ಲಿಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು.
- ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು.
- ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು.
- ಇಂಗ್ಲಿಷ್ ನ್ಯಾಯಾಧೀಶರು ಬಹುತೇಕವಾಗಿ ಇಂಗ್ಲಿಷರ ಪರವಾಗಿ ನ್ಯಾಯದಾನ ನೀಡುತ್ತಿದ್ದರು.
- ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

**8. 1857ರ ದಂಗೆಯ ಹರಡುವಿಕೆಯನ್ನು ವಿವರಿಸಿ.**

ಮೀರತ್ ಬ್ರಿಟಿಷರ ಪ್ರಬಲ ಸೇನಾ ನೆಲೆಯಾಗಿತ್ತು. ಇಲ್ಲಿಯೂ ಕೂಡಾ ಇಂಗ್ಲಿಷರು ಭಾರತೀಯ ಸೈನಿಕರಿಗೆ ತುಪಾಕಿಗಳನ್ನು ಬಳಸಲು ಆದೇಶಿಸಿದಾಗ ಭಾರತೀಯ ಸೈನಿಕರು ಅದನ್ನು ನಿರಾಕರಿಸಿದರು. ಆಗ ಸಿಪಾಯಿಗಳನ್ನು ಬಂಧಿಸಲಾಯಿತು. ಇದರಿಂದಾಗಿ ಮೀರತ್‌ನಲ್ಲಿ ದಂಗೆ ಉಂಟಾಯಿತು. ಪರಿಣಾಮವಾಗಿ ಸೈನಿಕರು ಸೆರಮನೆಗೆ ನುಗ್ಗಿ ಈಗಾಗಲೇ ಬಂಧಿತರಾಗಿದ್ದ ಭಾರತೀಯ ಸಿಪಾಯಿಗಳನ್ನು ಬಿಡುಗಡೆಗೊಳಿಸಿದರು. ಇದು ಸ್ವಾತಂತ್ರ್ಯ ಸಂಗ್ರಾಮದ ಬೀಜಾಂಕುರಕ್ಕೆ ನಾಂದಿಯಾಯಿತು. ನಂತರ ಸೈನಿಕರ ಗುಂಪು ಮೀರತ್‌ನಿಂದ ದೆಹಲಿಗೆ ತಲುಪಿತು. ಅವರು ಕೆಂಪುಕೋಟೆಗೆ ನುಗ್ಗಿ ಮೊಘಲ್ ದೊರೆ ಎರಡನೇ ಬಹದ್ದೂರ ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು. ಹಲವಾರು ಭಾಗಗಳಿಂದ ಪ್ರತಿಭಟನಾ ನಿರತ ಸಿಪಾಯಿಗಳು ದೆಹಲಿಗೆ ತಲುಪಿದರು. ಇದರಿಂದಾಗಿ ಪ್ರತಿಭಟನೆಯು ತೀವ್ರ ಸ್ವರೂಪ ತಾಳಿತು. ಕಾಳ್ಗಿಚ್ಚಿನಂತೆ ಪ್ರತಿಭಟನೆಯು ದೆಹಲಿ, ಕಾನ್ಪುರ ಮತ್ತು ಝಾನ್ಸಿಗಳಲ್ಲಿ ಹರಡಿತು.

# ರಾಜ್ಯಶಾಸ್ತ್ರ
## ಅಧ್ಯಾಯ – 1
## ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದನ್ನು **(ಪ್ರಾದೇಶಿಕವಾದ)**ಎನ್ನುತ್ತೇವೆ.
2. ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ವಿಭಜನೆಯು **1953** ಇಸವಿಯಲ್ಲಿ ಆಯಿತು.
3. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು **ಲೋಕಾಯುಕ್ತ** ಸಂಸ್ಥೆ ಅಸ್ತಿತ್ವದಲ್ಲಿದೆ.
4. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆಯು **121** ಕೋಟಿ ದಾಟಿದೆ.

**II ಒಂದು ಅಂಕದ ಪ್ರಶ್ನೋತ್ತರಗಳು.**

**1. ಕೋಮುವಾದ ಎಂದರೇನು?**
ಒಂದು ಧರ್ಮದ ಬಗೆಗಿನ ಅತಿಯಾದ ಸೈರಣೆಯೇ ಕೋಮುವಾದ

**2. ನಿರುದ್ಯೋಗ ಎಂದರೇನು?**
ನಿರುದ್ಯೋಗ ಎಂದರೆ ಕೆಲಸ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗೆ ಉದ್ಯೋಗದ ಲಭ್ಯತೆ ಇಲ್ಲದಿರುವ ಪರಿಸ್ಥಿತಿಯಾಗಿದೆ.

**3. ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಬಡತನದ ದರ ಎಷ್ಟು?**
ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಬಡತನದ ದರ ಶೇಕಡಾ 21.9

**4. ಭ್ರಷ್ಟಾಚಾರ ಎಂದರೇನು?**
ಭ್ರಷ್ಟಾಚಾರ ಎಂದರೆ ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ ನೀಡುವಿಕೆ ಎಂದು ಅರ್ಥ.

**5. ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡುವ ಉದ್ದೇಶದಿಂದ ಭಾರತ ಸಂವಿಧಾನದ 371ನೇ ವಿಧಿಗೆ ಯಾವ ತಿದ್ದುಪಡಿಗಳ ಮೂಲಕ ಸೇರ್ಪಡೆ ಮಾಡಲಾಗಿದೆ?**
ಭಾರತ ಸಂವಿಧಾನದ 371 ನೇ ವಿಧಿಗೆ A ಯಿಂದ J ವರೆಗೆ ತಿದ್ದುಪಡಿಗಳ ಮೂಲಕ ಸೇರ್ಪಡೆ ಮಾಡಲಾಗಿದೆ.

**6. ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಿದ ವಿಧಿ ಯಾವುದು?**
371 (ಜೆ)

**7. 'ಸ್ತ್ರೀ ಶಕ್ತಿ' ಕಾರ್ಯಕ್ರಮದ ಉದ್ದೇಶವೇನು?**
ಗ್ರಾಮಾಂತರ ಮಹಿಳೆಯರ ವಿಕಾಸ

**8. ಯಾವುದನ್ನು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ ಎಂದು ಕರೆಯಲಾಗಿದೆ?**
ಭಯೋತ್ಪಾದಕತೆ

**9. ಮುಂಬೈಯ ತಾಜ್ ಹೋಟೆಲ್ ಮೇಲೆ ಯಾವಾಗ ದಾಳಿ ನಡೆಯಿತು?**
2007 ನವಂಬರ್ 26

**10. 2001ರ ಡಿ.ಎಂ. ನಂಜುಂಡಪ್ಪ ಸಮಿತಿಯು ಉದ್ದೇಶವೇನು?**
ಪ್ರಾದೇಶಿಕ ಅಸಮತೋಲನ ನಿವಾರಣೆ.

**11. ಭಷ್ಟಾಚಾರ ನಿಯಂತ್ರಣದಲ್ಲಿ ಪೂರಕ ಶಕ್ತಿ ಒದಗಿಸಬಲ್ಲ ಸಂಸ್ಥೆಗಳು ಯಾವುವು?**
ಲೋಕಪಾಲ ಮತ್ತು ಲೋಕಾಯುಕ್ತ

**12. ನಿರುದ್ಯೋಗಕ್ಕೆ ಮುಖ್ಯ ಕಾರಣಗಳು ಯಾವುವು?**
ಮಿತಿಮೀರಿದ ಜನಸಂಖ್ಯೆ ಮತ್ತು ಹೆಚ್ಚಾದ ತಂತ್ರಜ್ಞಾನದ ಬಳಕೆ

**13. ಭಾರತದ ಸಾರ್ವಜನಿಕ ಜೀವನದಲ್ಲಿ ಯಾವುದು ಒಂದು ಮುಖ್ಯ ಪಿಡುಗು?**
ಭಾರತದ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಒಂದು ಮುಖ್ಯ ಪಿಡುಗು ಎನಿಸಿದೆ.

**14. ಭಯೋತ್ಪಾದಕತೆ ಎಂದರೇನು?**
ಉಗ್ರಗಾಮಿ ಸಂಘಟನೆಗಳ ಉದ್ದೇಶ ಈಡೇರಿಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆ ಈ ಭಯೋತ್ಪಾದಕತೆ ಎನ್ನುವರು.

**15. ಕಾರ್ಪೋರೇಟ್ ತಂತ್ರಗಾರಿಕೆಯ ಮುಖ್ಯ ಉದ್ದೇಶವೇನು?**
ತಂತ್ರಗಾರಿಕೆಯ ಪ್ರಮುಖ ಉದ್ದೇಶ ಲಾಭವನ್ನು ಪಡೆಯುವುದಾಗಿರುತ್ತದೆ.

**III ಎರಡು ಅಂಕದ ಪ್ರಶ್ನೋತ್ತರಗಳು.**

**1. ಕೋಮುವಾದವು ದೇಶದ ಐಕ್ಯತೆಗೆ ಮಾರಕ. ಹೇಗೆ?**

- ಇದು ಸಾಮಾಜಿಕ ಭಿನ್ನತೆ ಹಾಗೂ ಅಪನಂಬಿಕೆಗಳನ್ನು ಹೆಚ್ಚಿಸುತ್ತದೆ.
- ಸಮಾಜದಲ್ಲಿ ಗುಂಪುಗಾರಿಕೆಯನ್ನು ಹೆಚ್ಚಿಸುತ್ತದೆ.
- ಜೀವ ಹಾಗೂ ಆಸ್ತಿಹಾನಿಗೆ ಕಾರಣವಾಗುತ್ತದೆ.

• ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಗೆ ಧಕ್ಕೆ ತರುತ್ತದೆ.

**2. ಕೋಮುವಾದವನ್ನು ಹೇಗೆ ಹೊಗಲಾಡಿಸಬಹುದು?**

• ಏಕರೂಪ ನಾಗರಿಕ ಸಂಹಿತೆ.

• ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಯಿಂದ ಕಾಣುವಿಕೆ.

• ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು.

• ಸದೃಢ ರಾಷ್ಟ್ರೀಯ ಮನೋಭಾವನೆ.

• ಆರೋಗ್ಯಕರ ಸುದ್ಧಿಮಾಧ್ಯಮ.

• ಜಾತ್ಯತೀತ ಮನೋಭಾವನೆಗೆ ಒತ್ತು.

**3. ಮಹಿಳೆಯರ ಸ್ಥಾನಮಾನ ಸುಧಾರಿಸುವ ಉಪಾಯಗಳಾವುವು?**

• ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಲಪಡಿಸುವಿಕೆ.

• ಮಹಿಳಾ ಸ್ವ ಸಹಾಯ ಗುಂಪುಗಳು.

• ಉಚಿತ ಹಾಗೂ ಕಡ್ಡಾಯ ಶಿಕ್ಷಣ.

• ಬಾಲ್ಯ ವಿವಾಹ,ವರದಕ್ಷಿಣೆಗಳ ನಿರ್ಮೂಲನೆ.

**4. ನಿರುದ್ಯೋಗ ನಿವಾರಣೆಗೆ ಕೈಗೊಂಡ ಕ್ರಮಗಳಾವುವು?**

• ಜನಸಂಖ್ಯಾ ನಿಯಂತ್ರಣ,

• ಕೃಷಿ ಅಭಿವೃದ್ಧಿ,

• ಪಂಚವಾರ್ಷಿಕ ಯೋಜನೆಗಳು,

• ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ,

• ಉದ್ಯೋಗ ಖಾತರಿ ಯೋಜನೆಗಳು

**5. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಂಡ ಕ್ರಮಗಳಾವುವು?**

• ಡಿ. ಎಂ. ನಂಜುಂಡಪ್ಪ ಸಮಿತಿಯ ರಚನೆ.

• ಸಂವಿಧಾನದ 371 (ಜೆ) ವಿಧಿಯನ್ವಯ ಹೈದರಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿದೆ.

• ಮಲೆನಾಡು ಅಭಿವೃದ್ಧಿ ಪ್ರಾಧಿಕಾರದ ರಚನೆ.

• ಹೈದರಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿಯ ರಚನೆ.

**6. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳಾವುವು?**

• ಜನರಲ್ಲಿ ಭೀತಿಯನ್ನು ಉಂಟುಮಾಡುತ್ತದೆ.

• ಆಸ್ತಿ ಹಾಗೂ ಪ್ರಾಣಹಾನಿಗೆ ಕಾರಣವಾಗುತ್ತದೆ.

• ಸರ್ಕಾರದ ಆಡಳಿತದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ.

• ಜಾಗತಿಕ ವಿನಾಶಕ್ಕೆ ಕಾರಣವಾಗುತ್ತದೆ.

**7. ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?**

• ಗಡಿ ಗಸ್ತನ್ನು ಬಿಗಿಗೊಳಿಸುವುದು.

• ಭಯೋತ್ಪಾದಕ ನಿಗ್ರಹದಳದ ರಚನೆ.

• ಅವಶ್ಯಕ ಸಂಧರ್ಭದಲ್ಲಿ ಸೇನಾಪಡೆಗಳ ಬಳಕೆ.

• ಆಧುನಿಕ ತಂತ್ರಜ್ಞಾನದ ಬಳಕೆ.

**8. ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು? ಅದರ ಪ್ರಸ್ತುತ ಬೆಳವಣಿಗೆಯನ್ನು ಕುರಿತು ಬರೆಯಿರಿ.**

ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧರಿತ ಗುರಿಗಳನ್ನು ತಲುಪಲು ಕಂಪನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎನ್ನುವರು. ಇದರ ಪ್ರಸ್ತುತ ಬೆಳವಣಿಗೆಯು ಈ ಮುಂದಿನಂತಿದೆ

• ಕಂಪನಿಯ ಲಾಭ ಹೆಚ್ಚಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ.

• ಇದು ಪ್ರಜೆಗಳು, ಸಮಾಜ ಹಾಗೂ ದೇಶದ ಮೇಲೆ ನಕರಾತ್ಮಕ ಪರಿಣಾಮವನ್ನು ಬೀರುತ್ತದೆ.

• ಸಾಮಾಜಿಕ ಹೊಣೆಗಾರಿಕಾ ಯೋಜನೆಗಳ ಮೂಲಕ ಸಾಕಷ್ಟು ಸಮಾಜ ಸೇವೆ ಮಾಡುತ್ತಿವೆ.

## ಅಧ್ಯಾಯ – 2
## ಭಾರತದ ವಿದೇಶಾಂಗ ನೀತಿ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಭಾರತದ ವಿದೇಶಾಂಗ ನೀತಿಯನ್ನು ವಿಶೇಷವಾಗಿ ನಿರೂಪಿಸಿದವರು **ಜವಹರಲಾಲ್ ನೆಹರೂ**
2. ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯನ್ನು **ಆಲಿಪ್ತ ನೀತಿ** ಎನ್ನಬಹುದು.
3. ಭಾರತವು ಸ್ವಾತಂತ್ರ್ಯ ಪೂರ್ವದಲ್ಲಿ **ಬ್ರಿಟಿಷ** ರ ವಸಾಹತು ಶಾಹಿಗೆ ಒಳಗಾಗಿತ್ತು.

**II. ಕೆಳಗಿನ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ವಿದೇಶಾಂಗ ನೀತಿ ಎಂದರೇನು?**

ಒಂದು ರಾಷ್ಟ್ರ ಅನ್ಯರಾಷ್ಟ್ರದೊಂದಿಗೆ ವ್ಯವಹರಿಸುವಾಗ ಅನುಸರಿಸುವ ನೀತಿಯೇ ವಿದೇಶಾಂಗ ನೀತಿ ಎಂದು ಕರೆಯಲಾಗಿದೆ.

**2. ಭಾರತದ ವಿದೇಶಾಂಗ ನೀತಿಯ ಉದ್ದೇಶ ಅಥವಾ ಗುರಿಗಳಾವವು?**

- ರಾಷ್ಟ್ರದ ಭದ್ರತೆ
- ರಾಷ್ಟ್ರದ ಆರ್ಥಿಕ ಸಂವರ್ಧನೆ.
- ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವದು.
- ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿ ರಾಷ್ಟ್ರಗಳನ್ನು ನಿರ್ಭಂದಿಸುವುದು ಅಥವಾ ಹತ್ತಿಕ್ಕುವುದು.
- ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು.

**3. ವಿದೇಶಾಂಗ ನೀತಿಯು ದೇಶದ ಅಭಿವೃದ್ಧಿಗೆ ಸಹಕಾರಿ ಹೇಗೆ ?**

- ಇದರಿಂದ ದೇಶಗಳ ನಡುವೆ ಉತ್ತಮ ಬಾಂಧವ್ಯ ನೆಲೆಸುತ್ತದೆ
- ವಿದೇಶ ವ್ಯಾಪಾರ ಉತ್ತಮಗೊಳ್ಳುತ್ತದೆ
- ಕೊರತೆಯಲ್ಲಿರುವ ಸಂಪನ್ಮೂಲಗಳ ಎರವಲು ಪಡೆಯಲು ಸಹಕಾರಿ
- ಬಂಡವಾಳ ಸಂಚಯನಕ್ಕೆ ಸಹಕಾರಿ
- ತಂತ್ರಜ್ಞಾನ ವಿನಿಮಯಕ್ಕೆ ಅವಕಾಶ ಸಿಗುತ್ತದೆ
- ಹಣಕಾಸಿನ ನೆರವು ಪಡೆಯಲು ಸಹಕಾರಿ

**4. ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?**

- ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದು.
- ಇದು ಆಕ್ರಮಣಕಾರಿ ಪ್ರವೃತ್ತಿಯನ್ನು ಪ್ರದರ್ಶಿಸುತ್ತದೆ.
- ಒಂದು ದೇಶದ ಸಾರ್ವಭೌಮತ್ವಕ್ಕೆ ತೊಡಕಾಗಿದೆ.
- ದೇಶದ ಸಂಪನ್ಮೂಲಗಳ ಲೂಟಿಗೆ ಅವಕಾಶ ನೀಡುತ್ತದೆ.
- ಮಾನವ ಹಕ್ಕುಗಳ ಉಲ್ಲಂಘನೆಗೂ ಕಾರಣವಾಗಿದೆ.
- ಭಾರತವು ಬ್ರಿಟನ್ನಿನ ವಸಾಹತುವಾಗಿ ಸಾಕಷ್ಟು ತೊಂದರೆಗೊಳಗಾಗಿದೆ.

**5. ಪಂಚಶೀಲ ತತ್ವಗಳನ್ನು ಪಟ್ಟಿಮಾಡಿ.**

- ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ.
- ಪರಸ್ಪರ ಆಕ್ರಮಣ ಮಾಡದಿರುವುದು.
- ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು.
- ಪರಸ್ಪರ ಸಹಕಾರ ಮತ್ತು ಸಮಾನತೆ.
- ಶಾಂತಿಯುತ ಸಹಬಾಳ್ವೆ.

**6. ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? ವಿವರಿಸಿ**

- ಇದು ಶಸ್ತ್ರಾಸ್ತ್ರ ಪೈಪೋಟಿಯನ್ನು ತಗ್ಗಿಸುತ್ತದೆ.
- ಯುದ್ಧದ ಸಂಭವನೀಯತೆಯು ಕುಗ್ಗುತ್ತದೆ.
- ಶಸ್ತ್ರಾಸ್ತ್ರ ಉತ್ಪಾದನೆಯನ್ನು ನಿಯಂತ್ರಿಸುತ್ತದೆ.
- ವಿಶ್ವಶಾಂತಿ ನೆಲೆಸುತ್ತದೆ.
- ಮೂರನೇ ಮಹಾಯುದ್ಧದ ಭೀತಿಯನ್ನು ದೂರಮಾಡಲು ಅಗತ್ಯ.

• ಅಣ್ವಸ್ತ್ರಗಳ ಬಳಕೆಯ ಭೀತಿಯನ್ನು ಹೊಗಲಾಡಿಸಲು ಸಹಾಯಕ.

**7. ನಮ್ಮ ರಾಷ್ಟ್ರದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಸಂಗತಿಗಳು ಯಾವುವು?**

- ರಾಷ್ಟ್ರೀಯ ಹಿತಾಸಕ್ತಿಗಳು.
- ಭೌಗೋಳಿಕ ಅಂಶಗಳು,
- ರಾಜಕೀಯ ಪರಿಸ್ಥಿತಿ,
- ಆರ್ಥಿಕ ವ್ಯವಸ್ಥೆ,
- ರಕ್ಷಣಾ ಸಾಮರ್ಥ್ಯ,
- ಜನಾಭಿಪ್ರಾಯ,
- ಅಂತರರಾಷ್ಟ್ರೀಯ ಪರಿಸರ.

**8. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳು ಯಾವುವು?**

- ಪಂಚಶೀಲ ತತ್ವಗಳು.
- ಅಲಿಪ್ತ ನೀತಿ.
- ವಸಾಹತುಶಾಹಿತ್ವಕ್ಕೆ ವಿರೋಧ.
- ವರ್ಣಭೇದ ನೀತಿಗೆ ವಿರೋಧ.
- ನಿಶ್ಯಸ್ತ್ರೀಕರಣ.

**9. ಭಾರತವು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ.ಏಕೆ?**

- ವಿಫುಲ ಜನಸಂಖ್ಯೆ.
- ಅಪಾರ ಪ್ರಾಕೃತಿಕ ಸಂಪತ್ತು.
- ಪರಿಣಿತ ಭೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯ.
- ಬಲಾಢ್ಯಸೈನಿಕ ಬಲ.

**10. ಸಾರ್ವಭೌಮ ರಾಷ್ಟ್ರ ಎಂದರೇನು?**

ಒಂದು ರಾಷ್ಟ್ರ ಯಾವುದೇ ಬಗೆಯಲ್ಲ ಆಂತರಿಕವಾಗಲಿ, ಬಾಹ್ಯವಾಗಿಯಾಗಲಿ ಇತರೆ ರಾಷ್ಟ್ರಗಳ ಅಧೀನವಾಗಿರದೆ ಸ್ವತಂತ್ರವಾಗಿರುವುದನ್ನು ಸಾರ್ವಭೌಮ ರಾಷ್ಟ್ರ ಎನ್ನುವರು.

**11. ಭಾರತದ ವಿದೇಶಾಂಗ ನೀತಿಯನ್ನು ನೆಹರೂರವರ ವಿದೇಶಾಂಗ ನೀತಿ ಎಂದು ವರ್ಣಿಸಿದ್ದಾರೆ.ಏಕೆ?**

ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾದ ಜವಾಹರಲಾಲ್ ನೆಹರು ಪ್ರಧಾನ ಮಂತ್ರಿ ಹುದ್ದೆಯ ಜೊತೆಗೆ ವಿದೇಶಾಂಗ ಖಾತೆಯನ್ನೂ ಹೊಂದಿ ಸಮರ್ಥವಾಗಿ ನಿಭಾಯಿಸಿದರು. ಈ ಕಾರಣಗಳಿಂದಾಗಿ ಭಾರತದ ವಿದೇಶಾಂಗ ನೀತಿಯನ್ನು ನೆಹರೂರವರ ವಿದೇಶಾಂಗ ನೀತಿ ಎಂದು ವರ್ಣಿಸಿದ್ದಾರೆ.

**12. ಪಂಚಶೀಲ ತತ್ವಗಳಿಗೆ ಯಾವಾಗ ಸಹಿ ಹಾಕಲಾಯಿತು?**

1954

**13. ಪಂಚಶೀಲ ತತ್ವಗಳಿಗೆ ಸಹಿ ಹಾಕಿದವರು ಯಾರು?**

ಚೀನಾದ ಪ್ರಧಾನಿ ಚೌ.ಎನ್. ಲಾಯ್ ಮತ್ತು ಭಾರತದ ಪ್ರಧಾನಿ ಜವಾಹರಲಾಲ್ ನೆಹರೂ.

**14. ದ್ವಿತೀಯ ಮಹಾಯುದ್ಧದ ಬಳಿಕ ವಿಶ್ವವು ಎರಡು ಶಕ್ತಿ ಬಣಗಳಾಗಿ ವಿಭಾಗವಾಗಿತ್ತು.ಅವು ಯಾವುವು?**

ಅಮೆರಿಕಾ ಸಂಯುಕ್ತ ಸಂಸ್ಥಾನ ಹಾಗೂ ಸೊವಿಯತ್ ರಷ್ಯಾ.

**15. ವಸಾಹತು ಶಾಹಿತ್ವ ಎಂದರೇನು?**

ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಲಿದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ವಸಾಹತು ಶಾಹಿತ್ವ ಎಂದು ಕರೆಯುತ್ತಾರೆ.

**16. ಆಫ್ರಿಕಾಗಾಂಧಿ ಎಂದೇ ಪ್ರಸಿದ್ಧರಾದವರು ಯಾರು?**

ನೆಲ್ಸನ್ ಮಂಡೇಲ.

**17. ಭಾರತ ಸಂವಿಧಾನವು ತನ್ನ 51ನೇ ವಿಧಿಯ ಮಹತ್ವವೇನು?**

ಭಾರತ ಸಂವಿಧಾನವು ತನ್ನ 51ನೇ ವಿಧಿಯ ಮೂಲಕ ಅಂತರರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಗೌರವ ತಂದುಕೊಡುವಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ.

**18. ನಿಶ್ಯಸ್ತ್ರೀಕರಣ ಎಂದರೇನು?**

ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ನಿಶ್ಯಸ್ತ್ರೀಕರಣ.

# ಅಧ್ಯಾಯ – 3

# ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಪಂಚಶೀಲ ತತ್ವಗಳ ಮೂಲಕ **ಚೀನಾ** ರಾಷ್ಟ್ರದೊಂದಿಗೆ ಸಂಬಂಧ ವೃದ್ಧಿಸಲಾಯಿತು.
2. ಅಂತರರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಯ ಕುರಿತು ನಮ್ಮ ಸಂವಿಧಾನದ **51ನೇ** ವಿಧಿಯಲ್ಲಿ ತಿಳಿಸಲಾಗಿದೆ.
3. 1962ರಲ್ಲಿ **ಚೀನಾ** ದೇಶವು ಭಾರತದ ಮೇಲೆ ಆಕ್ರಮಣ ಮಾಡಿತು.

**II ಒಂದು ಅಂಕದ ಪ್ರಶ್ನೋತ್ತರಗಳು.**

**1. ಭಾರತ ಮತ್ತು ಪಾಕಿಸ್ತಾನ ನಡುವಿನ ಬಿಕ್ಕಟ್ಟಿಗೆ ಪ್ರಮುಖ ಕಾರಣವೇನು?**
ಕಾಶ್ಮೀರ ಸಮಸ್ಯೆ.

**2. ಇತ್ತೀಚಿಗೆ ಭಾರತ ಹಾಗೂ ಚೀನಾಗಳ ನಡುವಿನ ಸಂಬಂಧದ ಮೇಲೆ ಕೆಟ್ಟ ಪ್ರಭಾವ ಬೀರಿರುವ ಅಂಶ ಯಾವುದು ?**
ಚೀನಾ ಅರುಣಾಚಲ ಪ್ರದೇಶ ರಾಜ್ಯವನ್ನು ತನ್ನದೆಂದು ಪ್ರತಿಪಾದಿಸುತ್ತಿರುವುದು.

**3. 1971 ರ ಭಾರತ–ಪಾಕಿಸ್ತಾನ ಯುದ್ಧದ ಪರಿಣಾಮವೇನು ?**
ಬಾಂಗ್ಲಾದೇಶದ ಉದಯ.

**4. 1966 ರ ಭಾರತ–ಪಾಕಿಸ್ತಾನಗಳ ನಡುವಿನ ತಾಷ್ಕೆಂಟ್ ಒಪ್ಪಂದದ ಮಧ್ಯಸ್ಥಿಕೆ ವಹಿಸಿದ್ದ ದೇಶ ಯಾವುದು?**
ರಷ್ಯಾ ದೇಶ.

**5. 1961 ರ ಗೋವಾ ವಿಮೋಚನೆಯಲ್ಲಿ ಭಾರತಕ್ಕೆ ನೆರವು ನೀಡಿದ್ಧ ದೇಶ ಯಾವುದು?**
ರಷ್ಯಾ ದೇಶ.

**6. ಭಾರತದ ಭೂಪ್ರದೇಶಕ್ಕೆ ಹೊಂದಿಕೊಂಡಿರುವ ದೊಡ್ಡ ನೆರೆಯ ರಾಷ್ಟ್ರ ಯಾವುದು?**
ಭಾರತದ ಭೂಪ್ರದೇಶಕ್ಕೆ ಹೊಂದಿಕೊಂಡಿರುವ ದೊಡ್ಡ ನೆರೆಯ ರಾಷ್ಟ್ರ ಚೀನಾ.

**7. ಯಾವ ದೇಶಗಳ ಪ್ರಯತ್ನದ ಫಲವಾಗಿ BRICS ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿತು?**
ಭಾರತ ಮತ್ತು ಚೀನಾಗಳ ಪ್ರಯತ್ನದ ಫಲವಾಗಿ BRICS ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿತು.

**8. ಭಾರತ ಯಾವ ದೇಶದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ?**
ಭಾರತ ರಷ್ಯಾ ದೇಶದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ.

**9. ಭಾರತದ ಭಿಲ್ಯಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕರಿಸಿದ ದೇಶ ಯಾವುದು?**
ಭಾರತದ ಭಿಲ್ಯಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕರಿಸಿದ ದೇಶ ಸೋವಿಯತ್ ರಷ್ಯಾ.

**10. 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದ ದೇಶಗಳು ಯಾವುವು?**
ಭಾರತ ಮತ್ತು ರಷ್ಯಾ.

**III ಮೂರು ಅಂಕದ ಪ್ರಶ್ನೋತ್ತರಗಳು.**

**1. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂದವ್ಯ ಅವಶ್ಯಕ ಏಕೆ?**
ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂದವ್ಯ ಅವಶ್ಯಕ ಏಕೆಂದರೆ

- ಇದರಿಂದ ದೇಶಗಳ ನಡುವೆ ಉತ್ತಮ ಬಾಂಧವ್ಯ ನೆಲೆಸುತ್ತದೆ.
- ವಿದೇಶ ವ್ಯಾಪಾರ ಉತ್ತಮಗೊಳ್ಳುತ್ತದೆ.
- ಕೊರತೆಯಲ್ಲಿರುವ ಸಂಪನ್ಮೂಲಗಳ ಎರವಲು ಪಡೆಯಲು ಸಹಕಾರಿ.
- ಬಂಡವಾಳ ಸಂಚಯನಕ್ಕೆ ಸಹಕಾರಿ.
- ತಂತ್ರಜ್ಞಾನ ವಿನಿಮಯಕ್ಕೆ ಅವಕಾಶ ಸಿಗುತ್ತದೆ.
- ಹಣಕಾಸಿನ ನೆರವು ಪಡೆಯಲು ಸಹಕಾರಿ.

**2. ಭಾರತ–ಪಾಕಿಸ್ತಾನಗಳ ನಡುವಿನ ಸಂಬಂದ ಹದಗೆಡಲು ಕಾರಣಗಳೇನು?**

- ಕಾಶ್ಮೀರ ಸಮಸ್ಯೆ.
- ಇತ್ಯರ್ಥವಾಗದ ಜಲವಿವಾದಗಳು.
- ಪಾಕ್ ಪ್ರಾಯೋಜಿತ ಭಯೋತ್ಪಾದನೆ.
- ಪಾಕಿಸ್ತಾನ–ಚೀನಾಗಳ ನಡುವಿನ ಮೈತ್ರಿ.
- ಪಾಕಿಸ್ತಾನದ ಮಿಲಿಟರಿಶಾಹಿತ್ವ ಹಾಗೂ ರಾಜಕೀಯ ಅಸ್ಥಿರತೆ.
- ಪಾಕ್ ಪ್ರಾಯೋಜಿತ ಅಕ್ರಮ ನುಸುಳುವಿಕೆ.

**3. ಇತ್ತೀಚೀನ ದಿನಗಳಲ್ಲಿ ಭಾರತ–ಚೀನಾಗಳ ನಡುವಿನ ಸಂಬಂದ ಹದಗೆಡಲು ಕಾರಣಗಳೇನು?**

- ಭಾರತದ ಟಿಬೆಟ್ ಬಗೆಗಿನ ನಿಲುವು.
- ಚೀನಾದ ಮಾವೊವಾದಿಗಳಿಂದ ಭಾರತದಲ್ಲಿ ನಕ್ಸಲ್‌ವಾದದ ಚಟುವಟಿಕೆಗಳು.
- ಚೀನಾ ಹಾಗೂ ಪಾಕ್ ಮೈತ್ರಿ.
- ಅರುಣಾಚಲ ಪ್ರದೇಶದ ಬಗ್ಗೆ ಚೀನಾದ ಧೋರಣೆಗಳು.
- ಇತ್ಯರ್ಥವಾಗದಿರುವ ಗಡಿ ವಿವಾದಗಳು.
- ರಾಜತಾಂತ್ರಿಕ ಮಾತುಕತೆಗಳಲ್ಲಿನ ಬದ್ಧತೆಯ ಕೊರತೆ.

**4. ಭಾರತ ಹಾಗೂ ಅಮೇರಿಕಾಗಳ ನಡುವಿನ ಸಂಬಂಧವನ್ನು ಕುರಿತು ಬರೆಯಿರಿ.**

- ಎರಡು ದೇಶಗಳು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ.
- 1962 ರ ಭಾರತ–ಚೀನಾ ಯುದ್ಧದಲ್ಲಿ ಅಮೇರಿಕಾ ನೆರವು ನೀಡಿದೆ.
- ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಸಮಾನ ಹಿತಾಸಕ್ತಿ ಹೊಂದಿವೆ.
- ಬಾಹ್ಯಾಕಾಶ, ರಕ್ಷಣಾ, ವಿಜ್ಞಾನ ಹಾಗೂ ತಂತ್ರಜ್ಞಾನನ ಕ್ಷೇತ್ರದಲ್ಲಿ ಸಹಕಾರ ಸಾಧಿಸಿವೆ.
- ಪಂಚವಾರ್ಷಿಕ ಯೋಜನೆಗಳಿಗೆ ನೆರವು ನೀಡುತ್ತಿದೆ.
- ಭಾರತ ಪಾಕಿಸ್ತಾನ ಯುದ್ಧದಲ್ಲಿ ನೆರವು ನೀಡಿದೆ.

**5. ಭಾರತ ಹಾಗೂ ರಷ್ಯಾಗಳ ನಡುವಿನ ಸಂಬಂಧವನ್ನು ಕುರಿತು ಬರೆಯಿರಿ.**

- ಪ್ರಾರಂಭದಿಂದಲೂ ಭಾರತ–ರಷ್ಯಾ ನಡುವಿನ ಸಂಬಂಧ ಉತ್ತಮವಾಗಿದೆ.
- ಭಾರತದ ಆರ್ಥಿಕ ಹಾಗೂ ಎಲ್ಲಾ ಯೊಜನೆಗಳಿಗೆ ರಷ್ಯಾ ಸಹಕರಿಸುತ್ತಿದೆ.
- 1961 ರ ಗೋವಾ ವಿಮೋಚನೆಯಲ್ಲಿ ಸಹಕಾರ ನೀಡಿದೆ.
- 1966 ರಲ್ಲಿ ತಾಷ್ಕೆಂಟ್ ಒಪ್ಪಂದದ ಮೂಲಕ ಭಾರತ–ಪಾಕ್ ಮಧ್ಯೆ ಕದನ ವಿರಾಮ ಸ್ಥಾಪಿಸಿತು.
- 1971 ರಲ್ಲಿ 20 ವರ್ಷಗಳ ಶಾಂತಿ–ಸಹಕಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.
- ಭಿಲಾಯ್, ಬೋಕಾರೋಗಳ ಉಕ್ಕಿನ ಘಟಕಗಳು ರಷ್ಯಾದ ನೆರವಿನಿಂದ ಸ್ಥಾಪಿಸಲ್ಪಟ್ಟಿವೆ.
- ವಿಶ್ವಸಂಸ್ಥೆಯಲ್ಲಿ ಭಾರತಕ್ಕೆ ಶಾಶ್ವತ ಸದಸ್ಯತ್ವ ಒದಗಿಸಲು ರಷ್ಯಾ ಸಹಕರಿಸುತ್ತಿದೆ.
- ಪಂಚವಾರ್ಷಿಕ ಯೋಜನೆಗಳು ರಷ್ಯಾದಿಂದ ಎರವಲು ಪಡೆದವುಗಳಾಗಿವೆ.

# ಸಮಾಜಶಾಸ್ತ್ರ
# ಅಧ್ಯಾಯ-01
# ಸಾಮಾಜಿಕ ಸ್ತರವಿನ್ಯಾಸ

**I. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಸಂವಿಧಾನದ **30ನೇ** ವಿಧಿಯು ಅಲ್ಪಸಂಖ್ಯಾತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡಿದೆ.
2. ಅಸ್ಪೃಶ್ಯತೆಯ ಆಚರಣೆಯನ್ನು ಸಂವಿಧಾನದ **17ನೇ** ವಿಧಿಯು ನಿಷೇಧಿಸಿದೆ.
3. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯು **1955** ರಲ್ಲಿ ಜಾರಿಗೆ ಬಂದಿತು.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ.**

**1. ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?**

- ವ್ಯಕ್ತಿಗಳು ಸಮಾಜದಲ್ಲಿ ವಿವಿಧ ಲಕ್ಷಣಗಳ ಆಧಾರದಲ್ಲಿ ಲಿಂಗ, ಜಾತಿ, ವೃತ್ತಿ, ವರ್ಗ ಮತ್ತು ಜನಾಂಗ, ಇತ್ಯಾದಿ ಶ್ರೇಣೀಕರಣಗೊಂಡಿರುತ್ತಾರೆ ಎನ್ನುವುದನ್ನು ಸಾಮಾಜಿಕ ಅಸಮಾನತೆ ಸೂಚಿಸುತ್ತದೆ.
- ಸಾರ್ವಜನಿಕ ಶಿಕ್ಷಣ ಹಾಗೂ ಸಾಮಾಜಿಕ ಭದ್ರತೆಗಳ ನಿರಾಕರಣೆ.
- ಸಾರ್ವತ್ರಿಕ ಆರೋಗ್ಯದ ನಿರಾಕರಣೆ.
- ಆದಾಯ ಹಾಗೂ ಲಿಂಗ ಆಧಾರಿತ ತಾರತಮ್ಯ.
- ಅಂದರೆ ಸಾಮಾಜಿಕ ಅಸಮಾನತೆ ಎನ್ನುವುದು ಈಗಾಗಲೇ ಇರುವ ಅಸಮಾನ ಸಾಮಾಜಿಕ ಅವಕಾಶಗಳ ಪ್ರತಿಫಲ.

**2. ಲಿಂಗತ್ವ ಅಸಮಾನತೆ ಹೇಗೆ ಉಂಟಾಗಿದೆ?**

- ವಾಸ್ತವದಲ್ಲಿ ನಮ್ಮ ಮನೋಭಾವನೆಗಳು ಹೆಚ್ಚಾಗಿ ಒಂದು ಮತ್ತೊಂದನ್ನು ಅವಲಂಬಿಸಿರುತ್ತವೆ.
- ಉದಾಹರಣೆಗೆ ಶಿಕ್ಷಣದ ಮೌಲ್ಯ ಕುರಿತು ಒಬ್ಬ ವ್ಯಕ್ತಿಗೆ ಇರುವ ಚಿಂತನೆ ಅಥವಾ ಮನೋಭಾವನೆಯು ಮತ್ತೊಬ್ಬರಿಂದ ಪ್ರಭಾವಿತವಾದ್ದುದಾಗಿರಬಹುದು.
- ಮಹಿಳೆಯನ್ನು ಸಮಾಜ ಪರಿಗಣಿಸುವ ರೀತಿ. ಮತ್ತು ಮಹಿಳೆಗೆ ಶಿಕ್ಷಣದ ನಿರಾಕರಣೆ.
- ಈ ದೃಷ್ಟಿಯಿಂದ ಹೆಣ್ಣು ಮತ್ತು ಗಂಡು ಮಕ್ಕಳ ಶಿಕ್ಷಣಕ್ಕೆ ಇರುವ ಪ್ರೇರಣಾ ಶಕ್ತಿಯು ಪ್ರಮುಖವಾಗಿ ಸಾಮಾಜಿಕ ಆಯಾಮ ಹೊಂದಿದೆ.
- ಈ ಕಾರಣಗಳಿಂದ ಶಾಲಾ ಭಾಗವಹಿಸುವಿಕೆಯಲ್ಲಿ, ಆಹಾರ ಮತ್ತು ಆರೋಗ್ಯ ಸೌಲಭ್ಯಗಳನ್ನು ಪಡೆಯುವಲ್ಲಿ ಲಿಂಗ ಅಸಮಾನತೆಯನ್ನು ನಾವು ಕಾಣಬಹುದು.

**3. ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳಾವುವು?**

- ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿಕವಾದದ್ದು
- ಸಾಮಾಜಿಕ ಸ್ತರವಿನ್ಯಾಸ ಸರ್ವವ್ಯಾಪಕವಾದದ್ದು
- ಸ್ತರವ್ಯವಸ್ಥೆ ಪುರಾತನವಾದದ್ದು
- ಸ್ತರವಿನ್ಯಾಸವು ವಿವಿಧ ರೂಪಗಳಲ್ಲಿದೆ

**4. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಚರ್ಚಿಸಿ.**

- ಸಾಮಾಜಿಕವಾಗಿ ಅತ್ಯಂತ ಕೆಳ ಹಂತದ ಆಚರಣೆಯಾಗಿದೆ.
- ಶೂದ್ರರಿಗಿಂತ ಕೆಳಗಿನವರಾದ ಐದನೆ ವರ್ಗವಾದ ಅಂತ್ಯಜರ(ಅಸ್ಪೃಷ್ಯರ) ಸ್ಥಿತಿ ಮನುಷ್ಯರೇ ಅಲ್ಲವೇನೊ ಎನಿಸುವಂತಿತ್ತು.
- ಅಸ್ಪೃಶ್ಯತೆಯ ಆಚರಣೆಯು ವರ್ಣವ್ಯವಸ್ಥೆಯ ಹುಟ್ಟಿನೊಂದಿಗೆ ಅಸ್ತಿತ್ವವನ್ನು ಪಡೆದುಕೊಂಡಿದೆ.
- ಸ್ಪೃಶ್ಯ ಮತ್ತು ಅಸ್ಪೃಶ್ಯ ಭಾವನೆ ಮುಖ್ಯವಾಗಿ ಸಾಮಾಜಿಕ, ಆರ್ಥಿಕ, ಅಸಮಾನತೆಯ ಮೂಲದಿಂದ ರೂಪಿತಗೊಂಡದ್ದು.
- ಅಸ್ಪೃಶ್ಯ ಎಂಬುದು ಮುಟ್ಟಬಾರದ, ಮುಟ್ಟಲಾಗದ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಹೀಗಾಗಿ ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗಾಗಿದೆ.

**5. ಅಸ್ಪೃಶ್ಯತೆ ನಿವಾರಣೆಯ ಸಂವಿಧಾನಾತ್ಮಕ ಹಾಗೂ ಕಾನೂನು ಪರಿಹಾರಗಳಾವುವು?**

- ಸಂವಿಧಾನದ ವಿಧಿ 17 ರ ಪ್ರಕಾರ ಇದರ ಆಚರಣೆ ಶಿಕ್ಷಾರ್ಹ ಅಪರಾಧ
- 1955 ರ ಅಸ್ಪೃಶ್ಯತೆ ಅಪರಾಧಗಳ ಕಾಯ್ದೆ
- 1976 ರ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ
- ಸಮಾನತೆಯ ಹಕ್ಕನ್ನು ಜಾರಿಗೆ ತಂದಿರುವುದು
- ರಾಜಕೀಯ, ಆರ್ಥಿಕ, ಶೈಕ್ಷಣಿಕ ಉದ್ಯೋಗ ಕ್ಷೇತ್ರಗಳಲ್ಲಿ ಮೀಸಲಾತಿ ಜಾರಿಗೆ ತಂದಿರುವುದು.

**III ಒಂದು ಅಂಕದ ಪ್ರಶ್ನೋತ್ತರಗಳು.**

**1. ಭಾರತದ ಸಂವಿಧಾನದ ವಿಧಿ 39ನೇ ವಿಧಿಯ ಮಹತ್ವವೇನು?**

ಭಾರತದ ಸಂವಿಧಾನದ ವಿಧಿ 39ರಲ್ಲಿ ಸರ್ಕಾರಗಳು ಸಾಮಾಜಿಕ ನ್ಯಾಯ ಮತ್ತು ಜನರ ಅಭಿವೃದ್ಧಿ ಅವಕಾಶಗಳನ್ನು ಕುರಿತು ತಿಳಿಸುತ್ತದೆ.

**2. ಭಾರತದ ಸಂವಿಧಾನದ 45ನೇ ವಿಧಿಯ ಮಹತ್ವವೇನು?**

ಭಾರತದ 45ನೇ ವಿಧಿ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳುತ್ತದೆ.

**3. ಭಾರತದ ಸಂವಿಧಾನದ 86ನೇ ತಿದ್ದುಪಡಿಯ ಮಹತ್ವವೇನು?**

6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು ಎಂದು ಸಂವಿಧಾನದ ವಿಧಿ 21ಎ ನಲ್ಲಿ ತಿಳಿಸಲಾಗಿದೆ.

**4. ಭಾರತದ ಸಂವಿಧಾನದ ಪರಿಚ್ಛೇದ 19 ಏನೆಂದು ಸಾರುತ್ತದೆ?**

ಸಂವಿಧಾನದ ಪರಿಚ್ಛೇದ 19 ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬರ ಮೂಲಭೂತ ಹಕ್ಕಾಗಿದೆ ಎಂದು  ಸಾರುತ್ತದೆ.

**5. ಭಾರತದ ಸಂವಿಧಾನದ 29ನೇ ವಿಧಿಯ ಮಹತ್ವವೇನು?**

ಭಾರತದ ಸಂವಿಧಾನದ 29ನೇ ವಿಧಿ ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ ನೀಡುತ್ತದೆ.

**6. ಭಾರತದ ಸಂವಿಧಾನದ 46ನೇ ವಿಧಿ ಏನೆಂದು ಹೇಳುತ್ತದೆ?**

ಸಂವಿಧಾನದ 46ನೇ ವಿಧಿ ಸರ್ಕಾರಗಸು ಹಿಂದುಳಿದ ಜನರ ಅದರಲ್ಲಿಯೂ ಪರಿಶಿಷ್ಟ ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ ನೀಡಿ ಅಭಿವೃದ್ದಿಪಡಿಸುವುದು ಸರ್ಕಾರಗಳ ಜವಾಬ್ದಾರಿಯೆಂದು ಹೇಳುತ್ತದೆ.

**7. ಯಾವ ವಿಧಿಯು 6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು  ಮೂಲಭೂತ ಹಕ್ಕು ಎಂದು ತಿಳಿಸುತ್ತದೆ?**

21ಎ ವಿಧಿಯಲ್ಲ 6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ.

**8. "ಸಾಮಾಜಿಕ ಸ್ತರವಿನ್ಯಾಸ" ಎಂದರೇನು?**

ಸಮಾಜದಲ್ಲಿ ಇರುವ "ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆಗೆ ಅಥವಾ ಅವರನ್ನು ಏಣಿ ಶ್ರೇಣಿಗಳಿಂದ ವಿಭಿನ್ನ ಸ್ಥಾನಗಳಲ್ಲಿ ವಿಭಾಗಿಸುವ ಕ್ರಮವನ್ನು "ಸಾಮಾಜಿಕ ಸ್ತರವಿನ್ಯಾಸ". ಎಂದು ಕರೆಯುವರು.

**9. 'ಮಲ ಹೊರುವ, ಸತ್ತ ಪ್ರಾಣಿಗಳನ್ನು ಸಾಗಿಸುವ, ಬೀದಿ-ಚರಂಡಿ ಗುಡಿಸುವ ಹೀನ ವೃತ್ತಿಗಳನ್ನು ಮಾಡಬೇಕಾಗಿತ್ತು.' ಈ  ಮಾತನ್ನು ಹೇಳಿದವರು ಯಾರು?**

ಬಿ.ಕುಪ್ಪುಸ್ವಾಮಿ.

**10. 'ಶಿಕ್ಷಣ ಸಾರ್ವಜನಿಕ ಸ್ವತ್ತಾಗಬೇಕು' ಎಂದು ಪ್ರತಿಪಾದಿಸಿದವರು ಯಾರು?**

ಬಿ.ಆರ್. ಅಂಬೇಡ್ಕರ್.

**11. 'ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದೂ ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ ಈ ಮಾತನ್ನುಹೇಳಿದವರು ಯಾರು?**

ಮಹಾತ್ಮ ಗಾಂಧೀಜಿ.

**12. ಹೊರಗಿನಿಂದ ಬಂದವರು, ಊರಿನಿಂದ ಹೊರಗಡೆ ನೆಲೆಸಿದರೊ ಅಥವಾ ಊರೊಳಗಡೆ ಇದ್ದವರನ್ನು ಕಾರಣಾಂತರಗಳಿಂದ ಊರ ಹೊರಕ್ಕೆ ತಳ್ಳಲಾಯಿತೊ ಎಂಬುದನ್ನು ವಿಶ್ಲೇಷಣೆ ಮಾಡಿದರೆ ಅಸ್ಪೃಶ್ಯತೆಯ ಉಗಮ ಮತ್ತು ಅಸ್ಪೃಶ್ಯರು ಯಾರೆಂಬುದು ಅರ್ಥವಾಗುತ್ತದೆ' ಈ ಮಾತನ್ನುಹೇಳಿದವರು ಯಾರು?**

ಬಿ.ಆರ್. ಅಂಬೇಡ್ಕರ್.

**13. ಸಾಮಾಜಿಕ ಅಸಮಾನತೆ ಎಂದರೇನು?**

ವ್ಯಕ್ತಿಗಳು ಸಮಾಜದಲ್ಲಿ ವಿವಿಧ ಲಕ್ಷಣಗಳ ಆಧಾರದಲ್ಲಿ (ಲಿಂಗ, ಜಾತಿ, ವೃತ್ತಿ, ವರ್ಗ ಮತ್ತು ಜನಾಂಗ, ಇತ್ಯಾದಿ) ಶ್ರೇಣೀಕರಣಗೊಂಡಿರುತ್ತಾರೆ ಎನ್ನುವುದನ್ನು ಸಾಮಾಜಿಕ ಅಸಮಾನತೆ ಎನ್ನುವರು.

# ಅಧ್ಯಾಯ-02
# ದುಡಿಮೆ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಶ್ರಮ ವಿಭಜನೆಯು **ವಿಶೇಷ ಪರಿಣತಿಗೆ** ಕಾರಣವಾಗುವುದು.
2. ಭೂ ರಹಿತ ಕೃಷಿ ಕಾರ್ಮಿಕರನ್ನು **ಅಸಂಘಟಿತ ವಲಯಗಳ ದುಡಿಮೆಗಾರರು** ಕೆಲಸಗಾರರು ಎಂದು ಕರೆಯುತ್ತಾರೆ.
3. ವೈದ್ಯಕೀಯ ಸಂಸ್ಥೆಗಳ ಕಾರ್ಮಿಕರನ್ನು **ಸಂಘಟಿತ ವಲಯಗಳ** ಕೆಲಸಗಾರರು ಎಂದು ಕರೆಯುತ್ತಾರೆ.

**II ಒಂದು ಅಂಕದ ಪ್ರಶ್ನೋತ್ತರಗಳು.**

**1. ಪ್ಲೇಟೋ ಅವರು ಬರೆದ ಗ್ರಂಥ ಯಾವುದು?**
'ದಿ ರಿಪಬ್ಲಿಕ್'

**2.,ಮಾನವ ಸಮಾಜವು ಸ್ವಾಭಾವಿಕ ಅಸಮಾನತೆಗಳಿಂದ ರೂಪಗೊಳ್ಳುತ್ತದೆ, ಈ ಸ್ವಾಭಾವಿಕ ಅಸಮಾನತೆಯು ಶ್ರಮ** ವಿಭಜನೆಯಿಂದ ಕೂಡಿರುತ್ತದೆ' ಎಂದು ಹೇಳಿದವರು ಯಾರು?
ಪ್ಲೇಟೋ

**3. 'ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ' ಎಂದು ಹೇಳಿದವರು ಯಾರು?**
ಕಾರ್ಲ್‌ಮಾರ್ಕ್ಸ್

**4.ದುಡಿಮೆ ಎಂದರೇನು?**
ದುಡಿಮೆ ಎಂದರೆ ಒಬ್ಬ ವ್ಯಕ್ತಿ ದೈಹಿಕ ಪರಿಶ್ರಮದಿಂದ ಅಥವಾ ಬೌದ್ಧಿಕ ಪರಿಶ್ರಮದಿಂದ ಆದಾಯ ಅಥವಾ ವಸ್ತುರೂಪದ ಪ್ರತಿಫಲವನ್ನು ಪಡೆಯುವುದು ಎಂದರ್ಥ.

**5. ದುಡಿಮೆಯಲ್ಲಿ ಅಸಮಾನತೆ ಎಂದರೇನು?**
ಸಮಾನ ಕೆಲಸಕ್ಕೆ ಸಮಾನ ವೇತನದ ನಿಯಮಕ್ಕೆ ವಿರುದ್ಧವಾಗಿ ನಡೆಯುವ ದುಡಿಮೆಯನ್ನು ದುಡಿಮೆಯಲ್ಲಿ ಅಸಮಾನತೆ ಎಂದು ಕರೆಯುವರು.

**6. ಶ್ರಮ ವಿಭಜನೆ ಎಂದರೇನು?**
ಒಂದು ಸಮಾಜಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಮತ್ತು ವಸ್ತು-ಪದಾರ್ಥಗಳನ್ನು ಬೇರೆ ಬೇರೆ ವರ್ಗಗಳ ದುಡಿಯುವ ಜನರು ಪೂರೈಸುವುದನ್ನು ಶ್ರಮ ವಿಭಜನೆ ಎನ್ನುವರು.

**7. ಸಂಭಾವನೆ ಸಹಿತ ದುಡಿಮೆ ಎಂದರೇನು?**
ನಿಗದಿತ ವೇತನವನ್ನು ಘಂಟೆಗಳ ಆಧಾರದಲ್ಲಿ, ದಿನಗೂಲಿಯ ಆಧಾರದಲ್ಲಿ, ವಾರದ ಆಧಾರದಲ್ಲಿ ಅಥವಾ ತಿಂಗಳ ಆಧಾರದಲ್ಲಿ ದೈಹಿಕ ಶ್ರಮಕ್ಕೆ, ವ್ಯಕ್ತಿಯ ಅರೆಕುಶಲ ಕೆಲಸಕ್ಕೆ ಅಥವಾ ಕುಶಲ ಕೆಲಸಕ್ಕೆ ನೀಡುವ ವೇತನವನ್ನು ಸಂಭಾವನೆ ಸಹಿತ ದುಡಿಮೆ ಎನ್ನುವರು.

**8. ಸಂಭಾವನೆ ರಹಿತ ದುಡಿಮೆ ಎಂದರೇನು?**
ಒಬ್ಬರ ದುಡಿಮೆಗೆ ಪ್ರತಿಯಾಗಿ ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುಗಳ ರೂಪದಲ್ಲಿ, ಯಾವುದೇ ಪ್ರತಿಫಲ ಇಲ್ಲದೇ ದುಡಿಮೆಯ ಚಟುವಟಿಕೆಗೆ ಸಂಭಾವನೆ ರಹಿತ ದುಡಿಮೆ ಎಂದು ಕರೆಯಲಾಗುತ್ತದೆ.

**9. ಸಂಘಟಿತ ದುಡಿಮೆಯ ವಲಯ ಎಂದರೇನು?**
ಯಾವ ವಲಯವು ಸರ್ಕಾರದಲ್ಲಿ ನೋಂದಣಿಯಾಗಿ ಕಾನೂನಿನ ಚೌಕಟ್ಟಿನೊಳಗೆ, ದುಡಿಯುವ ಕಾರ್ಮಿಕರಿಗೆ ನಿಗದಿತ ಕೆಲಸ, ಉದ್ಯೋಗ ಭರವಸೆ, ನಿಗದಿತ ವೇತನವನ್ನು ಕಾನೂನಿನ ಚೌಕಟ್ಟಿನಲ್ಲಿಯೇ ನಿಗದಿಯಾಗಿರುತ್ತದೆಯೋ ಅದನ್ನು ಸಂಘಟಿತ ದುಡಿಮೆಯ ವಲಯವೆಂದು ಕರೆಯಲಾಗುತ್ತದೆ.

**10. ಅಸಂಘಟಿತ ದುಡಿಮೆಯ ವಲಯ ಎಂದರೇನು?**
ಅಸಂಘಟಿತ ವಲಯವೆಂದರೆ ದುಡಿಮೆಗೆ ಸಂಬಂಧಿಸಿದಂತೆ ಯಾವುದೇ ಕಾನೂನಿನ ಚೌಕಟ್ಟು ಇಲ್ಲದಿರುವುದು.

**11. ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವ ಜನರ ದುಡಿಮೆಯ ಕುರಿತು ಸಂಶೋಧನೆ ಮಾಡಿರುವ ಪುಸ್ತಕ ಯಾವುದು?**
ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವ ಜನರ ದುಡಿಮೆಯ ಕುರಿತು ಸಂಶೋಧನೆ ಮಾಡಿರುವ 'ಪುಟ್ ಲುಜರ್ಸ್'.

**12. ಸಂಘಟಿತ ದುಡಿಮೆಯ ಪ್ರಕಾರಗಳಾವುವು? ತಿಳಿಸಿ.**
ಶಾಲೆಗಳು, ಆಸ್ಪತ್ರೆಗಳು, ಕೈಗಾರಿಕೆಗಳು, ಸರ್ಕಾರಗಳ ಆಡಳಿತ ಸೇವೆಗಳು, ವಾಣಿಜ್ಯ ಬ್ಯಾಂಕುಗಳು, ಜೀವ ವಿಮಾ ಕಂಪನಿಗಳು, ಸೈನ್ಯ

**III. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ :**

**1. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳು ಯಾವುವು?**

- ಅಸಂಘಟಿತ ದುಡಿಮೆಯ ವಲಯದಲ್ಲಿ ಕೂಲಿಯೂ ಸರ್ಕಾರ ನಿಗದಿಪಡಿಸಿರುವ ಕನಿಷ್ಟ ವೇತನ ಕಾಯಿದೆಗಿಂತಲೂ ಕಡಿಮೆ ಇರುತ್ತದೆ.
- ಅಸಂಘಟಿತ ದುಡಿಮೆಯ ವಲಯದಲ್ಲಿ ದುಡಿಯುವ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯಗಳಾಗಲಿ,ವಿಶೇಷ ಭತ್ಯೆಗಳಾಗಲಿ ಇರುವುದಿಲ್ಲ.
- ಇಲ್ಲಿ ದುಡಿಯುವವರು ಬದುಕಿಗೆ ಪ್ರತಿದಿನವೂ ದೈಹಿಕ ಶ್ರಮ ಮಾಡಲೇಬೇಕು.
- ಇವರ ದುಡಿಮೆಗೆ ರಜೆಯೇ ಇರುವುದಿಲ್ಲ.

**2. ದುಡಿಮೆಯ ತಾರತಮ್ಯತೆಯನ್ನು ವಿವರಿಸಿ.**

- ಸಮಾನ ಕೆಲಸಕ್ಕೆ ಸಮಾನ ವೇತನದ ನಿಯಮಕ್ಕೆ ವಿರುದ್ಧವಾಗಿ ನಡೆಯುವ ದುಡಿಮೆಯನ್ನು ದುಡಿಮೆಯಲ್ಲಿ ಅಸಮಾನತೆ ಎಂದು ಕರೆಯಬಹುದು.
- ಇಬ್ಬರು ವ್ಯಕ್ತಿಗಳು ಒಂದೇ ಕೆಲಸವನ್ನು ಒಂದೇ ಸಮಯದಲ್ಲಿ ಮಾಡಿದಾಗ ಒಬ್ಬರಿಗೆ ಹೆಚ್ಚು ವೇತನವನ್ನು ಮತ್ತೊಬ್ಬರಿಗೆ ಕಡಿಮೆ ವೇತನವನ್ನು ನೀಡುವುದನ್ನು ದುಡಿಮೆಯಲ್ಲಿನ ಭೇದಭಾವ/ಅಸಮಾನತೆ ದುಡಿಮೆಯಲ್ಲಿ ಅಸಮಾನತೆ ಎನ್ನಬಹುದು.
- ಮಹಿಳೆ ಮತ್ತು ಪುರುಷರಿಬ್ಬರೂ ಒಂದು ದುಡಿಮೆಯಲ್ಲಿ ತೊಡಗಿದರೂ ಅವರಿಗೆ ದೊರಕುವ ಸಂಭಾವನೆ ಸಮಾನವಾಗಿರುವುದಿಲ್ಲ.
- ಭಾರತದಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಸನ್ನು ನೀಡಲಾಗುತ್ತಿದೆ.
- ಹಾಗೆಯೇ ಹೆಚ್ಚಿನ ಸಂಭಾವನೆಗಳನ್ನು ನೀಡಲಾಗುತ್ತದೆ.
- ಆದರೆ ಮಹಿಳೆಯರಿಗೆ ಕಡಿಮೆ ಸಂಬಳವನ್ನು ನೀಡಲಾಗುತ್ತಿದೆ.

**3. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸಾಮಾಜಿಕ ಭದ್ರತೆಯ ಸವಾಲುಗಳನ್ನು ವಿವರಿಸಿ.**

- ಅಸಂಘಟಿತ ವಲಯದ ದುಡಿಮೆಗಾರರು ಸಾಮಾಜಿಕ ಅಭದ್ರತೆಯನ್ನು ಎದುರಿಸುತ್ತಿದ್ದಾರೆ.
- ಸಾಮಾಜಿಕ ಭದ್ರತೆ ಎಂದರೆ ಮಾನವನಿಗೆ ಬದುಕಲು ಅಗತ್ಯವಾಗಿ ಬೇಕಾದ ಮೂಲ ಸೌಲಭ್ಯಗಳು (ವಸತಿ, ಆರೋಗ್ಯ, ಆಹಾರ, ಕುಡಿಯುವ ನೀರು, ದುಡಿಯುವ ಸಮಾನವಕಾಶ, ಸಮಾನತೆ ಇತ್ಯಾದಿ) ಇವುಗಳನ್ನು ಸಾರ್ವಜನಿಕವಾಗಿ ಅಥವಾ ಸಾಮುದಾಯಿಕವಾಗಿ ಒದಗಿಸಿಕೊಡುವುದು ಸಾಮಾಜಿಕ ಭದ್ರತೆ ಎನ್ನಿಸಿಕೊಳ್ಳುತ್ತದೆ.
- ಆದರೆ ಅಸಂಘಟಿತ ವಲಯದ ದುಡಿಮೆಗಾರರಿಗೆ ಇಷ್ಟು ಕೂಡ ದೊರಕುತ್ತಿಲ್ಲ.

**4. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?**

| ಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರು |
|---|---|
| • ಸಂಘಟಿತ ವಲಯವೆಂದರೆ ದುಡಿಮೆಗೆ ಸಂಬಂಧಿಸಿದಂತೆ ಯಾವುದೇ ಕಾನೂನಿನ ಚೌಕಟ್ಟು ಇರುವುದು. | • ಅಸಂಘಟಿತ ವಲಯವೆಂದರೆ ದುಡಿಮೆಗೆ ಸಂಬಂಧಿಸಿದಂತೆ ಯಾವುದೇ ಕಾನೂನಿನ ಚೌಕಟ್ಟು ಇಲ್ಲದಿರುವುದು. |
| • ದುಡಿಯುವ ಕಾರ್ಮಿಕರಿಗೆ ನಿಗದಿತ ಕೆಲಸ, ಉದ್ಯೋಗ ಭರವಸೆ, ನಿಗದಿತ ವೇತನ ಇರುವುದು. | • ದುಡಿಯುವ ಕಾರ್ಮಿಕರಿಗೆ ನಿಗದಿತ ಕೆಲಸ, ಉದ್ಯೋಗ ಭರವಸೆ, ನಿಗದಿತ ವೇತನ ಇಲ್ಲದಿರುವುದು |
| • ಇದರಲ್ಲಿ ಉದ್ಯೋಗ ಭದ್ರತೆಯ ಜೊತೆಗೆ, ಅನೇಕ ಕಾನೂನಿನ ಚೌಕಟ್ಟುಗಳಿರುತ್ತವೆ. | • ಸಂಘಟಿತ ದುಡಿಮೆಯ ವಲಯದಲ್ಲಿ ಉದ್ಯೋಗ ಭದ್ರತೆಯ ಮತ್ತು ಕಾನೂನಿನ ಚೌಕಟ್ಟುಗಳಿರುವುದಿಲ್ಲ. |
| • ಶಾಲೆಗಳು, ಆಸ್ಪತ್ರೆಗಳು, ಕೈಗಾರಿಕೆಗಳು, ಸರ್ಕಾರಗಳ ಆಡಳಿತ ಸೇವೆಗಳು, ವಾಣಿಜ್ಯ ಬ್ಯಾಂಕುಗಳು, ಜೀವ ವಿಮಾ ಕಂಪನಿಗಳು, ಸೈನ್ಯ, | • ಮೋಟಾರ್ ವಾಹನ ರಿಪೇರಿ,ತಲೆಯ ಮೇಲೆ ಮತ್ತು ತಳ್ಳುವ ಗಾಡಿಯಲ್ಲಿ ತರಕಾರಿ,ಮೀನು ಇತ್ಯಾದಿ ವಸ್ತುಗಳನ್ನು ಮಾರುವುದು, ಟೈಯರ್‌ಪಂಚರ್, ಸೈಕಲ್‌ರಿಪೇರಿ ಮಾಡುವುದು. |
| • ವೈದ್ಯಕೀಯ ಸೌಲಭ್ಯಗಳು, ವಿಶೇಷ ಭತ್ಯೆಗಳು ಇರುತ್ತದೆ. | • ವೈದ್ಯಕೀಯ ಸೌಲಭ್ಯಗಳು, ವಿಶೇಷ ಭತ್ಯೆಗಳು ಇರುವುದಿಲ್ಲ. |
| • ಕನಿಷ್ಠ ವೇತನ ಕಾಯಿದೆ, ಕಾರ್ಖಾನೆಗಳ ಕಾಯಿದೆ, ವಿಶೇಷ ಭತ್ಯೆಗಳ ಕಾಯಿದೆ, ಪ್ರಾವಿಡೆಂಟ್ ಫಂಡ್(ಪಿ.ಎಫ್) ಕಾಯಿದೆಗಳು ಇಲ್ಲಿ ಕಡ್ಡಾಯ. | • ಕನಿಷ್ಠ ವೇತನ ಕಾಯಿದೆ, ಕಾರ್ಖಾನೆಗಳ ಕಾಯಿದೆ, ವಿಶೇಷ ಭತ್ಯೆಗಳ ಕಾಯಿದೆ, ಪ್ರಾವಿಡೆಂಟ್ ಫಂಡ್(ಪಿ.ಎಫ್) ಕಾಯಿದೆಗಳು ಇಲ್ಲಿ ಕಡ್ಡಾಯವಲ್ಲ. |

# ಭೂಗೋಳ ವಿಜ್ಞಾನ

## ಅಧ್ಯಾಯ–1

## ಭಾರತದ ಸ್ಥಾನ ಮತ್ತು ವಿಸ್ತೀರ್ಣ

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಭಾರತದ ಒಟ್ಟು ವಿಸ್ತೀರ್ಣ **32,87,263** ಚ.ಕಿ.ಮೀ.,
2. ಭಾರತದ ಆಗ್ನೇಯ ಭಾಗದಲ್ಲಿ **ಶ್ರೀಲಂಕ** ದೇಶವಿದೆ.
3. ಭಾರತದ ಮಧ್ಯ ಭಾಗದಲ್ಲಿ **ಕರ್ಕಾಟಕ ಸಂಕ್ರಾಂತಿ ವೃತ್ತ (23 1/2$^0$ ಉ)** ಅಕ್ಷಾಂಶವು ಹಾಯ್ದು ಹೋಗಿದೆ.
4. ಭಾರತದಲ್ಲಿ **ತೆಲಂಗಣ** ವು ಹೊಸರಾಜ್ಯವಾಗಿದೆ.

**II. ಗುಂಪಿನಲ್ಲಿ ಚರ್ಚಿಸಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಭಾರತದ ಅಕ್ಷಾಂಶ ಮತ್ತು ರೇಖಾಂಶೀಯ ವಿಸ್ತರಣೆಯನ್ನು ತಿಳಿಸಿ.**

ಭಾರತದ ಪ್ರಧಾನ ಭೂಭಾಗವು 8° 4´ ದಿಂದ 37° 6´ಉತ್ತರ ಅಕ್ಷಾಂಶ ಹಾಗೂ 68° 7´ ರಿಂದ 97° 3´ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.

**2. ಭಾರತದ ಅತ್ಯಂತ ದಕ್ಷಿಣದ ತುದಿ ಯಾವುದು?**

ಇಂದಿರಾ ಪಾಯಿಂಟ್

**3. ಭಾರತದ ವಾಯವ್ಯದಲ್ಲಿರುವ ನೆರೆಯ ರಾಷ್ಟ್ರಗಳನ್ನು ಹೆಸರಿಸಿ.**

ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ

**4. ಇಂದಿರಾ ಪಾಯಿಂಟ್ ಎಲ್ಲಿದೆ?**

ನಿಕೋಬಾರ್ ದ್ವೀಪ

**5. ಭಾರತದ ಅತ್ಯಂತ ಉತ್ತರ ತುದಿ ಯಾವುದು?**

ಇಂದಿರಾಕೋಲ್ ಭಾರತದ ಅತ್ಯಂತ ಉತ್ತರ ತುದಿಯಾಗಿದೆ.

**6. ಭಾರತದ ಮಧ್ಯ ಭಾಗದಲ್ಲಿ ಹಾಯ್ದು ಹೋಗುವ ರೇಖಾಂಶ ಯಾವುದು?**

82 1/2° ಪೂರ್ವರೇಖಾಂಶ

**7. ಭಾರತೀಯ ಆದರ್ಶ ಕಾಲಮಾನವು ಯಾವ ರೇಖಾಂಶವನ್ನಾಧರಿಸಿದೆ?**

82 1/2° ಪೂರ್ವರೇಖಾಂಶ

**8. ಭಾರತವು ಪ್ರಪಂಚದ ಎಷ್ಟನೇ ದೊಡ್ಡ ರಾಷ್ಟ?**

ಭಾರತವು ಪ್ರಪಂಚದ 7ನೆಯ ದೊಡ್ಡ ರಾಷ್ಟ್ರ.

**9. ಶ್ರೀಲಂಕ ಭಾರತದಿಂದ ಹೇಗೆ ಪ್ರತ್ಯೇಕಗೊಂಡಿದೆ?**

ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿಗಳಿಂದ ಶ್ರೀಲಂಕ ಭಾರತದಿಂದ ಪ್ರತ್ಯೇಕಗೊಂಡಿದೆ.

**10. ಭಾರತದ ದೊಡ್ಡ ರಾಜ್ಯ ಯಾವುದು?**

ರಾಜಸ್ತಾನ

**11. ಭಾರತದ ಚಿಕ್ಕ ರಾಜ್ಯ ಯಾವುದು?**

ಗೋವಾ

**12. ಭಾರತದಲ್ಲಿನ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಎಷ್ಟು?**

29 ರಾಜ್ಯಗಳು 7 ಕೇಂದ್ರಾಡಳಿತ ಪ್ರದೇಶಗಳು

**13.ಇಂದಿರಾ ಕೋಲ್ ಎಲ್ಲಿದೆ?**

ಜಮ್ಮು ಮತ್ತು ಕಾಶ್ಮೀರ

**14. ಭಾರತದ ನೆರೆ ರಾಷ್ಟ್ರಗಳು ಯಾವುವು?**

ಭಾರತವು 7 ನೆರೆಯ ದೇಶಗಳನ್ನು ಹೊಂದಿದೆ. ವಾಯವ್ಯದಲ್ಲಿ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ
ಉತ್ತರದಲ್ಲಿ ನೇಪಾಳ, ಭೂತಾನ ಮತ್ತು ಚೀನ.
ಹಾಗೂ ಪೂರ್ವಭಾಗದಲ್ಲಿ ಬಾಂಗ್ಲಾದೇಶ ಮತ್ತು ಮಯನ್ಮಾರ್ ದೇಶಗಳಿವೆ.
ಆಗ್ನೇಯಕ್ಕೆ ಶ್ರೀಲಂಕ ದೇಶವಿದ್ದು ಅದು ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿಗಳಿಂದ ಭಾರತದಿಂದ ಪ್ರತ್ಯೇಕಗೊಂಡಿದೆ.


**15. ಭಾರತದ ಮೇರೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ.**

**ಭಾರತದ ಭೂ ಮೇರೆಯು** 15200 ಕಿ.ಮೀಗಳಾಗಿದ್ದು ವಿವಿಧ ದೇಶಗಳು ಹಾಗೂ ಹಿಮಾಲಯ ಪರ್ವತದಿಂದ ಆವರಿಸಲ್ಪಟ್ಟಿದೆ

**ಭಾರತದ ಜಲಮೇರೆಯು** 6100 ಕಿ.ಮೀಗಳಷ್ಟು ಉದ್ದವಾಗಿದ್ದು ಅರಬ್ಬೀ ಸಮುದ್ರ, ಬಂಗಾಳ ಕೊಲ್ಲಿ ಮತ್ತು ಹಿಂದೂ ಮಹಾಸಾಗರದಿಂದ ಆವರಿಸಲ್ಪಟ್ಟಿದೆ, ಅಂಡಮಾನ್ ನಿಕೋಬಾರ್ ಲಕದ್ವೀಪದ ಜಲಗಡಿಯನ್ನು ಪರಿಗಣಿಸಿದರೆ ಭಾರತದ ಜಲಗಡಿಯು 7516.5 ಕಿ.ಮೀಗಳಷ್ಟು ಒಳಗೊಂಡಿದೆ.

ನಕ್ಷೆಯ ಪ್ರಶ್ನೆಗಳು (3+1=4)

(ಒಂದು ಅಂಕ ಭಾರತದ ನಕ್ಷೆಯನ್ನು ಬಿಡಿಸಲು ಇದ್ದು 3 ಅಂಕ ಸ್ಥಳಗಳ ಗುರುತಿಸುವಕೆಗೆ ಇದೆ.)




<u>ಭಾರತ ನಕಾಶೆ ರಚಿಸಿ ಈ ಕೆಳಗಿನವುಗಳನ್ನು ಗುರುತಿಸಿರಿ</u>

1]ವಿಂದ್ಯಾಪರ್ವತಶ್ರೇಣಿ. 2]ಅರಾವಳಿ ಪರ್ವತಶ್ರೇಣಿ. 3] ನೀಲಗಿರಿ ಬೆಟ್ಟಗಳು. 4] ಮುಂಬೈ. 5] ಚೆನ್ನೈ 6] ಬೆಂಗಳೂರು. 7] ಮಂಗಳೂರು. 8]ಕೊಚ್ಚಿ. 9] ತಿರುವನಂತಪುರ. 10] ವಿಶಾಖ ಪಟ್ಟಣ. 11] ನವಶೇವಾ. 12] ವಿಶಾಖಪಟ್ಟಣ 15] ಹಾಲ್ಡಿಯಾ. 16] ಕೋಲ್ಕತ್ತಾ. 17]ಕಾವೇರಿನದಿ. 18] ನರ್ಮದಾ ನದಿ. 19] ಗೋದಾವರಿನದಿ. 20] ಕೃಷ್ಣಾ ನದಿ 21] ಗಂಗಾನದಿ. 22] ಕೋಸಿ ನದಿ.23] ದಾಮೋದರನದಿ.24] ಮಹಾನದಿ 25] ಪಂಪಸಾಗರ(ತುಂಗಾಭದ್ರ) 28] ಭಾಕ್ರಾ ನಂಗಲ್.(ಗೋವಿಂದಸಾಗರ) 29] ಅಹಮದಾಬಾದ್.30] ನರೋರ್ 31] ತಾರಾಪುರ. 32] ಕಲ್ಪಕಂ. 33] ದೆಹಲಿ. 34] ಶ್ರೀನಗರ. 35] ಅಮೃತಸರ. 36] ಪಾಕ್ ಜಲಸಂಧಿ. 37] ಕೈಗಾ 38.ಕೋರಮಂಡಲ ತೀರ. 39]ಮನ್ನಾರ್ ಕೊಲ್ಲಿ. 40] ಹಟ್ಟಿ ಚಿನ್ನದ ಗಣಿ 41] ಹಿರಾಕುಡ್ ಯೋಜನೆ. 42] ಉತ್ಕಲ ತೀರ. 43] ಕೊಂಕಣ ತೀರ.46] ಬಾಂಬೆ ಹೈ. 47] ರಾಣಾ ಪ್ರತಾಪ್ ಸಾಗರ್. 48] ಗೌಹಾತಿ. 49] ಮೌಸೀನ್ ರಾಂ. 50] ಅಗರ್ತಲಾ. 51] ಕಚ್ ಖಾರಿ.52] ಹೈದರಾಬಾದ್. 53] ದಾಮೋದರ್ ನದಿಕಣಿವೆ ಯೋಜನೆ

13] ಕಾಂಡ್ಲಾ. 14] ಸೂರತ್. 26] ಸಟ್ಲೇಜ್ ನದಿ. 27] ನಾಗಾರ್ಜುನಸಾಗರ 40] ಇಂದಿರಾ ಪಾಯಿಂಟ್. 41] **82 1/2º**ಪೂರ್ವರೇಖಾಂಶ. 54] 23 $1/2^0$ ಅಕ್ಷಾಂಶ ಕರ್ಕಾಟಕ ಸಂಕ್ರಾಂತಿವೃತ್ತ. 55] ಮಲಬಾರ್ ತೀರ. 56. ರೂಯ್ಲಿ 57. ಹಟ್ಟಿ 58. ದಿಗ್ಬಾಯಿ 59. ಕೆಮ್ಮಣ್ಣುಗುಂಡಿ, 60. ಬಾರಾಮರ್, 61. ಅಂಕಲೇಶ್ವರ, 62. ಝರಿಯಾ, 63. ಕುದುರೆಮುಖ, 64. ಎನ್ನೋರ್ 65. ನಹರ್ಕಾತಿಯ

# ಅಧ್ಯಾಯ –2
# ಭಾರತದ ಮೇಲ್ಮೈ ಲಕ್ಷಣಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿರಿ.**

1. ಮಹಾ ಹಿಮಾಲಯ ಸರಣಿಗಳನ್ನು **ಹಿಮಾದ್ರಿ** ಎಂತಲೂ ಕರೆಯಲಾಗುತ್ತದೆ.
2. ಒಳ ಹಿಮಾಲಯಗಳನ್ನು **ಹಿಮಾಚಲ್** ಎಂತಲೂ ಕರೆಯುತ್ತಾರೆ.
3. ದಕ್ಷಿಣ ಭಾರತದಲ್ಲಿ **ಅಣ್ಣೈಮುಡಿ** ಯು ಅತಿ ಎತ್ತರವಾದ ಶಿಖರ.
4. ಪೂರ್ವಘಟ್ಟಗಳು ಪಶ್ಚಿಮ ಘಟ್ಟಗಳನ್ನು **ನೀಲಗಿರಿ** ಬೆಟ್ಟಗಳಲ್ಲಿ ಸಂಧಿಸುತ್ತವೆ.
5. ಉತ್ತರ ಮಹಾ ಮೈದಾನವು **ಮೆಕ್ಕಲು ಮಣ್ಣಿ** ಮಣ್ಣಿನಿಂದ ಆವರಿಸಿದೆ.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?

- ಉತ್ತರದ ಪರ್ವತಗಳು.
- ಉತ್ತರದ ಮಹಾ ಮೈದಾನ.
- ಪರ್ಯಾಯ ಪ್ರಸ್ಥಭೂಮಿ.
- ಕರಾವಳಿ ಮೈದಾನಗಳು ಹಾಗೂ ದ್ವೀಪಗಳು.

2. ಉತ್ತರದ ಮೈದಾನಗಳು ಹೇಗೆ ರಚನೆಯಾಗಿವೆ?

ಸಟ್ಲೇಜ್, ಗಂಗ ಮತ್ತು ಬ್ರಹ್ಮಪುತ್ರ, ಈ ಮೂರು ನದಿಗಳ ಸಂಚಯ ಕಾರ್ಯದಿಂದ ನಿರ್ಮಾಣಗೊಂಡಿದೆ.

3. ಸಿವಾಲಿಕ್ ಬೆಟ್ಟಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

- ಹಿಮಾಲಯದ ಹೊರಗಿನ ಅಥವಾ ಪಾದಭಾಗದ ಸರಣಿಗಳಾಗಿದ್ದು,
- ಹಿಮಾಲಯದ ದಕ್ಷಿಣ ಭಾಗದಲ್ಲಿವೆ.
- ಕಡಿಮೆ ಎತ್ತರವುಳ್ಳ ಹಿಮಾಲಯದ ಭಾಗಗಳು.(ಎತ್ತರ 600 ರಿಂದ 1500 ಮೀ. ಮತ್ತು ಅಗಲ 15 ರಿಂದ 150 ಕಿ.ಮೀ.ಗಳು.)
- ಜಮ್ಮು–ಕಾಶ್ಮೀರದಿಂದ ಅರುಣಾಚಲಪ್ರದೇಶದವರೆಗೆ ಹಬ್ಬಿವೆ. ಅವು ಸಮತಟ್ಟಾದ ತಳವುಳ್ಳ ಕಣಿವೆಗಳನ್ನು ಹೊಂದಿದ್ದು, • ಇವುಗಳನ್ನು 'ಡೂನ್ಸ್' ಎನ್ನುವರು. ಉದಾ: ಡೆಹ್ರಾಡೂನ್.

**4. ಪೂರ್ವಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.**

| ಪೂರ್ವಘಟ್ಟ | ಪಶ್ಚಿಮ ಘಟ್ಟ |
|---|---|
| • ಭಾರತದ ಪೂರ್ವಕರಾವಳಿಗೆ ಹೊಂದಿಕೊಂಡಂತೆ ಹಬ್ಬಿವೆ | • ಭಾರತದ ಪಶ್ಚಿಮ ಕರಾವಳಿಗೆ ಹೊಂದಿಕೊಂಡಂತೆ ಹಬ್ಬಿವೆ. |
| • ಇವು ಎತ್ತರವಾಗಿಲ್ಲ ಮತ್ತು ನಿರಂತರ ಸರಣಿಗಳೂ ಅಲ್ಲ. | • ಇವು ಎತ್ತರವಾಗಿವೆ ಮತ್ತು ನಿರಂತರ ಸರಣಿಗಳೂ ಆಗಿವೆ. |
| • ಕಣಿವೆಗಳಿಂದ ಪ್ರತ್ಯೇಕಗೊಂಡಿವೆ. | • ಕಣಿವೆಗಳಿಂದ ಪ್ರತ್ಯೇಕಗೊಂಡಿಲ್ಲ. |
| • 'ಅರ್ಮಕೊಂಡ' ಎಂಬುದು ಪೂರ್ವ ಘಟ್ಟಗಳಲ್ಲೆ ಎತ್ತರವಾದ ಶಿಖರ. | • 'ಅಣ್ಣೈಮುಡಿ' ಎಂಬುದು ಪಶ್ಚಮ ಘಟ್ಟಗಸಲ್ಲೇ ಎತ್ತರವಾದ ಶಿಖರ. |

**5. ಉತ್ತರ ಪರ್ವತಗಳ ಪ್ರಾಮುಖ್ಯತೆಯನ್ನು ತಿಳಿಸಿ.**

1.ಹಿಮಾಲಯ ಪರ್ವತಗಳು ನೈಸರ್ಗಿಕ ಗಡಿಗಳಾಗಿದ್ದು ಪರಕೀಯರ ದಾಳಿ ಹಾಗೂ ಮಧ್ಯ ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ನಿಯಂತ್ರಿಸುತ್ತವೆ.
2. ಮಳೆ ಮಾರುತಗಳನ್ನು ತಡೆದು ಅಧಿಕ ಮಳೆಯಾಗಲು ನೆರವಾಗುತ್ತವೆ.
3. ಅವುಗಳ ಇಳಿಜಾರುಗಳಲ್ಲಿ ದಟ್ಟ ಕಾಡುಗಳಿವೆ ಮತ್ತು ನೆಡುತೋಟದ ಬೆಳೆಗಳಿಗೆ ಸೂಕ್ತ. ಉದಾ: ಅಸ್ಸಾಂನ ಚಹ ತೋಟಗಳು.
4. ಖನಿಜಗಳ ಉಗ್ರಾಣಗಳಾಗಿವೆ.
5. ಹಲವು ನದಿಗಳ ಉಗಮ ಸ್ಥಾನ, ಇಲ್ಲಿನ ಜಲಪಾತಗಳು ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯುಕ್ತ

**6. ಉತ್ತರದ ಮೈದಾನ ಪ್ರಾಮುಖ್ಯತೆಯನ್ನು ವಿವರಿಸಿ.**

- ಉತ್ತರ ಮೈದಾನವು ವಿಶಾಲವಾದ ಮೈದಾನ, ಫಲವತ್ತಾಗಿದೆ.
- ಇಲ್ಲಿ ಸರ್ವಕಾಲಿಕ ನದಿಗಳು ಹರಿಯುತ್ತವೆ. ಹೀಗಾಗಿ ಕೃಷಿಗೆ ಉಪಯುಕ್ತ.
- ಇಲ್ಲಿನ ಸಮತಟ್ಟಾದ ಭೂಮಿಯು ರಸ್ತೆ, ರೈಲು ಮಾರ್ಗಗಳ ನಿರ್ಮಾಣ ಮತ್ತು ಸಂಪರ್ಕ ಮಾಧ್ಯಮಕ್ಕೂ ಯೋಗ್ಯ.
- ಜೊತೆಗೆ ಕೈಗಾರಿಕೀಕರಣ, ನಗರೀಕರಣ ಮತ್ತು ವ್ಯಾಪಾರಕ್ಕೂ ನೆರವಾಗುತ್ತದೆ. ಇಲ್ಲಿ ಅನೇಕ ಯಾತ್ರಾಸ್ಥಳಗಳಿವೆ.

**7. ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆಯನ್ನು ವಿವರಿಸಿ.**

- ಪರ್ಯಾಯ ಪ್ರಸ್ಥಭೂಮಿಯು ಸಮೃದ್ಧ ಖನಿಜಗಳು, ದಟ್ಟ ಕಾಡುಗಳು ಹಾಗೂ ಜೈವಿಕ ವೈವಿಧ್ಯದಿಂದ ಕೂಡಿದೆ.
- ನೈಋತ್ಯ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ ಬೀರುತ್ತದೆ. ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಪೂರಕವಾಗಿದೆ.
- ಅನೇಕ ದಕ್ಷಿಣ ಭಾರತದ ನದಿಗಳಿಗೆ ಉಗಮ ಸ್ಥಾನ. ಅವು ಜಲಶಕ್ತಿ ತಯಾರಿಕೆಗೆ ಉಪಯುಕ್ತ.
- ಇಲ್ಲಿ ಗಿರಿಧಾಮಗಳೂ ಇವೆ. ಉದಾ : ಊಟಿ (ಉದಕಮಂಡಲ)

**8. ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.**

| ಪಶ್ಚಿಮ ಕರಾವಳಿ | ಪೂರ್ವ ಕರಾವಳಿ |
|---|---|
| • ಮೈದಾನವು ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ಕಂಡುಬರುತ್ತದೆ. | • ಪೂರ್ವ ಘಟ್ಟಗಳು ಮತ್ತು ಬಂಗಾಳಕೊಲ್ಲಿಗಳ ನಡುವೆ ನೆಲೆಸಿದೆ. |
| • ಇದು ಕಛ್‌ನಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ. | • ಮೈದಾನವು ಸುವರ್ಣರೇಖಾ ನದಿಯ ಉತ್ತರ ಭಾಗದಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ. |
| • ಪೂರ್ವ ಕರಾವಳಿಗಿಂತ ಅಗಲವಾಗಿಲ್ಲ. | • ಪಶ್ಚಿಮ ಕರಾವಳಿಗಿಂತ ಅಗಲವಾಗಿದೆ. |
| • ಕೊಂಕಣತೀರ, ಕರ್ನಾಟಕ ತೀರ, ಮಲಬಾರ್ ತೀರ. | • ಉತ್ತರ ಸರ್ಕಾರ್ ಮತ್ತು ಕೋರಮಂಡಲ ತೀರ. |

**9. ಭಾರತದ ಕರಾವಳಿ ಮೈದಾನಗಳ ಪ್ರಾಮುಖ್ಯತೆಯನ್ನು ವಿವರಿಸಿ.**

- ಭಾರತದ ಕರಾವಳಿ ಮೈದಾನಗಳು ಕೆಲವು ನೈಸರ್ಗಿಕ ಬಂದರುಗಳಿಗೆ ಪೂರಕವಾಗಿವೆ.
- ಇದರಿಂದ ಭಾರತದ ವಿದೇಶ ವ್ಯಾಪಾರಾಭಿವೃದ್ಧಿ ಸಾಧ್ಯ.
- ಉದಾ: ಕಾಂಡ್ಲ, ಮುಂಬಯಿ, ಮರ್ಮಗೋವ, ಕೊಚ್ಚಿ, ವಿಶಾಖಪಟ್ಟಣ, ಕೊಲ್ಕತ ಇತ್ಯಾದಿ.
- ಅಲ್ಲದೆ ಕರಾವಳಿಯು ಮೀನುಗಾರಿಕೆ, ಹಡಗು ನಿರ್ಮಾಣ ಕೈಗಾರಿಕೆ, ಕೃಷಿ ಮತ್ತು ಉಪ್ಪು ಉತ್ಪಾದನೆಗಳಿಗೂ ನೆರವಾಗುತ್ತವೆ.
- ನೌಕಾಯಾನ ಮತ್ತು ಆಕರ್ಷಕ ಬೀಚ್‌ಗಳಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ನೆರವಾಗುತ್ತವೆ.

**10. ಭಾರತದ ದ್ವೀಪಗಳನ್ನು ವಿವರಿಸಿ.**

- ಭಾರತದಲ್ಲಿ 247 ದ್ವೀಪಗಳಿವೆ.
- ಅವುಗಳಲ್ಲಿ 204 ಬಂಗಾಳಕೊಲ್ಲಿಯಲ್ಲಿ ಮತ್ತು 43 ಅರಬ್ಬಿ ಸಮುದ್ರಗಳಲ್ಲಿವೆ.
- ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಬಂಗಾಳಕೊಲ್ಲಿಯಲ್ಲಿವೆ.
- ಲಕ್ಷದ್ವೀಪಗಳು ಅರಬ್ಬಿ ಸಮುದ್ರದಲ್ಲಿದ್ದು. ಅವು ಹವಳ ದ್ವೀಪಗಳಾಗಿವೆ.

**III ಒಂದು ಅಂಕದ ಪ್ರಶ್ನೋತ್ತರಗಳು.**

**1. ಹಿಮಾಲಯ ಪರ್ವತಗಳಲ್ಲಿನ 3 ಸಮಾನಾಂತರ ಸರಣಿಗಳನ್ನು ಹೆಸರಿಸಿ.**

• ಮಹಾ ಹಿಮಾಲಯ. •ಒಳ ಹಿಮಾಲಯ • ಸಿವಾಲಿಕ್ ಬೆಟ್ಟಗಳು.

**2. ಹಿಮಾಲಯ ಪರ್ವತಗಳ ಮಧ್ಯದಲ್ಲಿರುವ ಅವಿರತ ಮತ್ತು ಅತಿ ಎತ್ತರವಾದ ಸರಣಿ ಯಾವುದು?**

ಮಹಾಹಿಮಾಲಯ

**3. ಪ್ರಪಂಚದಲ್ಲೇ ಎತ್ತರದ ಶಿಖರ ಯಾವುದು?**

ಮೌಂಟ್ ಎವರೆಸ್ಟ್

**4. ಮಹಾಹಿಮಾಲಯವನ್ನು ಹಿಮಾದ್ರಿ ಎಂದು ಕರೆಯುವರು.ಏಕೆ?**

ಈ ಸರಣಿಯು ವರ್ಷವೆಲ್ಲಾ ಹಿಮಾವೃತವಾಗಿರುವುದರಿಂದ, ಇದನ್ನು 'ಹಿಮಾದ್ರಿ' ಎಂದು ಕರೆಯಲಾಗಿದೆ.

**5. ಮಹಾಹಿಮಾಲಯದ ಶಿಖರಗಳನ್ನು ಹೆಸರಿಸಿ.**

ಮೌಂಟ್ ಎವರೆಸ್ಟ್ , ಕಾಂಚನಜಂಗ , ಮಾಕಲು , ಧವಳಗಿರಿ , ಮಾನಸ್ಲು , ನಂದಾದೇವಿ

**6. ಮಹಾಹಿಮಾಲಯದ ಘಾಟಿಗಳನ್ನು ಹೆಸರಿಸಿ.**

ಬುರ್ಜಿಲ್, ಜೋಜಿಲಾ, ಶಿಪ್ಕಿಲಾ

**7. ಭಾರತದ ಎತ್ತರವಾದ ಶಿಖರ ಯಾವುದು?**

k2 ಅಥವಾ ಗಾಡ್ವಿನ್ ಆಸ್ಟಿನ್

**8. ಒಳ ಹಿಮಾಲಯವನ್ನು ಏನೆಂದು ಕರೆಯುವರು?**

ಇದನ್ನು 'ಹಿಮಾಚಲ್' ಸರಣಿ ಎಂದು ಕರೆಯುವರು.

**9. ಒಳ ಹಿಮಾಲಯದ ಕಣಿವೆಗಳನ್ನು ಹೆಸರಿಸಿ.**

ಕಾಶ್ಮೀರ ಕಣಿವೆ, ಕಾಂಗ್ರ ಕಣಿವೆ, ಕುಲು ಕಣಿವೆ

**10. ಒಳ ಹಿಮಾಲಯದ ಗಿರಿಧಾಮಗಳನ್ನು ಹೆಸರಿಸಿ.**
ಶಿಮ್ಲಾ, ರಾಣಿಕೇಟ್, ಮುಸ್ಸೋರಿ, ನೈನಿತಾಲ್ ಮತ್ತು ಡಾರ್ಜಲಿಂಗ್.

**11. ಹಿಮಾಲಯದ ಹೊರಗಿನ ಅಥವಾ ಪಾದಭಾಗದ ಸರಣಿಗಳನ್ನು ಏನೆಂದು ಕರೆಯುವರು?**
ಸಿವಾಲಿಕ್ ಬೆಟ್ಟಗಳು

**12. 'ಡೂನ್ಸ್' ಎಂದರೇನು? ಉದಾಹರಣೆ ಕೊಡಿ.**
ಶಿವಾಲಿಕ್ ಬೆಟ್ಟಗಳು ಸಮತಟ್ಟಾದ ತಳವುಳ್ಳ ಕಣಿವೆಗಳನ್ನು ಹೊಂದಿದ್ದು, ಅವುಗಳನ್ನು 'ಡೂನ್ಸ್' ಎನ್ನುವರು. ಉದಾ: ಡೆಹ್ರಾಡೂನ್

**13. ಸಟ್ಲೇಜ್, ಗಂಗ ಮತ್ತು ಬ್ರಹ್ಮಪುತ್ರ ಈ ಮೂರು ನದಿಗಳ ಸಂಚಯ ಕಾರ್ಯದಿಂದ ನಿರ್ಮಾಣಗೊಂಡ ಪ್ರಾಕೃತಿಕ ಲಕ್ಷಣ ಯಾವುದು?**
ಉತ್ತರದ ಮೈದಾನ

**14. ಪ್ರಪಂಚದ ಅತಿ ವಿಶಾಲವಾದ ಮೆಕ್ಕಲು ಮಣ್ಣು ಮೈದಾನ ಯಾವುದು?**
ಉತ್ತರದ ಮೈದಾನ

**15. ಭಾರತದ ಪ್ರಾಕೃತಿಕ ವಿಭಾಗಗಳಲ್ಲಿ ಅತ್ಯಂತ ವಿಶಾಲವಾದುದು ಯಾವುದು?**
ಪರ್ಯಾಯ ಪ್ರಸ್ಥಭೂಮಿ

**16. ಗೊಂಡ್ವಾನ ಭೂಭಾಗಕ್ಕೆ ಸೇರಿದ ಭಾರತದ ಪ್ರಾಕೃತಿಕ ವಿಭಾಗ ಯಾವುದು?**
ಪರ್ಯಾಯ ಪ್ರಸ್ಥಭೂಮಿ

**17. ಅರಾವಳಿ ಸರಣಿಯ ಎತ್ತರದ ಪರ್ವತ ಯಾವುದು?**
'ಗುರುಶಿಖರ'

**18. ದಕ್ಷಿಣ ಭಾರತದ ಅತಿ ಎತ್ತರವಾದ ಶಿಖರ ಯಾವುದು?**
'ಅಣ್ಣೈಮುಡಿ'

**19. ಪಶ್ಚಿಮ ಘಟ್ಟಗಳಿಗಿರುವ ಮತ್ತೊಂದು ಹೆಸರೇನು?**
ಸಹ್ಯಾದ್ರಿ ಸರಣಿ.

**20. ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರ ಯಾವುದು?**
ಅರ್ಮಕೊಂಡ

**21. ಪಶ್ಚಿಮ ಕರಾವಳಿಯ ಮೂರು ವಿಭಾಗಗಳು ಯಾವುವು?**
ಕೊಂಕಣತೀರ, ಕರ್ನಾಟಕ ತೀರ, ಮಲಬಾರ್ ತೀರ

**22. ಪೂರ್ವಕರಾವಳಿಯ ಎರಡು ವಿಭಾಗಗಳು ಯಾವುವು?**
ಉತ್ತರ ಸರ್ಕಾರ್ ಮತ್ತು ಕೋರಮಂಡಲ ತೀರ

**23. ಪೂರ್ವಕರಾವಳಿಯಲ್ಲಿನ ಲಗೂನ್ ಸರೋವರಗಳನ್ನು ಹೆಸರಿಸಿ.**
ಚಿಲ್ಕ, ಪುಲಿಕೇಟ್ ಮತ್ತು ಕೊಲ್ಲೇರು ಸರೋವರಗಳು.

**24. ಹವಳದ ದ್ವೀಪಗಳು ಎಂದು ಯಾವುದನ್ನು ಕರೆಯುವರು?**
ಲಕ್ಷದ್ವೀಪಗಳನ್ನು ಹವಳದ ದ್ವೀಪಗಳು ಎಂದು ಕರೆಯುವರು.

## ಅಧ್ಯಾಯ–3
## ಭಾರತದ ವಾಯುಗುಣ

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಭಾರತದಲ್ಲಿ **ಉಷ್ಣವಲಯದ ಮಾನ್ಸೂನ್** ವಿಧದ ವಾಯುಗುಣ ವಿದೆ.
2. ಭಾರತದ **ಮಾಸಿನ್‌ರಾಮ್** ಸ್ಥಳದಲ್ಲಿ ಅತಿ ಹೆಚ್ಚು ಮಳೆ ಬೀಳುತ್ತದೆ.
3. ಭಾರತದಲ್ಲಿ ಅತಿ ಕಡಿಮೆ ಉಷ್ಣಾಂಶವು **ಡ್ರಾಸ್** ನಲ್ಲಿ ದಾಖಲಾಗುತ್ತದೆ.
4. ಭಾರತದ **ಜನವರಿ** ತಿಂಗಳು ಅತ್ಯಂತ ಶೀತವಾದುದು.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

- ಸ್ಥಾನ
- ಜಲರಾಶಿಗಳು
- ಮೇಲ್ಮೈ ಲಕ್ಷಣ
- ಮಾನ್ಸೂನ್ ಮಾರುತಗಳು

**2. ಭಾರತದ ಪ್ರಮುಖ ವಾಯುಗುಣದ ಋತುಕಾಲಗಳಾವುವು?**

ಭಾರತದಲ್ಲಿ ಒಂದು ವರ್ಷದ ವಾಯುಗುಣವನ್ನು 4 ಋತುಕಾಲಗಳಾಗಿ ವಿಂಗಡಿಸಬಹುದು.

1. ಚಳಿಗಾಲ (ಡಿಸೆಂಬರ್–ಫೆಬ್ರವರಿ)
2. ಬೇಸಿಗೆ ಕಾಲ (ಮಾರ್ಚ್–ಮೇ)
3. ಮಳೆಗಾಲ (ಜೂನ್–ಸೆಪ್ಟೆಂಬರ್)
4. ನಿರ್ಗಮನ ಮಾನ್‌ಸೂನ್ ಮಾರುತಗಳ ಕಾಲ (ಸೆಪ್ಟೆಂಬರ್ ಮಧ್ಯ–ನವೆಂಬರ್)

**3. ನೈಋುತ್ಯ ಮಾನ್ಸೂನ್ ಮಾರುತಗಳ ಪ್ರಕ್ರಿಯಗಳನ್ನು ವಿವರಿಸಿ.**

- ಅಕ್ಟೋಬರ್ ತಿಂಗಳ ಆರಂಭದಲ್ಲಿ ಉಷ್ಣಾಂಶವು ಕಡಿಮೆಯಾಗುವುದರಿಂದ ಭೂ ಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶವು ಕ್ರಮೇಣ ಕ್ಷೀಣಗೊಂಡು ಅಲ್ಲಿ ಅಧಿಕ ಒತ್ತಡ ಪ್ರದೇಶವು ನಿರ್ಮಾಣಗೊಳ್ಳುವುದು.
- ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡ ಪ್ರದೇಶವು ನಿರ್ಮಾಣವಾಗುವುದು.
- ಪರಿಣಾಮವಾಗಿ ನೈಋುತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ.
- ಅವು ಈಶಾನ್ಯದಿಂದ ನೈಋುತ್ಯದ ಕಡೆಗೆ ಬೀಸುವವು.
- ಈ ಅವಧಿಯನ್ನು **"ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ"** ಎಂದು ಕರೆಯಲಾಗಿದೆ.
- ಹವಾಗುಣವು ಅಸ್ಥಿರವಾಗಿರುತ್ತದೆ.

**4. ಚಳಿಗಾಲದ ಹವಾಗುಣದ ಪರಿಸ್ಥಿತಿಯನ್ನು ಕುರಿತು ವಿವರಿಸಿ.**

- ಸೂರ್ಯನ ಕಿರಣಗಳು ಭಾರತದಲ್ಲಿ ಓರೆ ಕಿರಣಗಳಿರುತ್ತವೆ.
- ಹೀಗಾಗಿ ಭಾರತದಲ್ಲಿ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆಯನ್ನು ಹೊಂದಿರುತ್ತದೆ.
- ದೇಶದ ಉತ್ತರದಲ್ಲಿ ತಂಪಾದ ಮತ್ತು ದಕ್ಷಿಣದಲ್ಲಿ ಬೆಚ್ಚನೆಯ ಪರಿಸ್ಥಿತಿಯಿರುತ್ತದೆ.
- ಜನವರಿ ಅತಿ ಶೀತವಾದ ಮಾಹೆಯಾಗಿರುತ್ತದೆ.
- ಇಬ್ಬನಿ ಮತ್ತು ಕಾವಳಗಳು ಸರ್ವೆಸಾಮಾನ್ಯ,
- ಪರ್ವತ ಭಾಗಗಳಲ್ಲಿ ಹೆಚ್ಚು ಹಿಮವೃಷ್ಟಿಯಾಗುತ್ತದೆ.
- ಈ ಅವಧಿಯಲ್ಲಿ ಭಾರತವು ತನ್ನ ವಾರ್ಷಿಕ ಮಳೆಯಲ್ಲಿ ಶೇ.2 ಭಾಗವನ್ನು ಮಾತ್ರ ಪಡೆಯುತ್ತದೆ.

**5. ಭಾರತದ ಕಡಿಮೆ ಮಳೆ ಬೀಳುವ ಪ್ರದೇಶಗಳನ್ನು ತಿಳಿಸಿ.**

ಕಛ್‌ನ ಪಶ್ಚಿಮ ಭಾಗ, ರಾಜಸ್ತಾನದ ಥಾರ್ ಮರುಭೂಮಿ ಹಾಗೂ ಪಶ್ಚಿಮದ ಪಂಜಾಬು, ಹರಿಯಾಣ ಮತ್ತು ಗುಜರಾತ್, ಉತ್ತರ ಜಾಸ್ಕರ್ ಶ್ರೇಣಿ, ಮತ್ತು ಪಶ್ಚಿಮ ಘಟ್ಟಗಳ ಮಳೆ ನೆರಳಿನ ಪ್ರದೇಶಗಳು ಸೇರಿವೆ. ರಾಜಸ್ತಾನದ ಜೈಸಲ್ಮಾರ್‌ನಲ್ಲಿರುವ **'ರೂಯ್ಲಿ'** ಅತಿ ಕಡಿಮೆ ಮಳೆ ಪಡೆಯುವ (8.3 ಸೆಂ.ಮೀ.) ಹಾಗೂ ಭಾರತ ಅತ್ಯಂತ ಶುಷ್ಕ ಪ್ರದೇಶವಾಗಿದೆ.

**6. ಭಾರತದ ಅಧಿಕ ಮಳೆಯಾಗುವ ಪ್ರದೇಶಗಳನ್ನು ಹೆಸರಿಸಿ.**

- ಪಶ್ಚಿಮ ಘಟ್ಟಗಳ ಕಿರಿದಾದ ವಲಯ.
- ಜಮ್ಮುವಿನಿಂದ ಆರಂಭಗೊಂಡು ಹಿಮಾಚಲ ಪ್ರದೇಶ, ಉತ್ತರ ಪ್ರದೇಶದ ಉತ್ತರಭಾಗ, ಬಿಹಾರ ಮತ್ತು ಪಶ್ಚಿಮಬಂಗಾಳ.

- ಈಶಾನ್ಯ ಭಾರತ. ಭಾರತದಲ್ಲೇ ಅತಿ ಹೆಚ್ಚು ಮಳೆ ಬೀಳುವ ಮಾಸಿನ್‌ರಾಮ್ ಈ ಭಾಗದಲ್ಲಿದೆ.
- ಪಶ್ಚಿಮ ಸಮುದ್ರ ತೀರ ಪ್ರದೇಶ.

**III ಒಂದು ಅಂಕದ ಪ್ರಶ್ನೋತ್ತರಗಳು.**

**1. ಚಳಿಗಾಲದಲ್ಲಿ ಭಾರತದಲ್ಲಿ ಕಡಿಮೆ ಉಷ್ಣಾಂಶ ಕಡಿಮೆ.ಏಕೆ?**
ಈ ಋತುಕಾಲದಲ್ಲಿ ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದಲ್ಲಿ ಪ್ರಕಾಶಿಸುತ್ತವೆ.

**2. ಭಾರತದಲ್ಲಿ ಕಡಿಮೆ ಮಳೆಯಾಗುವ ಋತುಮಾನ ಯಾವುದು?**
ಚಳಿಗಾಲ

**3. ಬೇಸಿಗೆ ಕಾಲದಲ್ಲಿ ಭಾರತದಲ್ಲಿ ಉಷ್ಣಾಂಶ ಹೆಚ್ಚು.ಏಕೆ?**
ಈ ಕಾಲದಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರ ಗೋಳಾರ್ಧದಲ್ಲಿ ಬೀಳುವುದು. ಹೀಗಾಗಿ ಭಾರತದಲ್ಲಿ ಉಷ್ಣಾಂಶವು ಹೆಚ್ಚು.

**4. ಭಾರತದದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗುವ ಪ್ರದೇಶ ಯಾವುದು?**
ರಾಜಸ್ತಾನದ ಗಂಗಾನಗರ.

**5. ಉತ್ತರ ಪ್ರದೇಶದಲ್ಲಿ ಪರಿಸರಣ ಮಳೆಯನ್ನು ಏನೆಂದು ಕರೆಯುವರು?**
ಆಂಧಿಸ್.

**6. ಪಶ್ಚಿಮ ಬಂಗಾಳದಲ್ಲಿ ಪರಿಸರಣ ಮಳೆಯನ್ನು ಏನೆಂದು ಕರೆಯುವರು?**
ಕಾಲಬೈಸಾಕಿ.

**7. 'ಮಾವಿನ ಹೊಯ್ಲು' ಎಂದರೇನು?**
ಪರಿಸರಣ ಮಳೆಯು ಮಾವಿನ ಬೆಳೆಗೆ ನೆರವಾಗುವುದರಿಂದ ಕೇರಳದಲ್ಲಿ 'ಮಾವಿನ ಹೊಯ್ಲು' ಎನ್ನುವರು.

**8. 'ಕಾಫಿಯ ಹೂಮಳೆ' ಎಂದರೇನು?**
ಪರಿಸರಣ ಮಳೆಯು ಕರ್ನಾಟಕದಲ್ಲಿ ಕಾಫಿ ಬೆಳೆಗೆ ನೆರವಾಗುವುದರಿಂದ 'ಕಾಫಿಯ ಹೂಮಳೆ' ಎನ್ನುವರು.

**9. ಭಾರತದಲ್ಲಿ ಮಳೆಗಾಲವನ್ನು ಏನೆಂದು ಕರೆಯುವರು?**
ನೈಋತ್ಯ ಮಾನ್ಸೂನ್ ಮಾರುತಗಳ ಕಾಲ.

**10. ಭಾರತದಲ್ಲೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ ಯಾವುದು?**
ಮಾಸಿನ್‌ರಾಮ್.

**11. ಅಕ್ಟೋಬರ್ ತಿಂಗಳ ಆರಂಭದಲ್ಲಿ ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ.ಏಕೆ?**
ಕಡಿಮೆ ಉಷ್ಣಾಂಶ ಮತ್ತು ಅಧಿಕ ಒತ್ತಡ

**12. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದ ಮತ್ತೊಂದು ಹೆಸರೇನು?**
"ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ".

**13. ಭಾರತದ ಅತಿ ಕಡಿಮೆ ಮಳೆ ಪಡೆಯುವ ಹಾಗೂ ಅತ್ಯಂತ ಶುಷ್ಕ ಪ್ರದೇಶ ಯಾವುದು?**
ರೂಯ್ಲಿ.

# ಅಧ್ಯಾಯ–4
# ಭಾರತದ ಮಣ್ಣುಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿರಿ.**

1. ನದಿಗಳ ಸಂಚಯದಿಂದ ನಿರ್ಮಾಣಗೊಂಡ ಮಣ್ಣಿಗೆ ________ ಎನ್ನುವರು. ( **ಮೆಕ್ಕಲು ಮಣ್ಣು**)
2. ಕಪ್ಪು ಮಣ್ಣನ್ನು ________ ಮತ್ತು ________ ಎಂತಲೂ ಕರೆಯಲಾಗಿದೆ. (**ರೀಗರ್ ಮಣ್ಣು ಮತ್ತು ಕಪ್ಪು ಹತ್ತಿ ಮಣ್ಣು**)
3. ಅತ್ಯಧಿಕ ಉಷ್ಣಾಂಶ ಮತ್ತು ಮಳೆಯ ಪರಿಸ್ಥಿತಿಯುಳ್ಳ ಉಷ್ಣವಲಯದಲ್ಲಿ ಉತ್ಪತ್ತಿಯಾಗುವ ಮಣ್ಣು ________ ಆಗಿರುತ್ತದೆ. (**ಲ್ಯಾಟರೈಟ್ ಮಣ್ಣು (ಜಂಬಿಟ್ಟಿಗೆ)**
4. ಪರ್ವತ ಮಣ್ಣು ________ ಬೆಳೆಗಳ ಬೇಸಾಯಕ್ಕೆ ಸೂಕ್ತವಾದುದು. (**ಚಹ, ಕಾಫಿ ಮತ್ತು ಹಣ್ಣು**)

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಭಾರತದ ಪ್ರಮುಖ ಮಣ್ಣಿನ ಪ್ರಕಾರಗಳಾವುವು?**

- ಮೆಕ್ಕಲು ಮಣ್ಣು.
- ಕಪ್ಪು ಮಣ್ಣು.
- ಕೆಂಪು ಮಣ್ಣು.
- ಲ್ಯಾಟರೈಟ್ ಮಣ್ಣು.
- ಮರುಭೂಮಿ ಮಣ್ಣು.
- ಪರ್ವತ ಮಣ್ಣು.

**2. ಭಾರತದಲ್ಲಿ ಕಪ್ಪು ಮಣ್ಣಿನ ಹಂಚಿಕೆಯನ್ನು ಕುರಿತು ವಿವರಿಸಿ.**

- ಭಾರತದಲ್ಲಿ ಕಪ್ಪು ಮಣ್ಣು ದಖನ್ ಪ್ರಸ್ಥಭೂಮಿಯ ಬಸಾಲ್ಟ್ ಶಿಲಾವಲಯದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ.
- ಈ ವಲಯಕ್ಕೆ ಮಹಾರಾಷ್ಟ್ರ, ಮಧ್ಯಪ್ರದೇಶ, ತೆಲಂಗಾಣದ ಕೆಲಭಾಗಗಳು, ಉತ್ತರ ಕರ್ನಾಟಕ, ಗುಜರಾತ್ ಮತ್ತು ತಮಿಳುನಾಡಿನ ಕೆಲಭಾಗಗಳು ಸೇರುತ್ತವೆ.
- ಸುಮಾರು 5.46 ಲಕ್ಷ ಚ.ಕಿ.ಮೀ ವಿಸ್ತೀರ್ಣದಲ್ಲಿ ಕಪ್ಪು ಮಣ್ಣು ಹಂಚಿಕೆಯಾಗಿದೆ.

**3. ಕೆಂಪು ಮಣ್ಣಿನ ಗುಣಲಕ್ಷಣಗಳಾವುವು?**

- ಗ್ರಾನೈಟ್, ನೀಸ್ ಮತ್ತು ಸ್ಫಟಿಕ ಶಿಲೆಗಳ ಶಿಥಲೀಕರಣದಿಂದಾಗಿ ಈ ಮಣ್ಣು ನಿರ್ಮಾಣವಾಗುವುದು.
- ಕೆಂಪು ಬಣ್ಣವನ್ನು ಹೊಂದಿರುವುದು.
- ಮರಳಿನಾಂಶ ಹೆಚ್ಚು ಜೇಡಿಯ ಪ್ರಮಾಣ ಕಡಿಮೆ.
- ತೇವಾಂಶ ಸಂಗ್ರಹದ ಸಾಮರ್ಥ್ಯಕಡಿಮೆ.

**4. ಮಣ್ಣಿನ ಸವೆತ ಮತ್ತು ಸಂರಕ್ಷಣೆ ಎಂದರೇನು?**

- ಮಣ್ಣಿನ ಸ್ತರದ ಮೇಲ್ಭಾಗವು ನೈಸರ್ಗಿಕ ಕರ್ತೃಗಳಿಂದ ಕೊಚ್ಚಿಹೋಗುವುದನ್ನು ಮಣ್ಣಿನ ಸವೆತವೆನ್ನುವರು.
- ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತ್ತತೆಯನ್ನು ಕಾಪಾಡುವುದನ್ನು 'ಮಣ್ಣಿನ ಸಂರಕ್ಷಣೆ' ಎನ್ನುವರು.

**5. ಮಣ್ಣಿನ ಸವೆತದ ಪ್ರಮುಖ ಪರಿಣಾಮಗಳು ಯಾವುವು?**

1. ಮಣ್ಣಿನ ಸಾರವು ಕಡಿಮೆಯಾಗಿ, ಕೃಷಿಯ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುತ್ತದೆ.
2. ನದಿ ಪಾತ್ರಗಳಲ್ಲಿ ಹೂಳು ತುಂಬಿಕೊಳ್ಳುವುದು, ಪ್ರವಾಹ ಉಂಟಾಗುವುದು ಮತ್ತು ನದಿ ಪಾತ್ರದ ಬದಲಾವಣೆ ಹಾಗೂ ಜಲಾಶಯಗಳಲ್ಲಿ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ.
3. ಅಂತರ್ಜಲದ ಮಟ್ಟದಲ್ಲಿ ಕುಸಿತ ಮತ್ತು ಮಣ್ಣಿನ ತೇವಾಂಶವು ಕಡಿಮೆಯಾಗುವುದು.
4. ಸಸ್ಯವರ್ಗವು ಒಣಗುತ್ತದೆ ಮತ್ತು ಬರ ಪರಿಸ್ಥಿತಿ ಹೆಚ್ಚುತ್ತದೆ.
5. ದೇಶದ ಸಮಗ್ರ ಆರ್ಥಿಕ ವ್ಯವಸ್ಥೆಗೆ ಹಿನ್ನಡೆಯಾಗುತ್ತದೆ.

**6. ಮಣ್ಣಿನ ಸವೆತಕ್ಕೆ ಪ್ರಮುಖ ಕಾರಣಗಳನ್ನು ತಿಳಿಸಿ.**

ಮಣ್ಣಿನ ಸವೆತಕ್ಕೆ ಪ್ರಮುಖವಾದ ಕಾರಣಗಳೆಂದರೆ –

ಎ) ಅರಣ್ಯನಾಶ.

ಬಿ) ಅತಿಯಾಗಿ ಮೇಯಿಸುವುದು.

ಸಿ) ವರ್ಗಾವಣೆ ಬೇಸಾಯ ಪದ್ಧತಿ.

ಡಿ) ಅವೈಜ್ಞಾನಿಕ ಬೇಸಾಯ ಪದ್ಧತಿ.

ಇ) ಮೇಲ್ಪದರದ ಮಣ್ಣನ್ನು ಇಟ್ಟಿಗೆ, ಹೆಂಚು ಇತ್ಯಾದಿ ಉದ್ದೇಶಗಳಿಗೆ ಬಳಕೆ ಮಾಡುವುದು.

**7. ಮಣ್ಣಿನ ಸಂರಕ್ಷಣೆಯ ವಿಧಾನಗಳು ಯಾವುವು?**

ಮಣ್ಣಿನ ಸಂರಕ್ಷಣೆಗಾಗಿ ಅನೇಕ ವಿಧಾನಗಳನ್ನು ಅಳವಡಿಸಲಾಗಿದೆ. ಅವುಗಳೆಂದರೆ –

1. ಅರಣ್ಯಪೋಷಣೆ ಮತ್ತು ಮರು ಅರಣ್ಯೀಕರಣ.
2. ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.
3. ಸಮೋನ್ನತಿ ಬೇಸಾಯ.
4. ಚೆಕ್ ಡ್ಯಾಮ್‌ಗಳ ನಿರ್ಮಾಣ.
5. ಬದುಗಳ ನಿರ್ಮಾಣ ಹಾಗೂ
6. ಕೊರಕಲು ನಿಯಂತ್ರಣ ಮತ್ತು ಮೆಟ್ಟಲು ಪಂಕ್ತಿ ಬೇಸಾಯ.

**8. ಮೆಕ್ಕಲು ಗುಣಲಕ್ಷಣಗಳಾವುವು?**

1. ಪ್ರಧಾನವಾಗಿ ಮೆಕ್ಕಲನ್ನೊಳಗೊಂಡ ಮಣ್ಣನ್ನು 'ಮೆಕ್ಕಲು ಮಣ್ಣು' ಎನ್ನುವರು.
2. ನದಿಗಳು ಮೆಕ್ಕಲು ಕಣಗಳನ್ನು ಸಂಚಯಿಸುವುದರಿಂದ ಇಂತಹ ಮಣ್ಣು ಉತ್ಪತ್ತಿಯಾಗುತ್ತದೆ. ಉದಾಃ ಸಿಂಧೂ–ಗಂಗಾ ನದಿ ಬಯಲು. ಸಮುದ್ರ ಅಲೆಗಳ ಸಂಚಯದಿಂದ ತೀರ ಪ್ರದೇಶದಲ್ಲಿಯೂ ನಿರ್ಮಾಣವಾಗುತ್ತದೆ.
3. ಭಾರತದಲ್ಲಿ ಮೆಕ್ಕಲು ಮಣ್ಣು ವಿಸ್ತಾರವಾಗಿ ಹಂಚಿಕೆಯಾಗಿದ್ದು, ಅಷ್ಟೇ ಪ್ರಾಮುಖ್ಯತೆಯನ್ನೂ ಹೊಂದಿದೆ.
4. ಅದು ದೇಶದ ಕೃಷಿ ಪ್ರಗತಿಯಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಸುಮಾರು 15 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಹಂಚಿಕೆಯಾಗಿದೆ.
5. ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ–ಗೋಧಿ, ಭತ್ತ, ಕಬ್ಬು, ಹತ್ತಿ, ಸೆಣಬು, ಆಲೂಗೆಡ್ಡೆ ಮತ್ತು ತರಕಾರಿಗಳು.

**III ಒಂದು ಅಂಕದ ಪ್ರಶ್ನೋತ್ತರಗಳು.**

**1. ಮೆಕ್ಕಲು ಮಣ್ಣು ಹೇಗೆ ಉತ್ಪತ್ತಿಯಾಗುತ್ತದೆ?**

ನದಿಗಳು ಮೆಕ್ಕಲು ಕಣಗಳನ್ನು ಸಂಚಯಿಸುವುದರಿಂದ ಇಂತಹ ಮಣ್ಣು ಉತ್ಪತ್ತಿಯಾಗುತ್ತದೆ.

**2. ಯಾವ ಮಣ್ಣನ್ನು 'ರೀಗರ್' ಮಣ್ಣು ಎಂದು ಕರೆಯುವರು?**

ಕಪ್ಪುಮಣ್ಣು

**3. ಕಪ್ಪು ಮಣ್ಣನ್ನು ಕಪ್ಪು ಹತ್ತಿ ಮಣ್ಣು ಎಂದು ಏಕೆ ಕರೆಯುವರು?**

ಹತ್ತಿ ಬೇಸಾಯಕ್ಕೆ ಸೂಕ್ತವಾಗಿರುವುದರಿಂದ 'ಕಪ್ಪು ಹತ್ತಿ ಮಣ್ಣು' ಎಂದೂ ಕರೆಯಲಾಗಿದೆ.

**4. ಕಪ್ಪುಮಣ್ಣು ಹೇಗೆ ಉತ್ಪತ್ತಿಯಾಗಿದೆ?**

ಇದು ಬಸಾಲ್ಟ್ ಶಿಲಾಕಣಗಳಿಂದ ಉತ್ಪತ್ತಿಯಾಗಿದೆ.

**5. ಕೆಂಪು ಮಣ್ಣು ಹೇಗೆ ಉತ್ಪತ್ತಿಯಾಗಿದೆ?**

ಇದು ಗ್ರಾನೈಟ್, ನೀಸ್ ಮತ್ತು ಇತರೆ ಸ್ಫಟಿಕ ಶಿಲೆಗಳ ಶಿಥಿಲೀಕರಣದ ವಸ್ತುಗಳಿಂದ ಉತ್ಪತ್ತಿಯಾಗಿದೆ.

**6. ಕೆಂಪು ಮಣ್ಣಿನಲ್ಲಿ ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ.ಏಕೆ?**

ಇದರಲ್ಲಿ ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ. ಹೀಗಾಗಿ ಇದಕ್ಕೆ ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ.

**7. ಯಾವ ಮಣ್ಣನ್ನು ಲ್ಯಾಟರೈಟ್ ಮಣ್ಣು ಎಂದು ಕರೆಯುವರು?**

ಜಂಬಿಟ್ಟಿಗೆ ಮಣ್ಣು.

**8. ಭಾರತದಲ್ಲಿ ವಾಯವ್ಯ ಭಾಗದಲ್ಲಿ ಹೆಚ್ಚಾಗಿ ಕಂಡುಬರುವ ಮಣ್ಣು ಯಾವುದು?**

ಮರುಭೂಮಿ ಮಣ್ಣು

**9. ಪರ್ವತ ಮಣ್ಣು ಹೇಗೆ ಉತ್ಪತ್ತಿಯಾಗಿದೆ?**

ಜೈವಿಕ ವಸ್ತುಗಳು ಕೊಳೆಯುವುದರಿಂದ ಪರ್ವತ ಮಣ್ಣು ಮಣ್ಣು ಉತ್ಪತ್ತಿಯಾಗಿದೆ.

# ಅಧ್ಯಾಯ–5
# ಭಾರತದ ಅರಣ್ಯ ಸಂಪತ್ತು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಉತ್ತರಗಳಿಂದ ಭರ್ತಿಮಾಡಿ.**

1.ವರ್ಷದ ಯಾವುದೇ ಕಾಲದಲ್ಲೂ ________ಅರಣ್ಯಗಳು ಎಲೆ ಉದುರಿಸುವುದಿಲ್ಲ.

**(ಉಷ್ಣ ವಲಯದ ನಿತ್ಯ ಹರಿದ್ವರ್ಣದ ಕಾಡುಗಳು)**

2. ಮಾನ್ಸೂನ್ ಕಾಡುಗಳನ್ನು ________ ಅರಣ್ಯಗಳೆಂತಲೂ ಕರೆಯಲಾಗಿದೆ. **(ಉಷ್ಣವಲಯದ ಎಲೆ ಉದುರಿಸುವ ಕಾಡುಗಳು)**

3. ಹಿಮಾಲಯ ಪರ್ವತಗಳಲ್ಲಿ ________ ವಿಧದ ಅರಣ್ಯಗಳಿವೆ. **(ಪರ್ವತ ಕಾಡುಗಳು)**

4. ಹೆಚ್ಚಾಗಿ ನದಿಮುಖಜ ಭೂಮಿಗಳಲ್ಲಿ ________ ಅರಣ್ಯಗಳು ಕಂಡುಬರುತ್ತವೆ. **(ಮ್ಯಾಂಗ್ರೋವ್ ಕಾಡುಗಳು)**

5. ನಾಗಾರ್ಜುನ ಸಾಗರ ವನ್ಯಜೀವಿಧಾಮವು ________ ರಾಜ್ಯದಲ್ಲಿದೆ. **(ತೆಲಂಗಾಣ)**

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

**1. ಅರಣ್ಯಗಳೆಂದರೇನು?**

ವೃಕ್ಷ ಮತ್ತು ಇತರೆ ಸಸ್ಯಸಂಕುಲಗಳಿಂದ ಆವರಿಸಿದ ವಿಶಾಲ ಭೂಭಾಗವನ್ನು 'ಅರಣ್ಯ' (ಕಾಡು) ಎಂದು ಕರೆಯಲಾಗಿದೆ.

**2. ಮರುಭೂಮಿ ಸಸ್ಯವರ್ಗವಿರುವ ಪ್ರದೇಶವನ್ನು ಹೆಸರಿಸಿ.**

ಥಾರ್ ಮರುಭೂಮಿ. ಇದರಲ್ಲಿ ರಾಜಸ್ತಾನ, ಪಂಜಾಬ್ ಮತ್ತು ಹರಿಯಾಣಗಳ ಕೆಲ ಭಾಗಗಳು ಮತ್ತು ದಖನ್ ಪ್ರಸ್ಥಭೂಮಿ.

**3. ಅರಣ್ಯ ಸಂರಕ್ಷಣೆಗೆ ಬೇಕಾದ ಯಾವುದಾದರೂ ನಾಲ್ಕು ಕ್ರಮಗಳನ್ನು ತಿಳಿಸಿ.**

1) ಅರಣ್ಯ ನಾಶ ನಿಯಂತ್ರಣ.
2) ಮಿತಿಮೀರಿ ಮೇಯಿಸುವುದನ್ನು ತಡೆಗಟ್ಟವುದು.
3) ಕಾಡ್ಗಿಚ್ಚು ನಿಯಂತ್ರಣ.
4) ಅರಣ್ಯ ಅತಿ ಕ್ರಮಣದ ತಡೆ.
5) ಅರಣ್ಯಗಳಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ.
6) ಮರಗಳ ಕಳ್ಳಸಾಗಣಿ ತಡೆ.
7) ವೈಜ್ಞಾನಿಕವಾಗಿ ಮರಗಳನ್ನು ಕಡಿಯುವುದು.
8) ಅರಣ್ಯನಾಶ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತರುವುದು.
9) ಅರಣ್ಯ ಬೆಳೆಸಲು ಪ್ರೋತ್ಸಾಹ ನೀಡುವುದು.
10) ಅರಣ್ಯಗಳ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವನ್ನುಂಟುಮಾಡುವುದು.

**4. ವನ್ಯ ಜೀವಿಧಾಮಗಳೆಂದರೇನು?**

ವನಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು ವನ್ಯಜೀವಿಧಾಮಗಳೆಂದು ಕರೆಯುವರು.

**5. ಕರ್ನಾಟಕದಲ್ಲಿರುವ ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ.**

ಬಂಡಿಪುರ, ಬನ್ನೇರುಘಟ್ಟ ಮತ್ತು ನಾಗರಹೊಳೆ.

**6. ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳನ್ನು ತಿಳಿಸಿ.**

1. ಜೀವಿಗಳ ಸಂರಕ್ಷಣೆ,
2. ಸಂಶೋಧನೆ,
3. ಶಿಕ್ಷಣ ಮತ್ತು
4. ಸ್ಥಳೀಯರು ಇದರಲ್ಲಿ ಭಾಗಿಯಾಗುವಂತೆ ಮಾಡುವುದು.

ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳು.

**7. ಭಾರತದ ಜೀವಿ ಸಂರಕ್ಷಣಾ ವಲಯಗಳನ್ನು ಹೆಸರಿಸಿ.**

ನೀಲಗಿರಿ, ನಂದಾದೇವಿ, ನೋಕ್ರೆಕ್, ಮಾನಸ, ಗ್ರೇಟ್ ನಿಕೋಬರ್, ಮನ್ನಾರ್‌ಖಾರಿ, ಸುಂದರಬನ, ಸಿಮಿಲಿಪಾಲ್, ಕಾಂಚನಜಂಗ, ಪಚಮ್ಹಾರಿ, ಅಗಸ್ತ್ಯಮಲೈ, ದಿಬ್ರು, ಸೈಖೋವ, ದಿಬಾಂಗ್.

**8. ಭಾರತದ ಪ್ರಮುಖ ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ.**

ಕಾಜಿರಂಗ (ಅಸ್ಸಾಂ), ಸುಂದರಬನ (ಪ.ಬಂಗಾಳ), ಕಾರ್ಬೆಟ್ (ಉತ್ತರಾಂಚಲ), ಗಿರ್ (ಗುಜರಾತ್), ಕನ್ಹಾ (ಮಧ್ಯಪ್ರದೇಶ), ಬಂಡಿಪುರ, ಬನ್ನೇರುಘಟ್ಟ ಮತ್ತು ನಾಗರಹೊಳೆ (ಕರ್ನಾಟಕ), ಸರಿಕ್ಸ (ರಾಜಸ್ತಾನ) ಧುದವ (ಉತ್ತರ ಪ್ರದೇಶ) ತೊಡೋಬ (ಮಹಾರಾಷ್ಟ್ರ) ಇತ್ಯಾದಿ.

**9. ಅರಣ್ಯಗಳ ಪ್ರಾಮುಖ್ಯತೆಗಳೇನು?**

1. ಅರಣ್ಯಗಳು ಭಾರತದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದಾಗಿವೆ.
2. ಮರದ ವಸ್ತುಗಳನ್ನು ಪೂರೈಸುತ್ತವೆ.
3. ಸೌದೆ ಚೌಬೀನೆ ಮತ್ತು ಕೈಗಾರಿಕಾ ಕಚ್ಚಾಪದಾರ್ಥಗಳಾಗಿ ಬಳಕೆಯಾಗುವವು.
4. ಅರಣ್ಯಗಳು ಜಾನುವಾರುಗಳಿಗೆ ಬೇಕಾದ ಮೇವು ಮತ್ತು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತವೆ.

5. ಅರಣ್ಯಗಳು ಪರೋಕ್ಷವಾಗಿ ಮೇಲ್ಮೈ ಲಕ್ಷಣಗಳನ್ನು ಸಂರಕ್ಷಿಸುತ್ತವೆ,
6. ಹರಿಯುವ ನೀರಿನ ರಭಸವನ್ನು ಮಿತಗೊಳಿಸಿ, ಪ್ರವಾಹ ಮತ್ತು ಮಣ್ಣಿನ ಸವೆತವನ್ನು ನಿಯಂತ್ರಿಸುತ್ತವೆ.
7. ಮರುಭೂಮೀಕರಣವನ್ನು ತಡೆಯುತ್ತವೆ,
8. ಮಣ್ಣಿನ ಫಲವತ್ತತೆಯ ವೃದ್ಧಿಗೆ ನೆರವಾಗುತ್ತವೆ.
9. ವಾಯುಗುಣವನ್ನು ಸಮತೋಲನಗೊಳಿಸಲು ಮತ್ತು ಪರಿಸರ ಸಮತೋಲನವನ್ನು ಕಾಪಾಡಲು ನೆರವಾಗುತ್ತವೆ.
10. ಅವು ವನ್ಯ ಜೀವಿಗಳಿಗೆ ಆಶ್ರಯ ನೀಡುತ್ತವೆ.

**10. ಉಷ್ಣ ವಲಯದ ನಿತ್ಯ ಹರಿದ್ವರ್ಣದ ಕಾಡುಗಳಿರುವ ಪ್ರದೇಶಗಳನ್ನು ಮತ್ತು ಇಲ್ಲಿ ಬೆಳೆಯುವ ಮರಗಳನ್ನು ಹೆಸರಿಸಿ.**

ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ ಹಾಗೂ ಈಶಾನ್ಯ ರಾಜ್ಯಗಳಾದ ಅಸ್ಸಾಂ, ನಾಗಾಲ್ಯಾಂಡ್,ಮೇಘಾಲಯ,ತ್ರಿಪುರ, ಮಣಿಪುರಗಳ ಬೆಟ್ಟಗಳು ಮತ್ತು ಅಂಡಮಾನ್–ನಿಕೋಬರ್ ದ್ವೀಪಗಳಲ್ಲಿ ಹಂಚಿಕೆಯಾಗಿವೆ.

ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ತೇಗ, ಬೀಟೆ, ಎಬೋನಿ, ಮಹೋಗನಿ, ಗುರ್ಜಾನ್ ಮತ್ತು ಚಂಪ.

**11. ಭಾರತದಲ್ಲಿ ಅರಣ್ಯಗಳ ವಿಧಗಳನ್ನು ನಿರ್ಧರಿಸುವ ಅಂಶಗಳಾವುವು?**

ವಾಯುಗುಣ, ಮಣ್ಣು ಮತ್ತು ಮೇಲ್ಮೈ ಲಕ್ಷಣಗಳು.

**12. ಉಷ್ಣವಲಯದ ಎಲೆ ಉದುರುವ ಅರಣ್ಯಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

- ವಾರ್ಷಿಕ ಸರಾಸರಿ 100 ರಿಂದ 200 ಸೆಂ.ಮೀ. ಮಳೆ ಬೀಳುವ ಕಡೆಗಳಲ್ಲಿ ಈ ಅರಣ್ಯಗಳು ಕಂಡು ಬರುತ್ತವೆ.
- ಇವುಗಳನ್ನು "ಪರ್ಣಪಾತಿ ಅರಣ್ಯ" ಎಂತಲೂ ಕರೆಯುವರು.
- ಬೇಸಿಗೆಯ ಆರಂಭದಲ್ಲಿ ಈ ಮರಗಳ ಎಲೆಗಳು ಉದುರುತ್ತವೆ. ಹೀಗಾಗಿ ಇವುಗಳನ್ನು "ಮಾನ್ಸೂನ್ ಕಾಡುಗಳು" ಎಂತಲೂ ಕರೆಯಲಾಗಿದೆ.
- ತೇಗ, ಸಲೆ, ಶ್ರೀಗಂಧ, ಕೆಂದಾಳ, ತಪಸಿಮರ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಹುಣಸೆ ಮರಗಳು ಹೆಚ್ಚಾಗಿ ಕಂಡುಬರುತ್ತವೆ.
- ಪಶ್ಚಿಮ ಘಟ್ಟಗಳ ಪೂರ್ವ ಇಳಿಜಾರು ಭಾಗಗಳನ್ನೊಳಗೊಂಡ ಮಹಾರಾಷ್ಟ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಹಾಗೂ ಛೋಟಾನಾಗಪುರ ಪ್ರಸ್ಥಭೂಮಿ, ಹಿಮಾಲಯದ ಪಾದ ಭಾಗಗಳು, ಒಡಿಶಾ ಮತ್ತು ಪಶ್ಚಿಮ ಬಂಗಾಳಗಳ ಕೆಲಭಾಗಗಳಲ್ಲಿ ಹಂಚಿಕೆಯಾಗಿವೆ.

**13. ಮರುಭೂಮಿ ಸಸ್ಯವರ್ಗದ ಲಕ್ಷಣಗಳನ್ನು ಬರೆಯಿರಿ.**

- 10–50 ಸೆಂ.ಮೀ. ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡು ಬರುತ್ತದೆ.
- ಉದಾ: ಥಾರ್ ಮರುಭೂಮಿ. ಇದರಲ್ಲಿ ರಾಜಸ್ತಾನ, ಪಂಜಾಬ್ ಮತ್ತು ಹರಿಯಾಣಗಳ ಕೆಲ ಭಾಗಗಳು ಮತ್ತು ದಖನ್ ಪ್ರಸ್ಥಭೂಮಿಗಳು ಸೇರುತ್ತವೆ.
- ಮಳೆಯ ಕೊರತೆಯಿಂದಾಗಿ ಈ ಭಾಗಗಳಲ್ಲಿ ಅಲ್ಲಲ್ಲಿ ಚದುರಿದಂತೆ ಮರಗಳು ಮುಳ್ಳಿನ ಗಿಡಗಂಟಿಗಳು ಬೆಳೆಯುತ್ತವೆ.
- ಕಗ್ಗಲಿ, ಗೊಬ್ಬಳಿ, ಕಳ್ಳಿ, ಖರ್ಜೂರ, ತಾಳೆ ಮರಗಳು ಇಲ್ಲಿ ಕಂಡುಬರುತ್ತವೆ.

**14. ಕುರುಚಲು ಸಸ್ಯ ಮತ್ತು ಹುಲ್ಲುಗಾವಲಿನ ಲಕ್ಷಣಗಳನ್ನು ಬರೆಯಿರಿ.**

- ಸಸ್ಯವರ್ಗವು 60–100 ಸೆಂ.ಮೀ. ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತದೆ.
- ಕುರುಚಲು ಗಿಡ ಮರ ಮತ್ತು ಕುಬ್ಜ ಒರಟಾದ ಹುಲ್ಲು, ಮುಳ್ಳಿನ ಮರ–ಗಿಡಗಳು ಅಲ್ಲಲ್ಲಿ ಚದುರಿದಂತೆ ಬೆಳೆಯುತ್ತವೆ.
- ಅವು ಕಛ್ ಮತ್ತು ಥಾರ್ ಮರುಭೂಮಿಯ ಅಂಚಿನ ಭಾಗಗಳಲ್ಲಿ ಕಂಡುಬರುತ್ತವೆ.
- ಹುಲ್ಲುಗಾವಲು ಪ್ರಮುಖವಾಗಿ ರಾಜಸ್ತಾನದ ಪೂರ್ವಭಾಗ, ಪಂಜಾಬ್, ಪಶ್ಚಿಮ ಘಟ್ಟಗಳ ಕೆಲಭಾಗ ಮತ್ತು ಕಾರ್ಡಮಮ್ ಬೆಟ್ಟಗಳಲ್ಲಿ ಕಂಡುಬರುತ್ತದೆ.

**15. ಮ್ಯಾಂಗ್ರೋವ್ ಕಾಡುಗಳು ಲಕ್ಷಣಗಳನ್ನು ಬರೆಯಿರಿ.**

- ಈ ಕಾಡುಗಳು ಅಧಿಕ ಮಳೆ ಬೀಳುವ ಜವುಗು ಪ್ರದೇಶ, ನದಿಮುಖಜ ಭೂಮಿ ಮತ್ತು ಉಬ್ಬರವಿಳಿತಗಳುಳ್ಳ ಸಮುದ್ರ ತೀರಗಳಲ್ಲಿ ಕಂಡುಬರುತ್ತವೆ.
- ವಿಶೇಷವೆಂದರೆ ಸಮುದ್ರದ ಕಡೆಗೆ ಬಾಗಿರುವ ಕೊಂಬೆಗಳಿಂದ ಬೆಳೆದಿರುವ ಬಿಳಿಲುಗಳು ಮರಗಳಿಗೆ ಆಧಾರವಾಗಿರುತ್ತವೆ. ಬಿಳಿಲುಗಳು ಸಮುದ್ರದ ನೀರಿನಲ್ಲಿ ಮುಳುಗಿರುತ್ತವೆ.
- ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ; ಸುಂದರಿ, ಬೆತ್ತ, ಜರಿಗಿಡ, ತಾಳೆ, ಕಂದಾಳೆ, ಕೇದಿಗೆ ಮುಂತಾದವು.

**16. ಪರ್ವತ ಕಾಡುಗಳಲ್ಲಿ ಅಥವಾ ಹಿಮಾಲಯಪರ್ವತಗಳಲ್ಲಿ ಕಂಡುಬರುವ ಮರಗಳಾವುವು?**

ಓಕ್, ಚೆಸ್ಟನಟ್, ಆಶ್, ಬೀಚ್, ಪೈನ್, ಸಿಡಾರ್, ಸ್ಪ್ರೂಸ್, ಫರ್ ಮತ್ತು ವಾಲ್‌ನಟ್.

**17. ಅರಣ್ಯಗಳ ವಿಧಗಳಾವುವು?**

1. ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು. 2. ಉಷ್ಣವಲಯದ ಎಲೆ ಉದುರಿಸುವ ಕಾಡುಗಳು.
3. ಕುರುಚಲು ಸಸ್ಯ ಮತ್ತು ಹುಲ್ಲುಗಾವಲು. 4. ಮರುಭೂಮಿ ಸಸ್ಯವರ್ಗ.
5. ಪರ್ವತ ಕಾಡುಗಳು. 6. ಮ್ಯಾಂಗ್ರೋವ್ ಕಾಡುಗಳು.

**18. ಇತ್ತೀಚಿನ ವರ್ಷಗಳಲ್ಲಿ ಅರಣ್ಯಗಳ ಕ್ಷೇತ್ರವು ಕಡಿಮೆಯಾಗುತ್ತಿರಲು ಕಾರಣಗಳೇನು? ಅಥವಾ ಅರಣ್ಯದ ನಾಶಕ್ಕೆ ಕಾರಣಗಳು ಯಾವುವು?**

- ಕೃಷಿ ಕ್ಷೇತ್ರದ ವಿಸ್ತರಣೆ,
- ರಸ್ತೆ ಮತ್ತು ರೈಲು ಮಾರ್ಗಗಳು ನಿರ್ಮಾಣ.
- ನೀರಾವರಿ ಯೋಜನೆಗಳ ನಿರ್ಮಾಣ,
- ಕೈಗಾರಿಕೀಕರಣ,
- ನಗರೀಕರಣ,
- ಪ್ರಾಣಿಗಳನ್ನು ಅತಿಯಾಗಿ ಮೇಯಿಸುವಿಕೆ,
- ಕಾಡ್ಗಿಚ್ಚು ಮೊದಲಾದವು.

## ಅಧ್ಯಾಯ – 6
## ಭಾರತದ ಜಲಸಂಪನ್ಮೂಲಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಸಿಂಧೂ ನದಿಯು ________ ಬಳಿ ಉಗಮವಾಗುತ್ತದೆ. **(ಕೈಲಾಸ ಪರ್ವತ)**
2. ದಕ್ಷಿಣ ಭಾರತದಲ್ಲೇ ಉದ್ದವಾದ ನದಿ ________ ಆಗಿರುತ್ತದೆ. **(ಗೋದಾವರಿ)**
3. ಹಿರಾಕುಡ್ ಅಣೆಕಟ್ಟೆಯನ್ನು ________ ನದಿಗೆ ನಿರ್ಮಿಸಲಾಗಿದೆ. **(ಮಹಾನದಿ)**
4. ಗಂಗ ನದಿಗೆ ಬಂದು ಸೇರುವ ________ ನದಿಯು ಉದ್ದವಾದ ಉಪನದಿ.**(ಯಮುನ)**
5. ಕೋಸಿ ಯೋಜನೆಯು ________ ಮತ್ತು ________ ದೇಶಗಳ ಸಂಯುಕ್ತ ಯೋಜನೆಯಾಗಿದೆ. **(ಭಾರತ ಮತ್ತು ನೇಪಾಳ)**

**II. ಕೆಳಕಂಡವುಗಳನ್ನು ಸರಿ ಹೊಂದಿಸಿ ಬರೆಯಿರಿ.**

| 'A' ಯೋಜನೆಗಳು | 'B' ರಾಜ್ಯಗಳು |
|---|---|
| 1) ನಾಗಾರ್ಜುನಸಾಗರ | ಎ) ತೆಲಂಗಾಣ |
| 2) ಭಾಕ್ರ–ನಂಗಲ್ | ಬಿ) ಹಿಮಾಚಲ ಪ್ರದೇಶ |
| 3) ಹಿರಾಕುಡ್ | ಸಿ) ಒಡಿಶಾ |
| 4) ತುಂಗಭದ್ರ | ಡಿ) ಕರ್ನಾಟಕ |

**III. ಗುಂಪುಗಳಲ್ಲಿ ಚರ್ಚಿಸಿ ಮತ್ತು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

**1. ಬ್ರಹ್ಮಪುತ್ರ ನದಿ ಕುರಿತು ವಿವರಿಸಿ.**

- ಇದು ಮಾನಸ ಸರೋವರದ ಸಮೀಪ ಚೆಮಯಂಗ್‌ಡಂಗ್ ಎಂಬಲ್ಲಿ (ಟಿಬೆಟ್) ಉಗಮವಾಗುತ್ತದೆ.
- ಆರಂಭದಲ್ಲಿ ಪೂರ್ವಾಭಿಮುಖವಾಗಿ ಹರಿದ ಅರುಣಾಚಲ ಪ್ರದೇಶದಲ್ಲಿ ಕಿರಿದಾದ ಕಂದರವೊಂದರ ಮೂಲಕ ಭಾರತವನ್ನು ಪ್ರವೇಶಿಸುತ್ತದೆ.
- ಆನಂತರ ಪಶ್ಚಿಮಕ್ಕೆ ಹರಿಯುತ್ತಾ ಬಾಂಗ್ಲಾದೇಶದಲ್ಲಿ ದಕ್ಷಿಣಕ್ಕೆ ತಿರುಗಿ ಗಂಗಾನದಿಯೊಂದಿಗೆ ಸೇರುವುದು.
- ಇದರ ಉದ್ದ 2589 ಕಿ.ಮೀ.ಗಳು

**2. ನೀರಾವರಿ ಎಂದರೇನು? ಭಾರತದ ಪ್ರಮುಖ ನೀರಾವರಿ ವಿಧಗಳನ್ನು ತಿಳಿಸಿ.**

ಕೃಷಿ ಉದ್ದೇಶಕ್ಕೆ ಕೃತಕವಾಗಿ ನೀರು ಪೂರೈಕೆ ಮಾಡುವುದನ್ನು 'ನೀರಾವರಿ' ಎಂದು ಕರೆಯಲಾಗಿದೆ.

**1) ಬಾವಿ ನೀರಾವರಿ. :–**ಬಾವಿಗಳಲ್ಲಿ ತೆರೆದ ಬಾವಿ ಮತ್ತು ಕೊಳವೆ ಬಾವಿಗಳೆಂದು ಎರಡು ವಿಧ.

**2) ಕಾಲುವೆ ನೀರಾವರಿ.:– ಕಾಲುವೆಗಳಲ್ಲಿ ಎರಡು ವಿಧ :** ಪ್ರವಾಹಕಾಲುವೆ ಮತ್ತು ಸಾರ್ವಕಾಲಿಕ ಕಾಲುವೆ.

**3. ಕೆರೆ ನೀರಾವರಿ**

**3. ಭಾರತದಲ್ಲಿ ನೀರಾವರಿ ಏಕೆ ಅತ್ಯಾವಶ್ಯಕ?**

- ಭಾರತವು ಕೃಷಿ ಪ್ರಧಾನ ದೇಶ. ಆದ್ದರಿಂದ ಕೃಷಿಗೆ ಅವಶ್ಯಕವಾದಷ್ಟು ಹಾಗೂ ನಿರಂತರವಾದ ನೀರಿನ ಸರಬರಾಜು ಅತ್ಯಗತ್ಯ.
- ಭಾರತದ ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ. ಆದರೆ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ ಆದ್ದರಿಂದ ನೀರಾವರಿ ಅತ್ಯಗತ್ಯ.
- ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ. ಉದಾ: ಭತ್ತ. ಕಬ್ಬು,
- ಜೊತೆಗೆ ಬೆಳೆಗಳ ಅಧಿಕ ಇಳುವರಿ ಮತ್ತು ಉತ್ಪಾದನೆಗಾಗಿಯೂ ನಿರಂತರ ನೀರಿನ ಪೂರೈಕೆ ಅಗತ್ಯ.
- ಇದು ನೀರಾವರಿಯಿಂದ ಮಾತ್ರ ಸಾಧ್ಯ. ಹೀಗಾಗಿ ಭಾರತಕ್ಕೆ ನೀರಾವರಿ ಸೌಲಭ್ಯ ಅತ್ಯಗತ್ಯ.

**4. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳೆಂದರೇನು? ಇವುಗಳ ಉದ್ದೇಶಗಳನ್ನು ಬರೆಯಿರಿ.**

ವಿವಿಧ ಉದ್ದೇಶಗಳನ್ನು ಪೂರೈಸುವ ನದಿ ಕಣಿವೆ ಯೋಜನೆಗಳನ್ನು ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳೆಂದು ಕರೆಯಲಾಗಿದೆ. ಈ ಯೋಜನೆಗಳ ಪ್ರಮುಖ ಉದ್ದೇಶಗಳೆಂದರೆ –

1) ನೀರಾವರಿ ಪೂರೈಕೆ. 2) ಪ್ರವಾಹಗಳ ನಿಯಂತ್ರಣ.
3) ಜಲ ವಿದ್ಯುತ್ ತಯಾರಿಕೆ. 4) ಮಣ್ಣಿನ ಸವೆತ ನಿಯಂತ್ರಣ.
5) ಒಳನಾಡಿನ ನೌಕಾಯಾನ. 6) ಒಳನಾಡಿನ ಮೀನುಗಾರಿಕೆ.
7) ಮನರಂಜನೆ ಸೌಲಭ್ಯ. 8) ಗೃಹಬಳಕೆ ಮತ್ತು ಕೈಗಾರಿಕೆಗಳಿಗೆ ನೀರು ಪೂರೈಕೆ.
9) ನಿರುಪಯುಕ್ತ ಭೂಮಿಯನ್ನು ಕೃಷಿಗಾಗಿ ಪರಿವರ್ತನೆ.
10) ಅರಣ್ಯ ಪೋಷಣೆ ಇತ್ಯಾದಿ.

**5. ಆಲಮಟ್ಟಿ ಯೋಜನೆ ಕುರಿತು ಟಿಪ್ಪಣಿ ಬರೆಯಿರಿ.**

ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿರುವ 'ಆಲಮಟ್ಟಿ' ಗ್ರಾಮದ ಬಳಿ ಆಲಮಟ್ಟಿ ಅಣೆಕಟ್ಟೆ ಮತ್ತು ಮುದ್ದೇಬಿಹಾಳ ತಾಲ್ಲೂಕಿನ ಸಿದ್ದಾಪುರ ಗ್ರಾಮದ ಸಮೀಪದಲ್ಲಿ ನಾರಾಯಣಪುರ ಅಣೆಕಟ್ಟೆಯನ್ನು ಕಟ್ಟಲಾಗಿದೆ. ಬಾಗಲಕೋಟೆ, ವಿಜಯಪುರ, ಕಲ್ಬುರಗಿ, ಯಾದಗಿರಿ ಹಾಗೂ ಬೆಳಗಾವಿ ಜಿಲ್ಲೆಯ ಕೆಲವು ಭಾಗಗಳು ಈ ಯೋಜನೆಯ ಲಾಭವನ್ನು ಪಡೆಯುತ್ತವೆ.

**6. ಬಾವಿ ನೀರಾವರಿಯ ಪ್ರಾಮುಖ್ಯತೆ ಮತ್ತು ಹಂಚಿಕೆ ಕುರಿತು ಬರೆಯಿರಿ.**

- ಇದು ಭಾರತದ ಅತಿ ಪ್ರಮುಖವಾದ ನೀರಾವರಿ ವಿಧಾನ.
- ದೇಶದ ಒಟ್ಟು ನೀರಾವರಿ ಕ್ಷೇತ್ರದಲ್ಲಿ ಶೇ. 60.7 ಭಾಗವು ಬಾವಿ ನೀರಾವರಿ ಸೌಕರ್ಯ ಹೊಂದಿದೆ.
- ಬಾವಿ ನೀರಾವರಿ ಕಡಿಮೆ ಮಳೆಯಾಗುವ ಪ್ರದೇಶದಲ್ಲಿಯೂ ಸಾಧ್ಯ. ಕಡಿಮೆ ವೆಚ್ಚದಲ್ಲಿ ಸುಲಭವಾಗಿ ಬಾವಿ ತೋಡಬಹುದು.
- ವೆಚ್ಚದಾಯಕ ತಂತ್ರಜ್ಞಾನ ಬೇಕಾಗಿಲ್ಲ.
- ಸಣ್ಣ ಭೂ ಹಿಡುವಳಿ ರೈತರಿಗೂ ಇದು ಲಭ್ಯವಾಗಬಲ್ಲದು.

ಗಂಗಾ ನದಿ ಬಯಲಿನಲ್ಲಿ ಬಾವಿ ನೀರಾವರಿಯು ವ್ಯಾಪಕವಾಗಿ ರೂಢಿಯಲ್ಲಿದೆ. ಅದರಲ್ಲಿ ಪಂಜಾಬ್. ಹರಿಯಾಣ, ಉತ್ತರ ಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಸೇರುತ್ತವೆ. ದಕ್ಷಿಣ ಭಾರತದಲ್ಲಿ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಮತ್ತು ಒಡಿಶಾ ರಾಜ್ಯಗಳಲ್ಲಿ ಬಾವಿ ನೀರಾವರಿ ಹೆಚ್ಚು ರೂಢಿಯಲ್ಲಿದೆ.

**7. ಉತ್ತರ ಭಾರತದ ನದಿಗಳು ಅಥವಾ ಹಿಮಾಲಯದ ನದಿಗಳನ್ನು ಪಟ್ಟಿಮಾಡಿ.**

- ಸಿಂಧೂನದಿ:– **ಉಪನದಿಗಳೆಂದರೆ**–ಝೀಲಂ, ಚೀನಾಬ್, ಬಿಯಾಸ್. ರಾವಿ ಮತ್ತು ಸಟ್ಲೇಜ್.
- ಗಂಗ ನದಿ:–ಉಪನದಿಗಳೆಂದರೆ–ಯಮುನ, ಘಾಗ್ರ, ಗಂಡಕ್, ರಾಮಗಂಗ, ಗೋಮತಿ, ಶಾರದ, ಸೋನೆ ಮತ್ತು ಕೋಸಿ.
- ಬ್ರಹ್ಮಪುತ್ರನದಿ.

**8. ಜಲಸಂಪನ್ಮೂಲಗಳ ಪ್ರಾಮುಖ್ಯತೆಗಳನ್ನು ಬರೆಯಿರಿ.**

- ನೀರು ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದು. ನೀರಿಲ್ಲದೆ ಸುಸ್ಥಿರ ಜೀವನ ಸಾಧ್ಯವಿಲ್ಲ.
- ಮಾನವನಿಗೆ ಕುಡಿಯಲು, ಅಡಿಗೆ, ಸ್ವಚ್ಛತೆ, ವ್ಯವಸಾಯ, ವಿದ್ಯುಚ್ಛಕ್ತಿ ತಯಾರಿಕೆ, ಕೈಗಾರಿಕೆ, ನೌಕಾಯಾನ, ಮೀನುಗಾರಿಕೆ
- ಮೊದಲಾದ ಉದ್ದೇಶಗಳಿಗೆ ನೀರು ಅವಶ್ಯಕ.

**9. ದಕ್ಷಿಣ ಭಾರತದ ನದಿಗಳನ್ನು ಪಟ್ಟಿಮಾಡಿ.**

ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ನರ್ಮದಾ, ತಾಪಿ ಮತ್ತು ಅವುಗಳ ಉಪನದಿಗಳಾದ ಭೀಮ, ತುಂಗಭದ್ರ, ಕೊಯ್ನಾ, ಘಟಪ್ರಭ ಮತ್ತು ಮಲಪ್ರಭ. ಹೇಮಾವತಿ, ಶಿಂಶಾ, ಕಬಿನಿ, ಅರ್ಕಾವತಿ, ಲಕ್ಷ್ಮಣತೀರ್ಥ, ಸುವರ್ಣಾವತಿ ಮತ್ತು ಭವಾನಿ,ಸಬರ್ಮತಿ, ಮಾಂಡೋವಿ, ಜುವಾರಿ, ಬೆಡ್ತಿ, ಶರಾವತಿ, ಕಾಳಿ, ನೇತ್ರಾವತಿ ಮತ್ತು ಪೆರಿಯಾರ್.

**10. ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆಗಳನ್ನು ಪಟ್ಟಿಮಾಡಿ.**

1. ದಾಮೋದರ ನದಿ ಕಣಿವೆ ಯೋಜನೆ
2. ಭಾಕ್ರ– ನಂಗಲ್ ನದಿ ಕಣಿವೆ ಯೋಜನೆ
3. ಹಿರಾಕುಡ್ ಯೋಜನೆ
4. ತುಂಗಭದ್ರ ಯೋಜನೆ
5. ಕೃಷ್ಣ ಮೇಲ್ದಂಡೆಯ ಯೋಜನೆ
6. ಕೋಸಿ ಯೋಜನೆ
7. ರಿಹಾಂದ್ ಯೋಜನೆ
8. ನಾಗಾರ್ಜುನ ಸಾಗರ ಯೋಜನೆ.

# ಅಧ್ಯಾಯ–7
## ಭಾರತದ ಭೂ ಸಂಪನ್ಮೂಲಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಸಾಗುವಳಿಗೆ ಬಳಕೆಯಾಗದ ಭೂಮಿಯನ್ನು ________ ಎಂದು ಕರೆಯಲಾಗಿದೆ.
2. ಬೆಳೆ ಮತ್ತು ಪಶುಪಾಲನೆಗಳೆರಡನ್ನೂ ಒಳಗೊಂಡ ಕೃಷಿ ಪದ್ಧತಿಗೆ ________ ಎಂದು ಕರೆಯಲಾಗಿದೆ.
3. ಮುಂಗಾರು ಮತ್ತು ಹಿಂಗಾರು ಬೆಳೆ ಬೆಳೆಯುವ ಅವಧಿಗಳ ನಡುವಣ ಅವಧಿಯಲ್ಲಿ ಬೆಳೆಯುವ ಬೆಳೆಗಳಿಗೆ ________ ಎನ್ನುವರು.
4. ಭಾರತದಲ್ಲಿ ________ ರಾಜ್ಯವು ಅತಿ ಹೆಚ್ಚು ಭತ್ತ ಉತ್ಪಾದಿಸುತ್ತದೆ.

**II. ಗುಂಪುಗಳಲ್ಲಿ ಚರ್ಚಿಸಿದ ನಂತರ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

**1. ಭೂ ಬಳಕೆ ಎಂದರೇನು?**

ಅರಣ್ಯ, ವ್ಯವಸಾಯ, ಹುಲ್ಲುಗಾವಲು ಇತ್ಯಾದಿಗಳಂತಹ ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಬಳಕೆ ಮಾಡುವುದನ್ನು 'ಭೂಬಳಕೆ' ಎನ್ನುವರು.

**2. ನೆಡುತೋಪು ಬೇಸಾಯವೆಂದರೇನು? ಉದಾಹರಣೆ ಕೊಡಿ.**

ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಯಾವುದಾದರೂ ಒಂದು ಬೆಳೆಯ ಸಾಗುವಳಿಗೆ 'ನೆಡುತೋಪು ಬೇಸಾಯ' ಎನ್ನುವರು. ಚಹ, ಕಾಫಿ, ರಬ್ಬರ್ ಮತ್ತು ತೆಂಗು

**3. ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ವ್ಯತ್ಯಾಸ ತಿಳಿಸಿ.**

| ಮುಂಗಾರು ಬೆಳೆ | ಹಿಂಗಾರು ಬೆಳೆ |
|---|---|
| • ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು. | • ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ಬೆಳೆ ಕಟಾವು ಮಾಡುವುದನ್ನು 'ಹಿಂಗಾರು ಬೆಳೆ ಋತು' ಎನ್ನುವರು. |
| • ಈ ಋತುವಿನಲ್ಲಿ ನೈಋತ್ಯ ಮಾನ್ಸೂನ್ ಮಳೆಗಾಲದ ಆರಂಭದೊಂದಿಗೆ, ಅಂದರೆ ಜೂನ್–ಜುಲೈ ತಿಂಗಳಲ್ಲಿ ಬಿತ್ತನೆ ಮಾಡಲಾಗುವುದು | • ಹಿಂಗಾರು ಮಳೆಗಾಲವೆಂದು ಕರೆಯುವ ಈಶಾನ್ಯ ಮಾನ್ಸೂನ್ ಆರಂಭದಲ್ಲಿ, ಅಂದರೆ ಅಕ್ಟೋಬರ್–ನವೆಂಬರ್‌ಗಳಲ್ಲಿ ಬಿತ್ತನೆ ಮಾಡಲಾಗುವುದು. |
| • ಈ ಅವಧಿಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ– ಭತ್ತ, ರಾಗಿ, ಜೋಳ, ಹತ್ತಿ, ನೆಲಕಡಲೆ, ತಂಬಾಕು ಇತ್ಯಾದಿ. | • ಈ ಅವಧಿಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ– ಗೋಧಿ, ಬಾರ್ಲಿ, ಕಡಲೆ, ನಾರಗಸೆ, ಇತ್ಯಾದಿ. |

**4. ಕಬ್ಬು ಬೇಸಾಯಕ್ಕೆ ಬೇಕಾಗುವ ಪರಿಸ್ಥಿತಿಗಳು ಯಾವುವು?**

- ಕಬ್ಬು ವಾರ್ಷಿಕ ಬೆಳೆ. ಹೀಗಾಗಿ ಇದರ ಬೇಸಾಯಕ್ಕೆ ನೀರಾವರಿ ಅಗತ್ಯ.
- ಇದಕ್ಕೆ ಅಧಿಕ ಉಷ್ಣಾಂಶ $21^\circ$ ರಿಂದ $26^\circ$ ಸೆ ಮತ್ತು ಅಧಿಕ ಮಳೆ 100 ರಿಂದ 150 ಸೆಂಮೀ ಅವಶ್ಯಕ.
- ಕಬ್ಬು ಬೆಳೆಗೆ ಮೆಕ್ಕಲು ಮತ್ತು ಜೇಡಿ ಮಿಶ್ರಿತ ಮರಳು ಮಣ್ಣುಗಳು ಸೂಕ್ತವಾದವು.

**5. ಪಾನೀಯ ಬೆಳೆಗಳೆಂದರೇನು? ಉದಾಹರಣೆ ಕೊಡಿ.**

ಆಹ್ಲಾದಕರ ಪಾನೀಯಗಳ ತಯಾರಿಕೆಗೆ ಉಪಯುಕ್ತವಾಗುವ ಬೆಳೆಗಳಿಗೆ ಪಾನೀಯ ಬೆಳೆಗಳೆಂದು ಹೆಸರು.
ಉದಾಹರಣೆ:–ಕಾಫಿ ಮತ್ತು ಚಹ

**6. ಪುಷ್ಪ ಕೃಷಿ ಎಂದರೇನು?ಉದಾಹರಣೆ ಕೊಡಿ.**

ಮಾರಾಟಕ್ಕಾಗಿ ಹೂವುಗಳನ್ನು ಸಾಗುವಳಿ ಮಾಡುವ ಕಲೆಗೆ 'ಪುಷ್ಪ ಕೃಷಿ' ಎನ್ನುವರು. ಉದಾ: ಮಲ್ಲಿಗೆ, ಚೆಂಡುಮಲ್ಲಿಗೆ, ಸೇವಂತಿಗೆ, ಕನಕಾಂಬರ, ಸಂಪಿಗೆ ಇತ್ಯಾದಿ.

**7. ಭಾರತದಲ್ಲಿ ತೋಟಗಾರಿಕೆಯ ಮಹತ್ವ ಕುರಿತು ವಿವರಿಸಿ.**

ಸಮರ್ಪಕ ಭೂಬಳಕೆ, ನೈಸರ್ಗಿಕ ಸಂಪನ್ಮೂಲಗಳ ಆದರ್ಶದಾಯಕ ಬಳಕೆ ಮತ್ತು ಗ್ರಾಮೀಣ ಸಮುದಾಯಕ್ಕೆ ಪರಿಣಿತ ಉದ್ಯೋಗ ಪೂರೈಕೆ ಮಾಡುವುದರೊಂದಿಗೆ ತೋಟಗಾರಿಕೆಯು ಭಾರತದ ಕೃಷಿಯನ್ನು ಹೆಚ್ಚು ಲಾಭದಾಯಕಗೊಳಿಸಲು ಉತ್ತೇಜನ ನೀಡುತ್ತದೆ. ಇದು ರಫ್ತು ವ್ಯಾಪಾರವನ್ನು ವೃದ್ಧಿಸುತ್ತದೆ ಮತ್ತು ಆಹಾರ ಭದ್ರತೆಗೆ ನೆರವಾಗುತ್ತದೆ.

**8. ಹತ್ತಿ ಬೇಸಾಯಕ್ಕೆ ಬೇಕಾಗುವ ಪರಿಸ್ಥಿತಿಗಳು ಯಾವುವು?**

- ➢ ಇದು ಉಷ್ಣವಲಯ ಮತ್ತು ಉಪ ಉಷ್ಣವಲಯದ ಬೆಳೆ.
- ➢ ಇದರ ಬೇಸಾಯಕ್ಕೆ $21^0$ ರಿಂದ $24^0$ ಸೆ. ಉಷ್ಣಾಂಶ ಮತ್ತು 50 ರಿಂದ 100 ಸೆಂ. ಮೀ. ವಾರ್ಷಿಕ ಮಳೆ ಬೇಕು.
- ➢ ಕಪ್ಪು ಮಣ್ಣು ಬಹಳ ಸೂಕ್ತವಾದುದು.
- ➢ ಹತ್ತಿಯನ್ನು ಭಾರತದಲ್ಲಿ ಮುಂಗಾರು ಬೆಳೆಯಾಗಿ ಬೆಳೆಯಲಾಗುವುದು.

**9. ಭಾರತದಲ್ಲಿ ಹತ್ತಿ ಬೆಳೆಯುವ ಪ್ರದೇಶಗಳು ಯಾವುವು?**

ಭಾರತದಲ್ಲಿ ಹತ್ತಿಯನ್ನು ಹೆಚ್ಚಾಗಿ ಗುಜರಾತ್. ಮಹಾರಾಷ್ಟ್ರ, ಆಂಧ್ರಪ್ರದೇಶ, ಹರಿಯಾಣ, ಮಧ್ಯ ಪ್ರದೇಶ, ಪಂಜಾಬ್, ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಉತ್ಪಾದಿಸಲಾಗುವುದು.

10. **ವ್ಯವಸಾಯ ಎಂದರೇನು? ವ್ಯವಸಾಯದ ವಿಧಗಳನ್ನು ತಿಳಿಸಿ.**

ಮನುಷ್ಯ ತನಗೆ ಅಗತ್ಯವಾದ ಆಹಾರ ಧಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸುವ ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದನ್ನು "ವ್ಯವಸಾಯ ಅಥವಾ ಕೃಷಿ" ಎನ್ನುವರು.

1. **ಜೀವನಾಧಾರಿತ ಬೇಸಾಯ:–** i) ವರ್ಗಾವಣೆ ಬೇಸಾಯ ಮತ್ತು ii) ಸ್ಥಿರ ಬೇಸಾಯ.
2. **ಸಾಂದ್ರ ಬೇಸಾಯ.**
3. **ವಾಣಿಜ್ಯ ಬೇಸಾಯ.**
5. **ನೆಡುತೋಪು ಬೇಸಾಯ.**
4. **ಮಿಶ್ರಣ ಬೇಸಾಯ.**
6. **ಒಣ ಬೇಸಾಯ.**
7. **ಆರ್ದ್ರ ಬೇಸಾಯ.**
8. **ನೀರಾವರಿ ಬೇಸಾಯ.**

11. **ಭತ್ತದ ಬೇಸಾಯಕ್ಕೆ ಬೇಕಾಗುವ ಪರಿಸ್ಥಿತಿಗಳು ಯಾವುವು?**

- ಭತ್ತವು ಉಷ್ಣವಲಯದ ಬೆಳೆ. ಹೀಗಾಗಿ ಈ ಬೆಳೆಗೆ $18^0$ ರಿಂದ $25^0$ ಸೆ. ಅಧಿಕ ಉಷ್ಣಾಂಶ ಬೇಕು.
- 100– 200 ಸೆಂ.ಮೀ. ಅಧಿಕ ಮಳೆ ಅಗತ್ಯ.
- ಮೆಕ್ಕಲು, ಜೇಡಿ ಮತ್ತು ಜೇಡಿ ಮಿಶ್ರಿತ ಮರಳು ಮಣ್ಣು ಈ ಬೆಳೆಗೆ ಬಹು ಸೂಕ್ತ.
- ಭತ್ತದ ಗಿಡದ ತಳದಲ್ಲಿ ನೀರು ನಿಂತಿರಬೇಕು. ಹೀಗಾಗಿ ಭೂಮಿ ಸಮತಟ್ಟಾಗಿರಬೇಕು.
- ಕಡಿಮೆ ಮಳೆ ಬೀಳುವ ಕಡೆ ನೀರಾವರಿ ಅತ್ಯಾವಶ್ಯಕ.

12. **ಯಾವುದೇ ಒಂದು ಪ್ರದೇಶದ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗಲು ಕಾರಣವೇನು?**

ಮೇಲ್ಮೈ ಲಕ್ಷಣ, ಮಣ್ಣು, ವಾಯುಗುಣ, ಭೂಹಿಡುವಳಿಯ ಗಾತ್ರ, ನೀರಿನ ಪೂರೈಕೆ, ರೈತರ ಆರ್ಥಿಕ ಪರಿಸ್ಥಿತಿ, ತಂತ್ರಜ್ಞಾನ ಇತ್ಯಾದಿ.

13. **ವ್ಯವಸಾಯದ ಪ್ರಾಮುಖ್ಯತೆಯನ್ನು ಬರೆಯಿರಿ.**

- ಭಾರತದಲ್ಲಿ ಕೃಷಿಯು ಜೀವನಾಧಾರಿತ ಪ್ರಮುಖ ಮೂಲವಾಗಿದೆ.
- ಜನರು ಮತ್ತು ಜಾನುವಾರುಗಳಿಗೆ ಅಗತ್ಯವಾದ ಆಹಾರವನ್ನು ಪೂರೈಸುವ ವೃತ್ತಿ.
- ರಾಷ್ಟ್ರೀಯ ಆದಾಯದ ಮೂಲ ಆಕರವಾಗಿದೆ.
- ದೇಶದ ತೃತೀಯ ವೃತ್ತಿಗಳಾದ ಸಾರಿಗೆ, ವ್ಯಾಪಾರ, ಬ್ಯಾಂಕಿಂಗ್, ವಿಮೆ, ರಫ್ತು ಮುಂತಾದವುಗಳಿಗೆ ನೆರವಾಗುತ್ತದೆ.
- ಇದು ಹಲವು ಕೈಗಾರಿಕೆಗಳ ಪ್ರಗತಿಗೂ ನೆರವಾಗುವುದು. ಉದಾ: ಹತ್ತಿ ಮತ್ತು ಸೆಣಬು ಜವಳಿ, ಸಕ್ಕರೆ ಕೈಗಾರಿಕೆ ಇತ್ಯಾದಿ.
- ದೇಶದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯ ಮೇಲೂ ಪ್ರಭಾವ ಬೀರುತ್ತದೆ.

# ಅರ್ಥಶಾಸ್ತ್ರ

## ಅಧ್ಯಾಯ – 1

## ಅಭಿವೃದ್ಧಿ

**I. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಆರ್ಥಿಕ ಅಭಿವೃದ್ಧಿಯು ಒಂದು ___________**(ಪ್ರಕ್ರಿಯೆ)**
2. ಒಂದು ವರ್ಷದಲ್ಲಿ ಉತ್ಪಾದಿಸಿದ ಸರಕು–ಸೇವೆಗಳ ಮೌಲ್ಯವನ್ನು ___________ ಎನ್ನುವರು. **(ರಾಷ್ಟ್ರೀಯ ವರಮಾನ)**
3. ಅನಾಭಿವೃದ್ಧಿ ರಾಷ್ಟ್ರದಲ್ಲಿ ಪ್ರಮುಖವಾಗಿ ________ ಕಡಿಮೆ ಇರುವುದು. **(ತಲಾವರಮಾನ)**
4. ಮಾನವ ಅಭಿವೃದ್ಧಿಯು _________ ಗಳ ವಿಸ್ತರಣೆಯನ್ನು ಸೂಚಿಸುತ್ತದೆ. **(ಕನಿಷ್ಠ ಅವಶ್ಯಕತೆ)**
5. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ ________**(ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ)**
6. 2014ರಲ್ಲಿ ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ _______ ನೆಯ ಸ್ಥಾನ ಹೊಂದಿತ್ತು. **(135)**
7. 2011ನೇ ಸಾಲಿನಲ್ಲಿ ಭಾರತದಲ್ಲಿ ಲಿಂಗ ಅನುಪಾತವು ________ ಇತ್ತು. **(945)**

**II. ಈ ಕೆಳಗಿನವುಗಳನ್ನು ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.**

1. **ಅಭಿವೃದ್ಧಿಯನ್ನು ವ್ಯಾಖ್ಯಾನಿಸಿ ಮತ್ತು ಅಭಿವೃದ್ಧಿ ಪ್ರಕ್ರಿಯೆಯ ವಿವರಣೆ ನೀಡಿ.**

- ಯಾವುದೇ ಒಂದು ಕ್ಷೇತ್ರ ಇಲ್ಲವೇ ವ್ಯಕ್ತಿಗಳ ಪ್ರಗತಿಯನ್ನು ಸೂಚಿಸಲು ನಾವು ಸಾಮಾನ್ಯವಾಗಿ 'ಅಭಿವೃದ್ಧಿ' ಪದವನ್ನು ಬಳಸುತ್ತೇವೆ
- ಇಲ್ಲಿ ಪ್ರಕ್ರಿಯೆ ಎಂಬ ಪದವು ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ.
- ಉತ್ಪಾದನಾಂಗಗಳ ಪೂರೈಕೆಯು ಹೊಸ ಸಂಪನ್ಮೂಲಗಳ ಶೋಧ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಬಂಡವಾಳ ಸಂಚಯನ, ಜನಸಂಖ್ಯಾ ಬೆಳವಣಿಗೆ, ಉತ್ತಮ ತಾಂತ್ರಿಕತೆಯ ಕಾರಣಗಳಿಂದಾಗಿ ಬದಲಾವಣೆಯಾಗುತ್ತವೆ.

- ಅದೇ ರೀತಿ ಜನಸಂಖ್ಯೆಯ ಬೆಳವಣಿಗೆ ಮತ್ತು ಅದರ ಲಕ್ಷಣಗಳ ಬದಲಾವಣೆ, ವರಮಾನದ ಮಟ್ಟ ಹಾಗೂ ಅದರ ಹಂಚಿಕೆಯಲ್ಲಿನ ಬದಲಾವಣೆ.

**2. ಅನಾಭಿವೃದ್ಧಿ ಎಂದರೇನು? ಅದಕ್ಕೆ ಕಾರಣಗಳೇನು?**

'ಅನಾಭಿವೃದ್ಧಿ' ಎಂಬ ಶಬ್ದವು ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲಸ್ಥಿತಿಯನ್ನು ಸೂಚಿಸುತ್ತದೆ.

- ಅನಾಭಿವೃದ್ಧಿಗೆ ಕಾರಣಗಳು:
- ಕಡಿಮೆ ವರಮಾನ
- ಬಡತನ
- ನಿರುದ್ಯೋಗ
- ಅಸಮಾನತೆ
- ಸಂಪನ್ಮೂಲಗಳ ಸಮರ್ಪಕ ಸದ್ಬಳಕೆ ಇಲ್ಲದಿರುವುದು

**3. ಮಾನವ ಅಭಿವೃದ್ಧಿ ಸೂಚ್ಯಂಕ ಎಂದರೇನು? ಅದನ್ನು ಹೇಗೆ ಲೆಕ್ಕ ಹಾಕುತ್ತೀರಿ?**

ವ್ಯಕ್ತಿಗಳ ಜೀವಿತಾವಧಿ, ಸಾಕ್ಷರತೆಯ ಪ್ರಮಾಣ ಮತ್ತು ತಲಾ ವರಮಾನ ಇವುಗಳ ಸರಾಸರಿಯನ್ನು ಮಾನವ ಅಭಿವೃದ್ಧಿ ಸೂಚಿಗಳು ಎನ್ನುವರು.

ಆರೋಗ್ಯವನ್ನು ವ್ಯಕ್ತಿಗಳ ಜೀವಿತಾವಧಿ, ಶಿಕ್ಷಣವನ್ನು ಸಾಕ್ಷರತೆಯ ಪ್ರಮಾಣ, ಹಾಗೂ ಖರೀದಿ ಶಕ್ತಿಯನ್ನು ತಲಾ ವರಮಾನ ಬಳಸಿ ಅಳೆಯಲಾಗುತ್ತಿದೆ.

**4. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ.**

- ಆಹಾರದ ಕೊರತೆ.
- ವಸತಿಯ ಕೊರತೆ.
- ಬಟ್ಟೆಯ ಕೊರತೆ.
- ಶಿಕ್ಷಣದ ಕೊರತೆ.
- ಆರೋಗ್ಯದ ಕೊರತೆ.
- ಸಾಮಾಜಿಕ ಭದ್ರತೆಯ ಕೊರತೆ.
- ಶುದ್ಧ ಕುಡಿಯುವ ನೀರಿನ ಕೊರತೆ.
- ಶುದ್ಧ ಗಾಳಿಯ ಕೊರತೆ.
- ಸ್ವಚ್ಛ ಪರಿಸರದ ಕೊರತೆ.

**5. ಲಿಂಗ ಸಮಾನತೆಯನ್ನು ಹೇಗೆ ಸಾಧಿಸುವುದು?**

- ಮಹಿಳೆಯರ ಸಬಲೀಕರಣ.
- ಮಹಿಳೆಯರ ವಿರುದ್ಧದ ಹಿಂಸೆಯನ್ನು ತಡೆಗಟ್ಟುವುದು.
- ಸಮಾನ ವೇತನ.
- ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿ.

**6. ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಸಮರ್ಥಿಸಿ.**

- ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.
- ಒಂದು ಸ್ವಸಹಾಯ ಸಮೂಹವು 20 ಸಮಾನ ಮನಸ್ಕ ಮಹಿಳೆಯರ ಒಂದು ಸಂಘವಾಗಿದ್ದು, ಸದಸ್ಯರು ತಮ್ಮಲ್ಲಿರುವ ಅಲ್ಪ ಪ್ರಮಾಣದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಬಾಹ್ಯ ಸಹಾಯವನ್ನು ಪಡೆದು, ವ್ಯವಹಾರ ಆರಂಭಿಸಿ, ವರಮಾನ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆ.
- ಲೆಕ್ಕ ನಿರ್ವಹಣೆ, ಬ್ಯಾಂಕಿನ ಜೊತೆ ವ್ಯವಹರಿಸುವುದಲ್ಲದೇ ವರಮಾನ ಸೃಷ್ಟಿಸುವಂಥ ಉದ್ಯೋಗಗಳ ಕುರಿತು ಅವರಿಗೆ ತರಬೇತಿಯನ್ನೂ ನೀಡಲಾಗುತ್ತದೆ.
- ಸ್ವಸಹಾಯ ಸಮೂಹಗಳು ಮಹಿಳೆಯರ ವರಮಾನ ಹಾಗೂ ಉಳಿತಾಯಗಳ ವೃದ್ಧಿಗೆ ಕಾರಣವಾಗಿವೆಯಲ್ಲದೇ, ಅವರು ತಮ್ಮ ಇಚ್ಛಾನುಸಾರ ಖರ್ಚು ಮಾಡುವುದಕ್ಕೂ ಅನುವು ಮಾಡಿಕೊಟ್ಟಿವೆ.
- ಇದರಿಂದಾಗಿ ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ.

**7. ತಲಾವರಮಾನವು ಅಭಿವೃದ್ಧಿಯ ನೈಜಮಾಪಕವಲ್ಲ.ಏಕೆ?**

ತಲಾ ವರಮಾನವು ಒಂದು ಬಹು ಜನಪ್ರಿಯ ಮಾನದಂಡವಾಗಿದ್ದರೂ ಅದು ಜನರ ನಡುವಿನ ವರಮಾನ ಹಂಚಿಕೆಯನ್ನು ಅದು ತೋರಿಸುವುದಿಲ್ಲ. ಅಲ್ಲದೇ ಅದು ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ.

**8. ಇಂದು ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ.ಏಕೆ?**

ಸ್ವಸಹಾಯ ಸಮೂಹಗಳು ಮಹಿಳೆಯರ ವರಮಾನ ಹಾಗೂ ಉಳಿತಾಯಗಳ ವೃದ್ಧಿಗೆ ಕಾರಣವಾಗಿವೆಯಲ್ಲದೇ, ಅವರು ತಮ್ಮ ಇಚ್ಛಾನುಸಾರ ಖರ್ಚು ಮಾಡುವುದಕ್ಕೂ ಅನುವು ಮಾಡಿಕೊಟ್ಟಿವೆ. ಇದರಿಂದಾಗಿ ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ.

**9. ಸ್ವಸಹಾಯ ಸಮೂಹಗಳನ್ನು ಏಕೆ ಸ್ಥಾಪಿಸಲಾಗಿದೆ?**

ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.

**10. ಸಂಯುಕ್ತ ರಾಷ್ಟ್ರದ ಪ್ರಕಾರ ಅನಾಭಿವೃದ್ಧಿ ರಾಷ್ಟ್ರಗಳು ಎಂದರೇನು?**

ಸಂಯುಕ್ತ ರಾಷ್ಟ್ರದ ಪ್ರಕಾರ ,ಅಮೇರಿಕ, ಕೆನಡಾ, ಆಸ್ಟ್ರೇಲಿಯ ಮತ್ತು ಪಶ್ಚಿಮ ಯುರೋಪ್‌ನ ರಾಷ್ಟ್ರಗಳಿಗಿಂತ ಕಡಿಮೆ ನೈಜ ತಲಾ ವರಮಾನ ಹೊಂದಿರುವ ರಾಷ್ಟ್ರಗಳೆ ಅನಾಭಿವೃದ್ಧಿ ರಾಷ್ಟ್ರಗಳು.

**11. ಪ್ರೊ. ಮೆಯರ್ ಮತ್ತು ಬಾಲ್ಡವಿನ್ ಅವರು ಆರ್ಥಿಕ ಅಭಿವೃದ್ಧಿಯನ್ನು ಹೇಗೆ ವ್ಯಾಖ್ಯಾನಿಸಿದ್ದಾರೆ? ಅವರ ವ್ಯಾಖ್ಯಾನ ಯಾವ ಅಂಶಗಳ ಬಗ್ಗೆ ಹೇಳುತ್ತದೆ?**

"ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ"ಯಾಗಿದೆ. ಈ ವ್ಯಾಖ್ಯಾನವು ಆರ್ಥಿಕ ಅಭಿವೃದ್ಧಿಯ ಮೂರು ಅಂಶಗಳನ್ನು ಒತ್ತಿ ಹೇಳುತ್ತದೆ. ಅವೆಂದರೆ, ಆರ್ಥಿಕ ಅಭಿವೃದ್ಧಿಯು 1. ಒಂದು ಪ್ರಕ್ರಿಯೆ; 2. ನೈಜ ರಾಷ್ಟ್ರೀಯ ವರಮಾನದ ಹೆಚ್ಚಳ; ಮತ್ತು 3. ದೀರ್ಘಾವಧಿ ಹೆಚ್ಚಳ.

**12. ತಲಾ ವರಮಾನವನ್ನು ಹೇಗೆ ಕಂಡು ಹಿಡಿಯಲಾಗುತ್ತದೆ?**

ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸುವುದರ ಮೂಲಕ ತಲಾ ವರಮಾನವನ್ನು ಕಂಡು ಹಿಡಿಯಲಾಗುತ್ತದೆ.

## ಅಧ್ಯಾಯ – 2

## ಗ್ರಾಮೀಣ ಅಭಿವೃದ್ಧಿ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು **ರಾಷ್ಟ್ರಪಿತ ಮಹಾತ್ಮ ಗಾಂಧಿಜಿ.**
2. ಸಂವಿಧಾನದ 73 ನೆಯ ತಿದ್ದುಪಡಿಯ ಪ್ರಕಾರ ಭಾರತದಲ್ಲಿ **ಮೂರು** ಹಂತದ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ.
3. ಪಂಚಾಯತ್ ಸಂಸ್ಥೆಗಳು **ವಿಕೇಂದ್ರೀಕರಣ** ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.
4. ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು **ಮಹಿಳಾ ಸ್ವ ಸಹಾಯ ಸಂಘ** ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.**

ಗ್ರಾಮೀಣ ಜನರ ಜೀವನದ ಗುಣಮಟ್ಟವನ್ನು ಉತ್ತಮಪಡಿಸುವ ಗ್ರಾಮ ಪ್ರದೇಶಗಳ ಏಳ್ಗೆಯನ್ನು ಗ್ರಾಮೀಣ ಅಭಿವೃದ್ಧಿಯೆಂದು ಕರೆಯಬಹುದು.

**2. ವಿಕೇಂದ್ರೀಕರಣ ಎಂದರೇನು?**

ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುತ್ತೇವೆ.

**3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.**

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ

**4. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.**

'ಪ್ರಧಾನ ಮಂತ್ರಿ ಆವಾಸ್ ಯೋಜನೆ', 'ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ', 'ಆಶ್ರಯ ಯೋಜನೆ'

**5. ಗ್ರಾಮೀಣ ಹಿಂದುಳಿಯುವಿಕೆಗೆ ಅತ್ಯಂತ ಪ್ರಮುಖ ಕಾರಣವೇನು?**

ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆಯು ಗ್ರಾಮೀಣ ಹಿಂದುಳಿಯುವಿಕೆಗೆ ಅತ್ಯಂತ ಪ್ರಮುಖ ಕಾರಣವಾಗಿದೆ.

**6. ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಯಾವುದನ್ನು ಕರೆದರು?**

ತಳಮಟ್ಟದಿಂದ ಯೋಜನೆ ನಿರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯೂ ಇದಾಗಿದೆ. ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.

**7. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಏಕೆ ಪುನರುಜ್ಜೀವನ ಮಾಡಲಾಗಿದೆ?**

ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುವುದಕ್ಕಾಗಿ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಪುನರುಜ್ಜೀವನ ಮಾಡಲಾಗಿದೆ

**8. ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಯಾವಾಗ ಅಸ್ಥಿತ್ವಕ್ಕೆ ಬಂದವು?**

1993

**9. ಸಂವಿಧಾನದ ಯಾವ ತಿದ್ದುಪಡಿ ಕಾಯ್ದೆಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲಾಯಿತು?**

ಸಂವಿಧಾನದ 73ನೆಯ ತಿದ್ದುಪಡಿ ಕಾಯ್ದೆಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲಾಯಿತು.

**10. ಕರ್ನಾಟಕದಲ್ಲಿ ಎಷ್ಟು ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳಿವೆ?**

ಕರ್ನಾಟಕದಲ್ಲಿ 30 ಜಿಲ್ಲಾ ಪಂಚಾಯತಿಗಳು, 176 ತಾಲ್ಲೂಕು ಪಂಚಾಯತಿಗಳು ಮತ್ತು 6,022 ಗ್ರಾಮ ಪಂಚಾಯತಿಗಳಿವೆ.

**11. 2011ರ ಜನಗಣತಿಯ ಪ್ರಕಾರ ಎಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ?**

2011ರ ಜನಗಣತಿಯ ಪ್ರಕಾರ ಲೇ.68.84ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ.

**III. ಕೆಳಗಿನ ಪ್ರಶ್ನೆಗಳಿಗೆ ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.**

**1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?**

- ಬಹುತೇಕ ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ.
- ಸುಮಾರು ಶೇ. 60ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದು, ರಾಷ್ಟ್ರೀಯ ವರಮಾನಕ್ಕೆ ಈ ವಲಯದ ಕೊಡುಗೆ ಬಹಳ ಕಡಿಮೆಯಿದ್ದು, ಅದು ನಿರಂತರವಾಗಿ ಇಳಿಕೆಯಾಗುತ್ತಿದೆ.
- ಇದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚುತ್ತಿದೆ.

**2. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.**

- ಗ್ರಾಮೀಣ ಅಭಿವೃದ್ಧಿಯು ಕೃಷಿ ಹಾಗೂ ಕೃಷಿಯೇತರ ವಲಯಗಳ ಅಭಿವೃದ್ಧಿಯನ್ನು ಒಳಗೊಂಡಿರುವುದರಿಂದ, ಅದರಿಂದಾಗಿ ಒಟ್ಟಾರೆ ರಾಷ್ಟ್ರದ ಅಭಿವೃದ್ಧಿಯಾಗುತ್ತದೆ.
- ಅಧಿಕ ಕೃಷಿ ವರಮಾನದ ಪರಿಣಾಮವಾಗಿ, ಔದ್ಯಮಿಕ ಸರಕು-ಸೇವೆಗಳಿಗೆ ಬೇಡಿಕೆ ಹೆಚ್ಚಾಗುತ್ತದೆ, ತನ್ಮೂಲಕ ಅಧಿಕ ಉದ್ಯೋಗ ಸೃಷ್ಟಿಯಾಗಿ ಆ ಚಟುವಟಿಕೆಗಳು ಸಹ ವಿಸ್ತಾರ ಹೊಂದುತ್ತವೆ.
- ಅಧಿಕ ಶಿಕ್ಷಣ ಮತ್ತು ಕೌಶಲಗಳಿಂದಾಗಿ ಹೆಚ್ಚಿನ ಉತ್ಪಾದಕತೆಯನ್ನು ಸಾಧಿಸಬಹುದು.
- ಉತ್ತಮ ಆರೋಗ್ಯದಿಂದ ಜನರ ಕೆಲಸದ ಸಹಭಾಗಿತ್ವದ ಪ್ರಮಾಣ ಹೆಚ್ಚಾಗಿ, ರಾಷ್ಟ್ರೀಯ ಉತ್ಪನ್ನ ಹೆಚ್ಚಾಗುತ್ತದೆ.
- ಕೃಷಿ ಸಂಸ್ಕರಣೆ, ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಿ ಒಟ್ಟಾರೆ ಗ್ರಾಮೀಣ ಪರಿವರ್ತನೆಗೆ ನಾಂದಿಯಾಗುತ್ತದೆ.
- ಇವೆಲ್ಲವೂ ಬಡತನದ ಇಳಿಕೆಗೆ ಕಾರಣೀಭೂತವಾಗುತ್ತವೆ.

**3. ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.**

- ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುತ್ತೇವೆ.
- ಇದು ಅಧಿಕಾರ ಹಂಚಿಕೆಯ ಒಂದು ಪ್ರಕ್ರಿಯೆಯಾಗಿದ್ದು ನಿರ್ಧಾರ ಕೈಗೊಳ್ಳುವಲ್ಲಿ ಜನರ ಪಾಲುದಾರಿಕೆಯೂ ಹೆಚ್ಚಳವಾಗುತ್ತದೆ.
- ತಳಮಟ್ಟದಿಂದ ಯೋಜನೆ ನಿರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯೂ ಇದಾಗಿದೆ.
- ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.
- ವಿಕೇಂದ್ರೀಕರಣವು ಎಲ್ಲ ರೀತಿಯ ಶೋಷಣೆಗಳನ್ನು ತಡೆಯುತ್ತದೆ,ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆಯಲ್ಲದೇ ಸಹಾನುಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ.

**4. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೇನು?**

- ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹಿರಿದಾದುದು.
- ಬಡತನ ನಿರ್ಮೂಲನೆ, ಜೀವನೋಪಾಯ ಭದ್ರತೆ ಹಾಗೂ ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವ ಯೋಜನೆಗಳ ಅನುಷ್ಠಾನದಲ್ಲಿ ಈ ಸಂಸ್ಥೆಗಳ ಜವಾಬ್ದಾರಿ ಮಹತ್ವದ್ದಾಗಿದೆ.
- ಇವು ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಲಯ, ಶಾಲೆ ಮತ್ತು ಆಸ್ಪತ್ರೆ ಕಟ್ಟಡಗಳು, ಮಾರುಕಟ್ಟೆ ಮುಂತಾದ, ಸಮುದಾಯಕ್ಕೆ ಉಪಯೋಗವಾಗುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಹೊಣೆ ಹೊತ್ತಿವೆ.
- ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ವಯಸ್ಕರ ಶಿಕ್ಷಣ, ತಾಂತ್ರಿಕ ಹಾಗೂ ವೃತ್ತಿ ತರಬೇತಿಗೆ ಪ್ರೋತ್ಸಾಹ, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವಲ್ಲಿಯೂ ಪಂಚಾಯತ್ ಸಂಸ್ಥೆಗಳು ಕಾರ್ಯನಿರ್ವಹಿಸಬೇಕಾಗಿದೆ.
- ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾದ ಕೃಷಿ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಮುಂತಾದುವುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರಿಗೆ ದುಡಿಯುವ ಅವಕಾಶಗಳನ್ನು ಹೆಚ್ಚಿಸಬಹುದಾಗಿದೆ.

- ಕೆರೆ ಕಟ್ಟೆಗಳ ನಿರ್ಮಾಣ, ಅವುಗಳ ಹೂಳು ತೆಗೆಯುವುದು, ಕಿರು ನೀರಾವರಿ ಯೋಜನೆಗಳ ನಿರ್ವಹಣೆ ಮುಂತಾದ ಕಾರ್ಯಗಳ ಮೂಲಕ ಕೃಷಿ ನೀರಾವರಿಯನ್ನು ವಿಸ್ತರಿಸಬಹುದಾಗಿದೆ.

**5. ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳು ಯಾವುವು?**

1. ಮಾನವ ಸಂಪನ್ಮೂಲ ಅಭಿವೃದ್ಧಿ;
   i. ಸಾಕ್ಷರತೆ, ಅದರಲ್ಲೂ ಮಹಿಳಾ ಸಾಕ್ಷರತೆ, ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ;
   ii. ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯದ ಸುಧಾರಣೆ;
2. ಭೂ ಸುಧಾರಣೆ;
3. ಸ್ಥಳೀಯ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ;
4. ವಿದ್ಯುತ್ ಶಕ್ತಿ, ನೀರಾವರಿ, ಹಣಕಾಸು, ಮಾರುಕಟ್ಟೆಗಳು, ಸಾರಿಗೆ (ಗ್ರಾಮೀಣ ಮತ್ತು ಸಂಪರ್ಕ ರಸ್ತೆಗಳು), ಕೃಷಿ ಸಂಶೋಧನೆ ಮತ್ತು ವಿಸ್ತರಣೆ, ಹಾಗೂ ಮಾಹಿತಿ ಪ್ರಸರಣಗಳನ್ನೊಳಗೊಂಡ ಮೂಲಭೂತ ಸೌಕರ್ಯಗಳ ಅಭಿವೃದ್ಧಿ;
5. ಬಡತನ ನಿರ್ಮೂಲನೆಯ ನಿರ್ದಿಷ್ಟ ಯೋಜನೆಗಳು.

**6. ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳು ಯಾವುವು?**

- ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳುಳ್ಳ ಮೂರು ಹಂತದ ಪಂಚಾಯತಿ ವ್ಯವಸ್ಥೆ ಇದ್ದು ಗ್ರಾಮಸಭೆಯು ಅದರ ತಳಹದಿಯಾಗಿದೆ;
- ನೇರ ಹಾಗೂ ನಿಯಮಿತ ಚುನಾವಣೆಗಳು;
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಳು ಮತ್ತು ಮಹಿಳೆಯರಿಗಾಗಿ ಸ್ಥಾನ ಮೀಸಲಾತಿ;
- ಹಣಕಾಸು, ಆಡಳಿತಾತ್ಮಕ, ಮುಂಗಡಪತ್ರ ಮಂಡಿಸುವ ಮತ್ತು ಲೆಕ್ಕ ಪರಿಶೋಧಿಸುವ ಜವಾಬ್ದಾರಿಗಳ ನೀಡಿಕೆ;
- ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ; ಮತ್ತು
- ಪಂಚಾಯತಿಯನ್ನು ವಿಸರ್ಜಿಸುವಾಗ ಅನುಸರಿಸಬೇಕಾದ ಕಟ್ಟು ನಿಟ್ಟಿನ ಕ್ರಮಗಳು ಮತ್ತು ವಿಸರ್ಜನೆಗೊಂಡ ಆರು ತಿಂಗಳುಗಳ ಒಳಗೇ ಕಡ್ಡಾಯ ಚುನಾವಣೆ ನಡೆಸುವುದು.

**7. ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವನ್ನು ವಿವರಿಸಿ.**

- ಗ್ರಾಮೀಣ ಭಾಗದ ಎಲ್ಲಾ ಹಳ್ಳಿಗಳಲ್ಲಿ 'ಮಹಿಳಾ ಸ್ವಸಹಾಯ ಸಂಘ' ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.
- ಇವು ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವಲ್ಲಿ ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿವೆ.
- ಈ ಸಂಘಗಳ ಸದಸ್ಯರಾಗಿರುವ ಮಹಿಳೆಯರು ಇವುಗಳ ಮೂಲಕ ಸುಲಭವಾಗಿ ಸಾಲ ಪಡೆದು ಉತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದಾರೆ.
- ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘಗಳು ಉಳಿತಾಯ ಸಂಗ್ರಹದಲ್ಲಿ ಮತ್ತು ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆ ಮಾಡುತ್ತಿವೆ.
- ಹಳ್ಳಿಗಳಲ್ಲಿ ಕುಡಿತ, ಜೂಜು ಮುಂತಾದ ದುಶ್ಚಟಗಳು ವ್ಯಾಪಕವಾಗಿದ್ದು; ಬಾಲ್ಯವಿವಾಹ, ವರದಕ್ಷಿಣೆ, ಜಾತಿಪದ್ಧತಿ, ಮೂಢನಂಬಿಕೆ, ಮಹಿಳೆ ಮತ್ತು ಮಕ್ಕಳ ಶೋಷಣೆ ಮೊದಲಾದ ಸಾಮಾಜಿಕ ಪಿಡುಗುಗಳು ಇನ್ನೂ ಜೀವಂತವಾಗಿವೆ.
- ಎಚ್ಚೆತ್ತ ಮಹಿಳೆಯರು ಸಂಘಟಿತ ಪ್ರಯತ್ನದ ಮೂಲಕ ಇಂತಹ ಅನಿಷ್ಟಗಳನ್ನು ಹೋಗಲಾಡಿಸಬಹುದಾಗಿದೆ.
- ಆ ಮೂಲಕ ಸ್ವಚ್ಛ ಹಾಗೂ ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ಮಹಿಳೆಯರು ನೆರವಾಗಬಹುದಾಗಿದೆ.

# ವ್ಯವಹಾರ ಅಧ್ಯಯನ
# ಅಧ್ಯಾಯ – 1
# ಬ್ಯಾಂಕಿನ ವ್ಯವಹಾರಗಳು

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಬ್ಯಾಂಕ್ ಎಂಬ ಪದವು ಫ್ರೆಂಚಿನ __________ ಶಬ್ದದಿಂದ ಬಂದಿದೆ. (**"ಬ್ಯಾಂಕ್"**)
2. ಬ್ಯಾಂಕುಗಳ ಬ್ಯಾಂಕ್ __________ ಆಗಿದೆ. (**ರಿಸರ್ವ ಬ್ಯಾಂಕ್**)
3. ರಾಷ್ಟ್ರೀಕೃತ ಬ್ಯಾಂಕಿಗೆ ಉದಾಹರಣೆ __________ . (**ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ**)
4. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು __________ ಇಲಾಖೆಯು ನೀಡುತ್ತದೆ. (**ಅಂಚೆ**)
5. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ __________ (**ಚಾಲ್ತಿ ಖಾತೆ**)
6. ಠೇವಣಿಯನ್ನು ನಿಗಧಿತ ಅವಧಿಗೆ __________ ಖಾತೆಯಲ್ಲಿ ಇಡಬಹುದಾಗಿದೆ. ( **ನಿಶ್ಚಿತ ಠೇವಣಿ ಖಾತೆ**)

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ಬ್ಯಾಂಕು ಎಂದರೇನು ?**

ಬ್ಯಾಂಕು ಹಣಕಾಸಿನ ಸಂಸ್ಥೆಯಾಗಿದ್ದು ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುತ್ತದೆ ಇದನ್ನೆ ಬ್ಯಾಂಕ್ ಎನ್ನುತ್ತೇವೆ. ಅಥವಾ 'ಬೆಂಚು' ಅಥವಾ ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್ ಆಗಿದೆ.

**2. ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣಲಕ್ಷಣಗಳ ಪಟ್ಟಿ ಮಾಡಿ.**

- ಹಣದ ವಹಿವಾಟು.
- ವ್ಯಕ್ತಿ/ಸಂಸ್ಥೆ/ಕಂಪನಿ.
- ಠೇವಣಿಗಳನ್ನು ಅಂಗೀಕರಿಸುತ್ತವೆ.
- ಸಾಲಗಳನ್ನು ಕೊಡುವುದು.
- ಪಾವತಿ ಮತ್ತು ಹಿಂದಕ್ಕೆ ಪಡೆಯುವುದು.
- ಏಜೆಂಟ್ ಅಥವಾ ಏಜೆಂಟ್ ನಿಯೋಜನೆ ಮತ್ತು ಉಪಯುಕ್ತ ಸೇವೆಗಳು.
- ಲಾಭ ಮತ್ತು ಸೇವಾ ಭಾವನೆ.
- ನಿರಂತರ ವಿಸ್ತರಿಸುತ್ತಾ ಹೋಗುವ ಕಾರ್ಯಗಳು.
- ಸಂಬಂಧ ಕಲ್ಪಿಸುವ ಕೊಂಡಿ.
- ಬ್ಯಾಂಕಿಂಗ್ ವ್ಯವಹಾರ.
- ಹೆಸರಿನ ಗುರುತು.

**3. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು ?**

- ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುವುದು.
- ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.
- ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
- ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.
- ಹುಂಡಿಗಳನ್ನು ಸೋಡಿ ಮಾಡುವುದು.
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
- ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು.
- ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ಧಿನಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.
- ಸಾಲಪತ್ರಗಳನ್ನು ಮತ್ತು ಜವಾಬ್ದಾರಿ ಪತ್ರಗಳನ್ನು ಕೊಡುವುದು.
- ಸರ್ಕಾರದ (ಕೇಂದ್ರ ಹಾಗೂ ರಾಜ್ಯ) ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.

**4. ಬ್ಯಾಂಕ್ ಮತ್ತು ಗ್ರಾಹಕರ ಸಂಬಂಧವನ್ನು ತಿಳಿಸಿ.**

**1. ಸಾಮಾನ್ಯ ಸಂಬಂಧ :** ಇದು ಮೂರು ಮುಖ್ಯ ವಿಧಗಳಿಂದ ಕೂಡಿದೆ.

- ಪ್ರಾಥಮಿಕ ಸಂಬಂಧ (ಸಾಲಿಗ ಮತ್ತು ಸಾಲಗಾರನ ಸಂಬಂಧದಂತೆ)
- ಸಹಾಯಕ ಅಥವಾ ಉಪಕಾರ ಸಂಬಂಧ (ಧರ್ಮದರ್ಶಿ ಅಥವಾ ನಿಕ್ಷೇಪಧಾರಿ ಮತ್ತು ಪ್ರಯೋಜನಕಾರಿಯ ನಡುವಿನ ಸಂಬಂಧ)

- ಕಾರಬಾರಿ ಅಥವಾ ನಿಯೋಗಿ ಮತ್ತು ಮುಖ್ಯಸ್ಥನ ಸಂಬಂಧ.

**2. ವಿಶೇಷ ಸಂಬಂಧ :**

- ಚೆಕ್ಕುಗಳನ್ನು ಮನ್ನಣೆ ಮಾಡುವುದು.
- ಗ್ರಾಹಕರ ಲೆಕ್ಕಗಳ ಗೋಪ್ಯತೆ ಕಾಪಾಡುವುದು.

**5. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣ ಕೊಡಿ.**

1. ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಉಳಿತಾಯ ಖಾತೆ ತೆರೆಯಲ್ಪಡುತ್ತದೆ.
2. ಈ ಸೌಲಭ್ಯವನ್ನು ವಿಧ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು ತೆರೆಯಲು ಅವಕಾಶವಿದೆ.
3. ಈ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ.
4. ಉಸಿತಾಯ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ.
5. ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ.

**6. ಬ್ಯಾಂಕ್ ಖಾತೆ ತೆರೆಯುವುದರಿಂದಾಗುವ ಅನುಕೂಲಗಳಾವುವು ?**

- ಬ್ಯಾಂಕು ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.
- ಬ್ಯಾಂಕು ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
- ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯಮಾಡಿಕೊಡುತ್ತದೆ.
- ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.

**7. ಬ್ಯಾಂಕು ಖಾತೆಯನ್ನು ತೆಗೆಯುವ ವಿಧಾನಗಳನ್ನು ತಿಳಿಸಿ.**

- ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು.
- ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು.
- ಪ್ರಸ್ತಾವನೆ ಅರ್ಜಿ–ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬುವುದು.
- ಪರಿಚಿತರ ಉಲ್ಲೇಖನವನ್ನು ಕೊಡುವುದು.
- ಬ್ಯಾಂಕು ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.
- ಅಧಿಕಾರಿಯ ಒಪ್ಪಿಗೆ.
- ಪ್ರಾರಂಭಿಕ ಠೇವಣಿ.

**8. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳನ್ನು ಹೆಸರಿಸಿ.**

ಬ್ಯಾಂಕುಗಳಲ್ಲಿ ಸಾಮಾನ್ಯವಾಗಿ ಈ ಕೆಳಗಿನ ನಾಲ್ಕು ವಿಧದ ಖಾತೆಗಳನ್ನು ತೆರೆಯಬಹುದು.

1. ಉಳಿತಾಯ ಖಾತೆ. (Savings Account)
2. ಚಾಲ್ತಿ ಖಾತೆ (Current Account)
3. ಆವರ್ತ ಠೇವಣೆ ಖಾತೆ (Recurring Deposit Account)
4. ನಿಶ್ಚಿತ ಠೇವಣೆ ಖಾತೆ. (Fixed Deposit Account)

**9. ಬ್ಯಾಂಕುಗಳ ವಿಧಗಳು ಯಾವುವು?**

- ಕೇಂದ್ರ ಬ್ಯಾಂಕು ಅಥವಾ ಭಾರತೀಯ ರಿಜರ್ವ್ ಬ್ಯಾಂಕು.
- ವಾಣಿಜ್ಯ ಬ್ಯಾಂಕುಗಳು.
- ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು.
- ಭೂ–ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು.
- ಸ್ಥಳೀಯ ಬ್ಯಾಂಕುಗಳು (ಲೇವಾದೇವಿಗಾರರು ಅಥವಾ ಸಾಹುಕಾರರು)
- ಸಹಕಾರಿ ಬ್ಯಾಂಕುಗಳು.

**10. ಅಂಚೆ ಕಛೇರಿಗಳು ಸಲ್ಲಿಸುವ ಸೇವೆಗಳು ಯಾವುವು?**

- ರಾಷ್ಟ್ರೀಯ ಉಳಿತಾಯ ಪತ್ರಗಳು.
- ಅಂಚೆ ಉಳಿತಾಯ ಖಾತೆಗಳು.

- ಕಿಸಾನ್ ವಿಕಾಸ ಪತ್ರಗಳು.
- ಮಹೆಯಾನ ತೀರು ಠೇವಣಿಗಳು.
- ಅಂಚೆ ವಿಮೆ.
- ನಿವೃತ್ತಿವೇತನ ಮತ್ತು ಹಣವನ್ನು ವರ್ಗಾಯಿಸುವುದು.

**11. ಬ್ಯಾಂಕುಗಳು ಸಲ್ಲಿಸುವ ಸೇವೆಗಳು ಯಾವುವು?**

1. ಖರ್ಚು ಕಾರ್ಡು (Debit Cards) ಮತ್ತು ಜಮಾ ಕಾರ್ಡು (Credit Cards) ಗಳನ್ನು ಕೊಡುವುದು.
2. ಖಾಸಗಿ ಮತ್ತು ವ್ಯಾಪಾರಕ್ಕೆ ಸಾಲ.
3. ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು.
4. ಪರಸ್ಪರ ನಿಧಿಗಳನ್ನು ನಿರ್ವಹಿಸುವುದು.
5. ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು.
6. ಭರವಸೆ ಸೇವೆಗಳು.
7. ಸಹಿಗಳಿಗೆ ಜವಾಬ್ಧಾರಿ ಹಾಕುವುದು.
8. 'ಇ' ಬ್ಯಾಂಕಿಂಗ್ ಸೇವೆಗಳು. ('E' ¨Banking Services)

**12. ಬ್ಯಾಂಕ್ ಸಾಲ ಎಂದರೇನು?**

ಬ್ಯಾಂಕುಗಳು ಗ್ರಾಹಕರ ಹಣವನ್ನು ಠೇವಣಿಗಳಾಗಿ ಇಟ್ಟುಕೊಳ್ಳುತ್ತವೆ ಮತ್ತು ಈ ಠೇವಣಿಗಳಿಂದ ಸಂಗ್ರಹವಾದ ಹಣವನ್ನು ಗಿರಾಕಿಗಳಿಗೆ ಸಾಲವಾಗಿ ಕೊಡುತ್ತವೆ. ಈ ಸಾಲಗಳನ್ನು ಬ್ಯಾಂಕ್ ಸಾಲ ಎನ್ನುತ್ತೇವೆ.

**13. ಬ್ಯಾಂಕು ವ್ಯವಹಾರ ಎಂದರೇನು?**

ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕು ವ್ಯವಹಾರಗಳೆನ್ನುತ್ತೇವೆ.

**14. ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗಳ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.**

| **ಉಳಿತಾಯ ಖಾತೆ** | **ಚಾಲ್ತಿ ಖಾತೆ** |
|---|---|
| • ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಉಳಿತಾಯ ಖಾತೆ ತೆರೆಯಲ್ಪಡುತ್ತದೆ. | • ಈ ಖಾತೆಯನ್ನು ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ. |
| • ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ. | • ಇಲ್ಲಿ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು ಅಥವಾ ಉಪಸರ್ಗ ವ್ಯವಹಾರಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಾಗುತ್ತದೆ. |
| • ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡಲಾಗುವುದು. | • ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ. |
| • ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬು ಮತ್ತು ಎಷ್ಟು ಬಾರಿಯಾದರೂ ಹಿಂಪಡೆಯಲು ಮಿತಿ ಇದೆ. | • ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು ಮತ್ತು ಎಷ್ಟು ಬಾರಿಯಾದರೂ ಹಿಂಪಡೆಯಬಹುದು. |

**15. ಬ್ಯಾಂಕಿಂಗ್ ಎಂದರೇನು?**

ಬ್ಯಾಂಕಿನಲ್ಲಿನ ಸೇವೆಗಳನ್ನು ಉಪಯೋಗಿಸಿಕೊಳ್ಳುವ ವ್ಯವಹಾರಗಳನ್ನು ಬ್ಯಾಂಕಿಂಗ್ ಎನ್ನುತ್ತೇವೆ.

**16. ಬ್ಯಾಂಕು ವ್ಯವಹಾರ ಎಂದರೇನು?**

ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕು ವ್ಯವಹಾರಗಳೆನ್ನುತ್ತೇವೆ.

**17. ರಿಜರ್ವ್‌ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಅಥವಾ ಬ್ಯಾಂಕುಗಳ ತಾಯಿ ಎಂದು ಕರೆಯುವರು.ಏಕೆ?**

ಭಾರತದಲ್ಲಿ ಬ್ಯಾಂಕುಗಳ ಎಲ್ಲ ಚಟುವಟಿಕೆಗಳು ರಿಜರ್ವ್ ಬ್ಯಾಂಕಿನ ಹತೋಟಿಯಲ್ಲಿರುತ್ತದೆ.ಆದ್ದರಿಂದ ರಿಜರ್ವ್‌ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಅಥವಾ ಬ್ಯಾಂಕುಗಳ ತಾಯಿ ಎಂದು ಕರೆಯುವರು.

**18. ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆ ಯಾವುದು?**

ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆ ಎಂದರೆ ಅಂಚೆ ಕಚೇರಿಗಳನ್ನು ಬ್ಯಾಂಕು ವ್ಯವಹಾರಗಳ ಅಂಕಿತದೊಳಕ್ಕೆ ತಂದಿರುವುದು.

**19. ಯಾವ ಖಾತೆಯಲ್ಲಿ ಠೇವಣಿ ಹಣವನ್ನು ನಿಗದಿತ ಅವಧಿಗೆ ಮುಂಚೆ ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ?**

ನಿಶ್ಚಿತ ಠೇವಣಿ ಖಾತೆ.

**20. ಭವಿಷ್ಯದ ಅವಶ್ಯಕತೆಗಳಾದ ಮಕ್ಕಳ ವಿವಾಹ, ಬೆಲೆ ಬಾಳುವ ವಸ್ತುಗಳ ಖರೀದಿ, ನೆಲ, ಕಾರು ಮುಂತಾದುವನ್ನು ಕೊಳ್ಳಲು ಸೂಕ್ತವಾದ ಖಾತೆ ಯಾವುದು?**

ಆವರ್ತ ಠೇವಣಿ ಖಾತೆ.

# ಅಧ್ಯಾಯ – 2
# ಉದ್ಯಮಗಾರಿಕೆ (Entrepreneurship)

**ಮುಖ್ಯಾಂಶಗಳು:**

- ಉದ್ಯಮಿ ಎಂಬ ಪದವು ಪ್ರೆಂಚ್ ಪದ **ಎಂಟ್ರ ಪ್ರೆಂಡೆ**ನಿಂದ ಬಂದಿದೆ.
- ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು **ಉದ್ಯಮಗಾರಿಕೆ** ಎನ್ನುತ್ತೇವೆ.
- ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು **ಜಿಲ್ಲಾ ಕೈಗಾರಿಕಾ** ಕೇಂದ್ರಗಳನ್ನು **1978**ರಲ್ಲಿ ಸ್ಥಾಪಿಸಲಾಯಿತು.
- ಅಪೋಲೋ ಆಸ್ಪತ್ರೆಯ ರೂವಾರಿಗಳು **ಡಾ. ಪ್ರತಾಪರೆಡ್ಡಿ**
- ವಿಪ್ರೋ ಸಂಸ್ಥೆಯ ಅಧ್ಯಕ್ಷರು **ಅಜೀಮ್ ಪ್ರೇಮ್‌ಜಿ.**
- ಉದ್ಯಮಿಗಳು ಒಂದು ದೇಶದ **ಆಸ್ತಿ** ಮತ್ತು **ತಲಾವರಮಾನ** ಹೆಚ್ಚಿಸುತ್ತಾರೆ.
- ಅಪೋಲೋ ವೈದ್ಯಶಾಲೆಗಳ ಗುಂಪು ಹುಟ್ಟು ಹಾಕಿದವರು **ಡಾ. ಪ್ರತಾಪರಡ್ಡಿ.**
- ಜೆಟ್ ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು **ನರೇಶ್ ಗೋಯಲ್**
- **1999** ರಲ್ಲಿ ಭಾರತದಲ್ಲಿ ಇನ್ಫೋಸಿಸ್ ತಂತಿಜ್ರ್ಞಾನ ನಿಗಮವನ್ನು ಸ್ಥಾಪಿಸಿದವರು **ನಾರಾಯಣಮೂರ್ತಿಯವರು.**
- **NASDAQ** ನಲ್ಲಿ ನೊಂದಾಯಿಸಿಕೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ **ಇನ್ಫೋಸಿಸ್.**
- ಬಿಳಿಕ್ರಾಂತಿಯ ಪಿತಾಮಹ ಎಂದು ಕರೆಯಲ್ಪಡುವವರು **ವರ್ಗೀಸ್ ಕುರಿಯನ್.**
- **ವರ್ಗೀಸ್ ಕುರಿಯನ್**ರವರು ಗುಜರಾತ್ ರಾಜ್ಯದ ಕೈರಾ ಜಿಲ್ಲೆಯಲ್ಲಿ **ಆನಂದ್** ಹೈನುಗಾರಿಕೆ ಕೇಂದ್ರವನ್ನು ಆರಂಭಿಸಿದರು.
- ಧೀರೂಬಾಯಿ ಅಂಬಾನಿಯವರು **ಮೌಂಟ್‌ಗಿರ್‌ನಾರ್** ಎಂಬಲ್ಲಿ ವಾರಾಂತ್ಯದ ಭಜನೆಗಳ ಪುಸ್ತಕಗಳೊಂದಿಗೆ ಉದ್ಯಮ ಪ್ರಾರಂಭಿಸಿದರು.
- ಧೀರೂಬಾಯಿ ಅಂಬಾನಿಯವರು **ರಿಲಯನ್ಸ್** ಸಂಸ್ಥೆ ಪ್ರಪಂಚದಲ್ಲೇ ಮುಖ್ಯ ಉದ್ಯಮವಾಗಿದೆ.
- ಭಾರತದ ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿದ ರಾಣಿ **ಏಕ್ತಾಕಪೂರ್.**
- **2001** ರಲ್ಲಿ ವರ್ಷದ□ಉದ್ಯಮಿ ಪ್ರಶಸ್ತಿಯನ್ನು **ಏಕ್ತಾಕಪೂರ್**ಗೆ ನೀಡಿ ಗೌರವಿಸಿದೆ.
- **ಕಿರಣ್ ಮುಜುಮ್‌ದಾರ್ ಷಾ**ರವರು **ಬಯೋಕಾನ್** ನಿಗಮದ ಅಧ್ಯಕ್ಷರು & ಆಡಳಿತ ನಿರ್ದೇಶಕರಾಗಿದ್ದಾರೆ.
- ಜೀವ ವಿಜ್ಞಾನ ತಂತ್ರಜ್ಞಾನ ಸಂಸ್ಥೆ **1978** ರಲ್ಲಿ ಪ್ರಾರಂಭವಾಯಿತು.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಉದ್ಯಮಗಳ ಅಭಿವೃದ್ಧಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪಾತ್ರವನ್ನು ವಿವರಿಸಿ.**

- ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾರುಕಟ್ಟೆಗೆ ಸಹಾಯ ಮಾಡುವದು.
- ಸರ್ಕಾರದ ಅಧೀನ ಕೈಗಾರಿಕೆಗಳ ಜೊತೆಗೂಡಿ ಸಹಾಯಕ ಸಂಸ್ಥೆಗಳಿಗೆ ನೆರವು ನೀಡುವುದು.
- ಉದ್ದಿಮೆಯನ್ನು ಆಧುನಿಕರಿಸುವಲ್ಲಿ ಸಹಾಯ ಮಾಡುವುದು.
- ವಸ್ತುಗಳನ್ನು ರಫ್ತು ಮಾಡಲು ಸಹಾಯ ಮಾಡುವುದು.
- ಅತಂತ್ರಗೊಳ್ಳುತ್ತಿರುವ ಉದ್ದಿಮೆಗಳಿಗೆ ಸಹಾಯ ಮಾಡುವುದು.
- ಸಾಂಪ್ರದಾಯಕವಲ್ಲದ ಶಕ್ತಿಸಾಧನಗಳನ್ನು ಉಪಯೋಗಿಸಿ ವಸ್ತುಗಳ ತಯಾರಿಕೆಗೆ ಉತ್ತೇಜನ ನೀಡುವುದು.

**2. ಉದ್ಯಮಿ ಎಂದರೇನು?**

ಹೊಸ ಕಲ್ಪನೆ ಮತ್ತು ಆಡಳಿತ ನಿರ್ವಹಣೆಯ ಕೌಶಲ್ಯದಿಂದ ಉದ್ಯಮವನ್ನು ಯಶಸ್ವಿಯಾಗಿ ನಡೆಸುವವನನ್ನು ಉದ್ಯಮಿ ಎನ್ನುತ್ತೇವೆ.

**3. ಉದ್ಯಮಗಾರಿಕೆಯು ಸಾಹಸ ಕಾರ್ಯವಾಗಿದೆ. ಹೇಗೆ?**

- ಉದ್ಯಮಗಾರಿಕೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ.
- ಇದು ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಸೃಜನಾತ್ಮಕ ಚಟುವಟಿಕೆಯಾಗಿದೆ.
- ಇದು ಬೇರೆಯವರಿಂದ ಕಷ್ಟಸಾಧ್ಯವಾದ ಗೊಂದಲಮಯ, ವಿರೋಧಾತ್ಮಕ ಮತ್ತು
- ಅಸ್ತವ್ಯಸ್ತತೆಯಿಂದ ಕೂಡಿದ ಒಂದು ಅವಕಾಶವನ್ನು ಗುರ್ತಿಸಿ ಅದನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ.
- ಉದ್ಯಮಗಾರಿಕೆಯು ಅವಕಾಶಗಳನ್ನು ಅನ್ವೇಷಿಸಿ ಅಥವಾ ಹುಡುಕಿ, ನಷ್ಟಗಳನ್ನು ಲೆಕ್ಕಾಚಾರ ಹಾಕಿ ಅದರಿಂದ ಲಾಭಪಡೆಯಲು ಒಂದು ಸಾಹಸ ಕಾರ್ಯವನ್ನು ಸ್ಥಾಪಿಸುವದೇ ಆಗಿದೆ.

**4. ಬಿಳಿಕ್ರಾಂತಿಯ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ? ಏಕೆ?**

ವರ್ಗೀಸ್ ಕುರಿಯನ್‌ರವರನ್ನು ಬಿಳಿಕ್ರಾಂತಿಯ ಪಿತಾಮಹ ಎಂದು ಕರೆಯುತ್ತಾರೆ. ಏಕೆಂದರೆ ಲಕ್ಷಾಂತರ ಲೀಟರ್ ಹಾಲಿನ ಉತ್ಪಾದನೆಯ ಕಲ್ಪನೆಯೊಂದಿಗೆ ಹಾಲಿನ ಹೊಳೆ ಹರಿಸುವದರ ಮೂಲಕ ಬೇಸಾಯದ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ.

**5. ಉದ್ದಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ. ಅಥವಾ ದೇಶದ ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರವೇನು? ತಿಳಿಸಿ.**

- ಉದ್ಯಮಿಗಳು ಜನರ ಅನುಪಯುಕ್ತ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ಉಪಯೋಗಿಸುತ್ತಾರೆ.
- ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವದರ ಮೂಲಕ ಉದ್ಯಮಿಗಳು ಕುಶಲಕರ್ಮಿಗಳಿಗೆ, ತಾಂತ್ರಿಕಯೋಗ್ಯತೆ ಉಳ್ಳವರಿಗೆ & ಕಸುಬುದಾರರಿಗೆ ಅಧಿಕ ಪ್ರಮಾಣದ ಉದ್ಯೋಗಗಳನ್ನು ಒದಗಿಸುತ್ತಾರೆ.
- ಉದ್ಯಮಿಗಳು ಒಂದು ದೇಶದ ನಿವ್ವಳದೇಶಿಯ ಉತ್ಪನ್ನ ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.
- ಉದ್ಯಮಿಗಳು ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ, ಅವರ ಜೀವನಮಟ್ಟವನ್ನು ಉತ್ತಮಗೊಳಿಸಲು ಶ್ರಮಿಸುತ್ತಾರೆ.
- ಉದ್ಯಮಿಗಳು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುತ್ತಾರೆ.
- ಉದ್ಯಮಿಗಳು ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.

**6. ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು?**

- ಸೃಜನಾತ್ಮಕ, * ಕ್ರಿಯಾತ್ಮಕ,
- ಗುಂಪು ಕಟ್ಟುವದು, * ಸಮಸ್ಯೆಯ ಪರಿಹಾರ,
- ನಷ್ಟಭರಿತಕ್ಕೆ ಸಿದ್ಧ * ವಚನಬದ್ಧತೆ,
- ಹೊಸ ಪದ್ದತಿಯನ್ನು ರೂಢಿಸಿತರುವುದು,
- ನಾಯಕತ್ವ, * ಪ್ರಚೋದನೆಯ ಸಾಧನೆ,
- ಗುರಿಮುಟ್ಟುವಿಕೆ, * ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.

**7. ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳು ಯಾವುವು?**

1. ಜಿಲ್ಲಾ ಕೈಗಾರಿಕೆ ಕೇಂದ್ರಗಳು
2. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
3. ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ
4. ಸಣ್ಣ ಪ್ರಮಾಣದ ಕೈಗಾರಿಕೆ ಸಂಸ್ಥೆ
5. ಖಾದಿ & ಗ್ರಾಮೋದ್ಯೋಗ ಮಂಡಳಿ
6. ತಾಂತ್ರಿಕ ಸಲಹಾ ಸಂಸ್ಥೆಗಳು

**8. ಉದ್ಯಮಿಯ ಕಾರ್ಯಗಳು ಯಾವುವು?**

- ಉದ್ಯಮಿಯು ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ
- ಉದ್ಯಮಗಾರನು ಉತ್ಪಾದಿಸಿದ ವಸ್ತುಗಳ ಬಗ್ಗೆ, ತಾಂತ್ರಿಕತೆ ಬಗ್ಗೆ, ಮಾರುಕಟ್ಟೆ ಮತ್ತು ಉದ್ಯೋಗ ಮುಂತಾದವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
- ಉದ್ಯಮಿಯು ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
- ಉದ್ಯಮಿಯು ವ್ಯಾಪಾರದ ಮಾರ್ಗಗಳನ್ನು ತಿಳಿಸಿ ಅದು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳ್ಳುವಂತೆ ಮಾರ್ಗದರ್ಶನ ನೀಡುತ್ತಾನೆ.

**9. ಸ್ವ ಉದ್ಯೋಗ ಸ್ಥಾಪಿಸಲು ವ್ಯಕ್ತಿಯು ಆಯ್ದುಕೊಳ್ಳಬಹುದಾದ ಸಂಸ್ಥೆಗಳು ಯಾವುವು?**

- ಜಾಹಿರಾತು ಸೇವಾ ಸಂಸ್ಥೆಗಳು,
- ಮಾರುಕಟ್ಟೆ ಸಲಹಾ ಸಂಸ್ಥೆ,
- ಕೈಗಾರಿಕಾ ಸಲಹಾ ಸಂಸ್ಥೆ,
- ವಸ್ತುಗಳನ್ನು ಬಾಡಿಗೆಗೆ & ಗುತ್ತಿಗೆಗೆ ನೀಡುವ ಸಂಸ್ಥೆಗಳು,
- ಛಾಯಾಪ್ರತಿ ತೆಗೆಯುವ ಕೇಂದ್ರಗಳು,
- ಕೈಗಾರಿಕಾ ಸಂಶೋಧನೆ & ಅಭಿವೃದ್ಧಿ ಪ್ರಯೋಗಾಲಯಗಳು
- ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು
- ಅಂತರ್ಜಾಲ * ಸಂಹವನ ಅಂಗಡಿಗಳು

ದೂರದರ್ಶನ ಜಾಲ ಬಂದದ ಸೇವಾಕ್ಷೇತ್ರಗಳು.

**10. ಸ್ವ ಉದ್ಯೋಗದ ಯೋಜನೆಗೆ ಸಾಲ ಕೊಡುವ ಸಂಸ್ಥೆಗಳು ಯಾವುವು?**

1. ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
2. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
3. ಆಮದು ಮತ್ತು ರಫ್ತು ಬ್ಯಾಂಕು
4. ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕ್

5. ಭಾರತೀಯ ಕೈಗಾರಿಕಾ ಹಣಕಾಸು ಬ್ಯಾಂಕು
6. ಭಾರತೀಯ ವಾಣಿಜ್ಯ & ಇತರೆ ಬ್ಯಾಂಕುಗಳು
7. ರಾಜ್ಯ ಹಣಕಾಸು ನಿಗಮ
8. ಭಾರತೀಯ ಜೀವವಿಮಾ ನಿಗಮ
9. ಯುನಿಟ್ ಟ್ರಸ್ಟ್ ಆಫ್ ಇಂಡಿಯಾ

**11. ಟಿಪ್ಪಣಿ ಬರೆಯಿರಿ.**

**1. ಡಾ. ಪ್ರತಾಪರಡ್ಡಿ**

- ಇವರು ಭಾರತದಲ್ಲಿ ಆರೋಗ್ಯಕ್ಷೇತ್ರದಲ್ಲಿ ವೈದ್ಯಶಾಲೆಗಳ ಸಂಕೀರ್ಣವನ್ನು ಅಭಿವೃದ್ಧಿ ಪಡಿಸಿದವರಲ್ಲಿ ಮೊದಲಿಗರಾಗಿದ್ದಾರೆ.
- ಇವರು ಹುಟ್ಟುಹಾಕಿದ "ಅಪೋಲೋ" ವೈದ್ಯಶಾಲೆಗಳ ಗುಂಪು ಸುಮಾರು 750 ಆಧುನಿಕ ರೀತಿಯ ದವಖಾನೆಗಳನ್ನು ಹೊಂದಿವೆ.
- ಇವರ ವೈದ್ಯಕೀಯ ಕ್ಷೇತ್ರದ ಸಾಧನೆ ಭಾರತದ ಸಾಮಾನ್ಯ ಜನರಿಗೂ ದೊರಕುವಂತಹುದೇ ಆಗಿದೆ.

**2. ನರೇಶ್ ಗೋಯಲ್**

- ಇವರು ಜೆಟ್ ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು & ಅದರ ಅಧ್ಯಕ್ಷರಾಗಿದ್ದಾರೆ.
- ಈ ವಾಯುಮಾರ್ಗವು ಭಾರತದ ಅತಿದೊಡ್ಡ ಆಂತರಿಕ ವಾಯುಮಾರ್ಗವಾಗಿದೆ.
- ಗೋಯಲ್‌ರವರು ಭಾರತ ಸರ್ಕಾರದ 1917 ರ ತೆರೆದ ಅಂತರಿಕ್ಷ ನೀತಿಯ ಸದವಕಾಶಗಳನ್ನು
- ಉಪಯೋಗಿಸಿಕೊಂಡು ಜೆಟ್ ವಾಯುಮಾರ್ಗವನ್ನು ಆಂತರಿಕ ಸಂಚಾರಕ್ಕಾಗಿ ಭಾರತದಲ್ಲಿ ನಿಶ್ಚಿತ ವೇಳೆಗಳಲ್ಲಿ ಓಡಾಡಲು ಪ್ರಾರಂಭಿಸಿದರು.

**3. ನಾರಾಯಣ ಮೂರ್ತಿ**

- ಇವರು 1999ರಲ್ಲಿ ಭಾರತದಲ್ಲಿ ಇನ್‌ಫೋಸಿಸ್ ತಂತ್ರಜ್ಞಾನ ನಿಗಮವನ್ನು ಪ್ರಾರಂಭಿಸಿದವರಲ್ಲಿ ಒಬ್ಬರಾಗಿದ್ದಾರೆ.
- **NASDAQ** ನಲ್ಲಿ ನೊಂದಾಯಿಸಿಕೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನದ ಸಂಸ್ಥೆಯು ಇನ್‌ಫೋಸಿಸ್ ಆಗಿದೆ.
- 2006ರ ವೇಳೆಗೆ ಈ ಸಂಸ್ಥೆಯು 50000ಕ್ಕೂ ಮಿಗಿಲಾದ ಕೆಲಸಗಾರರನ್ನು ನೇಮಿಸಿಕೊಂಡು.
- ಎರಡು ಬಿಲಿಯನ್ ಡಾಲರ್‌ಗಳಿಗಿಂತ ಮಿಗಿಲಾದ ವ್ಯಾಪಾರ ವಹಿವಾಟನ್ನು ನಡೆಸುತ್ತಿದೆ.
- ಮೂರ್ತಿಯವರ ಪ್ರಮಾಣಿಕತೆ, ಸತ್ಯಸಂದತೆ ನೀತಿಪೂರ್ಣ ಸಮಗ್ರತೆಯಂತಹ ಅಂಶಗಳು ಅವರ ವಹಿವಾಟುಗಳ ಸಮಗ್ರ ಯಶಸ್ಸಿಗೆ ಕಾರಣಗಳಾಗಿವೆ.

**4. ಏಕ್ತಾ ಕಪೂರ್**

- ಭಾರತದ ದೂರದರ್ಶನ ಕ್ಷೇತ್ರದಲ್ಲಿ "ಅಧಿಪತ್ಯ ಸಾಧಿಸಿದ ರಾಣಿ"ಯೇಂದೆ ಹೆಸರು ಮಾಡಿದ್ದಾರೆ.
- ಇವರು ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರಾಗಿದ್ದು 2001ರಲ್ಲಿ ಇವರಿಗೆ
- ವರ್ಷದ ಶ್ರೇಷ್ಠ ಉದ್ಯಮಿಯ ಪ್ರಶಸ್ತಿಯನ್ನು ಸಂಸ್ಥೆ ನೀಡಿ ಗೌರವಿಸಿದೆ.
- ಇವರು ತಮ್ಮ 19ನೇ ವರ್ಷಕ್ಕೆ ದೂರದರ್ಶನ ಅನುಕ್ರಮ ಪ್ರಸಾರದ ರೂವಾರಿಯಾದರು.

**5. ಕಿರಣ್ ಮುಜುಮ್‌ದಾರ್ ಷಾ**

- ಇವರು ಬಯೋಕಾನ್ ನಿಗಮದ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರಾಗಿದ್ದಾರೆ.
- ಈ ನಿಗಮವು ಭಾರತದಲ್ಲಿ ಜೀವವಿಜ್ಞಾನ ತಂತ್ರಜ್ಞಾನದ ಅತಿ ದೊಡ್ಡ ಸಂಸ್ಥೆಯಾಗಿದ್ದು 1978ರಲ್ಲಿ ಒಂದು
- ಸಣ್ಣ ಬಾಡಿಗೆಯ ಮೋಟಾರು ನಿಲ್ಲಿಸುವ ಜಾಗದಲ್ಲಿ ಪ್ರಾರಂಭವಾಯಿತು.
- ಪ್ರಾರಂಭದಲ್ಲಿ ಇವರು ಸಂಕಷ್ಟಕ್ಕೆ ಸಿಲುಕಿ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದರೆ ಎಲ್ಲವನ್ನೂ ಎದುರಿಸಿದರು.
- ಜೀವವಿಜ್ಞಾನ ತಂತ್ರಜ್ಞಾನವು ಯಶಸ್ಸನ್ನು ಪಡೆಯಲು ಸಾದ್ಯಪಡಿಸಿದರು.

# ಇತಿಹಾಸ

# ಅಧ್ಯಾಯ – 7

# ಸ್ವಾತಂತ್ರ್ಯ ಹೋರಾಟ

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು ________ ರಲ್ಲಿ ಸ್ಥಾಪಿಸಲಾಯಿತು.**(1885)**
2. ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ತಿಳಿಸಿದವರು ____________**(ದಾದಾ ಬಾಯಿ ನವರೋಜಿ)**
3. ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು ____________ ರವರು ಘೋಷಿಸಿದರು.**(ಬಾಲಗಂಗಾಧರ ತಿಲಕ್)**
4. ಬಾಲಗಂಗಾಧರ ತಿಲಕರು ಮರಾಠಿ ಭಾಷೆಯಲ್ಲಿ _________ ಪತ್ರಿಕೆಯನ್ನು ಪ್ರಕಟಿಸಿದರು.**(ಕೇಸರಿ)**
5. ಅಭಿನವ ಭಾರತ ಎಂಬ ರಹಸ್ಯ ಸಂಘಟನೆಯನ್ನು _________ ಗಳು ಹೊಂದಿದ್ದರು. **(ಕ್ರಾಂತಿಕಾರಿಗಳು)**

**II. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳವನ್ನು ನೀಡಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಭರ್ತಿಮಾಡಿ.**

**1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪಕರು ____________ .**

ಎ) ಮಹಾತ್ಮ ಗಾಂಧೀಜಿ **ಬಿ) ಎ.ಓ.ಹ್ಯೂಮ್**

ಸಿ) ಬಾಲಗಂಗಾಧರ ತಿಲಕ್ ಡಿ) ಗೋಪಾಲಕೃಷ್ಣ ಗೋಖಲೆ

**2. 'ಮರಾಠ' ಪತ್ರಿಕೆಯನ್ನು ಪ್ರಕಟಿಸಿದವರು ____________ .**

ಎ) ಜವಾಹರಲಾಲ್ ನೆಹರು ಬಿ) ರಾಸ್ ಬಿಹಾರಿ ಬೋಸ್

**ಸಿ) ಬಾಲಗಂಗಾಧರ ತಿಲಕ್** ಡಿ) ವಿ. ಡಿ. ಸಾವರ್ಕರ್

**3. ಮುಸ್ಲಿಂ ಲೀಗ್ _________ ರಲ್ಲಿ ಹುಟ್ಟಿಕೊಂಡಿತು.**

ಎ) 1924 ಬಿ) 1922 ಸಿ) 1929 **ಡಿ) 1906**

**4. ಬಂಗಾಳದ ವಿಭಜನೆಯನ್ನು ರೂಪಿಸಿದ ವೈಸ್‌ರಾಯ್ _________ .**

ಎ) ಲಾರ್ಡ್ ಕಾರ್ನ್‌ವಾಲೀಸ್ ಬಿ) ಡಾಲ್ ಹೌಸಿ

**ಸಿ) ಲಾರ್ಡ್ ಕರ್ಜನ್** ಡಿ) ರಾಬರ್ಟ್ ಕ್ಲೈವ್

**III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ. ಉತ್ತರಿಸಿ.**

**1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಗೆ ಮೊದಲು ಇದ್ದ ಸಂಘಟನೆಗಳು ಯಾವುವು?**

- 'ದ ಹಿಂದೂ ಮೇಳ'
- 'ದ ಈಸ್ಟ್ ಇಂಡಿಯನ್ ಅಸೋಸಿಯೇಷನ್'
- 'ಪೂನಾ ಸಾರ್ವಜನಿಕ ಸಭಾ' ಮತ್ತು
- 'ದ ಇಂಡಿಯನ್ ಅಸೋಸಿಯೇಷನ್'

**2. ಬ್ರಿಟಿಷ್ ಸರ್ಕಾರದ ಮುಂದಿಟ್ಟ ಮಂದಗಾಮಿಗಳ ಬೇಡಿಕೆಗಳಾವುವು?**

- ದೇಶದ ಕೈಗಾರಿಕೆಗಳ ಅಭಿವೃದ್ಧಿ,
- ಸೈನಿಕ ವೆಚ್ಚ ಕಡಿಮೆ ಮಾಡುವುದು,
- ಉತ್ತಮ ಶಿಕ್ಷಣ ಕೊಡುವುದು,
- ಬಡತನದ ಬಗ್ಗೆ ಅಧ್ಯಯನ.
- ಪರಿಹಾರ ಕಾರ್ಯಕ್ರಮಗಳನ್ನು ಬ್ರಿಟಿಷ್ ಸರ್ಕಾರ ಕೈಗೊಳ್ಳಬೇಕೆಂದು ಒತ್ತಾಯಿಸುವುದು.

**3. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿವರಿಸಿ.**

- ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ಅಂಕಿ ಅಂಶಗಳೊಂದಿಗೆ ಅವರು ವಿವರಿಸಿದರು.
- ದಾದಾಬಾಯಿ ನವರೋಜಿಯವರು ಅವರು ಅದನ್ನು 'ಸಂಪತ್ತಿನ ಸೋರುವಿಕೆ ಸಿದ್ಧಾಂತ' (Drain Theory) ಎಂದು ಕರೆದರು.

- ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆ ಮಾಡಿದ್ದರಿಂದ ಪ್ರತಿಕೂಲ ಸಂದಾಯ ಉಂಟಾಗಿ ದೇಶದ ಸಂಪತ್ತು ಇಂಗ್ಲೆಂಡಿಗೆ ಹರಿಯಲು ಕಾರಣವಾಯಿತೆಂದು ಅವರು ಪ್ರತಿಪಾದಿಸಿದರು.
- ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ, ನಿವೃತ್ತಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸಬೇಕಾದ ಹಿನ್ನೆಲೆಯಲ್ಲಿ ಅಪಾರವಾದ ಸಂಪತ್ತು ಬ್ರಿಟನ್ನಿಗೆ ಪರೋಕ್ಷವಾಗಿ ಹರಿದು ಹೋಗುತ್ತಿತ್ತು ಎಂಬುದನ್ನು ಅವರು ವಿವರವಾಗಿ ವಿಶ್ಲೇಷಿಸಿ, ಜನರ ಮುಂದಿಟ್ಟರು.

**4. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿಗಳನ್ನು ಹೆಸರಿಸಿ.**

ವಿ.ಡಿ.ಸಾವರ್ಕರ್, ಅರಬಿಂದೋ ಘೋಷ್, ಅಶ್ವಿನಿಕುಮಾರದತ್ತ, ರಾಜನಾರಾಯಣ ಬೋಸ್, ರಾಜಗುರು, ಚಾಕ್ಸಿಕರ್ ಸಹೋದರರು, ವಿಷ್ಣುಶಾಸ್ತ್ರಿ, ಚಂಪೂಕರ್, ಶ್ಯಾಮಾಜಿ ಕೃಷ್ಣವರ್ಮ, ರಾಸ್ ಬಿಹಾರಿ ಬೋಸ್, ಮ್ಯಾಡಮ್ ಕಾಮಾ, ಖುದಿರಾಮ್ ಬೋಸ್, ರಾಮ್‌ಪ್ರಸಾದ ಬಿಸ್ಮಿಲ್, ಅಶ್ವಖಿಲ್ಲಾಖಾನ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್ ಜತಿನ್ ದಾಸ್–ಇವರುಗಳು ಕ್ರಾಂತಿಕಾರಿಗಳಲ್ಲಿ ಪ್ರಮುಖರಾಗಿದ್ದರು.

**5. ಸ್ವಾತಂತ್ರ ಚಳವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.**

- ತಿಲಕರು 'ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ನಾನು ಪಡೆದೇ ತೀರುತ್ತೇನೆ' ಎಂದು ಘೋಷಿಸಿದರು.
- ಇಂಗ್ಲಿಷರನ್ನು ಭಾರತದಿಂದ ಹೊರದೂಡಬೇಕು, ಇದಕ್ಕೆ ಸಂಘರ್ಷ ದಾರಿ ಅನಿವಾರ್ಯ ಎಂದು ತಿಳಿಸಿದರು.
- ಜನರ ಧಾರ್ಮಿಕ ಭಾವನೆಗಳನ್ನು ಬಳಸಿ ಜನರಲ್ಲಿ ದೇಶಭಕ್ತಿ ಬೆಳೆಸಲು ಸಾರ್ವಜನಿಕವಾಗಿ ಗಣೇಶ ಹಬ್ಬ, ಶಿವಾಜಿ ಜಯಂತಿಯನ್ನು ಆಚರಿಸಲು ಕರೆ ನೀಡಿದರು.
- ತಿಲಕರು ತಮ್ಮ ವೃತ್ತ ಪತ್ರಿಕೆಗಳಾದ ಕೇಸರಿ ಹಾಗೂ ಮರಾಠ ಪತ್ರಿಕೆಗಳನ್ನು ಬಳಸಿ ಜನರಲ್ಲಿ ಇಂಗ್ಲಿಷರ ವಿರುದ್ದ ಹೋರಾಡಲು ಪ್ರಬಲ ರಾಷ್ಟ್ರೀಯತೆಯನ್ನು ಪ್ರತಿಪಾದಿಸಿದರು.
- ತಿಲಕರ ಕ್ರಾಂತಿಕಾರಿ ಬರವಣಿಗೆಗಳು ಜನರ ಉದ್ರೇಕಕ್ಕೆ ಕಾರಣವಾಯಿತು.
- ಈ ಹಿನ್ನೆಲೆಯಲ್ಲಿ ಇಂಗ್ಲಿಷ್ ಸರ್ಕಾರವು ಇವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿತು.
- ಜೈಲಿನಲ್ಲಿಯ ಈ ಸಂದರ್ಭವನ್ನು ಸದುಪಯೋಗಪಡಿಸಿಕೊಂಡ ತಿಲಕರು 'ಗೀತಾರಹಸ್ಯ' ಗ್ರಂಥವನ್ನು ರಚಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದುಕೊಟ್ಟರು.

**6. ಬಂಗಾಳ ವಿಭಜನೆಯನ್ನು ಹಿಂಪಡೆಯಲು ಕಾರಣಗಳೇನು?**

- ಬ್ರಿಟಿಷರ ಒಡೆದು ಆಳುವ ನೀತಿಯ ಪ್ರತೀಕವಾಗಿದ್ದ 1905ರ ಬಂಗಾಳ ವಿಭಜನೆಯನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಿರೋಧಿಸಿತು.
- ಆದರೆ ಬಂಗಾಳಿ ಭಾಷೆಯು ಮುಸ್ಲಿಂ ಮತ್ತು ಹಿಂದೂ ಸಮುದಾಯಗಳನ್ನು ಒಗ್ಗೂಡಿಸುವ ಶಕ್ತಿಯಾಗಿ ಪರಿಣಮಿಸಿತು.
- ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಭಾವೈಕ್ಯತೆಯನ್ನು ಸಾಧಿಸಲು ರಕ್ಷಾಬಂಧನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.
- ಬಂಗಾಳದ ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧಗಳು ವ್ಯಕ್ತವಾದವು.
- ಪ್ರತಿರೋಧದ ಒಂದು ಬಗೆಯಾಗಿ ಸ್ವದೇಶಿ ಚಳವಳಿಯನ್ನು ಪ್ರಾರಂಭಿಸಲಾಯಿತು. ಇದನ್ನು ದೇಶದಾದ್ಯಂತ ಕೊಂಡೊಯ್ದವರು ತೀವ್ರವಾದಿಗಳು.
- ವಿದೇಶಿ ವಸ್ತುಗಳು ಮತ್ತು ಅದನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನು ಬಹಿಷ್ಕರಿಸಲು ಸ್ವದೇಶಿ ಆಂದೋಲನಕ್ಕೆ ಕರೆ ನೀಡಿದರು.
- ಸ್ವದೇಶಿ ವಸ್ತುಗಳನ್ನು ಬಳಸುವಂತೆ ಅವರು ಭಾರತೀಯರನ್ನು ಪ್ರೇರೇಪಿಸಿದರು.
- ಭಾರತೀಯರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಬಂಗಾಳದ ವಿಭಜನೆಯನ್ನು 1911ರಲ್ಲಿ ಬ್ರಿಟಿಷ್ ಸರ್ಕಾರವು ಹಿಂಪಡೆಯಿತು.

## II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

**1. ತೀವ್ರವಾದಿಗಳು ಯಾರನ್ನು ರಾಜಕೀಯ ಭಿಕ್ಷುಕರು ಎಂದು ಕರೆದರು?**

ತೀವ್ರವಾದಿಗಳು ಮಂದಗಾಮಿಗಳನ್ನು ರಾಜಕೀಯ ಭಿಕ್ಷುಕರು ಎಂದು ಕರೆದರು.

**2. 'ಭಾರತ ರಾಷ್ಟ್ರೀಯ ಕಾಂಗ್ರೆಸ್' ಯಾವ ರಾಷ್ಟ್ರೀಯ ಸಮಾವೇಶದಲ್ಲಿ ಹುಟ್ಟಿಕೊಂಡಿತು?**

ಬಾಂಬೆ

**3. 'ಭಾರತ ರಾಷ್ಟ್ರೀಯ ಕಾಂಗ್ರೆಸ್'ನ ಮೊದಲ ಅಧ್ಯಕ್ಷರು ಯಾರು?**

W.C ಬ್ಯಾನರ್ಜಿ.

**4. 'ಭಾರತ ರಾಷ್ಟ್ರೀಯ ಕಾಂಗ್ರೆಸ್'ನ್ನು ಸ್ಥಾಪಿಸಿದವರು ಯಾರು?**

ಎ.ಓ.ಹ್ಯೂಂ

**5. 'ಮಂದಗಾಮಿ ಯುಗ' ಎಂದರೇನು?**

ಸಾಂಪ್ರದಾಯಿಕವಾಗಿ 'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್' ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿ ಯುಗ' ಎನ್ನುತ್ತಾರೆ.

**6. ಮಂದಗಾಮಿ ನಾಯಕರುಗಳನ್ನು ಹೆಸರಿಸಿ.**

W.C ಬ್ಯಾನರ್ಜಿ, ಎಂ.ಜಿ. ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾಬಾಯಿ ನವರೋಜಿ, ಗೋಪಾಕೃಷ್ಣ ಗೋಖಲೆ

**7. 'ಸಂಪತ್ತಿನ ಸೋರುವಿಕೆ ಸಿದ್ಧಾಂತ'ದ ಪ್ರತಿಪಾದಕರು ಯಾರು?**

ದಾದಾಬಾಯಿ ನವರೋಜಿ.

**8. ತೀವ್ರವಾದಿ ನಾಯಕರುಗಳನ್ನು ಹೆಸರಿಸಿ.**

ಅರಬಿಂದೋ ಘೋಷ್, ಬಿಪಿನ್‌ಚಂದ್ರ ಪಾಲ್, ಲಾಜಪತ ರಾಯ್ ಮತ್ತು ಬಾಗಂಗಾಧರ್ ತಿಲಕ್

**9. ಬಂಗಾಳದ ವಿಭಜನೆಯನ್ನು ಮಾಡಿದವರು ಯಾರು?**

ಲಾರ್ಡ ಕರ್ಜನ್

**10. ಬಂಗಾಳದ ವಿಭಜನಗೆ ಮುಖ್ಯ ಕಾರಣವೇನು?**

ಬಂಗಾಳವು ತೀವ್ರ ಸ್ವರೂಪದ ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು. ಇದನ್ನು ಹತ್ತಿಕ್ಕಲು ಬಂಗಾಳವನ್ನು ವಿಭಜಿಸಲಾಯಿಸಲಾಯಿತು.

**11. ಬಂಗಾಳದ ವಿಭಜನೆಯನ್ನು ಯಾವಾಗ ಮಾಡಲಾಯಿತು?**

1905

**12. 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದವರು ಯಾರು?**

ಬಾಲಗಂಗಾಧರ ತಿಲಕ್.

**13. ಬಾಲಗಂಗಾಧರ ತಿಲಕ್‌ರು ಆರಂಭಿಸಿದ ಪತ್ರಿಕೆಗಳು ಯಾವುವು?**

ತಿಲಕರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲೀಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಆರಂಭಿಸಿದರು.

**14. 'ಗೀತಾರಹಸ್ಯ' ಎಂಬ ಗ್ರಂಥವನ್ನು ರಚಿಸಿದವರು ಯಾರು?**

ಬಾಲಗಂಗಾಧರ ತಿಲಕ್.

**15. ಇಂಗ್ಲೆಂಡಿನ ಗುಪ್ತ ಸಂಘಟನೆಗಳನ್ನು ಹೆಸರಿಸಿ.**

ಲೋಟಸ್ ಮತ್ತು ಡಾಗರ್.

## ಅಧ್ಯಾಯ – 8

## ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಗಾಂಧೀಜಿಯವರು ____________ ರಲ್ಲಿ ಜನಿಸಿದರು.**(1869)**
2. ಜಲಿಯನ್ ವಾಲಾಭಾಗ್ ಹತ್ಯಾಕಾಂಡವು ____________ ಕಾಯ್ದೆಗೆ ವಿರುದ್ಧ ನಡೆದ ಹೋರಾಟದ ಪರಿಣಾಮ.**(ರೌಲತ್)**
3. ಅಲಿ ಸಹೋದರರು ನಡೆಸಿದ ಚಳವಳಿ ____________ .**(ಖಿಲಾಫತ್ ಚಳವಳಿ)**
4. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು __________ ರವರು ಮಂಡಿಸಿದರು.**(ಮಹಮದ್ ಆಲಿ ಜಿನ್ನಾ)**
5. 1929ರ ಲಾಹೋರ್‌ನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದ ಅಧ್ಯಕ್ಷರಾಗಿದ್ದವರು ( **ನೆಹರೂ**).
6. ಮಹದ್ ಮತ್ತು ಕಾಲರಾಂ ದೇವಾಲಯ ಚಳವಳಿಯನ್ನು ರೂಪಿಸಿದವರು __________**(ಡಾ.ಬಿ.ಆರ್.ಅಂಬೇಡ್ಕರ್)**
7. ಭಾರತೀಯ ರಾಷ್ಟ್ರೀಯ ಸೇನೆಯ ಝಾನ್ಸಿ ರೆಜಿಮೆಂಟಿನ ನೇತೃತ್ವವನ್ನು __________ ರವರು ವಹಿಸಿದರು.
   **(ಕ್ಯಾಪ್ಟನ್ ಲಕ್ಷ್ಮಿ ಸಹಗಲ್)**
8. ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿ ______________ ಎಂಬಲ್ಲಿ ನಡೆಸಿದರು. **(ದಂಡಿ)**
9. ಕ್ವಿಟ್ ಇಂಡಿಯಾ ಚಳವಳಿಯು ______________ ರಲ್ಲಿ ನಡೆಯಿತು. **(1942)**

**II. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳವನ್ನು ನೀಡಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಭರ್ತಿ ಮಾಡಿ.**

1. ಮೊದಲನೇ ದುಂಡುಮೇಜಿನ ಪರಿಷತ್ ಸಮಾವೇಶ __________ ರಲ್ಲಿ ನಡೆಯಿತು.
   **ಎ) 1930** ಬಿ) 1932 ಸಿ) 1931 ಡಿ) 1942
2. ಸ್ವರಾಜ್ ಪಕ್ಷ ಸ್ಥಾಪಿಸಿದ ವರ್ಷ ____________ .
   ಎ) 1924 **ಬಿ) 1922** ಸಿ) 1929 ಡಿ) 1906
3. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು _________ .
   ಎ) ಸರ್ದಾರ್ ವಲ್ಲಭ ಬಾಯಿ ಪಟೇಲ್ ಬಿ) ಡಾ. ಬಿ.ಆರ್.ಅಂಬೇಡ್ಕರ್

ಸಿ) ಲಾಲ ಲಜಪತ ರಾಯ್ **ಡಿ) ಸುಭಾಷ್ ಚಂದ್ರ ಬೋಸ್**

4. ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು __________ .

ಎ) ಭಗತ್ ಸಿಂಗ್ ಬಿ) ಚಂದ್ರಶೇಖರ್ ಅಜಾದ್

ಸಿ) ಅಬುಲ್ ಕಲಾಂ ಅಜಾದ್ **ಡಿ) ಸರ್ದಾರ್ ವಲ್ಲಭ ಭಾಯಿ ಪಟೇಲ್**

## III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ, ಉತ್ತರಿಸಿ.

**1. ಗಾಂಧೀಜಿಯವರ ಹೋರಾಟದ ಅಂತಃಸತ್ವದ ಸಾಧನಗಳಾವುವು?**

'ಪರೋಕ್ಷ ಪ್ರತಿರೋಧ', 'ಅಹಿಂಸೆ' ಮತ್ತು 'ಸತ್ಯಾಗ್ರಹ'.

**2. ಅಸಹಕಾರ ಚಳವಳಿಯ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ.**

1. ಶಾಲಾ ಕಾಲೇಜುಗಳನ್ನು ಮತ್ತು ನ್ಯಾಯಾಲಯಗಳನ್ನು ಬಹಿಷ್ಕರಿಸುವುದು.
2. 1919ರ ಕಾಯ್ದೆಯನ್ವಯ ಪ್ರಾಂತೀಯ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಯನ್ನು ಬಹಿಷ್ಕರಿಸುವುದು.
3. ಬ್ರಿಟಿಷರು ನೀಡಿರುವ ಗೌರವ ಪದವಿಗಳನ್ನು ಮತ್ತು ಸ್ಥಾನಗಳನ್ನು ವಾಪಸ್ಸು ಮಾಡುವುದು.
4. ಸ್ಥಳೀಯ ಸಭೆಗಳಿಗೆ ನಾಮನಿರ್ದೇಶನಗೊಂಡ ಸದಸ್ಯರು ರಾಜೀನಾಮೆ ನೀಡುವುದು.
5. ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದೆ ಬಹಿಷ್ಕರಿಸುವುದು.
6. ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು.

**3. ಚೌರಿ ಚೌರ ಘಟನೆಯನ್ನು ವಿವರಿಸಿ.**

- ಫೆಬ್ರವರಿ 5, 1922ರಂದು ಉತ್ತರ ಪ್ರದೇಶದ ಗೋರಕ್‌ಪುರ ಜಿಲ್ಲೆಯ ಚೌರಿ ಚೌರ ಎಂಬಲ್ಲಿ ಸುಮಾರು 3000 ರೈತರನ್ನೊಳಗೊಂಡ ದೊಡ್ಡ ಗುಂಪು ಪೊಲೀಸ್ ಸ್ಟೇಷನ್ನಿನ ಮುಂದೆ ಸೇರಿತು.
- ಅವರ ಪ್ರಮುಖ ಉದ್ದೇಶ ಮದ್ಯದ ಅಂಗಡಿಯ ಮುಂದೆ ಮುಷ್ಕರ ನಡೆಸುತ್ತಿದ್ದ ಕಾಂಗ್ರೆಸ್ ಹೋರಾಟಗಾರರನ್ನು ತಳಿಸಿದ ಪೊಲೀಸ್ ಅಧಿಕಾರಿಯ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುವುದು.
- ಇದನ್ನು ಸಹಿಸದ ಪೋಲೀಸರು ಅಲ್ಲಿ ನೆರೆದಿದ್ದವರ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದರು.
- ಇದು ಜನರನ್ನು ಕೆರಳಿಸಿತು. ಅವರು ಪೊಲೀಸ್ ಸ್ಟೇಷನ್ನಿಗೆ ಬೆಂಕಿ ಇಟ್ಟರು.
- ಇದರಿಂದಾಗಿ ಒಳಗಡೆ ಇದ್ದ 22 ಪೊಲೀಸರು ಸಜೀವವಾಗಿ ಸುಟ್ಟುಹೋದರು.

**4. ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ.**

ವೈಸ್‌ರಾಯ್ ಗಾಂಧೀಜಿಯವರ ಮನವಿಗಳನ್ನು ತಿರಸ್ಕರಿಸಿದ ಕಾರಣದಿಂದ 1930 ಮಾರ್ಚ್ 12ರಂದು ಅನುಯಾಯಿಗಳೊಂದಿಗೆ ಸಬರಮತಿ ಆಶ್ರಮದಿಂದ ಗುಜರಾತ್‌ನ ಕಡಲತೀರ ದಂಡಿಯವರೆಗೆ ಸುಮಾರು 375 ಕಿ.ಮೀ. ದೂರವನ್ನು ಕ್ರಮಿಸಿದರು. ಏಪ್ರಿಲ್ 6ರಂದು ಗಾಂಧಿ ದಂಡಿಯನ್ನು ತಲುಪಿ ಬ್ರಿಟಿಷರು ಹೇರಿದ ದಂಡಿಯಲ್ಲಿ ಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನನ್ನು ಮುರಿದರು. ಚರಕ ಈ ಚಳವಳಿಯಲ್ಲಿ ಬಹಳ ಪ್ರಸಿದ್ಧವಾಯಿತು. ಸಾವಿರಾರು ಜನರು ಗಾಂಧಿಜಿಯವರ ಕರೆಗೆ ಸ್ಪಂದಿಸಿ, ಚಳವಳಿಯಲ್ಲಿ ಭಾಗವಹಿಸಿದರು.

**5. ಕ್ವಿಟ್ ಇಂಡಿಯಾ ಚಳವಳಿಯು ವಿಫಲವಾಗಲು ಕಾರಣಗಳೇನು?**

- ಗಾಂಧೀಜಿಯವರು ದೇಶಬಾಂಧವರಿಗೆ 'ಮಾಡು ಇಲ್ಲವೇ ಮಡಿ' ಎನ್ನುವ ಕರೆ ನೀಡಿದರು.
- ಈ ಕರೆ ನೀಡಿದ ಹಿನ್ನೆಲೆಯಲ್ಲಿ ಗಾಂಧೀಜಿ, ನೆಹರು, ರಾಜೇಂದ್ರಪ್ರಸಾದ್, ಅಬುಲ್ ಕಲಾಂ ಅಜಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಆಚಾರ್ಯ ಕೃಪಲಾನಿ, ಕಸ್ತೂರಬಾ ಗಾಂಧಿ ಮೊದಲಾದ ನಾಯಕರನ್ನು ಬ್ರಿಟಿಷ್ ಸರ್ಕಾರವು ಬಂಧಿಸಿ ಜೈಲಿನಲ್ಲಿಟ್ಟಿತು.
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು.

**6. ಎರಡನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶದ ಫಲಿತಾಂಶವೇನು?**

- ಎರಡನೆಯ ದುಂಡು ಮೇಜಿನ ಸಮಾವೇಶದಲ್ಲಿ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವ ಪ್ರಸ್ತಾಪ ಮುಂದಿಟ್ಟರು. ಈ ಪ್ರಸ್ತಾಪವನ್ನು ಗಾಂಧೀಜಿಯವರು ಒಪ್ಪಲಿಲ್ಲ.
- ಇದರಿಂದ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯ ಉಂಟಾಯಿತು.
- ಹೀಗಾಗಿ ಎರಡನೆಯ ದುಂಡು ಮೇಜಿನ ಪರಿಷತ್ತು ಸಮಾವೇಶ ಕೂಡ ಯಾವುದೇ ತೀರ್ಮಾನವಿಲ್ಲದೆ ಮುಕ್ತಾಯಗೊಂಡಿತು.
- ಆದರೆ ಬ್ರಿಟಿಷ್ ಸರ್ಕಾರವು ಅಸ್ಪೃಶ್ಯರನ್ನು ಪ್ರತ್ಯೇಕ ಮತಕ್ಷೇತ್ರವಾಗಿ ಪರಿಗಣಿಸುವುದಾಗಿ ಘೋಷಿಸಿತು.

**6. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.**

- ➢ ಸುಭಾಸ್ ಚಂದ್ರ ಬೋಸ್‍ರು ಗಾಂಧೀಜಿಯವರೊಂದಿಗಿನ ಭಿನ್ನಾಭಿಪ್ರಾಯದಿಂದ ಕಾಂಗ್ರೆಸ್‍ನಿಂದ ಹೊರಬಂದು **ಫಾರ್ವರ್ಡ್ ಬ್ಲಾಕ್** ಎಂಬ ಹೊಸ ಪಕ್ಷ ಕಟ್ಟಿ ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸಿದರು.
- ➢ ಬ್ರಿಟಿಷ್ ಸರಕಾರ ಕಲ್ಕತ್ತಾದಲ್ಲಿ ಸುಭಾಸರನ್ನು ಗೃಹಬಂಧನದಲ್ಲಿಟ್ಟಾಗ ಜನವರಿ 26 1941 ರಂದು ಅಫಘಾನಿಸ್ತಾನದ ಮುಖಾಂತರ ಜರ್ಮನಿಗೆ ಹೋದರು.
- ➢ ಭಾರತ ಸ್ವಾತಂತ್ರ್ಯ ಗಳಿಸಲು ಹಿಟ್ಲರ ಮತ್ತು ಮುಸ್ಸಲೊನಿಯ ಸಹಾಯ ಕೇಳಿದರು.
- ➢ ಜರ್ಮನಿಯಿಂದ ನೇತಾಜಿ ಜಲಂತರ್ಗಾಮಿಯ ಮುಖಾಂತರ ಜಪಾನಿಗೆ ತೆರಳಿದರು.
- ➢ ಜಪಾನಿನಲ್ಲಿ ರಾಸ್ ಬಿಹಾರಿ ಬೋಸ್ ಎಂಬ ಕ್ರಾಂತಿಕಾರಿಯ ಸಹಾಯ ಪಡೆದು ಇಂಡಿಯನ್ ನ್ಯಾಶನಲ್ ಆರ್ಮಿ ಎಂಬ ಸೈನ್ಯವನ್ನು ಕಟ್ಟಿದರು.
- ➢ ಸುಭಾಷ್ ಚಂದ್ರ ಬೋಸರು 'ದೆಹಲಿ ಚಲೋ'ಗೆ ಕರೆಯನ್ನು ನೀಡಿದರು.
- ➢ 'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು.
- ➢ ಐ ಎನ್ ಎ ಸೈನಿಕರು ಕ್ರಿ ಶ 1943 ರಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ರಾಷ್ಟ್ರ ದ್ವಜ ಹಾರಿಸಿದರು.
- ➢ ಕ್ರಿ ಶ 1944 ರಲ್ಲಿ ಭಾರತದ ಗಡಿ ಪ್ರವೇಶಿಸಿ ಕೋಹಿಮಾ ಮತ್ತು ಇಂಫಾಲ್‍ಗಳನ್ನು ಆಕ್ರಮಿಸಿ ಹತ್ತು ಸಾವಿರ ಚದುರ ಮೈಲುಗಳ ಮಣಿಪುರ ಪ್ರದೇಶವನ್ನು ಸ್ವತಂತ್ರಗೊಳಿಸಿದರು.
- ➢ ಕ್ರಿ ಶ 1945 ರಲ್ಲಿ 2 ನೇ ಜಾಗತಿಕ ಮಹಾಯುದ್ಧದಲ್ಲಿ ಜಪಾನ ಸೋತಾಗ ಐ ಎನ್ ಎ ಗೆ ಹಿನ್ನೆಡೆಯಾಯಿತು.
- ➢ ದೃತಿಗೆಡದ ಸುಭಾಸರು ಮುಂದಿನ ಕಾರ್ಯತಂತ್ರ ರೂಪಿಸಲು 1945 ರ ಆಗಷ್ಟನಲ್ಲಿ ಮಂಚೂರಿಯಾಕ್ಕೆ ಪ್ರಯಾಣಿಸುತ್ತಿದ್ದಾಗ ವಿಮಾನ ಅಪಘಾತದಲ್ಲಿ ಹುತಾತ್ಮರಾದರು.

**7. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಬಂಡಾಯಗಳನ್ನು ವಿವರಿಸಿ.**

- ➢ ಬಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗೆ ನೇರವಾಗಿ ಪ್ರೇರಣೆಯಾದವು.
- ➢ ಬುಡಕಟ್ಟು ಬಂಡಾಯಗಳಲ್ಲಿ ಸಂತಾಲರ ದಂಗೆ, ಮುಂಡ ಚಳುವಳಿ ಪ್ರಮುಖವಾಗಿವೆ.
- ➢ ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯವು ಪ್ರಮುಖವಾದುದು.
- ➢ ಇಂಗ್ಲಿಷರು ಜಾರಿಗೆ ತಂದ ಖಾಯಂ ಜಮಿನ್ದಾರಿ ಪದ್ದತಿಯಿಂದ ಸಂತಾಲ ಬುಡಕಟ್ಟು ಜನರು ನಿರ್ಗತಿಕರಾದರು.
- ➢ ಬುಡಕಟ್ಟು ಜನರ ಜಮೀನು ಜಮಿನ್ದಾರರ ಕೈ ಸೇರಿತು. ಇದರಿಂದ ಅಸಮಧಾನಗೊಂಡ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರನ್ನು & ಮಹಾಜನರನ್ನು ಲೂಟಿ ಮಾಡಲು ನಿರ್ಧರಿಸಿದರು. ದಂಗೆಯು ತೀವ್ರವಾಯಿತು.
- ➢ ಬುಡಕಟ್ಟು ಜನರು ಶತ್ರುಗಳನ್ನು ಹತ್ಯೆ ಮಾಡಿದರು.
- ➢ ಜಮೀನ್ದಾರರು, ಲೇವಾದೇವಿಗಾರರು ಪಲಾಯನ ಮಾಡಿದರು.
- ➢ ಸಂತಾಲರ ದಂಗೆಯನ್ನು ಬ್ರಿಟಿಷರು ಸೈನ್ಯವನ್ನು ಬಳಸಿ ಹತ್ತಿಕ್ಕಿದರು.

**8. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರ & ಕಾರ್ಮಿಕರ ಪ್ರತಿಭಟನೆಗಳ ಪಾತ್ರವನ್ನು ವಿವರಿಸಿ.**

- ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಜಮೀನ್ದಾರರು ವಸೂಲಿ ಮಾಡುತ್ತಿದ್ದ ಭೂಕಂದಾಯದ ವಿರುದ್ಧ ರೈತರು ದಂಗೆಯೆದ್ದರು.
- ತೆಲಂಗಾಣದ ರೈತ ಹೋರಾಟವು ಜಮೀನ್ದಾರರು ಹಾಗೂ ನಿಜಾಮನ ರಜಾಕಾರರ ವಿರುದ್ಧ ಪ್ರತಿಭಟಿಸಿತು.
- ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು.
- ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳುವಳಿ ನಡೆಸಿದರು.
- ರೈಲ್ವೆ ಕೂಲಿಗಳು ರೈಲು ನಿಲ್ದಾಣಗಳಲ್ಲಿ ಮುಷ್ಕರ ನಡೆಸಿ ಹೆಚ್ಚಿನ ಕೂಲಿಗಾಗಿ ಇಂಗ್ಲಿಷ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.
- ಕಲ್ಕತ್ತದಲ್ಲಿ ಪ್ರಿಂಟರ್ಸ್ ಯುನಿಯನ್ & ಬಾಂಬೆಯಲ್ಲಿ ಬಟ್ಟೆ ಗಿರಣಿ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಇಂಗ್ಲಿಷ್ ಸರ್ಕಾರದ ವಿರುದ್ಧ ಹೋರಾಟದ ಹಾದಿ ಹಿಡಿದರು.

**9. ಸ್ವತಂತ್ರ ನಂತರ ಜವಹರಲಾಲ್ ನೀಡಿದ ಕೊಡುಗೆಗಳೇನು? ಅಥವಾ ಪ್ರಧಾನ ಮಂತ್ರಿಯಾಗಿ ನೆಹರೂರವರು ರಾಷ್ಟ್ರಕ್ಕೆ ನೀಡಿದ ಕೊಡುಗೆ ಏನು? ಅಥವಾ ನೆಹರುರವರು ಪ್ರಧಾನ ಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.**

- ➢ ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನ ಮಂತ್ರಿಯಾಗಿದ್ದ ನೆಹರುರವರನ್ನು ನಾವು ಕಾಣುತ್ತೇವೆ.
- ➢ ಗೃಹ ಮಂತ್ರಿ ಸರ್ಧಾರ ವಲ್ಲಭಬಾಯಿ ಪಟೇಲ್ ನೇತೃತ್ವದಲ್ಲಿ ದೇಶಿಯ ಸಂಸ್ಥಾನಗಳ ವಿಲೀನಿಕರಣಕ್ಕೆ ನೆಹರು ಕಾರಣರಾದರು.
- ➢ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ಪ್ರಜಾಪ್ರಭುತ್ವಕ್ಕೆ ತಳಹದಿಯನ್ನು ಹಾಕಿದರು.
- ➢ ಬಂಡವಾಳ & ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯನ್ನು ನೆಹರುರವರು ಜಾರಿಗೆ ತಂದರು.

- ಬೃಹತ್ ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ಅವರು ಬಲವಾಗಿ ನಂಬಿದ್ದರು.
- ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯ ಕನಸನ್ನು ಕಂಡರು.
- ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಅಲಿಪ್ತ ನೀತಿ & ಪಂಚಶೀಲತತ್ವಗಳನ್ನು ಅಳವಡಿಸಿ ವಿದೇಶಾಂಗ ನೀತಿಯ ಶಿಲ್ಪಿ ಎಂದು ನೆಹರು ಕರೆಸಿಕೊಂಡರು.
- ಪಂಚಶೀಲ ತತ್ವಗಳ ಆಧಾರದ ಮೇಲೆ ಶಕ್ತಿ ರಾಜಕಾರಣದಿಂದ ದೂರವೇ ಉಳಿದು ಶಾಂತಿ ಸಹಬಾಳ್ವೆಯ ಸೂತ್ರಗಳನ್ನು ಅನುಷ್ಠಾನಕ್ಕೆ ತರಲು ಕಾರಣರಾದರು.

**10. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಧನೆಗಳನ್ನು ವಿವರಿಸಿ.**

- ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು.
- ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದ್ದಿದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ; ಅದು ಕೇವಲ ಮರಿಚೀಕೆಯಾಗಿ ಉಳಿಯುತ್ತದೆ ಎಂದು ಅಂಬೇಡ್ಕರ್‌ರವರು ತಿಳಿದಿದ್ದರು.
- ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಒಟ್ಟಾರೆ ಮುಖವನ್ನು ಪರಿಚಯಿಸಿದರು.
- ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು.
- ಅಸ್ಪೃಶ್ಯರು ಕನಿಷ್ಠ ಮಟ್ಟದ ಅವಕಾಶಗಳಿಂದಲೂ ವಂಚಿತರಾಗಿರುವುದನ್ನು ನಿರೂಪಿಸಲು 'ಮಹದ್' ಕೆರೆ ಮತ್ತು 'ಕಾಲಾರಾಂ' ದೇವಾಲಯ ಚಳವಳಿಗಳನ್ನು ರೂಪಿಸಿದರು.
- ಇವರು ಮೂರೂ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ ಭಾಗವಹಿಸಿ ನಿಮ್ನ ವರ್ಗಗಳು ವಿವಿಧ ಬಗೆಯ ಸಂಕೋಲೆಗಳಿಂದ ಬಿಡುಗಡೆ ಪಡೆಯಲು ಬೇಕಾದ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು.
- ಹರಿಜನೋದ್ಧಾರ ಮತ್ತು ಅಸ್ಪೃಶ್ಯರ ಮುಖಂಡತ್ವಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಮತ್ತು ಅಂಬೇಡ್ಕರ್‌ರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು.
- ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದು ಗಾಂಧಿ ಮತ್ತು ಅಂಬೇಡ್ಕರರ ನಡುವೆ ವಿವಾದಕ್ಕೂ ಕಾರಣವಾಯಿತು.
- ಅಂಬೇಡ್ಕರ್ ಕಾಂಗ್ರೆಸ್ ಪಕ್ಷವನ್ನು ಸೇರದೆ 'ಬಹಿಷ್ಕೃತ ಹಿತಕಾರಣಿ ಸಭಾ' ಎಂಬ ಸಂಘಟನೆಯನ್ನು ಹಾಗೂ 'ಸ್ವತಂತ್ರ ಕಾರ್ಮಿಕ ಪಕ್ಷ' ಎಂಬ ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದರು.
- 'ಪ್ರಬುದ್ಧ ಭಾರತ', 'ಜನತಾ', 'ಮೂಕನಾಯಕ', 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹೊರಡಿಸಿದರು.
- ಕಮ್ಯುನಿಸ್ಟ್ ಮತ್ತು ಸಮಾಜವಾದಿ ಧೋರಣೆಗಳಿಂದ ದೂರವೇ ಉಳಿದು ಕೃಷಿ ಕಾರ್ಮಿಕರ ಏಳಿಗೆಗಾಗಿಯೂ ಇವರು ದುಡಿದರು.

**11. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕ ಬಂಡಾಯಗಳನ್ನು ವಿವರಿಸಿ.**

- ಕಾರ್ಮಿಕರ ಹೋರಾಟವು 1827ರಲ್ಲಿ ಕಲ್ಕತ್ತದಲ್ಲಿ ಆರಂಭವಾಯಿತು. ಸೆಣಬು, ಬಟ್ಟೆಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗತೊಡಗಿದರು.
- ರೈಲ್ವೆ ಕೂಲಿಗಳು ನಿಲ್ದಾಣದಲ್ಲಿ ಮುಷ್ಕರ ನಡೆಸಿ ಹೆಚ್ಚಿನ ಕೂಲಿಗಾಗಿ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.
- ಕಲ್ಕತ್ತದಲ್ಲಿ ಪ್ರಿಂಟರ್ಸ್ ಯೂನಿಯನ್‌ನವರು ಮತ್ತು ಬಾಂಬೆ ಬಟ್ಟೆ ಗಿರಣಿಯ ಕಾರ್ಮಿಕರು ರಾಷ್ಟ್ರೀಯ ಜಾಗೃತಿ ಉಂಟು ಮಾಡಿದರು.
- ಮದ್ರಾಸ್‌ನಲ್ಲಿ ಲೇಬರ್ ಯೂನಿಯನ್ ಸ್ಥಾಪನೆಗೊಂಡಿತು. ನಂತರದಲ್ಲಿ ಕಾರ್ಮಿಕ ಸಂಘಟನೆಗಳು ಸ್ಥಾಪನೆಗೊಂಡವು.
- ಕಾಂಗ್ರೆಸ್, ಕಾರ್ಮಿಕ ಸಂಘಟನೆಗಳ ಇಂತಹ ಚಳವಳಿಗೆ ಬೆಂಬಲ ನೀಡಿತು.
- ಸ್ವಾತಂತ್ರ ಚಳವಳಿಯಲ್ಲಿ ಕಾರ್ಮಿಕರ ಪಾತ್ರವು ಅನನ್ಯವಾದದ್ದು.

**12. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಹೋರಾಟವನ್ನು ವಿವರಿಸಿ.**

- ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರ ಪ್ರತಿಭಟನೆಗಳು ಕೂಡಾ ಪ್ರಮುಖವಾಗಿವೆ.
- ಈ ಪ್ರತಿಭಟನೆಗಳು ಕೆಲವು ರಾಷ್ಟ್ರೀಯ ಕಾಂಗ್ರೆಸ್‌ನಿಂದ ಪ್ರಭಾವಿತವಾಗಿದ್ದರೆ, ಇನ್ನು ಕೆಲವು ಸಂಘಟನೆಗಳು ಮಾರ್ಕ್ಸ್‌ವಾದದಿಂದ ಪ್ರಭಾವಿತವಾಗಿದ್ದವು.
- ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಜಮೀನ್ದಾರರು ಮತ್ತು ಯುರೋಪಿಯನ್ ಪ್ಲಾಂಟರ್‌ಗಳ ವಿರುದ್ಧ ರೈತರು ಹಲವಾರು ಕಡೆ ದಂಗೆ ನಡೆಸಿದರು.
- ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು. ಭೂಕಂದಾಯದ ವಿರುದ್ಧ ಹರತಾಳ ನಡೆಸಿದರು.
- ಶೋಷಣೆಗೊಳಗಾಗಿದ್ದ ರೈತರು ತೀವ್ರವಾಗಿ ಜಮೀನ್ದಾರರು ಹಾಗೂ ಬ್ರಿಟಿಷರ ವಿರುದ್ಧ ಬಂಡೆದ್ದರು.
- ಅಸಹಕಾರ ಆಂದೋಲನ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳವಳಿಗಳಲ್ಲಿ ರೈತರ ಸಮಸ್ಯೆಗಳು ಬೆರೆತವು.
- ಹಲವಾರು ಹೋರಾಟಗಳು ಎಡಪಂಥೀಯ ವಿಚಾರಧಾರೆಗಳಿಂದ ರಚನೆಗೊಂಡ ಕಿಸಾನ್ ಸಭಾದಡಿಯಲ್ಲಿ ಸಂಘಟಿತವಾದವು.
- ಹೋರಾಟಗಳು ಕೆಲವೊಮ್ಮೆ ಕಾಂಗ್ರೆಸ್‌ನೊಂದಿಗೆ ಮತ್ತು ಕೆಲವೊಮ್ಮೆ ಕಾಂಗ್ರೆಸ್ ವಿರುದ್ಧವಾದ ನಿಲುವನ್ನು ಹೊಂದುತ್ತಿದ್ದವು.

- ತೆಲಂಗಾಣದ ರೈತ ಹೋರಾಟವು ಜಮೀನ್ದಾರರು ಹಾಗೂ ನಿಜಾಮನ ರಜಾಕರ ವಿರುದ್ಧ ಪ್ರತಿಭಟಿಸಿತು.
- ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು.
- ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳವಳಿ ನಡೆಸಿದರು.

**13. ಗಾಂಧಿಜಿಯವರು ಆರಂಭಿಸಿದ ಅಸಹಕಾರ ಚಳುವಳಿಯು ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸಿದ ಬಗೆಯನ್ನು ವಿವರಿಸಿ.**

- ಕ್ರಿ ಶ 1920 ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಗೆ ಕರೆಕೊಟ್ಟರು.
- ಭಾರತೀಯರು ಇಂಗ್ಲಿಷರು ನೀಡಿದ್ದ ಬಿರುದುಗಳನ್ನು & ಪುರಸ್ಕಾರಗಳನ್ನು ಸರ್ಕಾರಕ್ಕೆ ಹಿಂತಿರುಗಿಸಿದರು.
- ವಕೀಲರು ತಮ್ಮ ವಕೀಲಿ ವೃತ್ತಿ ತ್ಯಜಿಸಿ ಚಳುವಳಿಗೆ ದುಮುಕಿದರು.
- ಸಾವಿರಾರು ಶಾಲಾ ಕಾಲೇಜು ವಿದ್ಯಾರ್ಥಿಗಳು ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಬಹಿಸ್ಕರಿಸಿದರು.
- ದೇಶಾದ್ಯಂತ ರಾಷ್ಟ್ರೀಯ ಶಾಲೆಗಳು ಆರಂಭಗೊಂಡವು.
- ಗಾಂಧೀಜಿಯವರು ಸ್ವದೇಶಿ ವಸ್ತುಗಳ ಸ್ವೀಕಾರ & ವಿದೇಶಿ ವಸ್ತುಗಳ ಬಹಿಸ್ಕಾರಕ್ಕೆ ಕರೆಕೊಟ್ಟರು.
- ಚಳುವಳಿಗಾರರು ಸರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು.
- ಇಂತಹ ಸಂದರ್ಭದಲ್ಲಿ ಉತ್ತರಪ್ರದೇಶದ ಚೌರಿಚೌರಾ ಎಂಬಲ್ಲಿ ಚಳುವಳಿಗಾರರು ಮತ್ತು ಪೋಲಿಸರ ಮಧ್ಯೆ ಸಂಘರ್ಷವಾಯಿತು ಇದರಲ್ಲಿ 22 ಜನ ಪೋಲಿಸರು ಸಜೀವ ದಹನವಾದರು.
- ಇದರಿಂದ ಮನನೊಂದ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ನಿಲ್ಲಿಸಿದರು.

**14. ಖಿಲಾಫತ್ ಚಳವಳಿಯನ್ನು ವಿವರಿಸಿ.**

- ಟರ್ಕಿಯ ಸುಲ್ತಾನರು ಮುಸ್ಲಿಮರ ಧಾರ್ಮಿಕ ಮುಖಂಡರೂ ಆಗಿದ್ದು, ಖಲೀಫರೆಂದು ಕರೆಸಿಕೊಳ್ಳುತ್ತಿದ್ದರು. ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಖಲೀಫರ ಮೇಲೆ ನಡೆಯುತ್ತಿದ್ದ ಬ್ರಿಟಿಷರ ದೌರ್ಜನ್ಯವನ್ನು ಖಂಡಿಸಿ ಮುಸ್ಲಿಮರು ಜಗತ್ತಿನಾದ್ಯಂತ ಪ್ರತಿಭಟಿಸಿದರು.
- ಅಂತೆಯೇ ಮಹಮದ್ ಅಲಿ ಮತ್ತು ಶೌಕತ್ ಅಲಿ ಸಹೋದರರು ಭಾರತದಲ್ಲಿ ಟರ್ಕರ ಪರವಾದ ಖಿಲಾಫತ್ ಚಳವಳಿಯನ್ನು ಪ್ರಾರಂಭಿಸಿದರು.
- ಹಿಂದೂ ಮುಸ್ಲಿಂಮರು ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಬಂಡೆದ್ದರೆ ಮಾತ್ರ ಬ್ರಿಟಿಷರು ಹಿಮ್ಮೆಟ್ಟುತ್ತಾರೆ ಎನ್ನುವುದು ಗಾಂಧೀಜಿಯವರ ನಂಬಿಕೆಯಾಗಿತ್ತು.
- ಈ ಹಿನ್ನೆಲೆಯಲ್ಲಿ ಮುಸ್ಲಿಮರ ಸಹಭಾಗಿತ್ವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಬಹಳ ಮುಖ್ಯ ಎಂದು ಗಾಂಧೀಜಿ ಭಾವಿಸಿದ್ದರು.
- ಪರಿಣಾಮವಾಗಿ ಗಾಂಧೀಜಿ ಖಿಲಾಫತ್ ಚಳವಳಿಗೆ ತಮ್ಮ ಬೆಂಬಲವನ್ನು ನೀಡಿದರು.
- ಈ ಚಳವಳಿಯು ಹಿಂದೂ ಮುಸ್ಲಿಂಮರು ಒಂದುಗೂಡಿ ನಡೆಸಿದ ರಾಷ್ಟ್ರವ್ಯಾಪೀ ಆಂದೋಲನವಾಗಿದೆ.
- ಅನೇಕ ರಾಷ್ಟ್ರೀಯ ನಾಯಕರು ಮತ್ತು ಕಾಂಗ್ರೆಸ್ ಸಂಘಟನೆಯು ಖಿಲಾಫತ್ ಚಳವಳಿಯ ಬೆಂಬಲಕ್ಕೆ ನಿಂತಿತು.

**15. ಗಾಂಧೀಜಿಯವರ ಸತ್ಯಾಗ್ರಹವನ್ನು ವಿವರಿಸಿ.**

- ಗಾಂಧೀಜಿಯವರ ಹೋರಾಟದ ಬಹುಮುಖ್ಯವಾದ ವಿಧಾನವೇ ಸತ್ಯಾಗ್ರಹ. 'ಸತ್ಯಾಗ್ರಹ' ಎನ್ನುವ ಪದದ ಅರ್ಥ, ಸತ್ಯವನ್ನು ಆಗ್ರಹಿಸುವುದು ಅಥವಾ ಒತ್ತಾಯಿಸುವುದೇ ಆಗಿದೆ.
- ಆಫ್ರಿಕಾದಲ್ಲಿ ಗಾಂಧಿ ಕಂಡುಕೊಂಡು ಬಳಸಿದ ಈ ಅಸ್ತ್ರ ಅವರಿಗೆ ನೈತಿಕ ಶಕ್ತಿಯ ರೂಪವಾಗಿದೆ.
- ಸತ್ಯಾಗ್ರಹವು ಅಹಿಂಸೆಯನ್ನು ಆಧರಿಸಿದ್ದು, ತಪ್ಪು, ಹಿಂಸೆ ಮತ್ತು ಅಸತ್ಯವನ್ನು ಖಡಾಖಂಡಿತವಾಗಿ ನಿರಾಕರಿಸುವ ಕ್ರಮವೂ ಆಗಿದೆ.
- ಈ ಅಸ್ತ್ರವನ್ನು ಭಾರತದ ರಾಷ್ಟ್ರೀಯ ಹೋರಾಟದಲ್ಲಿ ನಿರಂತರವಾಗಿ ಬಳಸಿದರು ಇದು ಒಂದು ದೊಡ್ಡ ಸಾಮಾಜಿಕ ಅನ್ವೇಷಣೆಯಾಗಿದೆ.

**16. ಜಲಿಯನ್‌ವಾಲಾಭಾಗ್ ಹತ್ಯಾಕಾಂಡವನ್ನು ವಿವರಿಸಿ.**

- ಬ್ರಿಟಿಷ್ ಸರ್ಕಾರವು ರೌಲೆತ್ ಕಾಯ್ದೆಯ ಅನುಷ್ಠಾನದ ವಿರುದ್ಧದ ಪ್ರತಿಭಟನೆಗಳನ್ನು ದಮನಿಸಲು ನಿರ್ಧರಿಸಿತ್ತು. ಪಂಜಾಬಿನಲ್ಲಿ ಡಾ. ಫಕುರುದ್ದೀನ್, ಡಾ. ಸತ್ಯಪಾಲ ಮುಂತಾದವರನ್ನು ಬಂಧಿಸಲಾಯಿತು.
- ಇದನ್ನು ವಿರೋಧಿಸಲು 1919 ಏಪ್ರಿಲ್ 13ರಂದು ಪಂಜಾಬ್‌ನ ಅಮೃತ್‌ಸರದ ಜಲಿಯನ್ ವಾಲಾ ಬಾಗ್‌ನಲ್ಲಿ ಜನರು ಬೈಸಾಕೀ ಹಬ್ಬದಂದು ಪ್ರತಿಭಟನಾ ಸಭೆ ಸೇರಿದರು.
- ಅಮೃತಸರದ ಸೈನ್ಯಾಧಿಕಾರಿ ಜನರಲ್ ಡಯರ್ ಅಲ್ಲಿ ನೆರೆದ ಜನರ ಮೇಲೆ ಹತ್ತು ನಿಮಿಷಗಳ ಅವ್ಯಾಹತ ಗುಂಡಿನ ದಾಳಿ ನಡೆಸಿದ ಕಾರಣ ಸುಮಾರು 380 ಜನರು ಸತ್ತು ಸಾವಿರಾರು ಜನರು ಗಾಯಗೊಂಡರು.
- ಈ ಘಟನೆಯು ಗಾಂಧೀಜಿಯನ್ನು ಸೇರಿದಂತೆ ಅನೇಕ ಭಾರತೀಯರನ್ನು ಶೋಕತಪ್ತರನ್ನಾಗಿಸಿತು.
- ಈ ಘಟನೆಯ ನಂತರ ಪಂಜಾಬ್‌ನಲ್ಲಿ ಸೈನಿಕ ಆಡಳಿತ ಜಾರಿಗೊಳಿಸಲಾಯಿತು.

- ಈ ಹತ್ಯಾಕಾಂಡವನ್ನು ವಿರೋಧಿಸಿ ರವೀಂದ್ರನಾಥ ಠಾಗೋರ್ ತಮ್ಮ 'ನೈಟ್‌ಹುಡ್' ಪದವಿಯನ್ನು ಬ್ರಿಟಿಷ್ ಸರ್ಕಾರಕ್ಕೆ ವಾಪಾಸ್ ಮಾಡಿದರು.
- ಗಾಂಧಿ, ಅಸಹಕಾರ ಚಳವಳಿಯನ್ನು ಆರಂಭಿಸಲು ಈ ಪ್ರಕರಣವೂ ಕಾರಣವಾಯಿತು.
- ಮುಗ್ಧ ಭಾರತೀಯ ಹೋರಾಟಗಾರರನ್ನು ಹತ್ಯೆಗೈದ ಜನರಲ್ ಡಯರ್‌ನನ್ನು ಭಾರತದ ಕ್ರಾಂತಿಕಾರಿ ಉದಮ್‌ಸಿಂಗ್‌ನು ಹತ್ಯೆ ಮಾಡಿದನು.

**17. ಕ್ವಿಟ್ ಇಂಡಿಯಾ ಚಳವಳಿಯನ್ನು ವಿವರಿಸಿ.**

- ಬ್ರಿಟಿಷ್ ಸರ್ಕಾರವು ಭಾರತೀಯ ನಾಯಕರೊಂದಿಗೆ ಸಂಧಾನಕ್ಕಾಗಿ ಕಳುಹಿಸಿದ್ದ ಸ್ಟ್ರಾಫರ್ಡ್ ಕ್ರಿಪ್ಸ್ ಆಯೋಗವು ಕೆಲವು ಸಲಹೆಗಳನ್ನು ಭಾರತೀಯರ ಮುಂದಿಟ್ಟಿತು.
- ಈ ಆಯೋಗವು ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ನೀಡುವುದು, ಅದಕ್ಕಾಗಿ ಸಂವಿಧಾನ ರಚಿಸಲು ಸಭೆ ಕರೆಯುವುದು, ಹೊಸ ಸಂವಿಧಾನದಲ್ಲಿ ಭಾರತ ಒಕ್ಕೂಟವನ್ನು ಸೇರುವ ಅಥವಾ ಬಿಡುವ ಸ್ವಾತಂತ್ರ್ಯವನ್ನು ಸಂಬಂಧಿಸಿದ ರಾಜ್ಯಗಳಿಗೆ ಬಿಡುವಂತಹ ಸಲಹೆಗಳನ್ನು ನೀಡಿತು.
- ಈ ಸಲಹೆಗಳನ್ನು ಕಾಂಗ್ರೆಸ್ ಒಪ್ಪದೆ ಕ್ವಿಟ್ ಇಂಡಿಯಾ ಚಳವಳಿಗೆ ಕರೆ ನೀಡಿತು. 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎನ್ನುವುದು ಕ್ವಿಟ್ ಇಂಡಿಯಾ ಚಳವಳಿಯ ಆಶಯವಾಗಿತ್ತು.
- ಗಾಂಧೀಜಿಯವರು ದೇಶಬಾಂಧವರಿಗೆ 'ಮಾಡು ಇಲ್ಲವೇ ಮಡಿ' ಎನ್ನುವ ಕರೆ ನೀಡಿದರು.
- ಈ ಕರೆ ನೀಡಿದ ಹಿನ್ನೆಲೆಯಲ್ಲಿ ಗಾಂಧೀಜಿ, ನೆಹರು, ರಾಜೇಂದ್ರಪ್ರಸಾದ್, ಅಬುಲ್ ಕಲಾಂ ಅಜಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಆಚಾರ್ಯ ಕೃಪಲಾನಿ, ಕಸ್ತೂರಬಾ ಗಾಂಧಿ ಮೊದಲಾದ ನಾಯಕರನ್ನು ಬ್ರಿಟಿಷ್ ಸರ್ಕಾರವು ಬಂಧಿಸಿ ಜೈಲಿನಲ್ಲಿಟ್ಟಿತು.
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು.

**18. ಮಹಮದ್ ಅಲಿ ಜಿನ್ನಾ ಅವರ ಸಾಧನೆಗಳನ್ನು ವಿವರಿಸಿ.**

- ಮಹಮದ್ ಅಲಿ ಜಿನ್ನಾರವರು 1906ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು ಹಾಗೂ ದಾದಾಬಾಯಿ ನವರೋಜಿಯವರ ಖಾಸಗಿ ಕಾರ್ಯದರ್ಶಿಯಾಗಿಯೂ ಕೆಲಸವನ್ನು ನಿರ್ವಹಿಸಿದ್ದರು.
- ತಿಲಕರ ವಿರುದ್ಧದ ಮೊಕದ್ದಮೆಗಳ ಸಂದರ್ಭದಲ್ಲಿ ಅವರ ಪರವಹಿಸಿದ್ದರಿಂದ, ಇದು ಜಿನ್ನಾರವರಿಗೆ ಅತೀವ ಪ್ರಶಂಸೆಯನ್ನು ತಂದುಕೊಟ್ಟಿತು. ಇವರು ಹೋಂ ರೂಲ್ ಲೀಗ್‌ನ್ನು ಸೇರಿದರು.
- 1916ರ ಅನೇಕ ಸಮಾವೇಶಗಳಲ್ಲಿ ಹಿಂದೂ ಮತ್ತು ಮಹಮದೀಯರ ನಡುವಿನ ಏಕತೆಯ ಅಗತ್ಯವನ್ನು ತಿಳಿಸಿದರು.
- ಮುಸ್ಲಿಂಪರ ರಾಜಕಾರಣಿ ಎಂದು ಬಿಂಬಿತವಾಗಿದ್ದರಿಂದ ಬ್ರಿಟಿಷರ ಬಳುವಳಿಯನ್ನು ಜಿನ್ನಾ ಅವರು ವಿರೋಧಿಸಿದರು.
- ರೌಲತ್ ಕಾಯ್ದೆಯನ್ನು ವಿರೋಧಿಸಿ ಅವರು ತಮ್ಮ ಕೇಂದ್ರಿಯ ಶಾಸನ ಸಲಹಾ ಸಮಿತಿಗೆ ರಾಜೀನಾಮೆಯನ್ನಿತ್ತರು.
- ದುಂಡು ಮೇಜಿನ ಸಮಿತಿಗಳಲ್ಲಿ ಜಿನ್ನಾ ತಾನೊಬ್ಬ ರಾಷ್ಟ್ರೀಯವಾದಿ ಮುಸಲ್ಮಾನನೆಂದು ಘೋಷಿಸಿಕೊಂಡರು.
- 1937ರ ಚುನಾವಣೆಯ ನಂತರ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸಮ್ಮಿಶ್ರ ಸರ್ಕಾರವನ್ನು ರೂಪಿಸಲು ವಿಫಲವಾದಾಗ ಜಿನ್ನಾ ತನ್ನ ಕಾರ್ಯತಂತ್ರವನ್ನು ಬದಲಾಯಿಸಿಕೊಂಡರು.
- ಬ್ರಿಟಿಷರು ಸ್ವಾತಂತ್ರ್ಯ ನೀಡುವ ಸಂದರ್ಭ ಹತ್ತಿರವಾದಂತೆ ಜಿನ್ನಾರವರು ಪಾಕಿಸ್ತಾನದ ಬೇಡಿಕೆಯನ್ನು ವಿವಿಧ ರೀತಿಯಲ್ಲಿ ತೀವ್ರಗೊಳಿಸಿದರು.
- ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವ ಸಮಯದಲ್ಲಿ ದೇಶವನ್ನು ವಿಭಜಿಸಿ ಪಾಕಿಸ್ತಾನವನ್ನು ಪಡೆದರು.

**19. ಭಾರತದ ವಿಭಜನೆಯನ್ನು ವಿವರಿಸಿ.**

- ಸ್ವಾತಂತ್ರ್ಯ ಚಳವಳಿಯ ಉದ್ದಕ್ಕೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಖಂಡ ರಾಷ್ಟ್ರದ ಕಲ್ಪನೆಯನ್ನು ಹೊಂದಿತ್ತು. ಆದರೆ ಮಹಮದ್ ಅಲಿ ಜಿನ್ನಾ ಅವರು ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮಂಡಿಸುತ್ತಲೇ ಇದ್ದರು.
- ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನದಲ್ಲಿ ಜಿನ್ನಾ ಹಿಂದೂ ಮತ್ತು ಮುಸ್ಲಿಮರು ಒಂದು ದೇಶವಾಗಲು ಸಾಧ್ಯವೇ ಇಲ್ಲ ಎಂದು ಘೋಷಿಸಿದರು.
- ಎರಡನೆಯ ಮಹಾಯುದ್ಧ ಮುಗಿದು ಬ್ರಿಟನ್‌ನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತು.
- ಇದು ಕ್ಯಾಬಿನೆಟ್ ನಿಯೋಗವನ್ನು ಭಾರತಕ್ಕೆ ಸ್ವಯಂ ಅಧಿಕಾರವನ್ನು ನೀಡುವ ಕುರಿತು ಚರ್ಚಿಸಲು ಕಳುಹಿಸಿತು.
- ಈ ನಿಯೋಗವು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನೊಂದಿಗೆ ಚರ್ಚಿಸಿತು.
- ಭಾರತಕ್ಕೆ ಫೆಡರಲ್ ಮಾದರಿ ಸರ್ಕಾರವನ್ನು ಸೂಚಿಸಿತು.
- ಆದರೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಮಧ್ಯಂತರ ಸರ್ಕಾರ ರಚಿಸುವ ವಿಚಾರದಲ್ಲಿ ಭಿನ್ನತೆ ಉಂಟಾಯಿತು.
- ಮುಸ್ಲಿಂಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡಿತು.

- ಇದರಿಂದ ದೇಶಾದ್ಯಂತ ಕೋಮುಗಲಭೆಗಳು ನಡೆದವು.
- ಬ್ರಿಟಿಷ್ ಸರ್ಕಾರ ಶೀಘ್ರವಾಗಿ ಅಧಿಕಾರವನ್ನು ಹಸ್ತಾಂತರಿಸುವುದಾಗಿ ತಿಳಿಸಿ, ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭಾರತಕ್ಕೆ ವೈಸ್‌ರಾಯ್ ಆಗಿ ಕಳುಹಿಸಿತು.
- ಬ್ಯಾಟನ್‌ರವರು ಗಾಂಧೀಜಿ, ಜಿನ್ನಾ ಮತ್ತಿತರ ನಾಯಕರೊಂದಿಗೆ ಮಾತುಕತೆ ನಡೆಸಿ ಭಾರತವನ್ನು ವಿಭಜಿಸುವ ಯೋಜನೆಯನ್ನು ರೂಪಿಸಿದರು.

**20. ಅಸಹಕಾರ ಚಳವಳಿಯ ಸಂದರ್ಭದಲ್ಲಿ ಆದ ಪ್ರಮುಖ ಬೆಳವಣಿಗೆಗಳನ್ನು ಬರೆಯಿರಿ.**

- ದೇಶಬಂಧು ಚಿತ್ತರಂಜನ್‌ದಾಸ್, ಮೋತಿಲಾಲ್ ನೆಹರೂ, ರಾಜೇಂದ್ರ ಪ್ರಸಾದ್ ಮೊದಲಾದ ಹಿರಿಯ ವಕೀಲರು ತಮ್ಮ ವಕೀಲವೃತ್ತಿಯನ್ನು ಬಿಟ್ಟರು.
- ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ತೊರೆದರು.
- ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸದೆ ಕಾಂಗ್ರೆಸ್ 1919ರ ಕಾಯ್ದೆಯ ಅಡಿಯಲ್ಲಿ ಪ್ರಾಂತ್ಯಗಳಿಗೆ ನಡೆದ ಚುನಾವಣೆಯನ್ನು ಬಹಿಷ್ಕರಿಸಿತು.
- ಕಾಶಿ ವಿದ್ಯಾಪೀಠ, ಗುಜರಾತ್ ವಿದ್ಯಾಪೀಠ, ಬಿಹಾರ ವಿದ್ಯಾಪೀಠ ಮತ್ತು ಜಾಮೀಯಾ ಮಿಲಿಯಾ ಇಸ್ಲಾಮಿಯಾ ರಾಷ್ಟ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಲಾಯಿತು.
- ರವಿಂದ್ರನಾಥ ಠಾಗೂರರ ತಮ್ಮ **'ನೈಟ್ ವುಡ್'** ಪದವಿಯನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಂದಿರುಗಿಸಿದರು.
- ಮಹಿಳೆಯರೂ ಸೇರಿದಂತೆ ಜನಸಾಮಾನ್ಯರು ಕಾಂಗ್ರೆಸ್ ಹೋರಾಟಕ್ಕೆ ದೇಣಿಗೆ ನೀಡಿದರು. ವಿದೇಶಿ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳ ಮುಂದೆ ಮುಷ್ಕರ ನಡೆಸಲಾಯಿತು ಮತ್ತು ವಿದೇಶಿ ಬಟ್ಟೆಗಳನ್ನು ಸುಡಲಾಯಿತು.
- 1921ರಲ್ಲಿ 'ಪ್ರಿನ್ಸ್ ಆಫ್ ವೇಲ್ಸ್' ರಾಜಕುಮಾರ ಬರುವ ಕಾರ್ಯಕ್ರಮವನ್ನು ವಿರೋಧಿಸಲಾಯಿತು.

**21. ಅಸಹಕಾರ ಚಳವಳಿಯ ಪರಿಣಾಮಗಳೇನು?**

- ಈ ಚಳವಳಿಯ ಪ್ರಮುಖ ಉದ್ದೇಶಗಳು ಕೈಗೂಡದಿದ್ದರೂ ಕೆಲವು ಗಂಭೀರ ಪರಿಣಾಮಗಳನ್ನು ಸೃಷ್ಟಿಸಿತ್ತು.
- ಪ್ರಮುಖವಾಗಿ ರಾಷ್ಟ್ರೀಯ ಹೋರಾಟ ಜನರ ಹೋರಾಟವಾಗಿ ರೂಪಾಂತರವಾಯಿತು.
- ಕಾಂಗ್ರೆಸ್ ಪ್ರಣೀತ ಚಳವಳಿಯು ಕ್ರಾಂತಿಕಾರಕ ಆಯಾಮಗಳನ್ನು ಪಡೆಯಿತು.
- ಹಿಂದೂ ಮುಸ್ಲಿಂ ಭ್ರಾತೃತ್ವವನ್ನು ತಾತ್ಕಾಲಿಕವಾಗಿಯಾದರೂ ಸೃಷ್ಟಿಸಿತು.
- ರಾಷ್ಟ್ರೀಯ ಹೋರಾಟ, ನಗರಗಳನ್ನು ದಾಟಿ ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಲು ಪ್ರಾರಂಭಿಸಿತು.
- ಅಸ್ಪೃಶ್ಯತೆ ನಿವಾರಣೆ, ಮಹಿಳೆಯರಿಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಮುಂತಾದವು ಗಮನಿಸಲೇಬೇಕಾದ ಪರಿಣಾಮಗಳಾಗಿವೆ.

# ಅಧ್ಯಾಯ – 9

# ಸ್ವಾತಂತ್ರ್ಯೋತ್ತರ ಭಾರತ

**ಮುಖ್ಯಾಂಶಗಳು:**

- **1950ರ ಜನವರಿ 26**ರಂದು ಭಾರತದ ಸಂವಿಧಾನ ಜಾರಿಗೆ ಬಂದಿತು.
- ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ **562** ಸಂಸ್ಥಾನಗಳಿದ್ದವು.
- ಸಂಸ್ಥಾನಗಳ ವಿಲೀನಿಕರಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದವರು ಗೃಹಮಂತ್ರಿ. **ಸರ್ಧಾರ್ ವಲ್ಲಭಬಾಯಿ ಪಟೇಲರು.**
- ಗೋವಾವನ್ನು ಪೋರ್ಚಗೀಸರಿಂದ ವಿಮೋಚನೆಗೊಳಿಸಿದ ವರ್ಷ – **1961.**
- **42ನೇ ತಿದ್ದುಪಡಿಯ** ಮೂಲಕ 'ಜಾತ್ಯತೀತ' ಮತ್ತು 'ಸಮಾಜವಾದಿ' ಎಂಬ ಎರಡು ಅಂಶಗಳನ್ನು **1976**ರಲ್ಲಿ ಸೇರಿಸಲಾಯಿತು.
- ಭಾರತದ 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದವರು **ವಲ್ಲಭಭಾಯಿ ಪಟೇಲ್.**
- **1953**ರಲ್ಲಿ ಸರ್ಕಾರವು ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ರಚಿಸಿತು.
- ರಾಜ್ಯ ಪುನರ್ವಿಂಗಡಣಾ ಆಯೋಗದ **ಫಜಲ್ ಅಲಿ** ಅಧ್ಯಕ್ಷರಾಗಿ **ಕೆ.ಎಂ.ಫಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು** ಸದಸ್ಯರಾಗಿದ್ದರು.
- ವಿಶಾಲಾಂಧ್ರ ರಾಜ್ಯ ರಚಿಸಬೇಕೆಂದು ಆಂಧ್ರಮಹಾಸಭಾದ ನೇತೃತ್ವದಲ್ಲಿ **1952ರಲ್ಲಿ ಪೊಟ್ಟಿ ಶ್ರೀರಾಮುಲು 58** ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದರು.
- ಮೊದಲ ಭಾಷಾವಾರು ರಾಜ್ಯವಾಗಿ **1953ರಲ್ಲಿ ಆಂಧ್ರಪ್ರದೇಶ** ರಚನೆಯಾಯಿತು.
- **1956 ನವೆಂಬರ್ 1** ರಂದು ವಿಶಾಲ **'ಮೈಸೂರು ರಾಜ್ಯ'**ವು ಅಸ್ತಿತ್ವಕ್ಕೆ ಬಂದಿತು.
- ಇಂದು ಭಾರತದಲ್ಲಿ ಒಟ್ಟು **29 ರಾಜ್ಯಗಳು** ಮತ್ತು ದೆಹಲಿಯೂ ಸೇರಿದಂತೆ **7 ಕೇಂದ್ರಾಡಳಿತ ಪ್ರದೇಶಗಳು** ಇವೆ.

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಕಂಪನಿಯ ಕೊನೆಯ ಗೌರ್‍ನರ್ ಜನರಲ್ __________ ಆಗಿದ್ದನು.(**ಲಾರ್ಡ ಮೌಂಟ್ ಬ್ಯಾಟನ್**)
2. ಭಾರತದ ಪ್ರಥಮ ಗೃಹಮಂತ್ರಿ __________ ಆಗಿದ್ದರು. (**ವಲ್ಲಭಭಾಯಿ ಪಟೇಲ್**)
3. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು __________ . (**ಡಾ.ಬಾಬು ರಾಜೇಂದ್ರ ಪ್ರಸಾದ್**)
4. ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಗಿ __________ರಲ್ಲಿ ಸೇರಿತು.(**1963**)
5. ರಾಜ್ಯ ಪುನರ್ವಿಂಗಡಣಾ ಕಾನೂನು __________ ರಲ್ಲಿ ಜಾರಿಗೆ ಬಂದಿತು.(**1956**)

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1. ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?**

- ಲಕ್ಷಾಂತರ ನಿರಾಶ್ರಿತರ ಸಮಸ್ಯೆ,
- ಕೋಮುಗಲಭೆಗಳು,
- ಸರ್ಕಾರದ ರಚನೆ,
- ದೇಶೀಯ ಸಂಸ್ಥಾನಗಳ ವಿಲೀನಿಕರಣ
- ಆಹಾರದ ಉತ್ಪಾದನೆ,
- ಕೃಷಿ ಬೆಳವಣಿಗೆ,
- ಕೈಗಾರಿಕೆಗಳ ಬೆಳವಣಿಗೆ ಮುಂತಾದ ಸಮಸ್ಯೆಗಳನ್ನು ಎದುರಿಸಬೇಕಾಯಿತು.

**2. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?**

- ನಿರಾಶ್ರಿತರ ಸಮಸ್ಯೆಗಳನ್ನು ಮಾನವೀಯ ನೆಲೆಯಲ್ಲಿ ನೋಡಿ ಪರಿಹಾರಗಳನ್ನು ನೀಡಲಾಯಿತು.
- ನಿರಾಶ್ರಿತರ ಬೃಹತ್ ಸಂಖ್ಯೆ ಮತ್ತು ಸಮಸ್ಯೆಗಳು ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ನೇತ್ಯಾತ್ಮಕ ಪರಿಣಾಮಗಳನ್ನು ಉಂಟುಮಾಡಿದ್ದರೂ, ಭಾರತವು ಮಾನವೀಯತೆಯನ್ನು ಬಿಟ್ಟುಕೊಡಲಿಲ್ಲ.
- ನೆಹರು ಅವರ ಕಾಲದಿಂದಲೇ ಟಿಬೆಟ್‌ನಿಂದ ಅನೇಕ ಜನರು ನಿರಾಶ್ರಿತರಾಗಿ ಭಾರತಕ್ಕೆ ಬಂದಿದ್ದಾರೆ, ಅಂದಾಜಿನ ಪ್ರಕಾರ ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರ ಟಿಬೆಟಿಯನ್ ನಿರಾಶ್ರಿತರು ಭಾರತದಲ್ಲಿದ್ದಾರೆ.
- ಅವರಿಗೆ ವಸತಿ, ಉದ್ಯೋಗ, ಭೂಮಿ, ಆರೋಗ್ಯ ಸೌಲಭ್ಯ ಒದಗಿಸಬೇಕಾಯಿತು.
- 1960 ರ ದಶಕದಲ್ಲಿ ಅಂದಿನ ಮೈಸೂರು ಸರಕಾರ ಮೈಸೂರು ಜಿಲ್ಲೆಯ ಬೈಲಕುಪ್ಪೆ ಎಂಬಲ್ಲಿ ಟಿಬೆಟಿಯನ್ ನಿರಾಶ್ರಿತರಿಗಾಗಿ ಸುಮಾರು 3000 ಎಕರೆಗಳ ಜಮೀನನ್ನು ಮಂಜೂರು ಮಾಡಿತು.

**3. ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಗೊಳಿಸಿದ ರೀತಿಯನ್ನು ವಿವರಿಸಿ.**

ಸ್ವಾತಂತ್ರ್ಯದ ನಂತರದಲ್ಲಿ ಪ್ರೆಂಚ್ ವಸಾಹತುಶಾಹಿಗಳು ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳ ಮೇಲಿನ ಹಿಡಿತವನ್ನು ಮುಂದುವರಿಸಿದ್ದರು. ಇವು ಭಾರತಕ್ಕೆ ಸೇರಬೇಕೆಂದು ಕಾಂಗ್ರೇಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ 1954 ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರ್ಪಡೆಗೊಂಡವು.

**4. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?**

- ಭಾರತ ಸ್ವಾತಂತ್ರ್ಯಾನಂತರವೂ ಗೋವಾ ಪೋರ್ಚಗೀಸರ ಆಳ್ವಿಕೆಯಲ್ಲಿತ್ತು.
- ಗೋವಾವನ್ನು ಭಾರತಕ್ಕೆ ಸೇರಬೇಕೆಂದು ನಿರಂತರವಾಗಿ ಚಳುವಳಿ ನಡೆಯಿತು.
- ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಗೋವಾ ವಿಮೋಚನಾ ಚಳುವಳಿಯನ್ನು ಬೆಂಬಲಿಸಿತು.
- ಪೋರ್ಚಗೀಸ್ ಸರಕಾರ ಚಳುವಳಿಗಾರರ ಮೇಲೆ ದಮನಕಾರಿ ಕ್ರಮಗಳನ್ನು ಕೈಗೊಂಡಿತು.
- ಇದರಿಂದಾಗಿ ಪೋಲಿಸರ ದೌರ್ಜನ್ಯ ಹೆಚ್ಚಿತು. 1961ರಲ್ಲಿ ಭಾರತದ ಸೈನ್ಯ ಮಧ್ಯಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.

**5. ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಕುರಿತು ಬರೆಯಿರಿ.**

- ಭಾರತ ಸ್ವತಂತ್ರಾನಂತರ ದೇಶದಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಯಿತು.
- ವಿಶಾಲಾಂದ್ರ ರಚಿಸಬೇಕೆಂದು 1952ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಕಾಲ ಉಪವಾಸ ಮಾಡಿ ಅಸುನೀಗಿದ ನಂತರ ಈ ಬೇಡಿಕೆ ತೀವ್ರ ಸ್ವರೂಪವನ್ನು ಪಡೆಯಿತು.
- ಹೋರಾಟದ ಸ್ವರೂಪವನ್ನು ಅರಿತ ಕೇಂದ್ರ ಸರಕಾರ 1953ರಲ್ಲಿ ರಾಜ್ಯಗಳ ಪುನರ್ ವಿಂಗಡನೆಗೆ ಫಜಲ್ ಅಲಿಯವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಿತು.
- ಕೆ.ಎಂ.ಪಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು ಸದಸ್ಯರಾಗಿದ್ದರು.
- ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡನಾ ಕಾನೂನು ಜಾರಿಗೆ ಬಂದಿತು.

**6. ದೇಶೀಯ ಸಂಸ್ಥಾನಗಳ ವಿಲೀನೀಕರಣವನ್ನು ಸರ್ದಾರ ವಲ್ಲಭಭಾಯಿ ಪಟೇಲರು ಹೇಗೆ ಸಮರ್ಥವಾಗಿ ನಿಭಾಯಿಸಿದರು? ವಿವರಿಸಿ.**

- ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು.
- 1947 ರ ವಿಲೀನ ಕಾಯ್ದೆಯ ಪ್ರಕಾರ ಭಾರತ ಸರ್ಕಾರ ಎಲ್ಲಾ ದೇಶಿಯ ಸಂಸ್ಥಾನಗಳನ್ನು
- ಭಾರತ ಒಕ್ಕೂಟಕ್ಕೆ ಸೇರಿಸಿಕೊಳ್ಳಲು ಗೃಹ ಮಂತ್ರಿ ಸರ್ದಾರ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಆಹ್ವಾನ ನೀಡಿತು.
- ಈ ರೀತಿ ವಿಲೀನಗೊಂಡವರಿಗೆ ಪ್ರತಿಯಾಗಿ ರಾಜ್ಯಾದಾಯವನ್ನು ಆಧರಿಸಿ ರಾಜಧನವನ್ನು ನಿಗದಿಪಡಿಸಿತು.
- ಸಂಸ್ಥಾನಗಳ ವಿಲೀನಗೊಳ್ಳುವ ಪ್ರಕ್ರಿಯೆಯಲ್ಲಿ ಜುನಾಗಡ್, ಹೈದ್ರಾಬಾದ್ ಮತ್ತು ಜಮ್ಮು ಕಾಶ್ಮೀರ ಸಂಸ್ಥಾನಗಳು ತೀವ್ರ ಪ್ರತಿರೋಧವನ್ನು ತೋರಿದವು.
- ಭಾರತದ ಗೃಹ ಮಂತ್ರಿ ಸರ್ದಾರ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಜನಾಭಿಪ್ರಾಯ & ಸೈನಿಕ ಕಾರ್ಯಾಚರಣೆ ಮೂಲಕ ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು.

**7. ಸರ್ದಾರ ಪಟೇಲರು ಹೈದರಾಬಾದಿನ ಮೇಲೆ ಪೋಲಿಸ್ ಕಾರ್ಯಾಚರಣೆ ಕೈಗೊಳ್ಳಲು ಕಾರಣವೇನು?**

- ಭಾರತ ಸ್ವತಂತ್ರ ಪಡೆದ ಸಂದರ್ಭದಲ್ಲಿ ಹೈದರಾಬಾದ ನಿಜಾಮನು ಸ್ವತಂತ್ರವಾಗಿ ಉಳಿಯುವ ಉದ್ದೇಶದಿಂದ ಭಾರತದ ಒಕ್ಕೂಟಕ್ಕೆ ಸೇರಲು ನಿರಾಕರಿಸಿದನು.
- ಇದರಿಂದ ಸಾಕಷ್ಟು ಹೋರಾಟಗಳು ನಡೆದವು.
- ಭಾರತ ಸರಕಾರ ನಿಜಾಮನೊಂದಿಗೆ ನಡೆಸಿದ ಮಾತುಕತೆಗಳು ಫಲಪ್ರದವಾಗಲಿಲ್ಲ.
- ನಿಜಾಮರು ಭಾರತದೊಂದಿಗೆ ಯುದ್ಧ ಮಾಡಲು ಯುದ್ಧ ಸಾಮಗ್ರಿಗಳನ್ನು ಆಮದು ಮಾಡಿಕೊಂಡನು.
- ಇದನ್ನರಿತ ಸರ್ದಾರ ಪಟೇಲರು ಹೈದರಾಬಾದ ಮೇಲೆ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ 1948 ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಿದರು.

**8. ಜಮ್ಮು & ಕಾಶ್ಮೀರದ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ. ಅಥವಾ  ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ ಹೇಗೆ? ಚರ್ಚಿಸಿ.**

- ಜಮ್ಮು & ಕಾಶ್ಮೀರದ ಅರಸ ಹರಿಸಿಂಗ್ ಭಾರತದ ಒಕ್ಕೂಟ ಸೇರುವಲ್ಲಿ ವಿಳಂಬ ಮಾಡಿದ್ದು ಸಮಸ್ಯೆಗೆ ಕಾರಣವಾಯಿತು.
- ಪಾಕಿಸ್ತಾನವು ಕಾಶ್ಮೀರವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿ ದಾಳಿ ಮಾಡಿತು. ಭಾರತದ ಸೇನೆ ಕಾಶ್ಮೀರದ ರಕ್ಷಣೆಗೆ ಧಾವಿಸಿ ಈ ದಾಳಿಯನ್ನು ಹಿಮ್ಮೆಟ್ಟಿಸಿತು.
- ಅಕ್ಟೋಬರ್ 26 1947 ರಂದು ಕಾಶ್ಮೀರದ ಮಹಾರಾಜ ಹರಿಸಿಂಗ್ & ನ್ಯಾಶನಲ್ ಕಾನ್ಫರೆನ್ಸ್ ಪಕ್ಷದ ಷಇಂಕು ಅಬ್ದುಲ್ಲಾರ ಬೆಂಬಲದೊಂದಿಗೆ ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಲು ಒಪ್ಪಿದರು.
- ಪಾಕಿಸ್ತಾನವು ಕಾಶ್ಮೀರದ ವಿಲೀನವನ್ನು ಪ್ರಶ್ನಿಸಿ ವಿಶ್ವಸಂಸ್ಥೆಯಲ್ಲಿ ದಾವೆ ಹೂಡಿತು.
- ಯುದ್ಧ ಸ್ಥಂಭನಕ್ಕೆ ವಿಶ್ವಸಂಸ್ಥೆ ಆದೇಶ ನೀಡಲು ಕೆಲವೊಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು. ಇದನ್ನು ಪಾಕ್ ಆಕ್ರಮಿತ ಕಾಶ್ಮೀರ ಎಂದು ಕರೆಯಲಾಗುತ್ತದೆ.
- ಕಾಶ್ಮೀರ ಸಮಸ್ಯೆ ಇಂದಿಗೂ ಸಮಸ್ಯೆಯಾಗಿ ಉಳಿದಿದೆ.

**9. ಭಾರತ ಒಕ್ಕೂಟಕ್ಕೆ ಸೇರಲು ನಿರಾಕರಿಸಿದ ಸಂಸ್ಥಾನಗಳು ಯಾವುವು?**

1. ಜುನಾಗಡ. 2. ಹೈದರಾಬಾದ್ 3. ಜಮ್ಮು–ಕಾಶ್ಮೀರ. 3. ಪಾಂಡಿಚೇರಿ. 4. ಗೋವಾ

**10. ಹೈದರಾಬಾದ್ ಭಾರತದ ಒಕ್ಕೂಟದಲ್ಲಿ ವಿಲೀನವಾದ ಬಗೆ ಹೇಗೆ?**

- ಕಮ್ಯುನಿಷ್ಟರ ನೇತೃತ್ವದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟವು ನಿಜಾಮನ ವಿರುದ್ಧ ನಡೆಯುತ್ತಿತ್ತು.
- ನಿಜಾಮನ ಕ್ರೂರಪಡೆ ರಜಾಕಾರರ ವಿರುದ್ದ ಜನತೆಯಲ್ಲಿ ವ್ಯಾಪಕ ವಿರೋಧವಿತ್ತು.
- ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ 1948 ರಲ್ಲಿ ಹೈದರಾಬಾದನ್ನು ವಿಲೀನಗೊಳಿಸಿತು.
- ಸರದಾರ ಪಟೇಲರು ದೃಢಮನಸ್ಸಿನಿಂದ ಈ ಬಿಕ್ಕಟ್ಟಿಗೆ ಪರಿಹಾರ ನೀಡಿದರು.

**11. ಜುನಾಗಢ ಭಾರತದ ಒಕ್ಕೂಟವನ್ನು ಹೇಗೆ ಸೇರ್ಪಡೆಗೊಂಡಿತು?**

- ಜುನಾಗಢದ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿ ವಿಲೀನೀಕರಣ ಕಾನೂನಿಗೆ ಸಹಿ ಹಾಕಿದನು.
- ಆಗ ಪ್ರಜೆಗಳು ಆತನ ವಿರುದ್ಧ ಬೀದಿಗಿಳಿದರು.
- ಇದನ್ನು ಎದುರಿಸಲಾಗದೆ ನವಾಬನು ರಾಜ್ಯ ಬಿಟ್ಟು ಪಲಾಯನ ಮಾಡಿದನು.
- ಅಲ್ಲಿನ ದಿವಾನ ಭಾರತ ಸರ್ಕಾರಕ್ಕೆ ಮಾಡಿದ ಮನವಿಯನ್ನು ಆಧರಿಸಿ ಸೈನ್ಯವನ್ನು ಕಳುಹಿಸಿ ಶಾಂತಿ ಸ್ಥಾಪನೆ ಮಾಡಲಾಯಿತು.
- 1949ರಲ್ಲಿ ಜುನಾಘಢ್ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

# ಅಧ್ಯಾಯ –10
## 20ನೆಯ ಶತಮಾನದ ರಾಜಕೀಯ ಆಯಾಮಗಳು

**ಮುಖ್ಯಾಂಶಗಳು:**

- ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಿದವರು **ಲೇನಿನ್**.
- ಮೊದಲನೇ ಮಹಾಯುದ್ದವು **1918**ರಲ್ಲಿ ಅಂತ್ಯಗೊಂಡಿತು.
- ವರ್ಸೆಲ್ಸ್ ಒಪ್ಪಂದವು **1919**ರಲ್ಲಿ ಏರ್ಪಟ್ಟಿತು.
- ಪ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ದವನು **ಮುಸಲೋನಿ.**
- ಜರ್ಮನಿಯಲ್ಲಿ ನಾಜಿ ಪಕ್ಷದ ನಾಯಕನಾಗಿದ್ದವನು **ಅಡಾಲ್ಫ್ ಹಿಟ್ಲರ್**.
- ಎರಡನೇ ಮಹಾಯುದ್ಧವು **1939**ರಿಂದ **1945**ರವರೆಗೆ ನಡೆಯಿತು.
- ಅಮೇರಿಕಾದ ನೌಕಾ ಕೇಂದ್ರವಾಗಿದ್ದ **ಪರ್ಲಹಾರ್ಬರ್** ಮೇಲೆ ಜಪಾನ್ ದಾಳಿ ಮಾಡಿತು.
- ಕದನ ಬಾಂಧವ್ಯತ್ರಯ ಮೈತ್ರಿಕೂಟ ರಾಷ್ಟ್ರಗಳ ಗುಂಪು – **ಬ್ರಿಟನ್, ಪ್ರಾನ್ಸ್, ರಷ್ಯಾ**
- ಕದನ ಸೌಹಾರ್ದತ್ರಯ ಮೈತ್ರಿಕೂಟ ರಾಷ್ಟ್ರಗಳ ಗುಂಪು – **ಜರ್ಮನಿ, ಆಸ್ಟ್ರೀಯ–ಹಂಗೇರಿ, ಇಟಲಿ**.
- ಮೊದಲ ಮಹಾಯುದ್ಧ ಕ್ರಿಶ **1914** ರಿಂದ **1918** ರವರೆಗೆ ನಡೆಯಿತು.
- ಲೆನಿನ್ ರಷ್ಯಾದ ಜನತೆಗೆ ನೀಡಿದ ಘೋಷಣೆ – **'ಶಾಂತಿ, ಆಹಾರ, ಭೂಮಿ'**
- ಜಗತ್ತಿನ ಮೊದಲ ಗಗನಯಾತ್ರಿ ರಷ್ಯಾದ **ಯೂರಿಗಗಾರಿನ್**.
- ಭಾರತ ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳನ್ನು **ರಷ್ಯಾ** ದೇಶವನ್ನು ನೋಡಿ ಅನುಸರಿಸಿತು.
- ಜರ್ಮನಿ : ನಾಜಿವಾದ : : ಇಟಲಿ : **ಪ್ಯಾಸಿಸ್ಟವಾದ.**
- ಜರ್ಮನಿ : ಹಿಟ್ಲರ್ : : ಇಟಲಿ : **ಮುಸಲೋನಿ.**
- ಹಿಟ್ಲರ್‌ನಿಗೆ ಇದ್ದ ಬಿರುದು **ಪ್ಯೂರರ್**.
- **1949**ರಲ್ಲಿ ಚೀನಾ ಕಮ್ಯುನಿಸ್ಟ ರಾಷ್ಟ್ರವಾಗಿ ಉದಯವಾಯಿತು.
- ಚೀನಾದ ಕಮ್ಯುನಿಸ್ಟ್ ಪಕ್ಷದ ನೇತಾರ **ಮಾವೋತ್ಸೆತುಂಗ್**.

**I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ರಷ್ಯಾ ಕ್ರಾಂತಿಯಲ್ಲಿ ಲೇನಿನ್‌ನ ಪಾತ್ರವೇನು?**

- ರಷ್ಯಾದಲ್ಲಿ ಆಳುತ್ತಿದ್ದ ಝಾರ್ ದೊರೆಗಳು ರೈತರನ್ನು, ಕಾರ್ಮಿಕರನ್ನು & ಬಡವರನ್ನು ತೀವ್ರವಾಗಿ ಶೋಷಿಸುತ್ತಿದ್ದರು.
- ರಷ್ಯಾದ ಎಲ್ಲಾ ಕಡೆಗೂ ಝಾರ್ ವಿರುದ್ಧ ದಂಗೆಗಳಾದವು.
- ಇಂತಹ ಪರಿಸ್ಥಿತಿಯಲ್ಲಿ ಲೇನಿನ್ ತರುಣರನ್ನೊಳಗೊಂಡ ಕಮ್ಯುನಿಸ್ಟ್ ಕ್ರಾಂತಿಕಾರಿಗಳ ಗುಂಪೊಂದನ್ನು ರಚಿಸಿದನು.
- ಇವನಿಗೆ ಜನ ಸಾಕಷ್ಟು ಬೆಂಬಲ ನೀಡಿದರು.
- ಕ್ರಿಶ 1917ರಲ್ಲಿ ಝಾರ್‌ನ ಆಳ್ವಿಕೆಯನ್ನು ಅಂತ್ಯಗೊಳಿಸಿದರು. ಇದೇ ರಷ್ಯಾದ ಮಹಾಕ್ರಾಂತಿ.

**2. ಅಮೇರಿಕಾ ಮೊದಲ ಮಹಾಯುದ್ದದಲ್ಲಿ ಭಾಗವಹಿಸಲು ಕಾರಣವೇನು?**

ಜರ್ಮನಿಯ ಜಲಂತರ್ಗಾಮಿ ನೌಕೆಯು ಇಂಗ್ಲೆಂಡಿನ ಲುಸಿತೇನಿಯಾ ಹಡಗನ್ನು ಮುಳುಗಿಸಿತು. ಇದರಲ್ಲಿದ್ದ ಅಮೇರಿಕಾದ ನಾಗರಿಕರು ಸಾವನ್ನಪ್ಪಿದರು. ಇದರಿಂದ ಸಿಟ್ಟಿಗೆದ್ದ ಅಮೇರಿಕಾ ದೇಶವು ಮೊದಲ ಮಹಾಯುದ್ಧದಲ್ಲಿ ಭಾಗವಹಿಸಿತು.

**3. ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವನ್ನು ವಿವರಿಸಿ.**

- 1914 ಜುಲೈ 28 ರಂದು ಆಸ್ಟ್ರೀಯಾದ ರಾಜಕುಮಾರ ಅರ್ಕಡ್ಯೂಕ್ ಪ್ರಾನ್ಸಿಸ್ ಪರ್ಡಿನೆಂಡ್‌ನು ಬಾಲ್ಕನ್ ಪ್ರದೇಶದ ಬೋಸ್ನಿಯಾದ ರಾಜದಾನಿ ಸರಜಾವೋ ನಗರಕ್ಕೆ ಬೇಟಿ ನೀಡಿದಾಗ ಕೊಲೆಯಾದನು.
- ಈ ಘಟನೆಯಿಂದಾಗಿ ಆಸ್ಟ್ರೀಯಾ ಮತ್ತು ಸರ್ಬಿಯಾದ ಮೇಲೆ ದಾಳಿ ಮಾಡಿತು. ಹೀಗೆ ಮೊದಲ ಮಹಾಯುದ್ಧ ಆರಂಭವಾಯಿತು.

**4. ಶೀತಲ ಸಮರ ಎಂದರೇನು?** ಎರಡನೇ ಮಹಾಯುದ್ಧದ ನಂತರ ಜಾಗತಿಕವಾಗಿ ಎರಡು ಬಣಗಳ ನಡುವೆ ರಾಜಕೀಯ, ಆರ್ಥಿಕ, ಮಿಲಿಟರಿ ಮುಂತಾದ ವಿಷಯಗಳಲ್ಲಿ ಉದ್ಭವಿಸಿದ ನಿರಂತರ ಭಯ, ದ್ವೇಷ, ಅಸೂಯೆ ಮತ್ತು ಆತಂಕದ ಪರಿಸ್ಥಿತಿಯನ್ನು ಶೀತಲ ಸಮರ ಎಂದು ಕರೆಯುತ್ತಾರೆ.

**5. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳು ಯಾವವು?**

- ಸ್ಟಾಲಿನ್ ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಕೈಗಾರಿಕೆಗಳನ್ನು ವಿಸ್ತರಿಸಿದನು.
- ರಷ್ಯಾ ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶ್ವದ ಮೊದಲ ಮಾನವರಹಿತ ಉಪಗ್ರಹವನ್ನು ಉಡಾವಣೆ ಮಾಡಿತು.
- ಭೂಮಿಯ ಖಾಸಗಿ ಒಡೆತನವನ್ನು ಮುಕ್ತಾಯಗೊಳಿಸಿ ಸಾಮೂಹಿಕ ಸಾಗುವಳಿ ವ್ಯವಸ್ಥೆಯನ್ನು ಜಾರಿಗೊಳಿಸಿದನು.

- ಸೇನಾಬಲ ಬೆಳಸಿ ಸೋವಿಯತ್ ರಷ್ಯಾವು ಅಮೆರಿಕಕ್ಕೆ ಸರಿಸಮವಾದ ಸಮೃದ್ಧ ದೇಶವನ್ನಾಗಿ ಮಾಡಿದನು.

**6. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು' ಹೇಗೆ ವಿವರಿಸಿರಿ.**

- ಹಿಟ್ಲರನು ಜರ್ಮನಿಯಲ್ಲಿ ನಾಜಿ ಸಿದ್ಧಾಂತವನ್ನು ಹರಡಿದನು.
- ನಾಜಿವಾದವೆಂದರೆ ಜಗತ್ತಿನಲ್ಲಿ ಶ್ರೇಷ್ಟವಾದ ಜನಾಂಗವೆಂದರೆ ಆರ್ಯ ಜನಾಂಗ. ಜಗತ್ತನ್ನು
- ಆಳ್ವಿಕೆ ಮಾಡಲು ಜರ್ಮನ್ನರು ಮಾತ್ರ ಯೋಗ್ಯರು ಎಂಬ ಭಾವನೆ.
- ಇದು ಬೇರೆ ಜನಾಂಗಗಳನ್ನು ಹೀನಾಯವಾಗಿ ಕಾಣುವಂತೆ ಮಾಡಿತು.
- ಸುಮಾರು 6 ಮಿಲಿಯನ್ ಯಹೂದಿಗಳನ್ನು ವಿಷಾನಿಲ ಗೃಹದಲ್ಲಿ ಕೂಡಿಹಾಕಿ ಕೊಲೆ ಮಾಡಿದನು.
- ಹಿಟ್ಲರನ ನಾಜಿ ಸಿದ್ಧಾಂತವೇ ಎರಡನೇ ಮಹಾಯುದ್ಧಕ್ಕೆ ಕಾರಣವಾಯಿತು.
- ಈ ಯುದ್ಧದಲ್ಲಿ ಜರ್ಮನಿ ಸೋಲುವುದರ ಮೂಲಕ ಜರ್ಮನಿಯರ ಅದೋಗತಿಗೆ ಕಾರಣವಾಯಿತು.

**7. ಅಮೇರಿಕಾ ಮಹಾಕುಸಿತದಿಂದ ಹೇಗೆ ಹೊರಬಂದಿತು. ವಿವರಿಸಿ.**

ಅಮೇರಿಕಾವನ್ನು ಮಹಾಕುಸಿತದಿಂದ ಪಾರುಮಾಡುವ ಸಲುವಾಗಿ 1933ರಲ್ಲಿ ಅಮೇರಿಕಾದ ಅಧ್ಯಕ್ಷನಾಗಿ ಆಯ್ಕೆಯಾದ ಎಫ್.ಡಿ.ರೂಸ್‌ವೆಲ್ಟ್‌ನು **'ನೂತನ ಯೋಜನೆ'** ಎಂಬ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದನು. ಇದರ ಪ್ರಕಾರ ಕೈಗಾರಿಕಾ ಕೆಲಸಗಾರರಿಗೆ ಕಡಿಮೆ ಅವಧಿಯ ಕೆಲಸ ಮತ್ತು ಹೆಚ್ಚಿನ ವೇತನವನ್ನು ನೀಡಲಾಯಿತು. ರೈತರಿಗೆ & ನಿರುದ್ಯೋಗಿಗಳಿಗೆ ಪರಿಹಾರ ಧನವನ್ನು ನೀಡಲಾಯಿತು.

**8. ಎರಡನೇ ಮಹಾಯುದ್ಧಕ್ಕೆ ಕಾರಣಗಳೇನು?**

- ಜರ್ಮನಿ ಹಾಗೂ ಇಟಲಿ ದೇಶಗಳ ವಿಸ್ತರಣಾವಾದ, ಸಾಮ್ರಾಜ್ಯವಾದಗಳು 2ನೇ ಮಹಾಯುದ್ಧಕ್ಕೆ ಮೊದಲ ಕಾರಣ.
- ಶಾಂತಿಯನ್ನು ಕಾಪಾಡುವುದೆಂದು ಭಾವಿಸಲಾದ ರಾಷ್ಟ್ರ ಸಂಘ ವಿಸ್ತರಣಾವಾದಿಗಳ ಆಕ್ರಮಣಶೀಲತೆಯನ್ನು ತಡೆಯಲಾರದೇ ಹೋಯಿತು.
- ಹಿಟ್ಲರ್ & ಮುಸ್ಸಲೋನಿಯರ ಆಕ್ರಮಣಗಳ ವಿರುದ್ಧ ಯಾರು ಸಶಸ್ತ್ರಕ್ರಮ ಕೈಗೊಳ್ಳಲು ಮುಂದಾಗಲಿಲ್ಲ.
- ಜರ್ಮನಿ & ರಷ್ಯಾ ಕೂಡಿಕೊಂಡು ಪೋಲೆಂಡ ಮೇಲೆ ದಾಳಿಮಾಡಿದ್ದು ಯುದ್ಧಕ್ಕೆ ತತ್‌ಕ್ಷಣದ ಕಾರಣವಾಗಿ ಪರಿಣಮಿಸಿತು.

**9. ಚೀನಾ ಕ್ರಾಂತಿಯ ಪರಿಣಾಮಗಳಾವವು?**

- ಚೀನಾ ಕ್ರಾಂತಿಯಿಂದಾಗಿ ದೇಶದಲ್ಲಿ ಮಾವೋತ್ಸೆತುಂಗ್ ನಾಯಕತ್ವದಲ್ಲಿ ಕಮ್ಯುನಿಸ್ಟ್ ಆಳ್ವಿಕೆ ಆರಂಭವಾಯಿತು.
- ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೊಳಿಸಲಾಯಿತು.
- ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ ಮೊದಲಾದ ಸೌಲಭ್ಯಗಳನ್ನು ನೀಡಲಾಯಿತು.
- ಕೈಗಾರಿಕಾ ಬೆಳವಣಿಗೆ ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಲಾಯಿತು.

**10. ಪ್ರಥಮ ಮಹಾಯುದ್ಧಕ್ಕೆ ಕಾರಣಗಳೇನು?**

1. ಅತ್ಯುಗ್ರ ರಾಷ್ಟ್ರೀಯತೆ, 2. ಪ್ರತಿಸ್ಪರ್ಧೆಯ ಮೈತ್ರಿಕೂಟಗಳ ಪೈಪೋಟಿ,
3. ಶಸ್ತ್ರಾಸ್ತ್ರಗಳ ಪೈಪೋಟಿ.

**11. ಪ್ರಥಮ ಮಹಾಯುದ್ಧದಿಂದ ಆದ ಪರಿಣಾಮಗಳೇನು?**

- ಸಾಮಾನ್ಯ ನಾಗರಿಕರು ಸೇರಿ ಲಕ್ಷಾಂತರ ಜನರು ಯುದ್ಧದಲ್ಲಿ ಸತ್ತರು.
- ಹೆಚ್ಚು ಜನ ಯುದ್ದದಲ್ಲಿ ಗಾಯಗೊಂಡು ಅಂಗವಿಕಲರಾದರು.
- ನಗರಗಳು, ರಸ್ತೆ, ಸೇತುವೆಗಳು, ರೈಲುಮಾರ್ಗಗಳು ಕಾರ್ಖಾನೆಗಳು ನಾಶವಾದವು.
- ಇದು ಅಮೇರಿಕಾದ ಮಹಾಕುಸಿತಕ್ಕೂ ಕಾರಣವಾಯಿತು.

**12. ಅಮೇರಿಕ ಎರಡನೇ ಜಾಗತಿಕ ಮಹಾಯುದ್ದದಲ್ಲಿ ಭಾಗವಹಿಸಲು ಕಾರಣವೇನು?**

ಜಪಾನ ದೇಶವು ಅಮೇರಿಕಾದ ನೌಕಾ ನೆಲೆ ಪರ್ಲ ಹಾರ್ಬರ್ ಮೇಲೆ ಬಾಂಬ್ ದಾಳಿ ಮಾಡಿದ್ದರಿಂದ ಅಮೇರಿಕಾ ಎರಡನೇ ಜಾಗತಿಕ ಯುದ್ಧದಲ್ಲಿ ಪಾಲ್ಗೋಂಡಿತು.

**16. ಅತ್ಯುಗ್ರ ರಾಷ್ಟ್ರೀಯತೆ ಎಂದರೇನು?**

ಯೂರೋಪಿನಲ್ಲಿ ಶಕ್ತಿಯುತ ರಾಷ್ಟ್ರೀಯತೆ ಜನರಲ್ಲಿ ತಾವು ಅತ್ಯಂತ ಉತ್ಕೃಷ್ಟರು ಎಂಬ ಭಾವನೆ ಬೆಳೆಸಿತು. ತಮ್ಮ ದೇಶ ಸರಿ ಇರಲಿ ಅಥವಾ ತಪ್ಪಿರಲಿ ಅದಕ್ಕಾಗಿ ಹೋರಾಡುವುದು ಒಂದು ಪವಿತ್ರವಾದ ಕರ್ತವ್ಯ ಎಂದು ಭಾವಿಸಿದರು ಇದನ್ನೇ ಅತ್ಯುಗ್ರ ರಾಷ್ಟ್ರೀಯತೆ ಎನ್ನುವರು.

**13. ಜರ್ಮನಿಯ ಅದೋಗತಿಗೆ ಹಿಟ್ಲರ್ ನೀಡಿದ ಕಾರಣಗಳೇನು?**

ಕಮ್ಯುನಿಸ್ಟರು, ವರ್ಸೆಲ್ಸ್ ಒಪ್ಪಂದ ಮತ್ತು ಯಹೂದಿಗಳು ಜರ್ಮನಿಯ ಅದೋಗತಿಗೆ ಕಾರಣವೆಂದು ಹಿಟ್ಲರ್ ಘೋಷಿಸಿದನು.

**14. ಚೀನಾ ಕಮ್ಯುನಿಸ್ಟ್ ರಷ್ಯಾವಾಗಿ ಉದಯವಾದ ನಂತರ ಜಾರಿಗೆ ತಂದ ಸುಧಾರಣೆಗಳಾವುವು?**

**<u>ಅಥವಾ</u> ಚೀನಾ ಕ್ರಾಂತಿಯ ನಂತರ ಚೀನಾ ಹೇಗೆ ಅಭಿವೃದ್ಧಿ ಹೊಂದಿತು?**

- ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೊಳಿಸಿದರು.
- ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ ಮೊದಲಾದ ಸೌಲಭ್ಯಗಳನ್ನು ನೀಡಿದರು.

- ಕೈಗಾರಿಕಾ ಬೆಳವಣಿಗೆ ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ತುಂಬಾ ಮಹತ್ವ ನೀಡಿದರು.
- ಮುನ್ನೆಡೆಯ ಮಹಾಜಿಗಿತ ಯೋಜನೆಯನ್ನು ಜಾರಿಗೊಳಿಸಲಾಯಿತು.
- ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಿದರು.

**15. ರಷ್ಯಾದಲ್ಲಿ ಝಾರ್ ಶಾಹಿಯ ಆಳ್ವಿಕೆಯನ್ನು ರಾಷ್ಟ್ರೀಯತೆಯ ಜೈಲು ಎಂದು ಏಕೆ ಕರೆಯಲಾಗುತ್ತಿತ್ತು?**

* 19ನೇ ಶತಮಾನದಲ್ಲಿ ಝಾರ್ ದೊರೆಗಳು ತಮ್ಮ ಕುಲೀನರು,ಜಮೀನ್ದಾರರು,ರೈತರು& ಬಡವರನ್ನು ತೀವ್ರವಾಗಿ ಘೋಷಿಸಿದರು.
* ಝಾರ್ ಚಕ್ರವರ್ತಿಗಳ ಆಳ್ವಿಕೆಯಿಂದ ಜನರು ತುಂಬಾ ಬೇಸತ್ತಿದ್ದರು. ಆದ್ದರಿಂದ ರಷ್ಯಾದಲ್ಲಿ ಝಾರ್ ಶಾಹಿಯನ್ನು ರಾಷ್ಟ್ರೀಯತೆಯ ಜೈಲು ಎಂದು ಕರೆಯಲಾಗುತ್ತಿತ್ತು.

**16. ಅಮೇರಿಕ ಎರಡನೇ ಜಾಗತಿಕ ಮಹಾಯುದ್ಧದಲ್ಲಿ ಭಾಗವಹಿಸಲು ಕಾರಣವೇನು?**

ಜಪಾನ ದೇಶವು ಅಮೇರಿಕಾದ ನೌಕಾನೆಲೆ ಪಾರ್ಲಹಾರ್ಬರ ಮೇಲೆ ಬಾಂಬ ದಾಳಿ ಮಾಡಿದ್ದರಿಂದ ಅಮೇರಿಕಾ ಎರಡನೇ ಜಾಗತಿಕ ಯುದ್ಧದಲ್ಲಿ ಪಾಲ್ಗೊಂಡಿತು.

**17. ಆರ್ಥಿಕ ಮಹಾಕುಸಿತದ ಪರಿಣಾಮಗಳೇನು?**

* ಯೂರೋಪ & ಅಮೇರಿಕಾದಲ್ಲಿ ಸಂಕಷ್ಟದ ಪರಿಸ್ಥಿತಿಗಳು ನಿರ್ಮಾಣಗೊಂಡವು.
* ಜನರ ಜೀವನ ಮಟ್ಟ ತೀವ್ರವಾಗಿ ಕುಸಿಯಿತು.
* ಕೈಗಾರಿಕೆ & ಕೃಷಿ ಬೆಳವಣಿಗೆ ಸ್ಥಗಿತಗೊಂಡಿತು.
* ನಿರುದ್ಯೋಗ ಹೆಚ್ಚಾಯಿತು.

**18. ಪ್ಯಾಸಿಸ್ಟವಾದದ ಪ್ರಮುಖ ಲಕ್ಷಣಗಳೇನು?**

* ಉಗ್ರ ರಾಷ್ಟ್ರೀಯವಾದ, * ಪರಕೀಯ ಶಕ್ತಿಗಳ ನಾಶ, * ಹಿಂಸೆಯ ವೈಭವೀಕರಣ,
* ಜನಾಂಗೀಯ ಶ್ರೇಷ್ಟತೆ, * ಸಮಾಜವಾದದ ವಿಸ್ತರಣೆ, * ನರಮೇಧಗಳಿಗೆ ಬೆಂಬಲ. ಇವು ಪ್ಯಾಸಿಸ್ಟವಾದದ ಲಕ್ಷಣಗಳಾಗಿವೆ.

**19. ಹಿಟ್ಲರ ಜನಾಂಗೀಯ ದ್ವೇಷವೇ ಅವನ ಅಂತ್ಯಕ್ಕೆ ಕಾರಣ ಈ ಹೇಳಿಕೆಯನ್ನು ಉದಾಹರಣೆಗಳೊಂದಿಗೆ ವಿಶ್ಲೇಷಿಸಿ.**

* ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಗ್ಲೋಬೆಲ್ಸ ಎಂಬ ಹೊಸ ಮಂತ್ರಿಯನ್ನು ನೇಮಿಸಿದನು.
* ಊಟ ನೀರು ಯಾವುದನ್ನು ನೀಡದೇ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳುವ ಕಾನ್ಸೆಂಟ್ರೇಷನ್ ಕ್ಯಾಂಪ್ಸಗಳು ಗಾಳಿ ಬೆಳಕಿಲ್ಲದ ಗ್ಯಾಸ ಛೇಂಬರಗಳಲ್ಲಿ ನೂಕಿ ವಿಷ ಗಾಳಿ ಬಿಟ್ಟು ಕೊಲ್ಲಿಸುತ್ತಿದ್ದನು.
* ಸಾವಿರಾರು ಜನರನ್ನು ಗುಂಡಿಕ್ಕಿ ಕೊಂದನು.
* ಮಕ್ಕಳನ್ನೆದೇ,ಮಹಿಳೆಯರೆನ್ನದೆ,ಮುದುಕರೆನ್ನೆದೆ ಎಲ್ಲರನ್ನೂ ಸಾಮೂಹಿಕವಾಗಿ ಕೊಲ್ಲಲು ವಿಶೇಷ ಪಡೆಗಳನ್ನು ರೂಪಿಸಿದನು.
* ಈ ಯುದ್ಧದಲ್ಲಿ ಜನಾಂಗೀಯ ದ್ವೇಷದ ಅಧ್ಯಾಯವು ಅವನ ಸಾವಿನೊಂದಿಗೆ ಅಂತ್ಯವಾಯಿತು.

**20. ಮೊದಲ ಮಹಾಯುದ್ದದ ಸಂದರ್ಭದಲ್ಲಿದ್ದ ಪ್ರತಿಸ್ಪರ್ಧೆಯ ಮೈತ್ರಿಕೂಟಗಳಾವುವು ?**
**<u>ಅಥವಾ</u> ಕದನ ಬಾಂಧವ್ಯತ್ರಯ & ಕದನ ಸೌಹಾರ್ದತ್ರಯ ಮೈತ್ರಿಕೂಟದ ರಾಷ್ಟಗಳನ್ನು ಹೆಸರಿಸಿರಿ.**

* **ಕದನ ಬಾಂಧವ್ಯತ್ರಯ ಕೂಟದ ರಾಷ್ಟಗಳು:**–ಬ್ರಿಟನ್, ಫ್ರಾನ್ಸ, ರಷ್ಯಾ
* **ಕದನ ಸೌಹಾರ್ದತ್ರಯ ಕೂಟದ ರಾಷ್ಟಗಳು:**–ಜರ್ಮನಿ, ಆಸ್ಟ್ರೀಯ, ಹಂಗೇರಿ, & ಇಟಲಿ
* ಯೂರೋಪ 2 ವಿರೋಧಿ ಶಕ್ತಿ ಬಣಗಳ ನಡುವೆ ವಿಭಜನೆ ಹೊಂದಿತು.

**21. ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಗಲು ಕಾರಣವೇನು?**

ಗೋರ್ಬಚೆವ್ ಜಾರಿಗೆ ತಂದ ಗ್ಲಾಸ್‌ನೋಸ್ತ್ ಮತ್ತು ಪೆರೆಸ್ಟ್ರೊಯಿಕ ಎಂಬ ಸುಧಾರಣೆಗಳಿಂದ ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಯಿತು.

**22. 'ಗೋಬೆಲ್ಸ್' ಎಂದರೆ ಯಾರು?**

ಜನಾಂಗೀಯ ದ್ವೇಶವನ್ನು ಪ್ರಸಾರ ಮಾಡಲು ಹಿಟ್ಲರನು ನೇಮಿಸಿದ ವಿಶೇಷವಾದ ಮಂತ್ರಿಯನ್ನು 'ಗೋಬೆಲ್ಸ್' ಎನ್ನುವರು.

**23. ಹೊಲೊಕಾಸ್ಟ್ ಎಂದರೇನು?**

**ಹಿಟ್ಲರನ ಸಾಮೂಹಿಕ ಕಗ್ಗೊಲೆಗಳನ್ನು ಹೊಲೊಕಾಸ್ಟ್ ಎಂದು ಕರೆಯುವರು.**

**24. 'ಕಾನ್ಸೆಂಟ್ರೇಷನ್ ಕ್ಯಾಂಪ್ಸ್' ಎಂದರೇನು?**

ಊಟ, ನೀರು ಯಾವುದನ್ನೂ ನೀಡದೆ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳುವುದನ್ನು 'ಕಾನ್ಸೆಂಟ್ರೇಷನ್ ಕ್ಯಾಂಪ್ಸ್' ಎನ್ನುವರು.

**25. 'ಅಕ್ಟೋಬರ್ ಕ್ರಾಂತಿ' ಎಂದರೇನು?**

ಲೆನಿನ್ ಕ್ರಾಂತಿ ಪಡೆಯನ್ನು ಸೇರಿ ಅಕ್ಟೋಬರ್ 7 ರಂದು ರಷ್ಯಾವನ್ನು ಸಮಾಜವಾದಿ ಗಣರಾಜ್ಯ ಎಂದು ಘೋಷಣೆ ಮಾಡಿದರು. ಇದನ್ನೆ ರಷ್ಯಾದಲ್ಲಿ 'ಅಕ್ಟೋಬರ್ ಕ್ರಾಂತಿ' ಎನ್ನುತ್ತಾರೆ.

**26. ರಷ್ಯಾದಲ್ಲಿ 'ಫೆಬ್ರವರಿ ಕ್ರಾಂತಿ' ನಂತರ ಅಧಿಕಾರವನ್ನು ಯಾರು ಪಡೆದುಕೊಂಡರು?**

**'ಮೆನ್ಷವಿಕ್'**

**27. ರಷ್ಯಾದ ಕೊನೆಯ ದೊರೆ ಯಾರು?**

ರಷ್ಯಾದ ಕೊನೆಯ ದೊರೆ ಎರಡನೆಯ ನಿಕೋಲಸ್.

**28. 1905ರಲ್ಲಿ ರಷ್ಯಾದಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಪ್ರತಿರೋಧ ಉಂಟಾಗಲು ಕಾರಣವೇನು?**

1905ರಲ್ಲ ಜಪಾನ್‌ನಂತಹ ಪುಟ್ಟ ದೇಶ ರಷ್ಯಾವನ್ನು ಸೋಲಿಸಿದ್ದು.

**29. ಮೊದಲ ಮಹಾಯುದ್ಧದ ಸಮಯದಲ್ಲಿ ರಷ್ಯಾ ಹಿಂದೆ ಸರಿಯಲು ಕಾರಣವೇನು?**

ರಷ್ಯಾದಲ್ಲಿ ಉಂಟಾದ ಸಮಾಜವಾದಿ ಕ್ರಾಂತಿಯಿಂದಾಗಿ ರಷ್ಯಾ ಯುದ್ಧದಿಂದ ಹಿಂದೆ ಸರಿಯಿತು.

**30. ಮೊದಲ ಮಹಾಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?**

ವರ್ಸೈಲ್ಸ್ ಒಪ್ಪಂದ.

**31. ಮೊದಲ ಮಹಾಯುದ್ಧದ ನಂತರ ಆರಂಭಗೊಂಡ ಸಂಸ್ಥೆ ಯಾವುದು?**

ರಾಷ್ಟ್ರಸಂಘ.

**32. ರಷ್ಯಾವನ್ನು ಆಳುತ್ತಿದ್ದ ದೊರೆಗಳನ್ನು ಏನೆಂದು ಕರೆಯುತ್ತಿದ್ದರು?**

ರಷ್ಯಾವನ್ನು ಆಳುತ್ತಿದ್ದ ದೊರೆಗಳನ್ನು ಝಾರ್ ಎಂದು ಕರೆಯುತ್ತಿದ್ದರು.

**33. 'ಬೂದು ಅಂಗಿದಳದ ಉದ್ದೇಶವೇನು?**

ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸುವುದು.

**34. ಚೀನಾದ ಕ್ಯೊಮಿಂಟಾಂಗ್ ಪಕ್ಷದ ನಾಯಕ ಯಾರು?**

ಸನ್–ಯಾತ್–ಸೇನ್

**35. ಚೀನಾದಲ್ಲಿ ದೀರ್ಘ ಪಯಣವನ್ನು ಆರಂಭಿಸಿದವರು ಯಾರು?**

ಮಾವೋತ್ಸೆ ತುಂಗ್.

**36. ಶೀತಲ ಸಮರ ಯಾವ ದೇಶಗಳ ನಡುವೆ ನಡಯಿತು?**

ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ರಷ್ಯಾ.

**37. ಜಗತ್ತಿನ ಮಿಲಟರಿ ಕಾರ್ಯವ್ಯೂಹದಲ್ಲೇ ಅತ್ಯಂತ ವಿಶಿಷ್ಟವಾದ ಪ್ರಯೋಗ ಯಾವುದು?**

ಕಮ್ಯುನಿಸ್ಟರ ದೀರ್ಘ ಪಯಣ.

**38. ರಾಷ್ಟ್ರ ಸಂಘದ ವಿಫಲತೆ ಕಾರಣಗಳನ್ನು ತಿಳಿಸಿ.**

* ರಾಷ್ಟ್ರ ಸಂಘದ ಆರಂಭದಿಂದಲೂ ಅಮೇರಿಕಾ ಸಂಯುಕ್ತ ಸಂಸ್ಥಾನ ಸಂಘವನ್ನು ಸೇರಲಿಲ್ಲ, ಇದರಿಂದ ರಾಷ್ಟ್ರ ಸಂಘ ದುರ್ಬಲವಾಯಿತು.
* ವಿಶ್ವದ ಎಲ್ಲ ರಾಷ್ಟ್ರಗಳು ಲೀಗ್‌ನ ಸದಸ್ಯರಾಗಲಿಲ್ಲ.
* ದಾಳಿಗಳನ್ನು ತಡೆಗಟ್ಟಲು ತನ್ನದೇ ಆದ ಸೈನ್ಯ ಇರಲಿಲ್ಲ.
* ಇದು ತೃಪ್ತಿಕರವಾದ ನಿಶ್ಶಸ್ತ್ರೀಕರಣವನ್ನು ತರಲು ವಿಫಲಗೊಂಡಿತು.
* ಹಲವಾರು ದೇಶಗಳು ಲೀಗನಿಂದ ಹೊರಗುಳಿದುದರಿಂದ ತನ್ನ ನಿರ್ಧಾರವನ್ನು ಎಲ್ಲಾ ರಾಷ್ಟ್ರಗಳ ಮೇಲೆ ಹೇರುವುದು ಅಸಾಧ್ಯವಾಯಿತು.

# ರಾಜ್ಯಶಾಸ್ತ್ರ

## ಅಧ್ಯಾಯ – 4

## ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಮಾನವ ಹಕ್ಕುಗಳ ದಿನವನ್ನು ________ ರಂದು ಆಚರಿಸುತ್ತೇವೆ.**(ಡಿಸೆಂಬರ್ 10)**
2. ಭಾರತವು ನಿರಂತರವಾಗಿ ________ ಮಾನವ ಹಕ್ಕುಗಳನ್ನು ಪ್ರತಿ ಪಾದಿಸುತ್ತಾ ಬಂದಿದೆ.( **ಸಾರ್ವತ್ರಿಕ)**
3. ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿದವರು ________ **(ನೆಲ್ಸನ್ ಮಂಡೇಲ)**
4. ಮಾನವ ಹಕ್ಕು ಎಂಬುದು ________ ಸಮಾನತೆಯನ್ನು ಒಳಗೊಂಡಿದೆ. **(ಸರ್ವರ)**

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :**

**1. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟಗಳನ್ನು ವಿವರಿಸಿ.**

- ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದೆ.
- ಭಾರತ ತನ್ನ ಸಂವಿಧಾನದಲ್ಲೂ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ.
- ವಿಶ್ವಸಂಸ್ಥೆ ಹಾಗೂ ಜಾಗತಿಕ ವೇದಿಕೆಗಳ ಮೂಲಕ ಭಾರತ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನಿಸುತ್ತಿದೆ..
- ಗುಲಾಮಗಿರಿ ಪದ್ಧತಿ, ಮಾನವರ ಮಾರಾಟ, ಮಕ್ಕಳ ದುಡಿಮೆ, ಮಹಿಳಾ ಶೋಷಣೆ ಇತ್ಯಾದಿಗಳನ್ನು ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ

- ಜನಾಂಗ ಹತ್ಯೆ, ಎಲ್ಲಾ ವಿಧದ ಶೋಷಣೆ ಹಾಗೂ ದಬ್ಬಾಳಿಕೆಗೆ ಭಾರತ ವಿರೋಧ ವ್ಯಕ್ತಪಡಿಸುತ್ತದೆ.

**2. ದ್ವಿತೀಯ ಮಹಾಯುದ್ಧದ ನಂತರ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?**

ಮಾನವ ಹಕ್ಕುಗಳ ನಿರಾಕರಣೆ, ಶಸ್ತ್ರಾಸ್ತ್ರಗಳ ಪೈಪೋಟಿ, ಆರ್ಥಿಕ ಅಸಮಾನತೆ, ವರ್ಣಭೇದ ನೀತಿ ಹಾಗೂ ಭಯೋತ್ಪಾದನೆಯಂತಹ ಸಮಸ್ಯೆಗಳು ದ್ವಿತೀಯ ಮಹಾಯುದ್ಧದ ನಂತರ ಎದುರಾದ ಮುಖ್ಯ ಸಮಸ್ಯೆಗಳಾಗಿವೆ.

**3. ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವವು? ಅಥವಾ ಭಾರತವೂ ಸೇರಿದಂತೆ ಎಲ್ಲಾ ರಾಷ್ಟ್ರಗಳು ಪರಸ್ಪರ ನಿಶ್ಚಿತ ನಾಶದ ವಿರುದ್ಧ ಹೋರಾಡಬೇಕು. ಏಕೆ?**

- ಶಸ್ತ್ರಾಸ್ತ್ರ ಪೈಪೋಟಿಯ ಬಗ್ಗೆ ಹೇಳುವದಾದರೆ ಒಂದು ಮಾತಿದೆ. – 'ಅಣ್ವಸ್ತ್ರ ಯುಗದಲ್ಲಿ
- ನಾವು ಯುದ್ಧವನ್ನು ಕೊನೆಗಾಣಿಸಬೇಕು , ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತದೆ.'
- ಪ್ರಚಲಿತ ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿ ಒಂದು ಭಯಾನಕ ವಿದ್ಯಮಾನ ಎಂಬುದಾಗಿ ಕಾಣಿಸುತ್ತಿದೆ.
- ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗಿ ಜಗತ್ತಿನಲ್ಲಿ ಯಾವ ಸಮಯದಲ್ಲಿಯಾಗಲೀ ಯುದ್ಧ
- ಆರಂಭವಾಗಿ ಮನುಕುಲ ನಾಶವಾಗುವ ಭೀತಿ ಇದೆ.
- ಶಸ್ತ್ರಾಸ್ತ್ರ ಜಮಾವಣೆ ತಪ್ಪಿಸುವದು ಅವಶ್ಯವಾಗಿದೆ.
- ಪರಸ್ಪರ 'ನಿಶ್ಚಿತ ನಾಶ'ದ ವಿರುದ್ಧ ಭಾರತವು ಸೇರಿ ಎಲ್ಲಾ ರಾಷ್ಟ್ರಗಳು ಪ್ರಯತ್ನಿಸುವ ಅವಶ್ಯಕತೆಯಿದೆ.

**4. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವವು? ಈ ರೀತಿ ಹಿಂದುಳಿಯುವಿಕೆಯ ಕಾರಣಗಳಾವವು?**

- ಹಿಂದುಳಿದ ರಾಷ್ಟ್ರಗಳು ಸ್ವಾತಂತ್ರ್ಯವನ್ನು ಪಡೆದರೂ ಸಹ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದೆ ಉಳಿದಿದ್ದವು.
- ಔದ್ಯೋಗಿಕ, ತಂತ್ರಜ್ಞಾನ ಮತ್ತು ವಿಜ್ಞಾನ ರಂಗಗಳಲ್ಲಿಯೂ ಈ ಪ್ರದೇಶಗಳು ಹಿಂದೆ ಇದ್ದುದರಿಂದ
- ಈ ದೇಶಗಳಲ್ಲಿನ ಜೀವನಮಟ್ಟ ಕೆಳಮಟ್ಟದಲ್ಲಿತ್ತು.
- ಶಿಕ್ಷಣ, ಆರೋಗ್ಯ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಹೇಳಿಕೊಳ್ಳುವಂತಹ ಸಾಧನೆಗಳಿರಲಿಲ್ಲ.

**ಹಿಂದುಳಿಯುವಿಕೆಯ ಕಾರಣಗಳು**

ಆರ್ಥಿಕವಾಗಿ ರಾಷ್ಟ್ರಗಳ ಹಿಂದುಳಿವಿಕೆಗೆ ಕಾರಣ ಐರೋಪ್ಯ ರಾಷ್ಟ್ರಗಳು ಆಫ್ರಿಕಾ, ಏಷ್ಯಾ & ಲ್ಯಾಟಿನ್ ಅಮೇರಿಕನ್ ರಾಷ್ಟ್ರಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿ ಆ ರಾಷ್ಟ್ರಗಳು ಸಂಪತ್ತನ್ನು ದೋಚಿದ್ದು ಪ್ರಮುಖ ಕಾರಣವಾಗಿದೆ.

**5. ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವವು?**

- ಯಾವುದೇ ಷರತ್ತುಗಳಿಲ್ಲದೆ ಮುಂದುವರೆದ ರಾಷ್ಟ್ರಗಳು ಬಡರಾಷ್ಟ್ರಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು.
- ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು.
- ಭಾರತ ಒಂದು ಪ್ರಗತಿಪರ ರಾಷ್ಟ್ರವಾಗಿ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆಯನ್ನು ಪ್ರತಿಪಾದಿಸುತ್ತಿದೆ.

**6. "ಮಾನವ ಹಕ್ಕುಗಳ ಪ್ರತಿಪಾದನೆ ನಿಟ್ಟಿನಲ್ಲಿ ಭಾರತವು ನಿರಂತರ ಪ್ರಯತ್ನಗಳನ್ನು ನಡೆಸುತ್ತಿದೆ" ಈ ಹೇಳಿಕೆಯನ್ನು ಸಮರ್ಥಿಸಿ.**

1. ಭಾರತ ತನ್ನ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನೀಡಿದೆ.
2. ವಿಶ್ವದಾದ್ಯಂತ ಮಾನವ ಹಕ್ಕುಗಳು ಸುರಕ್ಷಿತವಾಗಿರಬೇಕೆಂದು ಬಯಸುತ್ತಿದೆ.
3. ಗುಲಾಮಗಿರಿ, ಮಕ್ಕಳ ದುಡಿಮೆ ಮಹಿಳಾ ಶೋಷಣೆಯನ್ನು ನಿಷೇದಿಸಿದೆ.
4. ಜಾಗತಿಕ ವೇದಿಕೆಗಳ ಮೂಲಕ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನಿಸುತ್ತದೆ.

**¸7. ಶಸ್ತ್ರಾಸ್ತ್ರಗಳ ಪೈಪೋಟಿಯ ಬಗ್ಗೆ ಅಮೇರಿಕಾದ ಅಧ್ಯಕ್ಷ ಐಸಾನ್ ಹೋವರ್‌ನ ಉದ್ಗಾರವೇನು?**

ಅಮೇರಿಕದ ಅಧ್ಯಕ್ಷ ಐಸನ್ ಹೋವರ್ ಶಸ್ತ್ರಾಸ್ತ್ರಗಳ ಪೈಪೋಟಿ ಕುರಿತು ಒಮ್ಮೆ 'ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ. ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ' ಎಂದು ಉದ್ಗರಿಸಿದರು.

**8. ವರ್ಣಭೇದ ನೀತಿಯು ಮಾನವತ್ವಕ್ಕೆ ವಿರೋಧವಾದುದು ಇದನ್ನು ನಿಮ್ಮ ದೃಷ್ಟಿಕೋನದಲ್ಲಿ ಸಮರ್ಥಿಸಿ.**

- ಮಾನವರೆಲ್ಲರೂ ಹುಟ್ಟಿನಿಂದ ಸರಿಸಮಾನರು ಮತ್ತು ಸ್ವತಂತ್ರರು. ಜಾತಿ, ವರ್ಣ, ಲಿಂಗ, ಭಾಷೆ, ಧರ್ಮ, ಆಸ್ತಿ ಅಥವಾ ಹುಟ್ಟಿನಿಂದ ಯಾವ ಭೇದಭಾವನೆಗಳಿಗೆ ಒಳಗಾಗದೆ ಸಮಾನ ಹಕ್ಕು ಹಾಗೂ ಗೌರವಗಳಿಗೆ ಪಾತ್ರರಾಗಿದ್ದಾರೆ.
- ವರ್ಣಬೇಧ ನೀತಿಯು ಅತಿ ಅಮಾನುಷವಾದುದು.
- ಈ ನೀತಿಯು ಅತ್ಯಂತ ಕ್ರೂರ & ದಮನಕಾರಿಯಾಗಿತ್ತು.
- ದಕ್ಷಿಣ ಆಫ್ರಿಕಾದಲ್ಲಿ ಕರಿಯರನ್ನು ಮಾರಾಟ ಮಾಡಲಾಗುತ್ತಿತ್ತು.
- ಅವರಿಗೆ ಯಾವ ಸೌಲಭ್ಯಗಳು ಇರಲಿಲ್ಲ. ಅವರನ್ನು ನಿಕೃಷ್ಟವಾಗಿ ಕಾಣಲಾಗುತ್ತಿತ್ತು.

- ಆದ್ದರಿಂದ ಈ ನೀತಿಗೆ ಪ್ರಪಂಚದಾದ್ಯಂತ ತೀವ್ರ ವಿರೋಧ ವ್ಯಕ್ತವಾಯಿತು. ಆದರೆ ಈಗ ವರ್ಣಭೇದ ನೀತಿಯು ಮುಗಿದ ಅಧ್ಯಾಯವಾಗಿದೆ.

**8. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳಾವವು?**

- ಭಯೋತ್ಪಾದನೆಯು ಸಾರ್ವಜನಿಕವಾಗಿ ವ್ಯಕ್ತಿಗಳಿಗೆ & ಆಸ್ತಿ–ಪಾಸ್ತಿಗಳಿಗೆ ಹಾನಿ ಉಂಟುಮಾಡುತ್ತದೆ.
- ಸಾಮಾಜಿಕ ಸಂಸ್ಕೃತಿಗೆ, ಅದೇ ರೀತಿ ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ.
- ಭಯೋತ್ಪಾದನೆಯಿಂದ ನಿರ್ದಿಷ್ಟ ಭಾಷಾವಾರು, ಧಾರ್ಮಿಕ, ಜನಾಂಗೀಯ ಅಥವಾ ವರ್ಣದವರು ಸಂಕಷ್ಟ ತೊಂದರೆಯನ್ನು ಅನುಭವಿಸುತ್ತಾರೆ.
- ಭಯೋತ್ಪಾದಕರ ಆತ್ಮಾಹುತಿ ದಾಳಿಯಿಂದಾಗಿ ರಸ್ತೆ ಸಾರಿಗೆ, ರೈಲ್ವೆ, ವಿಮಾನ, ಪ್ರಮುಖ ಸರ್ಕಾರಿ ಕಛೇರಿಗಳು, ಕಿಕ್ಕಿರಿದ ಜನಜಂಗುಳಿ ಪ್ರದೇಶ & ಮಾರುಕಟ್ಟೆ ಪ್ರದೇಶಗಳು ನಾಶವಾಗುತ್ತವೆ.

**9. ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವವು?**

ನಮ್ಮ ಕೇಂದ್ರ & ರಾಜ್ಯ ಸರಕಾರಗಳು ಭಯೋತ್ಪಾದನೆಯ ನಿಗ್ರಹಕ್ಕೆ ತೀವ್ರ ಪ್ರಯತ್ನ ನಡೆಸುತ್ತಿವೆ. ಹಾಗೂ ತನ್ಮೂಲಕ ಜನತೆಯ ಪ್ರಾಣ ಹಾಗೂ ಆಸ್ತಿಪಾಸ್ತಿಯನ್ನು ಉಳಿಸಲು ಯತ್ನಿಸುತ್ತಿವೆ. ಭಯೋತ್ಪಾದನೆಯನ್ನು ನಿಗ್ರಹಿಸಲು ವಿಶಿಇಂಷಂ ಪರಿಣಿತಿ ಪಡೆದ ಪಡೆಗಳನ್ನು ರಚಿಸಲಾಗಿದೆ.

**10. ಪ್ರಪಂಚದ ಯಾವ ಪ್ರಮುಖ ಘಟನೆಗಳು ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ನೀಡಿದವು?**

1776ರ ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮ, 1789ರ ಪ್ರಾನ್ಸಿನ ಮಹಾಕ್ರಾಂತಿ, 1917ರ ರಷ್ಯಾ ಕ್ರಾಂತಿ, 20ನೇಯ ಶತಮಾನದ ಭಾರತ ಹಾಗೂ ಇನ್ನಿತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ, ಇವೆಲ್ಲಾ ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ತಂದುಕೊಟ್ಟವು.

**11. ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ತಗ್ಗಿಸುವ ಸಲುವಾಗಿ ಪ್ರಪಂಚದಲ್ಲಿ ಆದ ಪ್ರಮುಖ ಒಪ್ಪಂದಗಳು ಯಾವುವು?**

- 1963ರ ಮಿತ ಅಣ್ವಸ್ತ್ರ ಪರೀಕ್ಷಾ ನಿರ್ಬಂಧ ಒಪ್ಪಂದ
- ಬಾಹ್ಯಾಕಾಶ ಒಪ್ಪಂದ
- ಅಣ್ವಸ್ತ್ರಗಳ ಸಂಖ್ಯೆಯನ್ನು ಕುಗ್ಗಿಸುವ ಒಪ್ಪಂದ
- 1975ರ ಜೈವಿಕ ಅಸ್ತ್ರಗಳ ಉತ್ಪಾದನೆ & ದಾಸ್ತಾನು ನಿಷೇದ (BWC) ಒಪ್ಪಂದ
- ಸಮಗ್ರ ಪರೀಕ್ಷಣ ನಿಷೇದ ಒಪ್ಪಂದ

**12. ವರ್ಣಭೇದ ನೀತಿಯ ವಿರುದ್ಧ ಹೋರಾಡಿದ ಪ್ರಪಂಚದ ಪ್ರಮುಖ ಮಹನೀಯರು ಯಾರು?**

ಮಹಾತ್ಮ ಗಾಂಧಿ, ಅಬ್ರಹಾಂ ಲಿಂಕನ್, ಜಾನ್.ಎಫ್.ಕೆನೆಡಿ, ಮಾರ್ಟಿನ್ ಲೂಥರ್ ಹಾಗೂ ನೆಲ್ಸನ್ ಮಂಡೆಲಾರವರು ವರ್ಣಭೇದ ನೀತಿಯ ವಿರುದ್ಧ ಹೋರಾಡಿದ ಪ್ರಪಂಚದ ಪ್ರಮುಖ ಮಹನೀಯರಾಗಿದ್ದಾರೆ.

## ಅಧ್ಯಾಯ – 5

## ಜಾಗತಿಕ ಸಂಸ್ಥೆಗಳು

**ಮುಖ್ಯಾಂಶಗಳು:**

- ವಿಶ್ವಸಂಸ್ಥೆಯು ಪ್ರಾರಂಭವಾದ ವರ್ಷ **ಅಕ್ಟೋಬರ್ 24, 1945.**
- ವಿಶ್ವಸಂಸ್ಥೆಯ ಮುಖ್ಯ ಕಚೇರಿ **ನ್ಯೂಯಾರ್ಕ** ನಗರದಲ್ಲಿದೆ.
- ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ **ಭದ್ರತಾ ಸಮಿತಿ.**
- ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾದೀಶರ ಅವಧಿ **ಒಂಬತ್ತು** ವರ್ಷಗಳು.
- ಅಂತರಾಷ್ಟ್ರೀಯ ನ್ಯಾಯಾಲಯವು ನೆದರಲ್ಯಾಂಡಿನ **ಹೇಗ್** ಎಂಬಲ್ಲಿ ಇದೆ.
- ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿಯ ಹೆಸರು **ಅಂಟೋನಿಯ ಗುಟರೆಸ್**
- ವಿಶ್ವ ಆರೋಗ್ಯ ಸಂಸ್ಥೆಯು ಸ್ಥಾಪನೆಯಾದ ವರ್ಷ **1948.**
- ಸಾರ್ಕ ಸ್ಥಾಪನೆಯಾದ ವರ್ಷ **1985.**
- **ಮೊದಲನೇ ಜಾಗತಿಕ ಯುದ್ಧದ ತರುವಾಯ ಜಾಗತಿಕ ಶಾಂತಿಗೆಂದು ಸ್ಥಾಪಿತವಾದ ಸಂಸ್ಥೆ ಲೀಗ್ ಆಫ್ ನೇಷನ್(ರಾಷ್ಟ್ರಗಳ ಸಂಘ).**
- ವಿಶ್ವಸಂಸ್ಥೆ ಎಂಬ ಶಬ್ದವನ್ನು ಚಾಲ್ತಿಗೆ ತಂದವರು ಅಮೇರಿಕದ ಅಧ್ಯಕ್ಷ **ಎಫ್.ಡಿ.ರೂಸ್‌ವೆಲ್ಟ್.**
- ವಿಶ್ವಸಂಸ್ಥೆಯ ಸದಸ್ಯತ್ವವನ್ನು ಹೊಂದಿದ ರಾಷ್ಟ್ರಗಳ ಸಂಖ್ಯೆ **193.**
- ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾದೀಶರ ಸಂಖ್ಯೆ **15.**
- ಆಹಾರ & ಕೃಷಿ ಸಂಸ್ಥೆ : **1945** : : ವಿಶ್ವ ಆರೋಗ್ಯ ಸಮಸ್ಥೆ : **1948**
- ಕಾಮನ್‌ವೆಲ್ತ್ ಒಕ್ಕೂಟದ ಕೇಂದ್ರ ಕಚೇರಿ **ಲಂಡನ್**ನಲ್ಲಿದೆ.

- ವಿಶ್ವಬ್ಯಾಂಕ್ : ಅಮೇರಿಕಾದ ವಾಷಿಂಗಟನ್ : : ಸಾರ್ಕ : **ನೇಪಾಳದ ಕಾತ್ಮಂಡು.**
- ಆಫ್ರಿಕನ್ ಒಕ್ಕೂಟ ಸಂಸ್ಥೆ ಸ್ಥಾಪನೆ : 1963 : ಆಸಿಯಾನ್ ಸ್ಥಾಪನೆ : **1967.**
- ವಿಶ್ವಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ – **ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ.**

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

**1. ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರ ಹೆಸರುಗಳನ್ನು ತಿಳಿಸಿ.**

ಇಂಗ್ಲಂಡಿನ ವಿನ್‌ಸ್ಟನ್ ಚರ್ಚಿಲ್, ರಷ್ಯಾದ ಜೋಸೆಫ್ ಸ್ಟಾಲಿನ್ ಹಾಗೂ ಅಮೆರಿಕಾದ ಫ್ರಾಂಕ್ಲಿನ್ ಡಿ ರೂಸವೆಲ್ಟ್ ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರು.

**2. ವಿಶ್ವಸಂಸ್ಥೆಯ ಅಂಗಸಂಸ್ಥೆಗಳಾವವು?**

1. ಸಾಮಾನ್ಯ ಸಭೆ
2. ಭದ್ರತಾ ಸಮಿತಿ
3. ಸಾಮಾಜಿಕ ಹಾಗೂ ಆರ್ಥಿಕ ಸಮಿತಿ
4. ಧರ್ಮದರ್ಶಿ ಸಮಿತಿ
5. ಸಚಿವಾಲಯ
6. ಅಂತರಾಷ್ಟ್ರೀಯ ನ್ಯಾಯಾಲಯ

**3. ಭದ್ರತಾ ಸಮಿತಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳು ಯಾವವು?**

ಇಂಗ್ಲೆಂಡ, ಅಮೆರಿಕಾ, ರಷ್ಯಾ, ಫ್ರಾನ್ಸ್, ಚೀನಾ ವಿಶ್ವಸಂಸ್ಥೆಯ ಖಾಯಂ ಸದಸ್ಯ ರಾಷ್ಟ್ರಗಳು

**4. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯ ಸೂಚಿಯಲ್ಲಿರುವ ವಿಷಯಗಳಾವವು?**

ಜನಸಂಖ್ಯಾ ಸ್ಫೋಟ ತಡೆಗಟ್ಟುವದು, ಪರಿಸರ ಸಂರಕ್ಷಣೆ, ಹಸಿವು, ಪೌಷ್ಟಿಕಾಂಶದ ಕೊರತೆ ಮುಂತಾದ ವಿಷಯಗಳು ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಸೂಚಿಯಲ್ಲಿರುವ ವಿಷಯಗಳಾಗಿವೆ.

**5. ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳನ್ನು ಪಟ್ಟಿ ಮಾಡಿ.**

- ಎಲ್ಲಾ ಉದ್ಯೋಗಗಳಲ್ಲಿಯೂ ಕಾರ್ಮಿಕರ ಜೀವನ ಮಟ್ಟವನ್ನು ಉತ್ತಮಗೊಳಿಸುವದು.
- ಬಾಲ ಕಾರ್ಮಿಕರ ನೇಮಕ ತಡೆಯುವದು.
- ಸ್ತ್ರೀ ಕಾರ್ಮಿಕರಿಗೆ ಹೆರಿಗೆ, ಪೌಷ್ಟಿಕ ಆಹಾರ, ವಸತಿ, ಮನರಂಜನೆ ಮುಂತಾದ ಸೌಲಭ್ಯಗಳನ್ನು ಒದಗಿಸುವದು.
- ಉದ್ದಿಮೆಗಳ ಆಡಳಿತದಲ್ಲಿ ಕಾರ್ಮಿಕರಿಗೂ ಪಾಲುಗೊಳ್ಳುವ ಅವಕಾಶಗಳನ್ನು ಕಲ್ಪಿಸುವದು.

**6. ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿ ಮಾಡಿರಿ.**

- ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವದು.
- ವಿವಿಧ ರಾಷ್ಟ್ರಗಳಲ್ಲಿ ಸ್ನೇಹ ಸಂಬಂಧವನ್ನು ಬೆಳೆಸುವದು.
- ಮಾನವನ ಮೂಲಭೂತ ಹಕ್ಕುಗಳನ್ನು ರಕ್ಷಿಸುವದು.
- ಆಂತರಾಷ್ಟ್ರೀಯ ಸಮಸ್ಯೆಗಳನ್ನು ಅಂತರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡುಕೊಳ್ಳುವುದು.
- ಅಂತರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವದು.
- ಪ್ರಪಂಚದ ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವದು.

**7. SAARC ನ್ನು ವಿಸ್ತರಿಸಿ.**

SAARC – South Asian Association of Regional co-operation (ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ ) ಎಂದರ್ಥ.

**8. ಸಾಮಾನ್ಯ ಸಭೆಯ ರಚನೆಯನ್ನು ವಿವರಿಸಿ.**

- ಸಾಮಾನ್ಯ ಸಭೆಯು ಎಲ್ಲಾ ಸದಸ್ಯ ರಷ್ಯಾಗಳ ಪ್ರತಿನಿಧಿಗಳನ್ನು ಒಳಗೊಂಡ ಅಂಗಸಂಸ್ಥೆಯಾಗಿದೆ.
- ಪ್ರತಿಯೊಂದು ಸದಸ್ಯ ರಷ್ಯಾವು 5 ಸದಸ್ಯರನ್ನು ಇದಕ್ಕೆ ಕಳುಹಿಸಿಕೊಡುತ್ತದೆ. ಆದರೆ ಪ್ರತಿ ದೇಶಕ್ಕೆ ಒಂದೇ ಮತದ ಹಕ್ಕ್ಕು ಮಾತ್ರ ಇರುತ್ತದೆ.
- ಸಾಮಾನ್ಯ ಸಭೆಯು ತನ್ನ ಪ್ರಥಮ ಅಧಿವೇಶನದಲ್ಲಿಯೇ ಓರ್ವ ಅಧ್ಯಕ್ಷನನ್ನು ಆರಿಸುತ್ತದೆ.
- ಅದೇ ರೀತಿ 17 ಉಪಾಧ್ಯಕ್ಷರನ್ನು ಹಾಗೂ 7 ಸ್ಥಾಯಿ ಸಮಿತಿಗಳಿಗೆ ಏಳು ಮಂದಿ ಅಧ್ಯಕ್ಷರನ್ನೂ ಇಲ್ಲಿ ಆರಿಸಲಾಗುತ್ತದೆ.

**9. ಸಾರ್ಕ ಸಂಸ್ಥೆಯಲ್ಲಿ ಇರುವ ಸದಸ್ಯ ರಾಷ್ಟ್ರಗಳು ಯಾವುವು?**

ಸಾರ್ಕ ಸಂಸ್ಥೆಯು 1985ರಲ್ಲಿ ಸ್ಥಾಪನೆಯಾಗಿದ್ದು, ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಮಾಲ್ಡೀವ್ಸ್, ಭೂತಾನ್ & ಅಫಘಾನಿಸ್ತಾನ ಪ್ರಮುಖ ಸದಸ್ಯ ರಾಷ್ಟ್ರಗಳಾಗಿವೆ.

**10. 'ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ' ಈ ಹೇಳಿಕೆಯನ್ನು ಸಮರ್ಥಿಸಿ.**

- ವಿಶ್ವದ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ.
- ಸೂಯೇಜ್ ಕಾಲುವೆ ಬಿಕ್ಕಟ್ಟು, ಇರಾನ್ ಸಂಘರ್ಷ, ಇಂಡೋನೇಷಿಯಾ, ಕಾಶ್ಮೀರ, ಪ್ಯಾಲೆಸ್ಟೈನ್, ಕೋರಿಯಾ, ಹಂಗೇರಿ, ಕಾಂಗೋ, ಅರಬ್–ಇಸ್ರೇಲ್, ಅಫಘಾನಿಸ್ತಾನ ಇತ್ಯಾದಿ ವಿವಾದಗಳ ಪರಿಹಾರಕ್ಕಾಗಿ ವಿಶ್ವಸಂಸ್ಥೆ ಶ್ರಮಿಸಿದೆ.
- ಅಣ್ವಸ್ತ್ರ ಹಾಗೂ ಸಾಂಪ್ರದಾಯಿಕ ನಿಶ್ಶಸ್ತ್ರೀಕರಣ ನಿಟ್ಟಿನಲ್ಲಿಯೂ ವಿಶ್ವಸಂಸ್ಥೆ ನಿರಂತರ ಪ್ರಯತ್ನ ಮಾಡುತ್ತಿದೆ.

**11. ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳಾವವು?**

- ಜನರ ಜೀವನ ಮಟ್ಟ ಸುಧಾರಿಸುವದು, & ಉದ್ಯೋಗಾವಕಾಶ ಒದಗಿಸುವದು.
- ನೀರಾಶ್ರಿತರು, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆಗಳನ್ನು ನಿವಾರಿಸಲು ಕ್ರಮವಹಿಸುವದು.
- ಅಂತರಾಷ್ಟ್ರೀಯ ಆರ್ಥಿಕ, ಸಾಮಾಜಿಕ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಮಾರ್ಗ ಸೂಚಿಸುವದು.
- ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಏರ್ಪಡಿಸುವದು.
- ಜನಾಂಗ, ಲಿಂಗ, ಭಾಷೆ, ಧರ್ಮಗಳ ಭೇದ ಭಾವನೆಗಳಿಗೆ ಆಸ್ಪದ ನೀಡದೇ ಎಲ್ಲಾ ಮಾನವರಿಗೂ ಮೂಲಭೂತ ಹಕ್ಕುಗಳನ್ನು ಒದಗಿಸುವದು.
- ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಅಂತರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸುವದು.

**12. ಯುನೆಸ್ಕೋದ ಕಾರ್ಯಗಳಾವವು?**

- ಶಾಂತಿ ಸ್ಥಾಪನೆ.
- ಮಾನವನ ಹಕ್ಕುಗಳನ್ನು ರಕ್ಷಿಸುವದು
- ಶೈಕ್ಷಣಿಕ ಅಭಿವೃದ್ಧಿ ಸಾಧನೆ
- ಮಾನವರ ವಿಕಾಸಕ್ಕೆಂದೇ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಳಕೆ.
- ಪರಿಸರ ಹಾಗೂ ಮಾನವರ ನಡುವೆ ಸಮತೋಲನ
- ಜನಸಂಖ್ಯಾ ನಿಯಂತ್ರಣದ ಬಗ್ಗೆ ಅರಿವು ಮೂಡಿಸುವದು.

**13. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಂ.ಎಫ್‌ನ ಪಾತ್ರವನ್ನು ವಿಶ್ಲೇಷಿಸಿ.**

ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯು ಅಂತರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತದೆ. ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ, ಆರ್ಥಿಕ ಸ್ಥಿರತೆ ಹಾಗೂ ಉತ್ತಮ ವಿದೇಶಿ ಪಾವತಿ ಸಮತೋಲನವನ್ನು ಕಾಯ್ದುಕೊಳ್ಳಲು ಸಹಕರಿಸುತ್ತದೆ.

**14. ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಉದ್ದೇಶಗಳನ್ನು ಪಟ್ಟಿಮಾಡಿರಿ.**

- ಪ್ರಜಾತಂತ್ರವನ್ನು ಎತ್ತಿಹಿಡಿಯುವದು.
- ಸ್ವಾತಂತ್ರ್ಯದ ಸಂರಕ್ಷಣೆ & ಬಡತನ ನಿರ್ಮೂಲನೆಗೆ ಕ್ರಮ ಕೈಗೊಳ್ಳುವದು.
- ವಿಶ್ವಶಾಂತಿಯನ್ನು ನೆಲೆಗೊಳಿಸುವದು.
- ಕ್ರೀಡೆ, ವಿಜ್ಞಾನ ಹಾಗೂ ಕಲೆಯ ಬೆಳವಣಿಗೆಗೆ ಪ್ರೋತ್ಸಾಹಿಸುವದು.

**15. ಯುರೋಪಿಯನ್ ಯುನಿಯನ್ ಸಂಸ್ಥೆಯನ್ನು ವಿವರಿಸಿ.**

ಯುರೋಪಿಯನ್ ಯುನಿಯನ್ ಸಂಸ್ಥೆಯು 27 ಯುರೋಪಿನ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಸಂಸ್ಥೆಯಾಗಿದೆ. ಇದು ಸದಸ್ಯ ರಾಷ್ಟ್ರಗಳ ಮಧ್ಯೆ ಸಮಾನ ಏಕ ಮಾರುಕಟ್ಟೆ, ಒಂದೇ ಚಲಾವಣೆಯ ಕರೆನ್ಸಿ, ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆ ಇತ್ಯಾದಿಗಳಿಗೆ ಅವಕಾಶ ಮಾಡಿಕೊಡುತ್ತದೆ.

**16. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಕಾರ್ಯಗಳು ಯಾವುವು?**

- ಪ್ರತಿ ವರ್ಷದ ಸಪ್ಟಂಬರ್ ತಿಂಗಳಲ್ಲಿ ಸಾಮಾನ್ಯ ಸಭೆಯ ಅಧಿವೇಶನವನ್ನು ಕರೆಯುವದು.
- ಪ್ರಮುಖ ವಿಷಯಗಳನ್ನು ಬಹುಮತದ ಸಿದ್ದಾಂತದಂತೆ ಅಥವಾ 2/3 ಮತಗಳ ಬೆಂಬಲದಿಂದ ನಿರ್ಧರಿಸುವದು.
- ವಿಶ್ವಸಂಸ್ಥೆಯ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತದೆ.
- ಪ್ರತಿಯೊಂದು ರಾಷ್ಟ್ರವು ನೀಡಬಹುದಾದ ಚಂದಾಹಣವನ್ನು ನಿಗದಿ ಮಾಡುತ್ತದೆ.

**17. ಸಾರ್ಕ ಸಂಸ್ಥೆ ಸ್ಥಾಪನೆಯ ಮೂಲ ಉದ್ದೇಶವೇನು?**

ಆರ್ಥಿಕ ಸಂಬಂಧಗಳ ವೃದ್ಧಿ, ಸಾಮಾಜಿಕ ಪ್ರಗತಿ ಹಾಗೂ ಸಾಂಸ್ಕೃತಿಕ ಬೆಳವಣಿಗೆಯನ್ನು ಪರಸ್ಪರ ಸಹಕಾರದೊಂದಿಗೆ ಸಾಧಿಸುವಿಕೆ ಸಾರ್ಕ ಸಂಸ್ಥೆಯ ಮೂಲ ಉದ್ದೇಶವಾಗಿದೆ.

**18. ಆಹಾರ & ಕೃಷಿ ಸಂಸ್ಥೆ ಸ್ಥಾಪನೆಯ ಉದ್ದೇಶಗಳಾವುವು?**

- ಪೌಷ್ಟಿಕ ಆಹಾರ ಒದಗಿಸುವದು.
- ಹಸಿವೆಯಿಂದ ಜಾಗತಿಕ ಜನಸಮುದಾಯವನ್ನು ವಿಮುಕ್ತಿಗೊಳಿಸುವುದು.

- ಕೃಷಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದು.
- ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟವನ್ನು ಸುಧಾರಿಸುವುದು.

**19. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಕಾರ್ಯಗಳು ಯಾವುವು?**

- ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುತ್ತದೆ.
- ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ನೂತನ ಸದಸ್ಯರ ಆಯ್ಕೆಯನ್ನು ಶಿಫಾರಸ್ಸು ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಹೊಂದಿದೆ.
- ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಅಭ್ಯರ್ಥಿಯನ್ನು ಸೂಚಿಸುವ ಅಧಿಕಾರವನ್ನು ಹೊಂದಿದೆ.
- ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಆಯ್ಕೆಯಲ್ಲಿ ಭಾಗವಹಿಸುತ್ತದೆ.

**20. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ರಚನೆಯನ್ನು ವಿವರಿಸಿ.**

- ಈ ಸಮಿತಿಯು 15 ಪ್ರತಿನಿಧಿಗಳಿಂದ ಕೂಡಿದ್ದು, ಅದರಲ್ಲಿ 5 ಖಾಯಂ ಸದಸ್ಯರು ಹಾಗೂ 10 ಹಂಗಾಮಿ ಸದಸ್ಯರನ್ನು ಹೊಂದಿದೆ.
- ಇಂಗ್ಲಂಡ, ಅಮೇರಿಕಾ, ರಷ್ಯಾ, ಫ್ರಾನ್ಸ್, ಚೀನಾ ಖಾಯಂ ಸದಸ್ಯ ರಾಷ್ಟ್ರಗಳು
- ಖಾಯಂ ಸದಸ್ಯರಿಗೆ 'ವಿಟೋ' ಅಂದರೆ ನಿಷೇದಾತ್ಮಕ ಮತ ಚಲಾಯಿಸುವ ವಿಶೇಷ ಅಧಿಕಾರ ಇದೆ.

**21. ವಿಶ್ವಸಂಸ್ಥೆಯ ಸಾಧನೆಗಳಾವುವು?**

- ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ.
- ವಿಶ್ವದ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ. ಉದಾ : ಸೂಯೇಜ್‌ಕಾಲುವೆ ಬಿಕ್ಕಟ್ಟು ನಿವಾರಣೆ, ಇರಾನ್ ಸಂಘರ್ಷ, ಇಂಡೋನೇಷ್ಯಾ ಸ್ವಾತಂತ್ರ್ಯ ಘೋಷಣೆ.
- ಅಣ್ವಸ್ತ್ರ ಹಾಗೂ ಸಾಂಪ್ರದಾಯಿಕ ನಿಶ್ಯಸ್ತ್ರೀಕರಣ ನಿಟ್ಟಿನಲ್ಲಿಯ ೂ ವಿಶ್ವಸಂಸ್ಥೆ ನಿರಂತರ ಪ್ರಯತ್ನ ಮಾಡುತ್ತಿದೆ.
- ವಿಶ್ವದ ಸಾಮಾಜಿಕ & ಆರ್ಥಿಕ ಪ್ರಗತಿಗೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಮಾಡುತ್ತದೆ.
- ವರ್ಣಭೇದ ನೀತಿಯನ್ನು ಅಳಿಸಿ ಹಾಕುವಲ್ಲಿ, ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವ ಇತ್ಯಾದಿಗಳನ್ನು ಇಲ್ಲವಾಗಿಸುವಲ್ಲಿಯೂ ವಿಶ್ವಸಂಸ್ಥೆಯ ಪಾತ್ರ ಗಮನಾರ್ಹವಾದದು.

**22. ಯುನಿಸೆಫ್ ಸಂಸ್ಥೆ ಸ್ಥಾಪನೆಯ ಮೂಲ ಉದ್ದೇಶವೇನು?**

ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರವನ್ನು ಒದಗಿಸುವುದೇ ಈ ಸಂಸ್ಥೆಯ ಮೂಲ ಉದ್ದೇಶವಾಗಿದೆ.

**23. ಸಾರ್ಕ ಸಂಸ್ಥೆಯ ಪ್ರಗತಿಗೆ ತೊಡಕಾಗಿರುವ ಅದರ ಸೂತ್ರವೇನು?**

'ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೇ ಇರಬೇಕು' ಎಂಬ ಸಾರ್ಕನ ಸೂತ್ರವು ಅದರ ಪ್ರಗತಿಗೆ ಒಂದು ತೊಡಕಾಗಿ ಪರಿಣಮಿಸಿದೆ.

**24. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಗಳಾವುವು?**

- ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ಮುಂತಾದ ರೋಗಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲು ಯತ್ನಿಸುತ್ತದೆ.
- ಏಡ್ಸ್, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಂದ ಪ್ರಪಂಚವನ್ನು ಮುಕ್ತಿಗೊಳಿಸಲು ಪ್ರಯತ್ನಿಸುತ್ತದೆ.
- ಸಿಡುಬು ರೋಗವನ್ನು ಸಂಪೂರ್ಣವಾಗಿ ನಿವಾರಿಸುವಲ್ಲಿ ಈ ಸಂಸ್ಥೆ ಯಶಸ್ಸು ಕಂಡಿದೆ.
- ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಟಿಕತೆಯ ಕೊರತೆ ಮುಂತಾದ ವಿಷಯಗಳು ಈ ಸಂಸ್ಥೆಯ ಕಾರ್ಯ ಸೂಚಿಯಲ್ಲಿವೆ.

**25. ಯಾವ ಸಮ್ಮೇಳನದಲ್ಲಿ ವಿಶ್ವಸಂಸ್ಥೆಯ ಸನ್ನದಿಗೆ ಸಹಿ ಹಾಕಲಾಯಿತು?**

1945 ಜೂನ್ 26ರಂದು ಸ್ಯಾನ್ ಫ್ರಾನ್ಸಿಸ್ಕೋ ವಿಶ್ವಸಂಸ್ಥೆಯ ಸನ್ನದಿಗೆ ಸಹಿಹಾಕಲಾಯಿತು.

# ಸಮಾಜಶಾಸ್ತ್ರ
# ಅಧ್ಯಾಯ–03
## ಸಾಮಾಜಿಕ ಚಳವಳಿಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಪರಿಸರ ಚಳವಳಿ ಎಂದರೆ **(ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿ).**
2. 'ನರ್ಮದಾ ಆಂದೋಲನದ' ನೇತೃತ್ವ ವಹಿಸಿದ್ದವರು. ________________ **(ಮೇಧಾ ಪಾಟ್ಕರ್ )**
3. ಡಾ. ಶಿವರಾಮ ಕಾರಂತರು ________ ದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪಿಸುವುದನ್ನು ವಿರೋಧಿಸಿದರು.( **ಕೈಗಾ**)
4. ಮಹಿಳಾ ಚಳವಳಿ ಎಂದರೆ____________ . **(ಮಹಿಳೆಯ ಮೇಲೆ ಪುರುಷ ಪ್ರಾಧಾನ್ಯ ಸಂಸ್ಕೃತಿ ನಡೆಸಿದ ದರ್ಪ, ಶೋಷಣೆ, ದೌರ್ಜನ್ಯಗಳ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆ** )

**1. ಸಾಮಾಜಿಕ ಚಳವಳಿ ಎಂದರೇನು?**
ಸಾಮಾಜಿಕ ಚಳವಳಿ ಎಂದರೆ ಮಾನವ ಸಮಾಜದ ಚಲನೆ, ಬದಲಾವಣೆ ಮತ್ತು ರೂಪಾಂತರಗಳಿಗೆ ಸಂಬಂಧಿಸಿ ನಡೆಯುವ ಒಂದು ವ್ಯವಸ್ಥಿತ ಸ್ವಾಭಾವಿಕ ಪ್ರತಿರೋಧದ ಸಾಮಾಜಿಕ ಪ್ರತಿಕ್ರಿಯೆ.

**2. ಸಮೂಹ ವರ್ತನೆ ಎಂದರೇನು?**
ಜನರು ಆಕಸ್ಮಿಕವಾದ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ತಾತ್ಕಾಲಿಕವಾಗಿ ನಡೆಸುವ ಆಲೋಚನೆ, ಭಾವನೆ ಹಾಗೂ ವರ್ತನೆಗಳನ್ನು ಸಮೂಹ ವರ್ತನೆ ಎನ್ನಬಹುದು.

**3. ಜನಮಂದೆ ಎಂದರೇನು?**
ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.

**4. ದೊಂಬಿ/ಗಲಭೆ ಎಂದರೇನು?**
ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ/ಗಲಭೆ ಎಂದು ಕರೆಯಬಹುದು.

**5. ಪರಿಸರ ಚಳವಳಿ ಎಂದರೇನು?**
ಪರಿಸರ ಚಳವಳಿ ಎಂದರೆ ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿ.

**6. ಚಿಪ್ಕೋ ಚಳವಳಿ ಎಲ್ಲಿ ನಡೆಯಿತು?**
ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮದಲ್ಲಿ ಚಿಪ್ಕೋ ಚಳವಳಿ ನಡೆಯಿತು.

**7. ಕರ್ನಾಟಕದ ಅಪ್ಪಿಕೋ ಚಳವಳಿ ಎಲ್ಲಿ ನಡೆಯಿತು?**
ಉತ್ತರ ಕನ್ನಡ ಜಿಲ್ಲೆಯ ಸಲ್ಕಾನಿ ಗ್ರಾಮ.

**8. ನರ್ಮದಾ ಬಚಾವೋ ಆಂದೋಲನದ ನಾಯಕತ್ವ ವಹಿಸಿದವರು ಯಾರು?**
ಮೇಧಾ ಪಾಟ್ಕರ್.

**9. ಕೈಗಾ ವಿರೋಧಿ ಚಳವಳಿಯ ಉದ್ದೇಶವೇನು?**
ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ಮುಂತಾದ ದುಷ್ಪರಿಣಾಮಗಳಿಂದ ಜೀವ ಪ್ರಭೇದಗಳ ಮೇಲೆ ಹಾನಿಯಾಗುತ್ತದೆ ಎಂದು ಕೈಗಾ ವಿರೋಧಿ ಚಳವಳಿಯನ್ನು ಆರಂಭಿಸಲಾಯಿತು.

**10. ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪನೆ ಮಾಡಿದವರು ಯಾರು?**
ಪ್ರೊ. ಎಂ.ಡಿ. ನಂಜುಂಡಸ್ವಾಮಿ.

**11. ಲಂಡನ್‌ನಲ್ಲಿ ಪ್ರಾರಂಭವಾದ ಮೊದಲ ಕಾರ್ಮಿಕರ ಸಂಘಟನೆ ಯಾವುದು?**
'The International Working men's Association'

**12. ಆತ್ಮಗೌರವ ಚಳವಳಿಯನ್ನು ಪ್ರಾರಂಭಿಸಿದರು ಯಾರು?**
ಪೆರಿಯಾರ್ ರಾಮಸ್ವಾಮಿರವರು ಆತ್ಮಗೌರವ ಚಳವಳಿಯನ್ನು ಪ್ರಾರಂಭಿಸಿದರು.

**13. ದೊಂಬಿ ಎಂದರೇನು? ದೊಂಬಿಯ ಸ್ವರೂಪವನ್ನು ತಿಳಿಸಿ.**
ತೀರಾ ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ ಎನ್ನುತ್ತಾರೆ. ದೊಂಬಿಯಲ್ಲಿ ಭಾಗವಹಿಸಿರುವವರು ಎದುರಿಗೆ ಸಿಕ್ಕದ್ದೆಲ್ಲವನ್ನು ಹಾಳುಮಾಡುತ್ತಾ ಸಾಗುವರು. ಗೊಂದಲವನ್ನು ಸೃಷ್ಟಿ ಮಾಡುವುದೇ ದೊಂಬಿಯ ಉದ್ದೇಶವಾಗಿರುತ್ತದೆ. ದೊಂಬಿಗಳು ಅಪಾರ ಹಾನಿಯನ್ನು ಉಂಟು ಮಾಡುತ್ತವೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಸಮೂಹ ವರ್ತನೆಯ ಮಾದರಿಗಳಾವುವು?**

ಸಮೂಹ ವರ್ತನೆಯಲ್ಲಿ ಜನಮಂದೆ, ದೊಂಬಿ, ಪೊಳ್ಳುಸುದ್ದಿಗಳ ಪ್ರಚಾರ, ಸಾರ್ವಜನಿಕ ಅಭಿಪ್ರಾಯ, ಕ್ರಾಂತಿ ಹಾಗೂ ಸಾಮಾಜಿಕ ಅಂದೋಲಗಳನ್ನು ಗುರುತಿಸಬಹುದಾಗಿದೆ.

**2. ಮಹಿಳಾ ಚಳವಳಿ ಎಂದರೇನು? ಉದಾಹರಣೆ ಕೊಡಿ**

ಮಹಿಳೆಯ ಮೇಲೆ ಪುರುಷ ಪ್ರಾಧಾನ್ಯ ಸಂಸ್ಕೃತಿ ನಡೆಸಿದ ದರ್ಪ, ಶೋಷಣೆ, ದೌರ್ಜನ್ಯಗಳ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆಯೇ ಮಹಿಳಾ ಚಳವಳಿ. ಉದಾಹರಣೆಗೆ ಮದ್ಯಪಾನ ನಿಷೇಧ ಚಳವಳಿ.

**3. ಜನಮಂದೆಯ ಸ್ವರೂಪವನ್ನು ತಿಳಿಸಿ.**

- ಜನಮಂದೆಯು ತಾತ್ಕಾಲಿಕ ಸ್ವರೂಪದ್ದಾಗಿರುತ್ತದೆ. ಇದರಲ್ಲಿ ಜನರು ಯಾವುದೋ ಒಂದು ನಿರ್ಧಿಷ್ಟ ಸ್ಥಳದಲ್ಲಿ ಭೌತಿಕವಾಗಿ ಒಟ್ಟಾಗಿ ಸೇರಿರುತ್ತಾರೆ.
- ಜನಮಂದೆಯ ಸದಸ್ಯರು ಪರಸ್ಪರ ಅಭಿಪ್ರಾಯ, ಭಾವನೆಗಳು ಮತ್ತು ಕ್ರಿಯೆಗಳ ಪ್ರಭಾವಕ್ಕೆ ಬಹುಬೇಗ ಒಳಗಾಗುತ್ತಾರೆ.
- ಉದಾಹರಣೆಗೆ ಚಲನಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ, ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನರ ಗುಂಪು – ಇತ್ಯಾದಿ.

**4. ಪರಿಸರ ಚಳವಳಿಯ ಅರ್ಥ ಮತ್ತು ಸ್ವರೂಪವನ್ನು ತಿಳಿಸಿ.**

ಪರಿಸರ ಚಳವಳಿ ಎಂದರೆ ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿ.

- ಅಂದರೆ ನಮ್ಮ ಸುತ್ತಮುತ್ತಲಿನ ಭೂಮಿ, ಗಾಳಿ, ನೀರು ಸೇರಿದಂತೆ ಇಡೀ ಜೀವಮಂಡಲವನ್ನು ನಾಶ ಮಾಡುತ್ತಿರುವುದು ಮತ್ತು ಕಲುಷಿತ ಮಾಡುತ್ತಿರುವುದನ್ನು ವೈಜ್ಞಾನಿಕವಾಗಿ ಪ್ರತಿಭಟಿಸುವ ಚಳವಳಿಯೇ ಪರಿಸರ ಚಳವಳಿ.
- ಪರಿಸರ ಚಳವಳಿ ದಿಢೀರನೆ ಕಾಣಿಸಿಕೊಂಡ ಚಳವಳಿಯಲ್ಲ.
- ಹಲವಾರು ವರ್ಷಗಳು ಪರಿಸರ ಮತ್ತು ಪರಿಸರ ವಾಸಿಗಳ ಮೇಲೆ ನಡೆಸಿದ ದೌರ್ಜನ್ಯಗಳಿಗೆ ಹುಟ್ಟಿಕೊಂಡ ಪ್ರತಿರೋಧಗಳು ಈ ಚಳವಳಿಗಳಲ್ಲಿವೆ.

**5. ಅಪ್ಪಿಕೋ ಚಳುವಳಿಯ ಉದ್ದೇಶ ಏನಾಗಿತ್ತು?**

ಮರಗಳ ಕಳ್ಳಸಾಗಾಣಿಗೆ ತಡೆಗಟ್ಟುವದು, ಗಿಡಮರಗಳನ್ನು ಬೆಳೆಸುವದು ಹಾಗೂ ಪರಿಸರ ಮಹತ್ವದ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ಅಪ್ಪಿಕೋ ಚಳುವಳಿ ಉದ್ದೇಶವಾಗಿತ್ತು.

**6. ಮೌನ ಕಣಿವೆ ಆಂದೋಲನ ಎಂದರೇನು?**

ಕೇರಳದ ಪಾಲ್‌ಘಾಟ್ ತಾಲೂಕಿನ ಮೌನ ಕಣಿವೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಆಣೆಕಟ್ಟಿನ ನಿರ್ಮಾಣದಿಂದ ಪರಿಸರ ನಾಶದ ಜೊತೆಗೆ ಅನೇಕ ಜೀವ ಪ್ರಭೇದಗಳು ಜೀವಿಸಲು ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಅದನ್ನು ತಡೆಗಟ್ಟಲು ನಡೆದ ಚಳುವಳಿಯಾಗಿದೆ.

**7. ನರ್ಮದಾ ಆಂದೋಲನಕ್ಕೆ ಕಾರಣಗಳೇನು?**

ಗುಜರಾತ ರಾಜ್ಯದ ಸರ್ದಾರ್ ಸರೋವರ ಯೋಜನೆಯಡಿಯಲ್ಲಿ ನರ್ಮದಾ ನದಿಗೆ ಕಟ್ಟಲಾದ ಆಣೆಕಟ್ಟು ನಿರ್ಮಾಣದಿಂದ ಅರಣ್ಯ ನಾಶ, ಜೀವ ಸಂಕುಲಗಳಿಗೆ ತೊಂದರೆಯಾಗುತ್ತದೆ. ಎಂಬ ಉದ್ದೇಶದಿಂದ ಪರಿಸರ ಪ್ರೇಮಿ ಮೇಧಾ ಪಾಟ್ಕರ್ ಮತ್ತು ಬಾಬಾ ಆಮ್ಟೆಯವರ ನೇತೃತ್ವದಲ್ಲಿ ನರ್ಮದಾ ಬಚಾವೋ ಆಂದೋಲನ ನಡೆಯಿತು.

**8. ಕೈಗಾ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ವಿರೋಧ ವ್ಯಕ್ತವಾಗಲು ಕಾರಣಗಳೇನು?**

ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯ ನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ಮುಂತಾದ ದುಷ್ಪರಿಣಾಮಗಳಿಂದ ಜೀವ ಪ್ರಭೇದಗಳ ಮೇಲೆ ಹಾನಿಕಾರಕ ಪರಿಣಾಮಗಳುಂಟಾಗುತ್ತವೆ ಎಂಬ ಉದ್ದೇಶಗಳಿಂದ ಕೈಗಾ ಆಣುಶಕ್ತಿ ಸ್ಥಾವರ ಸ್ಥಾಪನೆಗೆ ವಿರೋಧ ವ್ಯಕ್ತವಾಯಿತು.

**9. ಪರಿಸರ ಸಂರಕ್ಷಣೆಗಾಗಿ ನಡೆಸಿರುವ ಕೆಲವು ಸಾಮೂಹಿಕ ಪ್ರತಿಭಟನೆಗಳನ್ನು ಪಟ್ಟಿ ಮಾಡಿ.**

1. ಚಿಪ್ಕೋ ಚಳುವಳಿ, 2. ಅಪ್ಪಿಕೋ ಚಳುವಳಿ,
3. ನರ್ಮದಾ ಅಂದೋಲನ 4. ಮೌನ ಕಣಿವೆ ಅಂದೋಲನ,
5. ಕೈಗಾ ವಿರೋಧಿ ಚಳುವಳಿ.

**10. ಮದ್ಯಪಾನ ನಿಷೇಧ ಚಳವಳಿಯನ್ನು ವಿವರಿಸಿ.**

- ಮಹಿಳೆಯರು ರೂಪಿಸಿದ ಪ್ರಮುಖ ಚಳವಳಿಗಳಲ್ಲಿ ಮದ್ಯಪಾನ ನಿಷೇಧ ಚಳವಳಿ ಪ್ರಮುಖವಾದುದು.
- ಈ ಚಳವಳಿ ವಿಭಿನ್ನವಾದದ್ದು. ಯಾಕೆಂದರೆ ಪಾನನಿಷೇಧದ ಸಂದರ್ಭದಲ್ಲಿ ಮಹಿಳೆಯರು ಒಗ್ಗಟ್ಟಾಗಿ ಸಂಘಟಿತವಾಗಿರುತ್ತಾರೆ.
- ಮದ್ಯಪಾನ ನಿಷೇಧವು ಸ್ವಾತಂತ್ರ್ಯ ಚಳವಳಿಯ ಭಾಗ. ಗಾಂಧಿ ಮದ್ಯಪಾನ ನಿಷೇಧಿಸುವ ವಿಚಾರ ಪ್ರತಿಪಾದಿಸುತ್ತಾರೆ. ಮಹಿಳೆಯರ ಮದ್ಯಪಾನ ನಿಷೇಧ ಚಳವಳಿಯು ಚಿಪ್ಕೊ ಚಳವಳಿಯ ಭಾಗವಾಗಿ ರೂಪುಗೊಳ್ಳುತ್ತದೆ.
- ಕರ್ನಾಟಕದಲ್ಲಿ ಪರಿಸರ ಚಳವಳಿಯ ಭಾಗವಾಗಿ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಮದ್ಯಪಾನ ನಿಷೇಧ ಚಳವಳಿ ಪ್ರಾರಂಭವಾಗುತ್ತದೆ.
- ಕುಸುಮಾ ಸೊರಬ ಅವರ ಜೊತೆಗೆ ಹಲವರು ಈ ಚಳವಳಿಯಲ್ಲಿ ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ.

- ಇದಲ್ಲದೆಯೂ ಹಾಸನ, ಕೋಲಾರ, ಮಂಡ್ಯ, ಚಾಮರಾಜನಗರ ಇನ್ನೂ ಮುಂತಾದ ಜಿಲ್ಲೆಗಳ ಮಹಿಳೆಯರು ಮದ್ಯಪಾನ ಮಾರಾಟದ ವಿರುದ್ಧ ಚಳವಳಿಗಳನ್ನು ನಡೆಸಿದ್ದಾರೆ.
- ಮದ್ಯಪಾನವು ಉಂಟುಮಾಡಿದ ಪರಿಣಾಮಗಳನ್ನು ಸಹಿಸಲಾಗದೆ ಮದ್ಯಪಾನ ನಿಷೇಧ ಚಳವಳಿಗಳನ್ನು ಮಹಿಳೆಯರೇ ಸಂಘಟಿಸಿದ್ದಾರೆ.

**11. ಕಾರ್ಮಿಕ ಚಳವಳಿಯನ್ನು ವಿವರಿಸಿ.**

- 'ಕಾರ್ಮಿಕ ಚಳವಳಿ' ಅಥವಾ 'ಕಾರ್ಮಿಕ ಸಂಘ' ಎನ್ನುವುದು ಸಾಮಾನ್ಯವಾಗಿ ದುಡಿಯುವ ಜನರನ್ನು ಪ್ರತಿನಿಧಿಸುವ ಸಂಘಟನೆ.
- ಉತ್ತಮ ದುಡಿಯುವ ವಾತಾವರಣ, ಗೌರವಯುತ ನಡವಳಿಕೆ, ಕಾರ್ಮಿಕ ಮತ್ತು ಉದ್ಯೋಗ ಕಾನೂನುಗಳ ಅನುಷ್ಠಾನಕ್ಕೆ ಸರ್ಕಾರಗಳನ್ನು ಒತ್ತಾಯಿಸಿ ಕಾರ್ಮಿಕ ಸಂಘಟನೆಗಳ ಮೂಲಕ ನಡೆಯುವ ಚಳವಳಿಯನ್ನು ಕಾರ್ಮಿಕ ಚಳವಳಿ ಎಂದು ಕರೆಯಲಾಗುತ್ತದೆ.
- ಕೆಲವು ದೇಶಗಳಲ್ಲಿ ಕಾರ್ಮಿಕ ಚಳವಳಿಗಳು ರಾಜಕೀಯ ಪಕ್ಷಗಳ ಸಹ ಸಂಘಟನೆಗಳಾಗಿವೆ.
- ಕೈಗಾರಿಕಾ ಬಂಡವಾಳಶಾಹಿ ಶೋಷಣೆಯ ವಿರುದ್ಧವಾಗಿ ಸಮಕಾಲೀನ ಕಾರ್ಮಿಕ ಪರ ಸಿದ್ಧಾಂತವು ಬೆಳೆಯುತ್ತ ಬಂದಿದೆ.

**12. ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯ ಚರಿತ್ರೆಯನ್ನು ವಿವರಿಸಿ.**

- ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯ ಚರಿತ್ರೆಯನ್ನು 19ನೇ ಶತಮಾನದಿಂದ ಗುರುತಿಸಬಹುದು.
- ಮಹಾರಾಷ್ಟ್ರದ ಜ್ಯೋತಿರಾವ್ ಫುಲೆಯವರು ಅಸ್ಪೃಶ್ಯರು ಮತ್ತು ಹಿಂದುಳಿದ ವರ್ಗದವರನ್ನು ಒಳಗೊಂಡ ಚಳವಳಿಯನ್ನು ಆರಂಭಿಸಿದರು.
- 'ಚಾತುರ್ವರ್ಣ ಆಧಾರಿತ ಮಾನವ ವಿರೋಧಿ ಆಚರಣೆಗಳನ್ನು ಮತ್ತು ಅವುಗಳ ಪ್ರಾಬಲ್ಯವನ್ನು ತಡೆಯುವುದು ಈ ಚಳವಳಿಯ ಉದ್ದೇಶ.
- ಈ ಆಶಯದಲ್ಲಿಯೇ ನಂತರ ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ ಮತ್ತಿತರ ಭಾಗಗಳಲ್ಲಿ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಗಳು ಹುಟ್ಟಿಕೊಂಡಿತು.
- ಪೆರಿಯಾರ್ ರಾಮಸ್ವಾಮಿರವರು ಆತ್ಮಗೌರವ ಚಳವಳಿಯನ್ನು ಪ್ರಾರಂಭಿಸಿದರು.
- ಡಾ. ಬಿ.ಆರ್.ಅಂಬೇಡ್ಕರ್ ಅವರ ಚಿಂತನೆ ಮತ್ತು ಹೋರಾಟದೊಂದಿಗೆ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯು ತೀವ್ರ ಸ್ವರೂಪ ಪಡೆಯುತ್ತದೆ.

## ಅಧ್ಯಾಯ–04
## ಸಾಮಾಜಿಕ ಸಮಸ್ಯೆಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಸಂವಿಧಾನದ **24 ನೇ** ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ.
2. 'ಬಾಲ್ಯವಿವಾಹ ನಿಷೇಧ ಕಾಯಿದೆ' ಜಾರಿಗೆ ಬಂದ ವರ್ಷ ________________**(2006)**
3. ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ________________ರಲ್ಲಿ 'ರಾಷ್ಟ್ರೀಯ ನೀತಿ' ಜಾರಿಗೊಳಿಸಿತು. **(2016)**
4. ಹೆಣ್ಣುಭ್ರೂಣ ಹತ್ಯೆಯನ್ನು ನಿಷೇಧಿಸಿದ ಕಾಯಿದೆ ________________ ರಲ್ಲಿ ಜಾರಿಗೆ ಬಂದಿತು. **(1994)**
5. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ________________ ರಲ್ಲಿ ಜಾರಿಗೆ ಬಂದಿತು. **(2012)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು? ತಿಳಿಸಿ.**

- ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕುಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗದಿರುವುದು.
- ಎಲ್ಲಾ ಮಕ್ಕಳಿಗೂ 10ನೇ ತರಗತಿ ವರೆಗೆ ಶಿಕ್ಷಣ ಸಂಪೂರ್ಣ ಉಚಿತವಾಗಿ ದೊರಕದಿರುವುದು.
- ಕುಟುಂಬದ ಆರ್ಥಿಕ ಸ್ಥಿತಿ.
- ಕನಿಷ್ಠ ಕೂಲಿ.
- ಭೂಸುಧಾರಣಾ ಕಾಯ್ದೆಯ ಅನುಷ್ಠಾನದ ಕೊರತೆಗಳು.
- ಹೋಟೆಲ್, ಸಣ್ಣ ಕೈಗಾರಿಕೆ, ಪಟಾಕಿ ತಯಾರಿಕಾ ಘಟಕಗಳು.
- ಅಸಂಘಟಿತ ದುಡಿಮೆಯ ವಲಯ.
- ಬರದಿಂದ ಉಂಟಾಗುವ ಕೃಷಿ ಸಮಾಜದ ಬಿಕ್ಕಟ್ಟುಗಳು.

- ವಲಸೆ.
- ಪೋಷಕರ ದುಶ್ಚಟಗಳು.

**2. ಬಾಲ್ಯವಿವಾಹದ ಪರಿಣಾಮಗಳು ಯಾವುವು?**

- ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತವಾಗಿ, ಅವರು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ.
- ಇದರ ಪರಿಣಾಮವಾಗಿ ಮಕ್ಕಳ ಮೇಲೆ ಅತಿಯಾದ ದೌರ್ಜನ್ಯ, ನಿರ್ಲಕ್ಷ್ಯ, ಹಿಂಸೆ, ಶೋಷಣೆ ಮತ್ತು ಲೈಂಗಿಕ ದೌರ್ಜನ್ಯ ಹೆಚ್ಚುತ್ತವೆ.
- ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ – ಬಾಲ್ಯತನ, ಶಿಕ್ಷಣ, ಮನೋರಂಜನೆ, ಗೆಳೆಯರ ಒಡನಾಟಕ್ಕೆ ಧಕ್ಕೆ, ಅಪೌಷ್ಟಿಕತೆ, ರಕ್ತಹೀನತೆ, ಅನಾರೋಗ್ಯ, ಗರ್ಭಪಾತ, ಶಿಶುಮರಣ, ತಾಯಿಮರಣಕ್ಕೆ ಕಾರಣವಾಗುತ್ತದೆ.
- ವಿಶೇಷವಾಗಿ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗುವ ಸಂಭವ ಹೆಚ್ಚು. ಹೆಣ್ಣು ಮಕ್ಕಳು ಯಾವುದೇ ಸಾಮಾಜಿಕ ಭದ್ರತೆಗಳಿಲ್ಲದೆ ಆಗಾಗ ದೌರ್ಜನ್ಯಕ್ಕೆ ಒಳಗಾಗುವ ಸಂದರ್ಭಗಳು ಹೆಚ್ಚು.

**3. ಬಾಲಕಾರ್ಮಿಕ ಸಮಸ್ಯೆಯ ನಿರ್ಮೂಲನಾ ಕ್ರಮಗಳಾವುವು? ವಿವರಿಸಿ.**

- ಎಲ್ಲಾ ಸಂದರ್ಭಗಳಲ್ಲಿ ಲಿಂಗ ಸಮಾನತೆಯನ್ನು ಕಾಪಾಡುವುದು ಮತ್ತು ತರುವುದು.
- ಅಸಹಾಯಕ ಕುಟುಂಬಗಳು ಬದುಕಿಗೆ ವಲಸೆ / ಗುಳೆ ಹೋಗುವುದನ್ನು ತಡೆಗಟ್ಟುವುದು.
- ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ/ಮಾರಾಟ ತಡೆ ಕುರಿತು ಅರಿವನ್ನು ಹೆಚ್ಚಿಸುವುದು.
- ಮಕ್ಕಳ ರಕ್ಷಣಾತ್ಮಕ ಹಕ್ಕುಗಳನ್ನು ಪಂಚಾಯತಿಗಳು ಜವಾಬ್ದಾರಿಯಿಂದ ನಿರ್ವಹಿಸುವುದು.

**4. ಭಾರತದ ಯಾವುದಾದರೂ ಸಾಮಾಜಿಕ ಸಮಸ್ಯೆಗಳನ್ನು ಹೆಸರಿಸಿ.**

- ಬಾಲ ಕಾರ್ಮಿಕರು. (ಮಕ್ಕಳ ದುಡಿಮೆ)
- ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ.
- ಹೆಣ್ಣು ಭ್ರೂಣಹತ್ಯೆ .
- ಹಸಿವು ಮತ್ತು ಅಪೌಷ್ಟಿಕತೆ.
- ಲಿಂಗತಾರತಮ್ಯ.
- ಬಾಲ್ಯ ವಿವಾಹ.
- ಮಕ್ಕಳ ಸಾಗಾಣಿಕೆ ಮತ್ತು ಮಾರಾಟ.

**5. ಹಸಿವಿನ ಸೂಚಕಗಳು ಯಾವುವು?**

- ಬದುಕಿರಲು ಅಗತ್ಯವಾಗಿ ಬೇಕಾದಷ್ಟು ಆಹಾರ ಸಿಗದಿರುವುದು.
- ಸತತ ಆಹಾರದ ಮತ್ತು ಪೋಷಕಾಂಶಗಳ ಕೊರತೆಯಿಂದ ನಿಶ್ಯಕ್ತಿ.
- ತೀವ್ರ ಅನಾರೋಗ್ಯ.
- ವಿಕಲಾಂಗತೆ.
- ಅಕಾಲಿಕ ಮರಣ.

**6. ಹಸಿವಿನ ಸೂಚಕವನ್ನು ಹೇಗೆ ಕಂಡು ಹಿಡಿಯಲಾಗುವುದು?**

- ಕನಿಷ್ಠ ಕ್ಯಾಲೋರಿ ದೊರಕದ ಆಹಾರ ಸೇವಿಸುವವರ ಶೇಕಡವಾರು ಪ್ರಮಾಣ.
- ಸರಾಸರಿ ತೂಕಕ್ಕಿಂತ ಕಡಿಮೆ ತೂಕ ಇರುವ 5 ವರ್ಷದವರೆಗಿನ ಮಕ್ಕಳ ಶೇಕಡವಾರು ಪ್ರಮಾಣ.
- 5 ವರ್ಷದವರೆಗಿನ ಮಕ್ಕಳ ಮರಣದ ಶೇಕಡವಾರು ಪ್ರಮಾಣ.
- ಈ ಮೂರು ಅಂಶಗಳನ್ನು ಕೂಡಿ ಮೂರರಿಂದ ಭಾಗಿಸಿದರೆ ಬರುವ ಸಂಖ್ಯೆಯೇ ಹಸಿವಿನ ಸೂಚಕ.

**7. ಬಾಲ್ಯವಿವಾಹಕ್ಕೆ ಪರಿಹಾರಗಳು ಯಾವುವು?**

- 18 ವರ್ಷದ ತನಕ ಯಾವ ಮಕ್ಕಳು ಶಾಲೆ / ಕಾಲೇಜು ಬಿಡದಿರುವಂತೆ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ.
- 100% ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಬೇಕು.
- ಹಾಜರಾತಿಯ ಜೊತೆಗೆ 100% ಜನನ ನೋಂದಣಿ ಮತ್ತು ಜನನ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ ಮಾಡುವುದು.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು,
- ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣ ಆದ್ಯತೆ.
- ಎಲ್ಲೇ ಬಾಲ್ಯವಿವಾಹ ನಡೆದರು ತಪ್ಪದೇ ದೂರು ನೀಡುವುದು, ಖಂಡಿಸುವುದು, ಪ್ರಶ್ನಿಸುವುದು.

**8. ಬಾಲಕಾರ್ಮಿಕ, ಹದಿಹರೆಯದವರ ದುಡಿಮೆ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ– 1986ರ ಪ್ರಮುಖ ಅಂಶಗಳು ಯಾವುವು?**

- ಈ ಕಾಯ್ದೆಯ ಪ್ರಕಾರ 14 ವರ್ಷದೊಳಗಿನ ಯಾವುದೇ ಮಕ್ಕಳನ್ನು ಯಾವುದೇ ಕಾರಣಕ್ಕೂ, ಯಾವುದೇ ಕ್ಷೇತ್ರದಲ್ಲಿ, ಎಲ್ಲಿಯೂ

ಕೂಡ ದುಡಿಸುವಂತಿಲ್ಲ. ದುಡಿಮೆಗೆ ಇಟ್ಟುಕೊಳ್ಳುವಂತಿಲ್ಲ. ಈ ಕಾಯ್ದೆಯ ಪರಿಚ್ಛೇದ – 14ರ ಪ್ರಕಾರ ಮಕ್ಕಳನ್ನು ದುಡಿಮೆಯಲ್ಲಿ ಇಟ್ಟು ಕೊಳ್ಳುವವರಿಗೆ, 2 ವರ್ಷದ ತನಕ ಜೈಲು ಮತ್ತು ರೂ. 50,000/– ತನಕ ದಂಡ ವಿಧಿಸಲಾಗುತ್ತದೆ.

- ಯಾವುದೇ ಕುಟುಂಬದವರೂ ಕೂಡ ಅವರ ಹೊಲ, ಗದ್ದೆ, ವ್ಯಾಪಾರಗಳು ಅವರ 14 ವರ್ಷದೊಳಗಿನ ಅವರ ಸ್ವಂತ ಮಕ್ಕಳನ್ನು ಕೂಡ "ಶಾಲಾ" ಅವಧಿಯಲ್ಲಿ ಕೆಲಸಕ್ಕೆ ಇಟ್ಟುಕೊಳ್ಳುವಂತಿಲ್ಲ. ಒಂದು ವೇಳೆ ಇಟ್ಟುಕೊಂಡರೆ ಮಕ್ಕಳ ತಂದೆ, ತಾಯಿ ಅಥವಾ ಕುಟುಂಬಸ್ಥರೇ ಮಾಲೀಕರಾಗಿ ಅಪರಾಧಿಗಳಾಗುತ್ತಾರೆ.ಅವರಿಗೆ ರೂ 10,000/– ದಂಡ ವಿಧಿಸಲಾಗುತ್ತದೆ.
- ಈ ಕಾಯ್ದೆಯು 15 ರಿಂದ 18 ವರ್ಷದೊಳಗಿನ ಮಕ್ಕಳನ್ನು ಹದಿಹರೆಯದವರು ಎಂದು ಹೇಳುತ್ತದೆ. ಜೊತೆಗೆ 15 ರಿಂದ 18 ವರ್ಷದೊಳಗಿನ ಯಾವುದೇ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವಂತಿಲ್ಲ. ಒಂದು ವೇಳೆ ದುಡಿಸಿದರೆ ಎರಡು ವರ್ಷ ಜೈಲು, ರೂ. 50,000 ದಂಡ ವಿಧಿಸಲಾಗುತ್ತದೆ.

**9. ಮಕ್ಕಳ ದುಡಿಮೆಯ ದುಷ್ಪಾರಿಣಾಮಗಳು ಯಾವುವು?**

- ಬಾಲಕಾರ್ಮಿಕತೆಯು ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ಅತ್ಯಂತ ಗಂಭೀರವಾದ ಪರಿಣಾಮಗಳನ್ನು ಉಂಟುಮಾಡುತ್ತದೆ.
- ಬಾಲಕಾರ್ಮಿಕರಾಗಿ ದುಡಿಯುವ ಮಕ್ಕಳು ಯುವಕರಾದಾಗ ಅನೇಕ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಒಳಗಾಗುತ್ತಾರೆ.
- ಚಿಕ್ಕ ವಯಸ್ಸಿನಲ್ಲಿಯೇ ದುಡಿಮೆಯಲ್ಲಿ ಭಾಗವಹಿಸುವುದರಿಂದ, ಕಲಿಕೆಯ ವಯಸ್ಸಿನಲ್ಲಿ ಶಿಕ್ಷಣದಿಂದ ವಂಚಿತರಾಗಿ ಅನರಕ್ಷರಸ್ಥರಾಗುತ್ತಾರೆ.
- ಇದು ಅವರ ಹಕ್ಕುಗಳನ್ನು, ಸ್ವಾತಂತ್ರವನ್ನು ಕಸಿದುಕೊಳ್ಳುತ್ತದೆ.
- ಮಕ್ಕಳ ದುಡಿಮೆಯು ಕುಟುಂಬಗಳ ಸಾಮಾಜಿಕ ಚಲನೆ, ಆರ್ಥಿಕ ಚಲನೆ ಕುಸಿಯುವಂತೆ ಮಾಡುತ್ತದೆ.
- ಅಂತಹ ಕುಟುಂಬಗಳಲ್ಲಿ ಮಕ್ಕಳು ಮತ್ತೆ ಮತ್ತೆ ದುಡಿಮೆಗೆ, ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾತ್ತಿರುತ್ತಾರೆ.
- ಬಾಲ್ಯವಿವಾಹ, ಮಕ್ಕಳ ಮಾರಾಟ ಮತ್ತು ಸಾಗಾಣೆ ಮಾಡುವ, ಸಮಾಜ ವಿರೋಧಿ ಚಟುವಟಿಕೆಗೆ ಅವಕಾಶ ಮಾಡಿಕೊಡುತ್ತವೆ.

**10. 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ – 2012' ಕಾಯಿದೆಯ ಪ್ರಮುಖ ಅಂಶಗಳು ಯಾವುವು?**

- ಲೈಂಗಿಕ ದೌರ್ಜನ್ಯ (ಭೇದಕ ಹಠದ ದೌರ್ಜನ್ಯ)
- ಬಲತ್ಕಾರ/ದುರುಪಯೋಗದ/ತೀವ್ರ ಭೇದಕ ಲೈಂಗಿಕ ದೌರ್ಜನ್ಯ.
- ಲೈಂಗಿಕ ಹಲ್ಲೆ.
- ತೀವ್ರ ಸ್ವರೂಪದ ಲೈಂಗಿಕ ಹಲ್ಲೆ.
- ಲೈಂಗಿಕ ಕಿರುಕುಳ.
- ಅಶ್ಲೀಲ ಚಿತ್ರ ತಯಾರಿಕೆಗೆ ಮಕ್ಕಳ ಬಳಕೆ.
- ಅಶ್ಲೀಲ ಚಿತ್ರ ಸಂಗ್ರಹ.

**11. ಲಿಂಗತಾರತಮ್ಯದ ಪ್ರಕಾರಗಳು ಯಾವುವು?**

- ಜನನ ಪ್ರಮಾಣದಲ್ಲಿ ಅಸಮಾನತೆ.
- ಮೂಲಸೌಕರ್ಯದಲ್ಲಿ ಅಸಮಾನತೆ.
- ಅವಕಾಶಗಳಲ್ಲಿ ಅಸಮಾನತೆ.
- ಒಡೆತನದ ಅಸಮಾನತೆ.
- ಕೌಟುಂಬಿಕ ಅಸಮಾನತೆ.

**12. ಬಾಲ್ಯವಿವಾಹಕ್ಕೆ ಕಾರಣಗಳು ಯಾವುವು?**

- ಬಾಲ್ಯವಿವಾಹಕ್ಕೆ ಪ್ರಮುಖ ಕಾರಣ 'ಲಿಂಗ ತಾರತಮ್ಯ'. ಹೆಣ್ಣು ಬೇರೆಯವರ ಮನೆಗೆ ಹೋಗುವವಳು ಅವಳನ್ನು ಬೇಗ ಮದುವೆ ಮಾಡಿ ಕಳುಹಿಸಬೇಕು ಎಂಬ ನಂಬಿಕೆ.
- 'ಹೆಣ್ಣು' ಮತ್ತು 'ಗಂಡು' ಮಕ್ಕಳ ಹಾಗೂ ನಡುವಿನ ಬೇಧಭಾವ.
- 'ಶಿಕ್ಷಣ ಇಲ್ಲದಿರುವಿಕೆ', ಬಾಲಕಾರ್ಮಿಕತೆ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ.
- ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ ಮತ್ತು ಬಳಕೆಯ ಕೊರತೆ.
- ಶಿಕ್ಷಣ ವ್ಯವಸ್ಥೆಯಲ್ಲಿ ಕಾನೂನುಗಳ ಅನುಷ್ಠಾನದ ಕೊರತೆ.
- ಶಿಕ್ಷಣಕ್ಕೆ, ಸಮಾಜದ / ಸಮುದಾಯಗಳ / ಸಾರ್ವಜನಿಕ ಅಸಹಕಾರ.
- ಮಕ್ಕಳ ಹಕ್ಕುಗಳ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ದೋಷಪೂರಿತವಾದ ಅನುಷ್ಠಾನ.

**13. ಬಾಲ್ಯ ವಿವಾಹದ ದುಷ್ಪರಿಣಾಮಗಳು ಯಾವುವು?**

- ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತವಾಗಿ, ಅವರು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ.
- ಇದರ ಪರಿಣಾಮವಾಗಿ ಮಕ್ಕಳ ಮೇಲೆ ಅತಿಯಾದ ದೌರ್ಜನ್ಯ, ನಿರ್ಲಕ್ಷ್ಯ, ಹಿಂಸೆ, ಶೋಷಣೆ ಮತ್ತು ಲೈಂಗಿಕ ದೌರ್ಜನ್ಯ ಹೆಚ್ಚುತ್ತವೆ.
- ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ – ಬಾಲ್ಯತನ, ಶಿಕ್ಷಣ, ಮನೋರಂಜನೆ, ಗೆಳೆಯರ ಒಡನಾಟಕ್ಕೆ ಧಕ್ಕೆ, ಅಪೌಷ್ಟಿಕತೆ, ರಕ್ತಹೀನತೆ, ಅನಾರೋಗ್ಯ, ಗರ್ಭಪಾತ, ಶಿಶುಮರಣ, ತಾಯಿಮರಣಕ್ಕೆ ಕಾರಣವಾಗುತ್ತದೆ.
- ವಿಶೇಷವಾಗಿ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗುವ ಸಂಭವ ಹೆಚ್ಚು.
- ಹೆಣ್ಣು ಮಕ್ಕಳು ಯಾವುದೇ ಸಾಮಾಜಿಕ ಭದ್ರತೆಗಳಿಲ್ಲದೆ ಆಗಾಗ ದೌರ್ಜನ್ಯಕ್ಕೆ ಒಳಗಾಗುವ ಸಂದರ್ಭಗಳು ಹೆಚ್ಚು.

**14. ಬಾಲ್ಯವಿವಾಹಕ್ಕೆ ಪರಿಹಾರಗಳು ಯಾವುವು?**

- 18 ವರ್ಷದ ತನಕ ಯಾವ ಮಕ್ಕಳು ಶಾಲೆ / ಕಾಲೇಜು ಬಿಡದಿರುವಂತೆ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ. ಅಂದರೆ 100% ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಬೇಕು.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು, ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣ ಆದ್ಯತೆ ಎಲ್ಲೇ ಬಾಲ್ಯವಿವಾಹ ನಡೆದರು ತಪ್ಪದೇ ದೂರು ನೀಡುವುದು, ಖಂಡಿಸುವುದು, ಪ್ರಶ್ನಿಸುವುದು.

**15. ಮಕ್ಕಳ ಸಾಗಾಣಿಕೆಗೆ ಕಾರಣಗಳು ಯಾವುವು?**

- ಬಾಲಕಾರ್ಮಿಕತೆ,
- ಬಾಲ್ಯವಿವಾಹ,
- ಶಾಲೆಬಿಡುವುದು,
- ಬಡತನ,
- ಕುಟುಂಬಗಳಲ್ಲಿ ಮಕ್ಕಳ ಬಗ್ಗೆ ಅಸಡ್ಡೆ,
- ಜೀತ ಪದ್ಧತಿ,
- ಅನಿಯಮಿತ ವಲಸೆ ಮತ್ತು ಸ್ಥಳಾಂತರ.
- ಹೆಚ್ಚಾಗುತ್ತಿರುವ ಸಂಪರ್ಕ ತಂತ್ರಜ್ಞಾನ ಹಾಗೂ ಇಂಟರ್‌ನೆಟ್ ಬಳಕೆ.

**16. ಮಕ್ಕಳ ಸಾಗಾಣಿಕೆಯ ದುಷ್ಪರಿಣಾಮಗಳು ಯಾವುವು?**

- ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮಾರಕ,
- ದೈಹಿಕ ಹಾಗೂ ಲೈಂಗಿಕ ಶೋಷಣೆಗೆ ಬಲಿ.
- ಮಕ್ಕಳ ಸಾವು ಮತ್ತು ಗಂಭೀರ ರೋಗದ ಅಪಾಯ/ಹೆಚ್.ಐ.ವಿ/ಲೈಂಗಿಕ ಕಾಯಿಲೆ,
- ಅನಗತ್ಯ ಗರ್ಭಧಾರಣೆ,
- ಬಲವಂತದ ಗರ್ಭಧಾರಣೆ,
- ಕೊಲೆ, ಮಾದಕ ವ್ಯಸನಗಳಿಗೆ ಬಲಿ

**17. ಮಕ್ಕಳ ಸಾಗಾಣಿಕೆಯ ಪರಿಹಾರ ಕ್ರಮಗಳು ಯಾವುವು?**

- ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ "ಮಕ್ಕಳ ಹಕ್ಕುಗಳ ಕ್ಲಬ್" ರಚಿಸಿ ಅನುಷ್ಠಾನಕ್ಕೆ ತರುವುದು.
- ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ "ಮಕ್ಕಳ ಸುರಕ್ಷತಾ ಸಮಿತಿ" ರಚಿಸಿ ಅನುಷ್ಠಾನಕ್ಕೆ ತರುವುದು.
- ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ವರ್ಷ ಕಡ್ಡಾಯವಾಗಿ "ಮಕ್ಕಳ ಗ್ರಾಮ ಸಭೆ" ಗಳನ್ನು ನಡೆಸಿ ಆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 18 ವರ್ಷದೊಳಗಿನ ಎಲ್ಲಾ ಮಕ್ಕಳ ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು.
- ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ "ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ"ರಚಿಸಿ ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಿ 18 ವರ್ಷದೊಳಗಿನ ಎಲ್ಲಾ ಮಕ್ಕಳ ಸಮಸ್ಯೆಯ ಪರಿಹಾರಕ್ಕೆ ಕ್ರಮ.
- ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಕಡ್ಡಾಯವಾಗಿ "ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ" ಸಮಿತಿ ರಚಿಸುವುದು.

# ಭೂಗೋಳ

# ಅಧ್ಯಾಯ-8

# ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**ಮುಖ್ಯಾಂಶಗಳು:**

- ಭಾರತದಲ್ಲಿ **ಝಾರ್ಖಂಡ್ & ಓರಿಸ್ಸಾ** ರಾಜ್ಯಗಳು ಅತಿ ಹೆಚ್ಚು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿವೆ.
- ಬಾಕ್ಸೈಟ್ ಅದಿರಿನಿಂದ **ಅಲ್ಯೂಮಿನಿಯಂ** ಲೋಹವನ್ನು ಉತ್ಪಾದಿಸುತ್ತಾರೆ.
- ಅಭ್ರಕವನ್ನು **ಕಾಗೆ** ಬಂಗಾರ ಎಂದು ಕರೆಯುತ್ತಾರೆ.
- ಕಬ್ಬಿಣದ ಮಿಶ್ರ ಲೋಹಗಳಲ್ಲಿ ಅತಿ ಮುಖ್ಯವಾದ ಮಿಶ್ರ ಲೋಹ **ಮಾಂಗನೀಸ್** ಆಗಿದೆ.
- ಭಾರತವು **ಅಭ್ರಕ** ಅದಿರಿನ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಅಗ್ರ ಸ್ಥಾನದಲ್ಲಿದೆ.
- **ಚಿನ್ನವು** ಪ್ರಾಚೀನ ಕಾಲದಿಂದಲೂ ಪ್ರಪಂಚದಾದ್ಯಂತ ಅತ್ಯಂತ ಹೆಚ್ಚಿನ ಮೌಲ್ಯವನ್ನು ಹೊಂದಿದ ಲೋಹವಾಗಿದೆ.
- ದ್ರವರೂಪದ ಚಿನ್ನ : ಪೇಟ್ರೋಲಿಯಂ : : ಕಪ್ಪು ಬಂಗಾರ : **ಕಲ್ಲಿದ್ದಲು.**
- ಭಾರತದ ಆಸ್ಸಾಂನ **'ದಿಗ್ಬಾಯಿ'** ಎಂಬಲ್ಲಿ ಪೆಟ್ರೋಲಿಯಂನ್ನು ಮೊದಲು ಪತ್ತೆ ಹಚ್ಚಲಾಯಿತು.
- **ಬಾಂಬೈ ಹೈ** ಪ್ರದೇಶವು ಭಾರತದ ಅತಿ ದೊಡ್ಡ ತೈಲ ನಿಕ್ಷೇಪವಾಗಿದೆ.
- ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಾಜಸ್ತಾನದ **ಬಾರ್‌ಮರ್**‌ನಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ.

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತದ ಅತ್ಯಂತ ಪ್ರಮುಖವಾದ ಮಿಶ್ರಲೋಹ ________ . .**(ಮ್ಯಾಂಗನೀಸ್)**

2. ಅಲ್ಯೂಮಿನಿಯಂನ ಪ್ರಮುಖ ಕಚ್ಚಾ ಪದಾರ್ಥ ________ . **(ಬಾಕ್ಸೈಟ್)**

3. ಭಾರತದ ಅತ್ಯಂತ ಪ್ರಮುಖವಾದ ಅಲೋಹ ಖನಿಜ ________ ಆಗಿರುತ್ತದೆ.**(ಅಬ್ರಕ)**

4. ಸಸ್ಯಾವಶೇಷ ಇಂಧನ ________ ಆಗಿರುತ್ತದೆ. **(ಕಲ್ಲಿದ್ದಲು)**

5. ಶಿವನಸಮುದ್ರ ಜಲವಿದ್ಯುತ್ ಕೇಂದ್ರವು ________ ರಾಜ್ಯದಲ್ಲಿದೆ. **(ಕರ್ನಾಟಕ)**

**II. ಗುಂಪುಗಳಲ್ಲಿ ಚರ್ಚಿಸಿ ಕೆಳಕಂಡವುಗಳಿಗೆ ಉತ್ತರಿಸಿ.**

**1. ಖನಿಜ ಮತ್ತು ಗಣಿಗಾರಿಕೆಗಳಿಗೆ ವ್ಯಾಖ್ಯೆ ನೀಡಿ.**

- ➢ ಖನಿಜವು ಒಂದು ನೈಸರ್ಗಿಕ ಅಜೈವಿಕ ಮೂಲಧಾತುವಾಗಿದ್ದು ಅದು ನಿಗದಿತ ರಾಸಾಯನಿಕ ಸಂಯೋಜನೆ ಮತ್ತು ಭೌತಿಕ ಗುಣ ಧರ್ಮಗಳನ್ನು ಹೊಂದಿರುತ್ತದೆ.
- ➢ ಭೂಮಿಯಿಂದ ಖನಿಜಗಳನ್ನು ಹೊರತೆಗೆಯುವ ಕಾರ್ಯವನ್ನು 'ಗಣಿಗಾರಿಕೆ' ಎನ್ನುವರು.

**2. ಮ್ಯಾಂಗನೀಸ್ ಅದಿರಿನ ಪ್ರಮುಖ ಉಪಯೋಗಗಳು ಯಾವುವು?**

- ➢ ಮ್ಯಾಂಗನೀಸ್ ಅದಿರನ್ನು ಉಕ್ಕಿನ ಉತ್ಪಾದನೆಯಲ್ಲಿ ಬಳಸುವರು.
- ➢ ರಾಸಾಯನಿಕ ಮತ್ತು ವಿದ್ಯುತ್ ಉಪಕರಣಗಳ ತಯಾರಿಕೆ.
- ➢ ಬಣ್ಣದ ಗಾಜುಗಳ ತಯಾರಿಕೆಯಲ್ಲಿ ಬಳಸುವರು.
- ➢ ಇದು ಅತ್ಯಂತ ಪ್ರಮುಖವಾದ ಮಿಶ್ರಲೋಹ ಖನಿಜ.

**3. ಭಾರತದಲ್ಲಿ ಬಾಕ್ಸೈಟ್ ಉತ್ಪಾದಿಸುವ ಪ್ರಮುಖ ರಾಜ್ಯಗಳನ್ನು ಹೆಸರಿಸಿ.**

ಒಡಿಶಾ, ಗುಜರಾತ್, ಜಾರ್ಖಂಡ್, ಮಹಾರಾಷ್ಟ್ರ, ಛತ್ತೀಸ್‌ಗಡ್, ತಮಿಳುನಾಡು ಮತ್ತು ಮಧ್ಯಪ್ರದೇಶ

**4. ಶಕ್ತಿ ಸಂಪನ್ಮೂಲಗಳ ಅರ್ಥ ಮತ್ತು ಭಾರತದಲ್ಲಿ ಅವುಗಳ ಪ್ರಾಮುಖ್ಯತೆ ಕುರಿತು ವಿವರಿಸಿ.**

ವಿದ್ಯುಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು 'ಶಕ್ತಿ ಸಂಪನ್ಮೂಲಗಳು' ಎಂದು ಕರೆಯಲಾಗಿದೆ.

- ➢ ಒಂದು ದೇಶದ ಆರ್ಥಿಕಾಭಿವೃದ್ಧಿ ಮತ್ತು ಜನರ ಜೀವನ ಮಟ್ಟದ ಸುಧಾರಣೆಗೆ ಶಕ್ತಿ ಸಂಪನ್ಮೂಲಗಳು ಅತ್ಯಗತ್ಯ.
- ➢ ಕೈಗಾರಿಕೆ, ಕೃಷಿ, ವಾಣಿಜ್ಯೋದ್ಯಮ, ಸಾರಿಗೆ-ಸಂಪರ್ಕ ಮೊದಲಾದವುಗಳ ಪ್ರಗತಿಯಲ್ಲಿ ಶಕ್ತಿ ಸಂಪನ್ಮೂಲಗಳ ಪಾತ್ರ ಮುಖ್ಯವಾದುದು.

**5. ಭಾರತದಲ್ಲಿ ಪೆಟ್ರೋಲಿಯಂ ಹಂಚಿಕೆಯನ್ನು ಕುರಿತು ವಿವರಿಸಿ.**

ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವು ಹೆಚ್ಚಾಗಿ ಬಾಂಬೆ ಹೈ ಹಾಗೂ ಗುಜರಾತ್, ಅಸ್ಸಾಂ, ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹಂಚಿಕೆಯಾಗಿದೆ.

**6. ಭಾರತದ ಪರಮಾಣು ವಿದ್ಯುತ್ ತಯಾರಿಕಾ ಕೇಂದ್ರಗಳನ್ನು ಹೆಸರಿಸಿ.**

1) ತಾರಾಪುರ; ಮುಂಬಯಿ ಸಮೀಪ, ಮಹಾರಾಷ್ಟ್ರ.
2) ರಾಣಪ್ರತಾಪಸಾಗರ; ಕೋಟಾದ ಬಳಿ, ರಾಜಸ್ತಾನ.
3) ಕಲ್ಪಾಕಂ; ಚೆನ್ನೈ ಸಮೀಪ, ತಮಿಳುನಾಡು.
4) ನರೋರ, ಉತ್ತರ ಪ್ರದೇಶ.
5) ಕಾಕ್ರಪಾರ, ಗುಜರಾತ್,
6) ಕೈಗ; ಕಾರವಾರದ ಬಳಿ, ಕರ್ನಾಟಕ ಮತ್ತು
7) ಕುಂದನ್ ಕುಲಂ, ತಮಿಳುನಾಡು.

**7. ತಮಿಳುನಾಡಿನ ಪ್ರಮುಖ ಜಲವಿದ್ಯುತ್ ಕೇಂದ್ರಗಳನ್ನು ತಿಳಿಸಿ.**

ಮೆಟ್ಟೂರು, ಪೈಕಾರ, ಪಾಪನಾಸಂ, ಪೆರಿಯಾರ್, ಮೊಯಾರ್, ಕುಂದ್ಹಾ, ಶೋಲಯಾರ್, ಮತ್ತು ಕೊಡಯಾರ್.

**8. ಖನಿಜಗಳ ಪ್ರಾಮುಖ್ಯತೆಯನ್ನು ತಿಳಿಸಿ**

- ಕೈಗಾರಿಕೆ,
- ನಿರ್ಮಾಣಕಾರ್ಯ,
- ಸಾರಿಗೆ ಮತ್ತು ಸಂಪರ್ಕಗಳ ಪ್ರಗತಿ,
- ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಗೆ ಹೆಚ್ಚು ಉಪಯುಕ್ತ.
- ಕೆಲವು ಖನಿಜಗಳಂತೂ ಆರ್ಥಿಕ ಮೌಲ್ಯಗಳನ್ನುಳ್ಳವುಗಳು.

**9. ಅಭ್ರಕದ ಉಪಯೋಗಗಳೇನು?**

- ಅವು ಪಾರದರ್ಶಕವೂ ಮತ್ತು ಶಾಖ ನಿರೋಧಕ ಗುಣವುಳ್ಳವು.
- ಅವುಗಳನ್ನು ಹೆಚ್ಚಾಗಿ ವಿದ್ಯುದುಪಕರಣ ಉದ್ಯಮ, ಟೆಲಿಫೋನ್, ವಿಮಾನ ತಯಾರಿಕೆ, ಸ್ವಚಾಲನಾ ವಾಹನ ಕೈಗಾರಿಕೆ ಮತ್ತು ನಿಸ್ತಂತು ಸಂಪರ್ಕ ಮಾಧ್ಯಮಗಳಲ್ಲಿ ಬಳಕೆ ಮಾಡಲಾಗುತ್ತದೆ.

**10. ಪೆಟ್ರೋಲಿಯಂ ಮಹತ್ವವನ್ನು ತಿಳಿಸಿ**

- ಪೆಟ್ರೋಲಿಯಂ ಪ್ರಮುಖವಾಗಿ ಹೈಡ್ರೊಕಾರ್ಬನ್‌ವುಳ್ಳ ಖನಿಜತೈಲ.
- ಇದೊಂದು ಅತಿ ಪ್ರಮುಖ ಇಂಧನ ಹಾಗೂ ಹಲವು ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವ ಮೂಲವೂ ಆಗಿದೆ.
- ವಾಣಿಜ್ಯ ದೃಷ್ಟಿಯಲ್ಲಿ ಮುಖ್ಯ ಶಕ್ತಿಯ ಮೂಲ ಮತ್ತು ಇದನ್ನು ಹೆಚ್ಚಾಗಿ ಸಾರಿಗೆಯಲ್ಲಿ ಬಳಸಲಾಗುತ್ತದೆ.
- ಕೃತಕ ರಬ್ಬರ್, ಕೃತಕ ರೇಷ್ಮೆ ಔಷಧಿ, ರಾಸಾಯನಿಕ ಗೊಬ್ಬರ, ಬಣ್ಣ ತಯಾರಿಕೆ ಮೊದಲಾದ ಕೈಗಾರಿಕೆಗಳಿಗೆ ಬೇಕಾದ ಕಚ್ಚಾಪದಾರ್ಥಗಳನ್ನು ಪೂರೈಸುವುದು.

**11. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ ಏನು?**

- ಭಾರತದಲ್ಲಿ ಅಪರಿಮಿತವಾದ ಅಸಂಪ್ರದಾಯಿಕ ಶಕ್ತಿ ಮೂಲಗಳು ದೊರೆಯುತ್ತವೆ.
- ಅವು ನವೀಕರಿಸಬಲ್ಲ ಮೂಲಗಳು, ಮಾಲಿನ್ಯ ಮುಕ್ತವಾದವು ಮತ್ತು ಪರಿಸರ ಸ್ನೇಹಿಗಳಾಗಿವೆ.
- ಅವುಗಳನ್ನು ಸುಲಭವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸರಬರಾಜು ಮಾಡಬಹುದು.
- ಅವುಗಳ ಉತ್ಪಾದನೆಯಿಂದ ದೇಶದ ವಿದ್ಯುತ್ ಅಭಾವವನ್ನು ನೀಗಿಸಬಹುದು.
- ಭಾರತದಲ್ಲಿ ಇತ್ತೀಚೆಗೆ ವಿದ್ಯುಚ್ಛಕ್ತಿ ಬಳಕೆಯ ದರವು ಹೆಚ್ಚಾಗಿದೆ.
- ಹೀಗಾಗಿ ತುರ್ತಾಗಿ ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಅವಶ್ಯಕತೆ ಇದೆ.

**12. ಭಾರತದ ವಿದ್ಯುತ್ ಅಭಾವಕ್ಕೆ ಪ್ರಮುಖ ಕಾರಣಗಳು ಯಾವುವು?**

- ದೇಶದಲ್ಲಿ ಕಡಿಮೆ ಪೆಟ್ರೋಲಿಯಂ ನಿಕ್ಷೇಪದ ಲಭ್ಯತೆ ಮತ್ತು ತೈಲದ ಕೊರತೆ.
- ಕಡಿಮೆ ದರ್ಜೆಯ ಕಲ್ಲಿದ್ದಲು.
- ಅಕಾಲಿಕ ಮಳೆ ಮತ್ತು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರಿನ ಕೊರತೆ.
- ಪ್ರಸರಣ ಪ್ರಕ್ರಿಯೆಯಲ್ಲಾಗುವ ವಿದ್ಯುತ್‌ನ ನಷ್ಟ.
- ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಕಡಿಮೆ ಬಳಕೆ.

**13. ವಿದ್ಯುಚ್ಛಕ್ತಿ ಅಭಾವಕ್ಕೆ ಪರಿಹಾರಗಳು ಯಾವುವು?**

- ದೇಶದಲ್ಲಿ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳ ಉತ್ಪಾದನೆಯನ್ನು ಹೆಚ್ಚಿಸುವುದು.
- ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳಿಗೆ ಬದಲಾಗಿ ಇತರೆ ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಬಳಸಲು ಕ್ರಮಕೈಗೊಳ್ಳುವುದು.
- ಹೆಚ್ಚೆಚ್ಚು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು.
- ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಕೆ ಮಾಡುವುದು.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಜಲ ವಿದ್ಯುಚ್ಛಕ್ತಿ ಎಂದರೇನು?**
ಧುಮುಕುವ ನೀರಿನ ರಭಸದಿಂದ ಉತ್ಪಾದಿಸುವ ವಿದ್ಯುತ್‌ನ್ನು ಜಲ ವಿದ್ಯುಚ್ಛಕ್ತಿ ಎಂದು ಕರೆಯಲಾಗಿದೆ.

**2. ಭಾರತದಲ್ಲಿ ಅತ್ಯಧಿಕ ಕಬ್ಬಿಣದ ಅದಿರು ಉತ್ಪಾದಿಸುವ ರಾಜ್ಯ ಯಾವುದು?**
ಒಡಿಶಾ.

**3. ಅಲ್ಯೂಮಿನಿಯಂ ಲೋಹ ತಯಾರಿಕೆಗೆ ಅಗತ್ಯವಾದ ಮುಖ್ಯ ಕಚ್ಚಾವಸ್ತು ಯಾವುದು?**
ಬಾಕ್ಸೈಟ್.

**4. ಪ್ರಮುಖ ಅಲೋಹ ಖನಿಜ ಯಾವುದು?**
ಅಭ್ರಕ.

**5. ಭಾರತದಲ್ಲೇ ಅತಿ ಹೆಚ್ಚು ಅಬ್ರಕ ಉತ್ಪಾದಿಸುವ ರಾಜ್ಯ ಯಾವುದು?**
ಆಂಧ್ರ ಪ್ರದೇಶ

**6. 'ಶಕ್ತಿ ಸಂಪನ್ಮೂಲಗಳು' ಎಂದರೇನು?**
ವಿದ್ಯುಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು 'ಶಕ್ತಿ ಸಂಪನ್ಮೂಲಗಳು' ಎನ್ನುವರು.

**7. ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ**
ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕಾನಿಲ.

**8. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ**
ಸೌರಶಕ್ತಿ, ಪವನಶಕ್ತಿ, ಉಬ್ಬರವಿಳಿತ ಶಕ್ತಿ, ಭೂಗರ್ಭಶಕ್ತಿ, ಜೈವಿಕ ಅನಿಲ.

**9. ಕಲ್ಲಿದ್ದಲಿನಿಂದ ದೊರೆಯುವ ಉಪವಸ್ತುಗಳು ಯಾವುವು?**
ಅಮೋನಿಯ, ಕೋಲ್‌ಟಾರ್, ಕೋಲ್‌ಗ್ಯಾಸ್, ಬೆಂಜಾಲ್, ನ್ಯಾಪ್ತ, ಸಲ್ಫರ್.

**10. ಹೈಡ್ರೋಕಾರ್ಬನ್‌ವುಳ್ಳ ಖನಿಜತೈಲ ಯಾವುದು?**
ಪೆಟ್ರೋಲಿಯಂ.

**11. ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವನ್ನು ಮೊಟ್ಟಮೊದಲಿಗೆ ಎಲ್ಲಿ ಕಂಡುಹಿಡಿಯಲಾಯಿತು.?**
'ಮಾಕುಂ'

**12. ಭಾರತದಲ್ಲಿ ಮೊಟ್ಟಮೊದಲಿಗೆ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರವನ್ನು ಎಲ್ಲಿ ತಯಾರಿಸಲಾಯಿತು?**
ಡಾರ್ಜಲಿಂಗ್.

**13. ಕರ್ನಾಟಕದ ಪ್ರಮುಖ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳನ್ನು ಹೆಸರಿಸಿ**
ಶಿವನಸಮುದ್ರ, ಶರಾವತಿ, ಲಿಂಗನಮಕ್ಕಿ, ಆಲಮಟ್ಟಿ, ಕಾಳಿ ಮತ್ತು ಭದ್ರ.

**14. ಪರಮಾಣುಶಕ್ತಿ ಎಂದರೇನು?**
ಪರಮಾಣ್ವಿಕ ಖನಿಜಗಳಿಂದ ತಯಾರಿಸುವ ವಿದ್ಯುಚ್ಛಕ್ತಿಯನ್ನು ಪರಮಾಣುಶಕ್ತಿ ಎನ್ನುವರು.

# ಅಧ್ಯಾಯ-9
# ಭಾರತದ ಸಾರಿಗೆ ಮತ್ತು ಸಂಪರ್ಕ

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಭಾರತದ ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ **ರಸ್ತೆ** ಸಾರಿಗೆ ಮಾಧ್ಯಮ ಅತ್ಯಾವಶ್ಯಕವಾದುದು.
2. ಭಾರತದಲ್ಲಿ ಮೊಟ್ಟಮೊದಲಿಗೆ ರೈಲುಮಾರ್ಗವನ್ನು **ಮುಂಬಯಿ** ಮತ್ತು **ಥಾಣ** ಗಳ ನಡುವೆ ನಿರ್ಮಿಸಲಾಯಿತು.
3. ಭಾರತದ ಹೆಬ್ಬಾಗಿಲು ಎಂದು **ಮುಂಬಯಿ** ಬಂದರನ್ನು ಕರೆಯಲಾಗಿದೆ.
4. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ **ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾ ನಿಲ್ದಾಣ** ಎಂದು ಹೆಸರು ಕೊಡಲಾಗಿದೆ.
5. ಬಾಂಬೆ ಸಮಾಚಾರ ವೃತ್ತಪತ್ರಿಕೆ **1822** ರಲ್ಲಿ ಆರಂಭಗೊಂಡಿತು.

**II. ಗುಂಪುಗಳಲ್ಲಿ ಚರ್ಚಿಸಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

**1. ಸಾರಿಗೆ ಮತ್ತು ಸಂಪರ್ಕ ಮಾಧ್ಯಮ ಎಂದರೇನು?**

- ಸರಕು, ಸೇವೆ ಮತ್ತು ಪ್ರಯಾಣಿಕರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದನ್ನು 'ಸಾರಿಗೆ' ಎನ್ನುವರು.
- ಒಬ್ಬರಿಂದ ಮತ್ತೊಬ್ಬರಿಗೆ ಅಥವಾ ಸ್ಥಳದಿಂದ ಸ್ಥಳಕ್ಕೆ ಸಮಾಚಾರವನ್ನು ವಿನಿಮಯ ಮಾಡಿಕೊಳ್ಳುವುದನ್ನು ಸಂಪರ್ಕ ಮಾಧ್ಯಮ ಎನ್ನುವರು.

**2. ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳನ್ನು ಕುರಿತು ವಿವರಿಸಿ.**

- ಇದೊಂದು ನಾಲ್ಕರಿಂದ ಆರು ಪಥಗಳ ಉತ್ತಮ ರಸ್ತೆಗಳ ರಚನಾ ಯೋಜನೆ.
- ಇದು 1999ರಲ್ಲಿ ಆರಂಭವಾಯಿತು.
- ಈ ಹೆದ್ದಾರಿ ಜಾಲವು ದೇಶದ ಪ್ರಮುಖ ನಗರ,ಸಾಂಸ್ಕೃತಿಕ ಮತ್ತು ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸುತ್ತದೆ.
- ಇದುದೆಹಲಿ-ಜೈಪುರ-ಅಹ್ಮದಾಬಾದ್-ಸೂರತ್-ಮುಂಬಯಿ-ಪುಣೆ-ಬೆಂಗಳೂರು-ಚೆನ್ನೈ-ವಿಶಾಖಪಟ್ಟಣ-ಭುವನೇಶ್ವರ-ಕೊಲ್ಕತ-ಅಲಹಾಬಾದ್-ಕಾನ್ಪುರ-ದೆಹಲಿಗಳೊಂದಿಗೆ ಸಂಪರ್ಕ ಕಲ್ಪಿಸುವುದು.
- ಸೂಪರ್ ಹೆದ್ದಾರಿಯನ್ನು ಎರಡು ಭಾಗಳಾಗಿ ವಿಂಗಡಿಸಲಾಗಿದೆ:
  ಎ) ಉತ್ತರ-ದಕ್ಷಿಣ ಕಾರಿಡಾರ್:- ಇದು
  ಶ್ರೀನಗರದಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ.
  ಬಿ) ಪೂರ್ವ-ಪಶ್ಚಿಮ ಕಾರಿಡಾರ್:- ಇದು ಅಸ್ಸಾಂನ ಸಿಲ್ಚಾರ್‌ನಿಂದ ಗುಜರಾತ್‌ನ ಪೋರ್‌ಬಂದರಿನವರೆಗೆ ಹಬ್ಬಿದೆ.
- ಇವು ಅನೇಕ ಪ್ರಮುಖ ನಗರ, ಕೈಗಾರಿಕಾ ಕೇಂದ್ರಗಳು ಮತ್ತು ಬಂದರುಗಳನ್ನು ಸಂಪರ್ಕಿಸುತ್ತವೆ.

**3. ಭಾರತದ ರೈಲು ಸಾರಿಗೆಯನ್ನು ಕುರಿತು ವಿವರಿಸಿ. ಅಥವಾ ರೈಲು ಸಾರಿಗೆಯ ಮಹತ್ವವನ್ನು ವಿವರಿಸಿ.**

- ರೈಲು ಮಾರ್ಗಗಳು ಭಾರತದ ಮತ್ತೊಂದು ಪ್ರಮುಖ ಭೂಸಾರಿಗೆ ಮಾಧ್ಯಮ.
- ಅವು ಭಾರವಾದ ಸರಕು ಮತ್ತು ಅಧಿಕ ಸಂಖ್ಯೆಯ ಪ್ರಯಾಣಿಕರನ್ನು ದೂರದ ಸ್ಥಳಗಳಿಗೆ ಸಾಗಿಸಲು ಹೆಚ್ಚು ಉಪಯುಕ್ತವಾದವು.
- ಅವು ಕೃಷಿ, ಕೈಗಾರಿಕೆ ಮತ್ತು ಭಾರತದ ಆರ್ಥಿಕತೆಯ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.
- ಅಲ್ಲದೆ ದೇಶದ ವ್ಯಾಪಾರ ಮತ್ತು ಪ್ರವಾಸೋದ್ಯಮದ ಬೆಳವಣಿಗೆಗೂ ನೆರವಾಗುವುವು.
- ರೈಲು ಸಾರಿಗೆಯು ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆ.
- ಸಮರ್ಥನೀಯ ಆಡಳಿತ ವ್ಯವಸ್ಥೆಗಾಗಿ ಭಾರತೀಯ ರೈಲ್ವೆಯನ್ನು 16 ವಲಯಗಳನ್ನಾಗಿ ವಿಂಗಡಿಸಲಾಗಿದೆ.

**4. ಭಾರತದಲ್ಲಿ ರಸ್ತೆಮಾರ್ಗಗಳ ಪ್ರಾಮುಖ್ಯತೆ ಕುರಿತು ಸಂಕ್ಷಿಪ್ತವಾಗಿ ವಿವರಿಸಿ.**

- ರಸ್ತೆಗಳನ್ನು ಅರಣ್ಯ ಮತ್ತು ಗುಡ್ಡಗಾಡುಗಳಲ್ಲಿಯೂ ನಿರ್ಮಿಸಬಹುದು.
- ಅವು ಬಹುದೂರದ ಅಥವಾ ಎಲ್ಲೋ ಇರುವ ಸ್ಥಳಗಳನ್ನು ಪಟ್ಟಣ ಮತ್ತು ನಗರಗಳೊಂದಿಗೆ ಸಂಪರ್ಕ ಕಲ್ಪಿಸುತ್ತವೆ.
- ಮನೆಮನೆಗೆ ಸೇವೆ ಕಲ್ಪಿಸುತ್ತವೆ. ರೈಲು ಸಂಚಾರ, ಬಂದರು ಮತ್ತು ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುತ್ತವೆ.
- ಅವು ಪ್ರವಾಸೋದ್ಯಮ, ವ್ಯಾಪಾರ ಮತ್ತು ವಾಣಿಜ್ಯ ಹಾಗೂ ಕೈಗಾರಿಕಾಭಿವೃದ್ಧಿಗೆ ಹೆಚ್ಚು ನೆರವಾಗುತ್ತವೆ.
- ಮೂಲೆ ಮೂಲೆಗಳಲ್ಲಿರುವ ಹಳ್ಳಿಗಳನ್ನು ಸಂಪರ್ಕಿಸಲು ರಸ್ತೆಗಳು ಬಹಳ ಸೂಕ್ತವಾದವು.

**5. ಭಾರತದ ವಾಯು ಸಾರಿಗೆ ಕುರಿತು ವಿವರಿಸಿ.**

- ಇದು ಅತ್ಯಂತ ವೇಗಯುತ ಸಾರಿಗೆ ಮಾಧ್ಯಮ.
- ಪ್ರಯಾಣಿಕರು ಮತ್ತು ಟಪಾಲು ಸಾಗಿಸಲು ಬಹಳ ಸಮರ್ಪಕವಾದ ಸಾರಿಗೆ ಸೌಲಭ್ಯ.
- ಸಮರ, ಪ್ರವಾಹ, ಭೂಕಂಪಗಳಂತಹ ತುರ್ತುಪರಿಸ್ಥಿತಿಗೆ ಇದು ಬಹುಉಪಯುಕ್ತ.

- ಭಾರತವು ವಿಶಾಲವಾದ ದೇಶವಾಗಿದ್ದು ವಾಯುಸಾರಿಗೆ ಅಭಿವೃದ್ಧಿಗೆ ಅಗತ್ಯವಾದ ಎಲ್ಲಾ ಪೂರಕ ಅಂಶಗಳನ್ನು ಹೊಂದಿದೆ.
- ಇಂದು ಭಾರತದಲ್ಲಿ ಎರಡು ಪ್ರಮುಖ ವಾಯು ಸಂಚಾರ ಸಂಸ್ಥೆಗಳಿವೆ.
- ಅವುಗಳೆಂದರೆ : **ಏರ್ ಇಂಡಿಯಾ ನ್ಯಾಷನಲ್,** ಇದು ಭಾರತ ಮತ್ತು ಪ್ರಪಂಚದ ಅನೇಕ ದೇಶಗಳೊಂದಿಗೆ ವಾಯು ಸಂಚಾರ ಸೌಲಭ್ಯ ಕಲ್ಪಿಸುತ್ತದೆ.
- **ಇಂಡಿಯನ್ ಏರ್‌ಲೈನ್ಸ್:** ಇದು ದೇಶದೊಳಗೆ ವಾಯುಸಂಚಾರ ಕಲ್ಪಿಸುವುದರ ಜೊತೆಗೆ ನೆರೆಹೊರೆ ದೇಶಗಳಿಗೂ ಸಂಪರ್ಕ ಕಲ್ಪಿಸುವುದು.

**6. ಭಾರತದ ವಿವಿಧ ಸಂಪರ್ಕ ಮಾಧ್ಯಮಗಳನ್ನು ತಿಳಿಸಿ.**

- ವೈಯಕ್ತಿಕ ಸಂಪರ್ಕ ಮಾಧ್ಯಮ:- ಅಂಚೆ, ಟೆಲಿಗ್ರಾಫ್, ಟೆಲಿಫೋನ್, ಫ್ಯಾಕ್ಸ್, ಈ-ಮೇಲ್, ಅಂತರ್ಜಾಲ, ಸೆಮಿನಾರ್ ಇತ್ಯಾದಿಗಳು ವೈಯಕ್ತಿಕ ಮಾಧ್ಯಮಗಳಾಗಿವೆ.
- ಸಮುದಾಯ ಸಂಪರ್ಕ ಮಾಧ್ಯಮ:- ವೃತ್ತಪತ್ರಿಕೆ ಮತ್ತು ನಿಯತಕಾಲಿಕೆಗಳು, ಆಕಾಶವಾಣಿ, ದೂರದರ್ಶನ, ಪುಸ್ತಕಗಳು ಸಮುದಾಯ ಸಂಪರ್ಕಮಾಧ್ಯಮಗಳು.

**7. ಸಾರಿಗೆಯ ಮಹತ್ವವನ್ನು ವಿವರಿಸಿ.**

- ಸಮರ್ಥನೀಯ ಮತ್ತು ಸುಲಭ ದರದ ಸಾರಿಗೆ ಸೌಲಭ್ಯವು ಸಂಪನ್ಮೂಲಗಳು ಮತ್ತು ಕೃಷಿಯ ಅಭಿವೃದ್ಧಿಗೆ ನೆರವಾಗುತ್ತದೆ.
- ಇದು ಕೈಗಾರಿಕಾ ಪ್ರಗತಿಗೆ ಉತ್ತೇಜನ.
- ಮಾರುಕಟ್ಟೆಯ ವಿಸ್ತರಣೆ.
- ದೇಶೀಯ ಮತ್ತು ವಿದೇಶೀ ವ್ಯಾಪಾರದ ವೃದ್ಧಿ.
- ಉದ್ಯೋಗ ಸೃಷ್ಟಿ.
- ಜನರ ಆದಾಯ ಮತ್ತು ಜೀವನ ಮಟ್ಟದ ಸುಧಾರಣೆ.
- ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ಮತ್ತು ರಕ್ಷಣಾ ಪಡೆಗೂ ನೆರವಾಗುತ್ತದೆ.

**8. ಸಾರಿಗೆ ವಿಧಗಳನ್ನು ತಿಳಿಸಿ**

ಭೂಸಾರಿಗೆ: i) ರಸ್ತೆ ಸಾರಿಗೆ ii) ರೈಲು ಸಾರಿಗೆ iii) ಕೊಳವೆ ಮಾರ್ಗಗಳು

ಜಲಸಾರಿಗೆ: i) ಒಳನಾಡಿನ ಜಲ ಸಾರಿಗೆ ii) ಸಾಗರ ಜಲ ಸಾರಿಗೆ

ವಾಯುಸಾರಿಗೆ: i) ರಾಷ್ಟ್ರೀಯ ವಾಯು ಸಾರಿಗೆ ii) ಅಂತಾರಾಷ್ಟ್ರೀಯ ವಾಯು ಸಾರಿಗೆ

**9. ನಿರ್ಮಾಣ ಮತ್ತು ನಿರ್ವಹಣೆಗಳನ್ನು ಆಧರಿಸಿ ರಸ್ತೆಗಳನ್ನು ಐದು ಪ್ರಕಾರಗಳನ್ನು ತಿಳಿಸಿ**

- ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳು.
- ಜಿಲ್ಲಾ ರಸ್ತೆಗಳು
- ರಾಷ್ಟ್ರೀಯ ಹೆದ್ದಾರಿಗಳು
- ಗ್ರಾಮೀಣ ರಸ್ತೆಗಳು
- ರಾಜ್ಯ ಹೆದ್ದಾರಿಗಳು

**10. ಕೊಳವೆ ಮಾರ್ಗಗಳನ್ನು ವಿವರಿಸಿ.**

- ಇದು ಹೊಸ ಭೂಸಾರಿಗೆ ವಿಧಾನ. ಕೊಳವೆ ಮಾರ್ಗಗಳನ್ನು ನೆಲದೊಳಗೆ ಹಾಸಲಾಗಿರುತ್ತದೆ.
- ವಿಶೇಷವಾಗಿ ಕಚ್ಚಾ ತೈಲವನ್ನು ತೈಲ ಶುದ್ಧೀಕರಣ ಕೇಂದ್ರಗಳಿಗೆ, ನೈಸರ್ಗಿಕಾನಿಲ ಕೆಸರು ರೂಪದಲ್ಲಿ ಖನಿಜಗಳನ್ನು ಸಾಗಿಸಲು ಕೊಳವೆ ಮಾರ್ಗಗಳನ್ನು ಬಳಸಲಾಗುವುದು.

**11. ಪಶ್ಚಿಮ ಮತ್ತು ಪೂರ್ವ ತೀರದ ಪ್ರಮುಖ ಬಂದರುಗಳು ಯಾವುವು?**

| ಪಶ್ಚಿಮ ತೀರದ ಪ್ರಮುಖ ಬಂದರುಗಳು: | ಪೂರ್ವ ತೀರದ ಪ್ರಮುಖ ಬಂದರುಗಳು: |
|---|---|
| ಕಾಂಡ್ಲ | ತುತಕುಡಿ |
| ಮುಂಬಯಿ | ಚೆನ್ನೈ |
| ಜವಹರಲಾಲ್ ನೆಹರು ಬಂದರು | ಎನ್ನೋರ್ |
| ಮರ್ಮಗೋವ | ವಿಶಾಖಪಟ್ಟಣ |
| ನವ ಮಂಗಳೂರು | ಪಾರಾದೀಪ್ |
| ಕೊಚಿ | ಹಾಲ್ದಿಯಾ |
| | ಕೊಲ್ಕತ, ಪೋರ್ಟ್ ಬ್ಲೇರ್ |

**12. ಭಾರತದ ಆರು ವಿಮಾನ ನಿಲ್ದಾಣಗಳನ್ನು ಹೆಸರಿಸಿ**

1. ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ದೆಹಲಿ.
2. ಛತ್ರಪತಿ ಶಿವಾಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಮುಂಬಯಿ.
3. ನೇತಾಜಿ ಸುಭಾಷ್‌ಚಂದ್ರಬೋಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಕೊಲ್ಕತ.
4. ಅಣ್ಣಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಚೆನ್ನೈ.
5. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು.
6. ರಾಜೀವ್‌ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಹೈದರಾಬಾದ್.

**13. ಸಂಪರ್ಕ ಮಾಧ್ಯಮ ಎಂದರೇನು? ಅದರ ಪ್ರಾಮುಖ್ಯತೆಯಯನ್ನು ತಿಳಿಸಿ**

ಒಬ್ಬರಿಂದ ಮತ್ತೊಬ್ಬರಿಗೆ ಅಥವಾ ಸ್ಥಳದಿಂದ ಸ್ಥಳಕ್ಕೆ ಸಮಾಚಾರವನ್ನು ವಿನಿಮಯ ಮಾಡಿಕೊಳ್ಳುವುದನ್ನು ಸಂಪರ್ಕ ಮಾಧ್ಯಮ ಎನ್ನುವರು

- ಸರ್ಕಾರದ ನೀತಿ ನಿಯಮ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಸಂಪರ್ಕ ಮಾಧ್ಯಮ ನೆರವಾಗುವುದು.
- ಇದು ನೈಸರ್ಗಿಕ ವಿಪತ್ತು ಮತ್ತು ವಿನಾಶಗಳು, ಹವಾಗುಣ ಮುನ್ಸೂಚನೆಗಳನ್ನು ನಾವು ತಿಳಿಯಲು ಸಹಾಯವಾಗುವುದು.
- ವ್ಯಾಪಾರ ವಾಣಿಜ್ಯ, ಕೈಗಾರಿಕೆ, ಕೃಷಿ ಇತ್ಯಾದಿಗಳ ಅಭಿವೃದ್ಧಿಗೂ ನೆರವಾಗುವುದು.
- ಮನರಂಜನೆ, ಪ್ರಪಂಚದ ದಿನನಿತ್ಯದ ಮಾಹಿತಿಗಳನ್ನು ಪೂರೈಸುತ್ತದೆ.
- ಅಲ್ಲದೆ ದೇಶದ ಏಕತೆ ಮತ್ತು ಸಮಗ್ರತೆ ನಿರ್ವಹಣೆಗೂ ನೆರವಾಗುತ್ತದೆ.

**14. ರೇಡಿಯೋವನ್ನು ,ಆಲ್ ಇಂಡಿಯಾ ರೇಡಿಯೊ' ಎಂದು ಯಾವಾಗ ಕರೆಯಲಾಯಿತು?**

1936

**15. ಭಾರತದ ಅತ್ಯಂತ ಹಳೆಯದೂ ಮತ್ತು ಈಗಲೂ ಅಸ್ತಿತ್ವ ಕಾಯ್ದುಕೊಂಡಿರುವ ವೃತ್ತಪತ್ರಿಕೆ ಯಾವುದು?**

ಬಾಂಬೆ ಸಮಾಚಾರ

**16. ಇಂದು ಒಳನಾಡಿನ ಜಲಸಾರಿಗೆ ಮಹತ್ವವು ಕಡಿಮೆಯಾಗಿದೆ.ಏಕೆ?**

ಇಂದು ರಸ್ತೆ ಮತ್ತು ರೈಲುಸಾರಿಗೆಗಳ ಪ್ರಗತಿಯಿಂದಾಗಿ ಅದರ ಮಹತ್ವವು ಕಡಿಮೆಯಾಗಿದೆ.

**17. ಭೌಗೋಳಿಕ ಮಾಹಿತಿ ವ್ಯವಸ್ಥೆ ಎಂದರೇನು?**

ಭೌಗೋಳಿಕ ಮಾಹಿತಿ ವ್ಯವಸ್ಥೆಯು ಪೃಥ್ವಿಯ ಮೇಲ್ಭಾಗದ ವಿವರಣಾ ಸ್ಥಳಗಳ ಮಾಹಿತಿ ಸಂಗ್ರಹಿಸುವ ಮತ್ತು ತಿಳಿಸುವ ಒಂದು ಕಂಪ್ಯೂಟರ್ ವ್ಯವಸ್ಥೆಯಾಗಿದೆ.

**29. ಕೋಲ್ಕತ್ತಾ ಬಂದರಿನಲ್ಲಿ ಹೂಳು ತೆಗೆಯುವ ಕಾರ್ಯ ಅವಶ್ಯಕವಾಗಿದೆ.ಏಕೆ?**

ಹೂಗ್ಲಿ ನದಿಯಿಂದ ಆಗಾಗ್ಗೆ ಹೂಳು ತುಂಬಿಕೊಳ್ಳುವುದರಿಂದ ಹಡಗು ಸಂಚಾರಕ್ಕೆ ತೊಂದರೆಯಾಗುವುದು. ಹೀಗಾಗಿ ಹೂಳು ತೆಗೆಯುವ ಕಾರ್ಯ ಅವಶ್ಯ.

**30. ರಸ್ತೆಗಳ ಪ್ರಕಾರಗಳನ್ನು ತಿಳಿಸಿ**

ಪಕ್ಕಾ ರಸ್ತೆಗಳು

ಕಚ್ಚಾ ರಸ್ತೆಗಳು

**31. ಪಕ್ಕಾ ರಸ್ತೆಗಳು ಎಂದರೇನು?**

ಸಿಮೆಂಟ್ ಕಾಂಕ್ರೀಟ್ ಅಥವಾ ಡಾಂಬರಿನಿಂದ ನಿರ್ಮಿಸಲ್ಪಟ್ಟ ರಸ್ತೆಗಳನ್ನು ಪಕ್ಕಾ ರಸ್ತೆಗಳು ಎನ್ನುವರು

**32. ಕಚ್ಚಾ ರಸ್ತೆಗಳು ಎಂದರೇನು?**

ಇವು ಜಲ್ಲಿ ಮತ್ತು ಮಣ್ಣುಗಳಿಂದ ನಿರ್ಮಿಸಿದ ರಸ್ತೆಗಳನ್ನು ಕಚ್ಚಾ ರಸ್ತೆಗಳು ಎನ್ನುವರು

**33. 'ಗ್ರಾಮ ಸಡಕ್ ಯೋಜನೆ'ಯ ಉದ್ದೇಶವೇನು?**

ಕಚ್ಚಾ ರಸ್ತೆಗಳನ್ನು ಸುಧಾರಣೆ ಮಾಡುವುದು

**34. ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣಾ ಕಾರ್ಯವು ಯಾರಿಗೆ ಸೇರಿರುತ್ತದೆ?**

ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೇರಿರುತ್ತದೆ.

**35. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯು ಯಾವ ಇಲಾಖೆಗೆ ಸಂಬಂಧಿಸಿದೆ?**

ಕೇಂದ್ರ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದೆ.

**36. ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯು ಯಾರಿಗೆ ಸೇರಿದೆ?**

ಲೋಕೋಪಯೋಗಿ ಇಲಾಖೆಗೆ ಸೇರಿದೆ

**37. ಜಿಲ್ಲಾ ರಸ್ತೆಗಳ ನಿರ್ವಹಣೆಯು ಯಾರಿಗೆ ಸೇರಿದೆ?**

ಜಿಲ್ಲಾ ಪಂಚಾಯತ್‌ಗೆ ಸೇರಿರುತ್ತದೆ.

**38. ಗಡಿ ರಸ್ತೆಗಳು ಎಂದರೇನು?**

ದೇಶದ ಗಡಿಪ್ರದೇಶದಲ್ಲಿ ರಕ್ಷಣಾಪಡೆಯ ಬಳಕೆಗಾಗಿಯೇ ನಿರ್ಮಿಸಿದ ರಸ್ತೆಗಳಿಗೆ 'ಗಡಿ ರಸ್ತೆಗಳು' ಎನ್ನುವರು.

**39. ಗಡಿ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಯು ಯಾರಿಗೆ ಸೇರಿದೆ?**
ಗಡಿ ರಸ್ತೆಗಳು ನಿರ್ಮಾಣ ಮತ್ತು ನಿರ್ವಹಣೆಯು 'ಗಡಿ ರಸ್ತೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿರುತ್ತದೆ.

**40. ಬ್ರಿಟಿಷರ ಕಾಲದಲ್ಲಿ ರೈಲು ಮಾರ್ಗಗಳ ನಿರ್ಮಾಣದ ಉದ್ದೇಶವೇನಾಗಿತ್ತು?**
ಕ್ಷಾಮ ಪೀಡಿತ ಭಾಗಗಳಿಗೆ ಆಹಾರ ಧಾನ್ಯ ಮತ್ತು ಮೇವುಗಳನ್ನು ಮತ್ತು ಸೈನ್ಯವನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುವುದು ರೈಲು ಮಾರ್ಗಗಳ ನಿರ್ಮಾಣದ ಉದ್ದೇಶವಾಗಿತ್ತು.

**42. ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆ ಯಾವುದು?**
ರೈಲು ಸಾರಿಗೆಯು ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆ.

**43. ಭಾರತದ ಹೊಸ ಭೂಸಾರಿಗೆ ವಿಧಾನ ಯಾವುದು?**
ಭಾರತದ ಹೊಸ ಭೂಸಾರಿಗೆ ವಿಧಾನ ಕೊಳವೆ ಮಾರ್ಗಗಳು.

**44. ಬಂದರು ಎಂದರೇನು?**
ಸರಕು ತುಂಬಲು ಮತ್ತು ಇಳಿಸುವುದಕ್ಕಾಗಿ ಹಡಗು ತಂಗುವ ಸ್ಥಳವೇ ಬಂದರು.

**45. ಗುಜರಾತಿನ ಕಛ್ ಖಾರಿಯ ಶಿರೋಭಾಗದ ಬಂದರು ಯಾವುದು?**
ಕಾಂಡ್ಲ.

**46. ಭಾರತದ ಹೆಬ್ಬಾಗಿಲು ಎಂದು ಯಾವ ಬಂದರನ್ನು ಕರೆಯಲಾಗಿದೆ?**
ಮುಂಬಯಿ

**47. ಜವಹರಲಾಲ್ ನೆಹರು ಬಂದರಿನ ಹಿಂದಿನ ಹೆಸರೇನು?**
'ನವ್ಹಾಶೇವ ಬಂದರು'

**48. ಮುಂಬಯಿ ಬಂದರಿನ ಒತ್ತಡವನ್ನು ಕುಗ್ಗಿಸಲು ಯಾವ ಬಂದರು ನಿರ್ಮಾಣಗೊಂಡಿದೆ?**
ಜವಹರಲಾಲ್ ನೆಹರು ಬಂದರು

**49. 'ಕರ್ನಾಟಕದ ಹೆಬ್ಬಾಗಿಲು' ಎಂದು ಯಾವುದನ್ನು ಕರೆಯಲಾಗಿದೆ?**
ನವ ಮಂಗಳೂರು

**50. 'ಅರಬ್ಬಿ ಸಮುದ್ರದ ರಾಣಿ' ಎಂದು ಕರೆಯಲಾಗಿದೆ?**
ಕೊಚಿ

## ಅಧ್ಯಾಯ-10
## ಭಾರತದ ಕೈಗಾರಿಕೆಗಳು

**ಮುಖ್ಯಾಂಶಗಳು:**

- ಬೆಂಗಾಲ್ ಐರನ್ ಕಂಪನಿಯು ಪಶ್ಚಿಮ ಬಂಗಾಲದ **ಕುಲ್ಟಿ** ಎಂಬಲ್ಲಿ **1874** ರಲ್ಲಿ ಸ್ಥಾಪಿತಗೊಂಡಿತು.
- ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವದನ್ನೇ **ಜವಳಿ ಕೈಗಾರಿಕೆ** ಎಂದುಕರೆಯುವರು.
- ಸಕ್ಕರೆ ಕೈಗಾರಿಕೆಯ ಮುಖ್ಯ ಕಚ್ಚಾ ವಸ್ತು **ಕಬ್ಬು.**
- ಭಾರತದ ಮೊದಲ ಕಾಗದದ ಕೈಗಾರಿಕೆಯು **1932** ರಲ್ಲಿ ಪಶ್ಚಿಮ ಬಂಗಾಳದ **ಸೆರಾಂಪುರ**ದಲ್ಲಿ ಹೂಗ್ಲಿನದಿಯ ದಡದಲ್ಲಿ ಸ್ಥಾಪನೆಗೊಂಡಿತು.
- ಭಾರತದಲ್ಲಿ **8** ಕೈಗಾರಿಕಾ ವಲಯಗಳನ್ನು ಗುರುತಿಸಲಾಗಿದೆ.
- **ಕಬ್ಬಿಣ ಮತ್ತು ಉಕ್ಕಿನ** ಕೈಗಾರಿಕೆಯನ್ನು ಮೂಲ ಕೈಗಾರಿಕೆ ಎಂದು ಕರೆಯುತ್ತಾರೆ.
- **1907** ರಲ್ಲಿ ಟಾಟಾ ಐರನ್ & ಸ್ಟೀಲ್ ಕಂಪನಿ **ಜಮಶೆಡ್‌ಪುರ** ಬಳಿ, **1919** ರಲ್ಲಿ ದಿ ಇಂಡಿಯನ್ ಐರನ್ & ಸ್ಟೀಲ್ ಕಂಪನಿಯು ಪಶ್ಚಿಮ ಬಂಗಾಳದ **ಬರ್ನಪುರ** ಬಳಿಯು, **1923** ರಲ್ಲಿ ದಿ ಮೈಸೂರ್ ಐರನ್ ಸ್ಟೀಲ್ ವರ್ಕ್ಸ್ ಕೈಗಾರಿಕೆ **ಭದ್ರಾವತಿ** ಬಳಿಯು ಸ್ಥಾಪಿಸಿತು.
- ಭಾರತದಲ್ಲಿ ಮೊದಲ ಹತ್ತಿ ಬಟ್ಟೆ ಕೈಗಾರಿಕೆಗಳು **1854** ರಲ್ಲಿ **ಮುಂಬೈ** & **ಬರೂಚ್**ಗಳಲ್ಲಿ ಸ್ಥಾಪಿಸಲ್ಪಟ್ಟವು.
- ಮಾಹಾರಾಷ್ಟ್ರದ ಮುಂಬಯಿಯಲ್ಲಿ ಅತಿ ಹೆಚ್ಚು ಹತ್ತಿ ಬಟ್ಟೆ ಗಿರಣಿಗಳಿದ್ದು, ಇದನ್ನು ಭಾರತದ **'ಮ್ಯಾಂಚೆಸ್ಟರ್'** ಅಥವಾ **ಭಾರತದ 'ಕಾಟನೋಪೊಲಿಸ್'** ಎಂದು ಕರೆಯುತ್ತಾರೆ.
  ವಾಸ್ತವ ಯಶಸ್ವಿ ಕಾಗದ ಕಾರ್ಖಾನೆಯೊಂದು **(1870) ಕೊಲ್ಕತಾಕ್ಕೆ ಸಮೀಪದ ಬಾಲಿಯಲ್ಲಿ** ಸ್ಥಾಪನೆಗೊಂಡಿತು.

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆಯು **ಕರ್ನಾಟಕ** ರಾಜ್ಯದಲ್ಲಿದೆ.
2. ಬಾಕ್ಸೈಟ್ ಅದಿರು **ಅಲ್ಯೂಮಿನಿಯಂ** ಕೈಗಾರಿಕೆಯ ಪ್ರಮುಖ ಕಚ್ಚಾ ವಸ್ತು.
3. ಭಾರತದ ಅರಣ್ಯ ಆಧಾರಿತ ಕೈಗಾರಿಕೆ **ಕಾಗದ ಕೈಗಾರಿಕೆ** ಆಗಿದೆ.
4. ಭಾರತದ ಪ್ರಥಮ ಆಧುನಿಕ ಕಾಗದ ಕೈಗಾರಿಕೆಯು 1932ರಲ್ಲಿ **ಸೆರಾಂಪುರ** ಎಂಬಲ್ಲಿ ಸ್ಥಾಪನೆಗೊಂಡಿತು.

**II. ಗುಂಪುಗಳಲ್ಲಿ ಚರ್ಚಿಸಿ ಮತ್ತು ಈ ಕೆಳಕಂಡವುಗಳಿಗೆ ಉತ್ತರಿಸಿ.**

**1. ಕೈಗಾರಿಕೆಗಳೆಂದರೇನು? ಅವುಗಳ ಸ್ಥಾನೀಕರಣ ಅಂಶಗಳನ್ನು ತಿಳಿಸಿ.**

ಕಚ್ಚಾ ವಸ್ತುಗಳನ್ನು ಹೆಚ್ಚು ಉಪಯುಕ್ತ ವಸ್ತುಗಳಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಕೈಗಾರಿಕೆ ಎನ್ನುವರು.

1) ಕಚ್ಚಾ ವಸ್ತುಗಳ ಸರಬರಾಜು, 2) ಶಕ್ತಿ ಸಂಪನ್ಮೂಲಗಳ ಪೂರೈಕೆ, 3) ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ, 4) ಮಾರುಕಟ್ಟೆ ಸೌಲಭ್ಯ, 5) ಬಂಡವಾಳ, 6) ಕಾರ್ಮಿಕರು ಮತ್ತು ನೀರು ದೊರೆಯುವಿಕೆ, 7) ಸೂಕ್ತ ವಾಯುಗುಣ, 8) ಸರ್ಕಾರದ ನೀತಿ ನಿಯಮಗಳು.

**2. ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳ ಪಟ್ಟಿ ಮಾಡಿ.**

1. ಹೂಗ್ಲಿ ಪ್ರದೇಶ, 2. ಮುಂಬೈ–ಪೂನಾ ಪ್ರದೇಶ,
3. ಅಹಮದಾಬಾದ್–ವಡೋದರಾ ಪ್ರದೇಶ. 4. ದಾಮೋದರ ಕಣಿವೆ ಪ್ರದೇಶ.
5. ದಕ್ಷಿಣದ ಕೈಗಾರಿಕಾ ಪ್ರದೇಶ 6. ನ್ಯಾಷನಲ್ ಕ್ಯಾಪಿಟಲ್ ಪ್ರದೇಶ.
7. ವಿಶಾಖಪಟ್ಟಣ – ಗುಂಟೂರ ಪ್ರದೇಶ. 8. ಕೊಲ್ಲಂ–ತಿರುವಂತಪುರ ಪ್ರದೇಶ.

**3. ಭಾರತದಲ್ಲಿ ಅಲ್ಯೂಮಿನಿಯಂ ಕೈಗಾರಿಕೆ ಕುರಿತು ವಿವರಿಸಿ.**

- ಅಲ್ಯೂಮಿನಿಯಂ ಒಂದು ಪ್ರಮುಖ ಕಬ್ಬಿಣೇತರ ಲೋಹ.
- ಇದು ಬಹುಪಯೋಗಿ ಖನಿಜ,
- ಇದನ್ನು ವಿಮಾನ, ಸ್ವಯಂಚಾಲಿತವಾಹನ, ರೈಲುಸಾರಿಗೆ, ಹಡಗು, ಬಣ್ಣ ತಯಾರಿಕೆ, ಗೃಹಬಳಕೆ ವಸ್ತುಗಳ ತಯಾರಿಕೆ, ವಿವಿಧ ಕೈಗಾರಿಕೆಗಳಲ್ಲಿ, ವಿದ್ಯುತ್ ಕೇಬಲ್ ತಯಾರಿಕೆ ಹಾಗೂ ಇದರ ರೇಕುಗಳನ್ನು ಪ್ಯಾಕಿಂಗ್ ಮಾಡಲು, ಮೊದಲಾದ ಉದ್ದೇಶಗಳಿಗೆ ಉಪಯೋಗಿಸಲಾಗುತ್ತದೆ.
- ಇದನ್ನು ಉಕ್ಕು ಮತ್ತು ತಾಮ್ರಗಳ ಬದಲಿ ವಸ್ತುವಾಗಿಯೂ ಬಳಕೆ ಮಾಡಲಾಗುತ್ತಿದೆ.

**4. ಭಾರತದಲ್ಲಿ ಹತ್ತಿ ಬಟ್ಟೆ ಕೈಗಾರಿಕೆಯ ಹಂಚಿಕೆ ಕುರಿತು ವಿವರಿಸಿ.**

- ಭಾರತದ ವಿವಿಧ ಭಾಗಗಳಲ್ಲಿರುವ 76ಕ್ಕೂ ಹೆಚ್ಚು ನಗರ ಮತ್ತು ಪಟ್ಟಣಗಳಲ್ಲಿ ಹತ್ತಿ ಬಟ್ಟೆ ಕೈಗಾರಿಕೆಯು ಹಂಚಿಕೆಯಾಗಿದೆ.
- ಆದರೂ ಇದು ಹೆಚ್ಚಾಗಿ ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಕೇಂದ್ರೀಕರಣಗೊಂಡಿದೆ.
- ಅವುಗಳೆಂದರೆ: ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಕರ್ನಾಟಕ, ಮಧ್ಯಪ್ರದೇಶ, ರಾಜಸ್ತಾನ, ಉತ್ತರ ಪ್ರದೇಶ, ಪಂಜಾಬ್ ಮತ್ತು ಹರಿಯಾಣ.

**5. ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ ಕುರಿತು ಬರೆಯಿರಿ.**

- ಜ್ಞಾನಾಧಾರಿತ ಕೈಗಾರಿಕೆಗಳ ಬೆಳವಣಿಗೆಯು ಸಾಮಾಜಿಕ–ಆರ್ಥಿಕ ಬದಲಾವಣೆಯ ಪ್ರಭಾವವುಳ್ಳ ಸಾಧನವಾಗಿರುತ್ತದೆ.
- ಭಾರತವು ಸಾಕಷ್ಟು ಯುವ ಜನಸಂಖ್ಯೆ ಮತ್ತು ಬೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನ ಹೊಂದಿದೆ.
- ತಾನು ಪ್ರಮುಖ ಜ್ಞಾನಾಧಾರಿತ ಕೈಗಾರಿಕಾ ಪ್ರದೇಶವಾಗಿ ಹೊರಹೊಮ್ಮಲು ಉತ್ತಮ ಸಾಮರ್ಥ್ಯ ಹೊಂದಿದೆ.
- ಹೀಗಾಗಿ ಇಂದು ದೇಶದಲ್ಲಿ ಜ್ಞಾನಾಧಾರಿತ ಕೈಗಾರಿಕೆಯು ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಉದ್ಯಮವಾಗಿದೆ.

**6. ಕಾಗದ ಕೈಗಾರಿಕೆಯು ಅರಣ್ಯ ಆಧಾರಿತ ಕೈಗಾರಿಕೆ.ಏಕೆ?**

ಏಕೆಂದರೆ ಈ ಉದ್ಯಮಕ್ಕೆ ಬೇಕಾಗುವ ಕಚ್ಚಾ ಪದಾರ್ಥಗಳೆಂದರೆ; ಬಿದಿರು ಮತ್ತು ಮರದ ತಿರುಳುಗಳಂತಹ ಮೃದುಮರಗಳ ವಸ್ತುಗಳು, ಸಬಾಯಿ ಮತ್ತು ಬಾಭರ್‌ನಂತಹ ಹುಲ್ಲು.

**7. ಸಕ್ಕರೆ ಕೈಗಾರಿಕೆಯ ಸ್ಥಾನೀಕರಣ ನಿರ್ಧರಿಸುವ ಪ್ರಮುಖಾಂಶಗಳು ಯಾವುವು?**

- ಮೂಲ ಕಚ್ಚಾ ವಸ್ತುವಾದ ಕಬ್ಬು ಸರಬರಾಜು.
- ಸುಲಭ ದರದ ಮತ್ತು ಸಮರ್ಪಕ ಸಾರಿಗೆ ಸೌಲಭ್ಯ.
- ಸರಕಾರದ ಪ್ರೋತ್ಸಾಹ.
- ವಿದ್ಯುತ್ ಪೂರೈಕೆ.
- ಬಂಡವಾಳ.
- ಮಾರುಕಟ್ಟೆ ಸೌಲಭ್ಯಗಳು.

**8. ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಸ್ಥಾನೀಕರಣಗಳು ಯಾವುವು?**

- ಮೂಲ ಕಚ್ಚಾವಸ್ತುವಾದ ಕಬ್ಬಿಣದ ಅದಿರು ಪೂರೈಕೆ.
- ಮುಖ್ಯ ಶಕ್ತಿ ಸಂಪನ್ಮೂಲವಾದ ಕೋಕಿಂಗ್ ಕಲ್ಲಿದ್ದಲು ಹಾಗೂ ಜಲವಿದ್ಯುತ್ ಪೂರೈಕೆ.
- ರೈಲು ಸಾರಿಗೆ ಹಾಗೂ ಬಂದರು ಸೌಲಭ್ಯ.
- ನೀರು ಪೂರೈಕೆ.
- ಕಡಿಮೆ ಕೂಲಿಗೆ ದುಡಿಯುವ ನುರಿತ ಕಾರ್ಮಿಕರು.

- ಬಂಡವಾಳ ಮತ್ತು ಸ್ಥಳೀಯ ಮಾರುಕಟ್ಟೆ ಸೌಲಭ್ಯ.

**9. ಭಾರತದ ಖಾಸಗಿ ವಲಯದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಯಾವುವು?**

ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿ
ಜಿಂದಾಲ್ ವಿಜಯನಗರ ಉಕ್ಕು ಲಿ.
ಇಸ್ಪಾತ್ ಕಬ್ಬಿಣ ಮತ್ತು ಉಕ್ಕು ಲಿ.
ದುಬಾರಿ ಉಕ್ಕು ಸ್ಥಾವರ

**10. ಭಾರತದ ಸರಕಾರಿ ವಲಯದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಯಾವುವು?**

- ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ.
- ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಂಪನಿ.
- ಹಿಂದೂಸ್ತಾನ್ ಉಕ್ಕು ಲಿಮಿಟಡ್.
- ಹಿಂದೂಸ್ತಾನ್ ಉಕ್ಕು ಲಿಮಿಟೆಡ್.
- ಹಿಂದೂಸ್ತಾನ್ ಉಕ್ಕು ಲಿಮಿಟೆಡ್ ಮತ್ತು ಬೊಕಾರೊ ಉಕ್ಕು ಸ್ಥಾವರ.

**11. ಬೆಂಗಳೂರನ್ನು ಭಾರತದ 'ಸಿಲಿಕಾನ್ ವ್ಯಾಲಿ' ಎಂದು ಏಕೆ ಕರೆಯುವರು?** ಭಾರತದಲ್ಲಿ ಬೆಂಗಳೂರು ಸಾಫ್ಟ್‌ವೇರ್ ಕೈಗಾರಿಕೆಯಲ್ಲಿ ಅತ್ಯಂತ ಮಹತ್ವವುಳ್ಳದ್ದು. ಆದ್ದರಿಂದ ಬೆಂಗಳೂರನ್ನು ಭಾರತದ 'ಸಿಲಿಕಾನ್ ವ್ಯಾಲಿ' ಎಂದು ಕರೆಯುವರು.

## ಅಧ್ಯಾಯ–11

## ಭಾರತದ ನೈಸರ್ಗಿಕ ವಿಪತ್ತುಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.**

1. ಅತ್ಯಂತ ವಿನಾಶಕಾರಿ ವಾಯುಗೋಳೀಯ ವಿಪತ್ತು **ಭೂಕಂಪಗಳು** .
2. ಭಾರತದ ಪೂರ್ವಕರಾವಳಿಯು ಹೆಚ್ಚು **ಮಾರುತಗಳು** ಪೀಡಿತ ಪ್ರದೇಶವಾಗಿದೆ.
3. ಭಾರತದ ಪರ್ಯಾಯ ಪ್ರಸ್ಥಭೂಮಿಯಲ್ಲಿ **ಪ್ರವಾಹಗಳು** ಗಳು ಸಂಭವಿಸುವುದು ಅಪರೂಪ.
4. ಭಾರತದಲ್ಲಿ ಆಗಾಗ್ಗೆ **ಭೂಕುಸಿತಗಳು** ಬೆಟ್ಟ–ಗುಡ್ಡಗಳುಳ್ಳ ರಾಜ್ಯಗಳಲ್ಲಿ ಸಂಭವಿಸುವವು.
5. ಕಡಲ ಕೊರೆತಗಳು ಬಹುವಾಗಿ **ಸಮುದ್ರ ಅಲೆಗಳ** ಕ್ರಿಯೆಗಳಿಂದ ಸಂಭವಿಸುವವು

**II. ಗುಂಪುಗಳಲ್ಲಿ ಚರ್ಚಿಸಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

**1. ನೈಸರ್ಗಿಕ ವಿಪತ್ತುಗಳೆಂದರೇನು? ನೈಸರ್ಗಿಕ ವಿಪತ್ತುಗಳಾವುವು?**

ನೈಸರ್ಗಿಕ ಅನಾಹುತಗಳಿಂದಾಗುವ ವ್ಯಾಪಕ ವಿನಾಶದ ಫಲವೇ ನೈಸರ್ಗಿಕ ವಿಪತ್ತುಗಳು.

- ಭೂಕಂಪ, ಜ್ವಾಲಾಮುಖಿ, ಸುನಾಮಿ, ಭೂಕುಸಿತ ಮತ್ತು ಹಿಮಪಾತಗಳು ಭೂಆಂತರಿಕ ಕ್ರಿಯೆಗಳಿಂದ ಸಂಭವಿಸುವ ನೈಸರ್ಗಿಕ ವಿಪತ್ತುಗಳು.
- ಆವರ್ತಮಾರುತ (ಸೈಕ್ಲೋನ್), ಬರಗಾಲ, ಪ್ರವಾಹ ಮತ್ತು ಸಾಂಕ್ರಾಮಿಕ ಪಿಡುಗುಗಳು ವಾಯುಗೋಳಕ್ಕೆ ಸಂಬಧಿಸಿದ ನೈಸರ್ಗಿಕ ವಿಪತ್ತುಗಳಾಗಿವೆ.

**2. ಪ್ರವಾಹಗಳೆಂದರೇನು? ಪ್ರವಾಹಗಳುಂಟಾಗುವುದಕ್ಕೆ ನೈಸರ್ಗಿಕ ಕಾರಣ ತಿಳಿಸಿ.**

ಕೆಲವೊಮ್ಮೆ ನದಿಗಳು ತಮ್ಮ ದಂಡೆಗಳಾಚೆಗೂ ಉಕ್ಕಿ ಹರಿದಾಗ ಪಕ್ಕದ ಭಾಗಗಳು ಜಲಾವೃತಗೊಳ್ಳುತ್ತವೆ. ಇದನ್ನು 'ನದಿ ಪ್ರವಾಹ' ಎನ್ನುವರು.

ನೈಸರ್ಗಿಕ ಪರಿಸ್ಥಿತಿಗಳಲ್ಲಿ ಅತ್ಯಧಿಕ ಮಳೆ, ಹಿಮಕರಗುವಿಕೆ, ಆವರ್ತಮಾರುತ, ಮೇಘಸ್ಫೋಟ, ನದಿಸರಾಗವಾಗಿ ಹರಿಯಲಾರದಷ್ಟು ಅಡಚಣೆ, ನದಿ ಪಾತ್ರದಲ್ಲಿ ಹೂಳುತುಂಬುವಿಕೆ ಇತ್ಯಾದಿಗಳು ಸೇರುತ್ತವೆ.

**3. ಆವರ್ತ ಮಾರುತವೆಂದರೇನು? ಅವುಗಳ ಪ್ರಮುಖ ಪರಿಣಾಮಗಳನ್ನು ತಿಳಿಸಿ.**

ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ಮಾರುತಗಳು ಚಕ್ರಾಕಾರದಲ್ಲಿ ಚಲಿಸುವುದೇ ಆವರ್ತಮಾರುತ.

- ಅವು ಸಾವು ಮತ್ತು ಆಸ್ತಿಗಳಿಗೆ ಹಾನಿಯನ್ನುಂಟುಮಾಡುತ್ತವೆ,
- ಕಟ್ಟಡಗಳಿಗೆ ಧಕ್ಕೆ, ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳನ್ನು ಅಸ್ತವ್ಯಸ್ತಗೊಳಿಸುತ್ತವೆ.
- ವಿದ್ಯುತ್ ಸರಬರಾಜಿಗೆ ಅಡಚಣೆ, ಬೆಳೆಗಳು, ಸ್ವಾಭಾವಿಕ ಸಸ್ಯವರ್ಗ, ಪ್ರಾಣಿ ಸಂಕುಲ ಮೊದಲಾದವುಗಳಿಗೂ ಹಾನಿಯನ್ನುಂಟುಮಾಡುವವು.

**4. ಭೂಕುಸಿತ ಎಂದರೇನು? ಭೂಕುಸಿತಗಳು ಉಂಟಾಗುವ ಬಗೆ ಮತ್ತು ಪರಿಣಾಮಗಳನ್ನು ವಿವರಿಸಿ.**

ಬೆಟ್ಟ ಅಥವಾ ಪರ್ವತಗಳ ಕಡಿದಾದ ಇಳಿಜಾರಿನಲ್ಲಿ ಕೆಳಗೆ ಚಲಿಸುವ ಭೂರಾಶಿಗಳಿಗೆ "ಭೂಕುಸಿತ" ಎನ್ನುವರು. ಇದು ಭೂ ಗುರುತ್ವಾಶಕ್ತಿಯಿಂದ ಮಣ್ಣು, ಕಲ್ಲು ಮತ್ತು ಭಗ್ನಾವಿಶೇಷಗಳು ಕೆಳಗೆ ಬೀಳುವ ಅಥವಾ ಜರುಗುವ ಕ್ರಿಯೆಯನ್ನೊಳಗೊಂಡಿದೆ.

- ಇವುಗಳಿಂದಾಗುವ ಮುಖ್ಯ ಪರಿಣಾಮಗಳೆಂದರೆ;

- ರೈಲುಮಾರ್ಗ, ರಸ್ತೆಗಳಿಗೆ ಅಡಚಣೆ, ಜನವಸತಿ ಮತ್ತು ಸಸ್ಯವರ್ಗಗಳು ಭೂಗತವಾಗುವುದು.
- ಸಾವು-ನೋವು ಮತ್ತು ಆಸ್ತಿಗಳಿಗೆ ಹಾನಿ. ಇವುಗಳಲ್ಲಿ ಆಗಾಗ್ಗೆ ರಸ್ತೆಗಳಿಗೆ ಅಡಚಣೆ ಸರ್ವೆಸಾಮಾನ್ಯ.

**5. ಭಾರತದಲ್ಲಿ ಕಡಲ ಕೊರತೆಗಳುಂಟಾಗುವುದಕ್ಕೆ ಕಾರಣ ಮತ್ತು ಹಂಚಿಕೆಗಳನ್ನು ಕುರಿತು ಬರೆಯಿರಿ.**

- ಸಮುದ್ರ ಅಲೆಗಳ ಅವಿರತ ಸಂಘರ್ಷಣಾ ಪ್ರಕ್ರಿಯೆಯಿಂದ ತೀರವು ಸವೆಯುವ ಮತ್ತು ವಸ್ತುಗಳ ಒಯ್ಯುವಿಕೆಗೆ 'ಸಮುದ್ರದ ಕೊರೆತ' ಎನ್ನುವರು. ಕಡಲಕೊರೆತಕ್ಕೆ ಕಾರಣಗಳು ಈ ಕೆಳಗಿನಂತಿವೆ.
- **ನೈಋತ್ಯ ಮಾನ್ಸೂನ್ ಮಾರುತಗಳು :** ಇವು ಭಾರತದ ಪಶ್ಚಿಮ ಕರಾವಳಿಯು ತೀವ್ರಗತಿಯಲ್ಲಿ ಸವೆಸುವುದಕ್ಕೆ ಕಾರಣವಾಗುತ್ತವೆ. ಈ ಸಂದರ್ಭದಲ್ಲಿ ಗುಜರಾತ್, ಮಹಾರಾಷ್ಟ್ರ, ಗೋವ, ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ತೀರಗಳು ಹೆಚ್ಚು ಸವೆತಕ್ಕೊಳಗಾಗುತ್ತವೆ.
- **ಉಷ್ಣವಲಯದ ಆವರ್ತಮಾರುತಗಳು:** ಈಶಾನ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ಬಂಗಾಳಕೊಲ್ಲಿಯಲ್ಲಿ ಸಂಭವಿಸುವವು. ಇವು ಹೆಚ್ಚು ವಿನಾಶಕಾರಿ. ಭಾರತದ ಪೂರ್ವ ಕರಾವಳಿಯ ತೀವ್ರ ಸವೆತಕ್ಕೆ ಕಾರಣವಾಗುತ್ತವೆ. ತಮಿಳುನಾಡು, ಆಂಧ್ರಪ್ರದೇಶ ಮತ್ತು ಒಡಿಶಾ ತೀರಗಳು ಸವೆತಕ್ಕೊಳಗಾಗುವವು.
- **ಸುನಾಮಿ :** ಸಮುದ್ರ ತಳದಲ್ಲಿ ಸಂಭವಿಸುವ ಭೂಕಂಪನದಿಂದಾಗುವ ದೈತ್ಯಾಕಾರದ ಅಲೆಗಳಿಗೆ ಸುನಾಮಿ ಎನ್ನುವರು. ಇವು ಭಾರತದ ತೀರಗಳ ಸವೆತಕ್ಕೆ ಕಾರಣವಾಗುವವು. ಅದರಲ್ಲೂ ವಿಶೇಷವಾಗಿ ಪೂರ್ವಕರಾವಳಿ ಮತ್ತು ಅಂಡಮಾನ-ನಿಕೋಬಾರ್‌ದ್ವೀಪಗಳ ಕರಾವಳಿಗಳ ಕೊರೆತದಲ್ಲಿ ಹೆಚ್ಚು ಪರಿಣಾಮ ಬೀರುವವು.
- ಮಾನವನ ಕೆಲವು ಕೃತ್ಯಗಳೂ ಸಹ ಸಮುದ್ರ ತೀರಗಳ ಕೊರೆತಕ್ಕೆ ಕಾರಣವಾಗುತ್ತವೆ. ಉದಾ: ಮಿತಿಮೀರಿದ ಮರಳು ಮತ್ತು ಕಲ್ಲು ಗಣಿಗಾರಿಕೆ, ಅಲೆತಡೆಗಳ ನಿರ್ಮಾಣ ಮೊದಲಾದವು.

**6. ಭೂಕಂಪಗಳಿಂದಾಗುವ ಪರಿಣಾಮಗಳನ್ನು ಮಿತಗೊಳಿಸಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.**

- ಭೂಕಂಪನಾವಲಯಗಳಲ್ಲಿ ಜನವಸತಿಗಳ ನಿರ್ಮಾಣ ನಿಷೇಧ.
- ಭೂಕಂಪನ ನಿರೋಧಕ ಕಟ್ಟಡಗಳ ನಿರ್ಮಾಣವನ್ನು ಅನುಸರಿಸುವುದು.
- ಉತ್ತಮ ದರ್ಜೆಯ ಕಟ್ಟಡ ನಿರ್ಮಾಣದ ವಸ್ತುಗಳ ಬಳಕೆ ಮತ್ತು ಬಹುಮಹಡಿ ಕಟ್ಟಡ ನಿರ್ಮಾಣವನ್ನು ಕೈಬಿಡುವುದು.
- ಅಂತರ್ಜಲಕ್ಕಾಗಿ ಬಾವಿಗಳ ಆಳಕೊರೆತವನ್ನು ನಿಷೇಧಿಸುವುದು.
- ಭೂಕಂಪನ ತೀವ್ರತೆಯುಳ್ಳ ಬೆಟ್ಟ-ಗುಡ್ಡ ಪ್ರದೇಶಗಳಲ್ಲಿ ನಗರ ಬೆಳೆವಣಿಗೆಗೆ ನಿರ್ಬಂಧ.
- ಬಹುದೊಡ್ಡ ಅಣೆಕಟ್ಟು ಮತ್ತು ಜಲಾಶಯಗಳ ನಿರ್ಮಾಣಕ್ಕೆ ನಿಷೇಧ.
- ಅರಣ್ಯನಾಶ ಮತ್ತು ತೀವ್ರ ಸ್ವರೂಪದ ಗಣಿಗಾರಿಕಾ ಚಟುವಟಿಕೆಗಳನ್ನು ತಡೆಗಟ್ಟುವುದು.
- ಭೂಕಂಪಗಳು ಸಂಭವಿಸಿದ ನಂತರ ಕೈಗೊಳ್ಳಬೇಕಾದ ಪರಿಹಾರ ಕ್ರಮಗಳೂ ಅಷ್ಟೇ ಮುಖ್ಯ.
  ಉದಾ :ಆಹಾರ ಪೂರೈಕೆ, ಪುನರ್ವಸತಿ ವ್ಯವಸ್ಥೆ, ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ಕ್ರಮ, ವೈದ್ಯಕೀಯವ್ಯವಸ್ಥೆ.

**7. ಆವರ್ತ ಮಾರುತಗಳ ಪರಿಣಾಮಗಳು ಯಾವುವು?**

- ಉಷ್ಣವಲಯದ ಆವರ್ತಮಾರುತಗಳು ಬಹಳ ವಿನಾಶಕಾರಿಯಾದವು.
- ಅವು ಸಾವು ಮತ್ತು ಆಸ್ತಿಗಳಿಗೆ ಹಾನಿಯನ್ನುಂಟುಮಾಡುತ್ತವೆ, ಕಟ್ಟಡಗಳಿಗೆ ಧಕ್ಕೆ, ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳನ್ನು ಅಸ್ತವ್ಯಸ್ತಗೊಳಿಸುತ್ತವೆ.
- ವಿದ್ಯುತ್ ಸರಬರಾಜಿಗೆ ಅಡಚಣೆ, ಬೆಳೆಗಳು, ಸ್ವಾಭಾವಿಕ ಸಸ್ಯವರ್ಗ, ಪ್ರಾಣಿ ಸಂಕುಲ ಮೊದಲಾದವುಗಳಿಗೂ ಹಾನಿಯನ್ನುಂಟುಮಾಡುವವು.

**8. ಆವರ್ತಮಾರುತಗಳ ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಸಿ.**

- ಆವರ್ತಮಾರುತಗಳು ನೈಸರ್ಗಿಕ ವಿಪತ್ತುಗಳಾಗಿದ್ದು, ಅವುಗಳನ್ನು ನಾವು ತಡೆಗಟ್ಟಲಾಗುವುದಿಲ್ಲ.
- ಆದರೆ ಜನರು ಮುನ್ನೆಚ್ಚರಿಕೆಯ ಕಡೆಗೆ ಲಕ್ಷ್ಯಕೊಡಬಹುದು. ಅವರು ಆಕಾಶವಾಣಿ, ದೂರದರ್ಶನ ಮತ್ತು ಇತರೆ ಸಂಪರ್ಕಮಾಧ್ಯಮಗಳು ಬಿತ್ತರಿಸುವ ಎಚ್ಚರಿಕೆಗಳನ್ನು ಗಮನಿಸಬೇಕು.
- ಆವರ್ತಮಾರುತಗಳು ಸಂಭವಿಸಿದ ಸಂದರ್ಭಗಳಲ್ಲಿ ಜನರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಬೇಕು.
- ಆವರ್ತಮಾರುತಗಳ ಹೊಡೆತ ಮತ್ತು ಕಡಲಕೊರೆತಗಳನ್ನು ನಿಯಂತ್ರಿಸುವಂತಹ ಮಾಂಗ್ರೋವ್ ಕಾಡು ಮತ್ತು ಆಳಕ್ಕೆ ಬೇರು ಬಿಡುವ ಇತರೆ ಮರಗಳನ್ನು ಸಮುದ್ರ ತೀರದಲ್ಲಿ ಬೆಳೆಸಬೇಕು.

**9. ಪ್ರವಾಹಗಳ ಪರಿಣಾಮಗಳು ಯಾವುವು?**

- ಜೀವಹಾನಿ
- ಆಸ್ತಿಗೆ ಧಕ್ಕೆ
- ಬೆಳೆ ಮತ್ತು ಸಸ್ಯವರ್ಗಗಳಿಗೆ ಹಾನಿ
- ಸಾರಿಗೆ ಸಂಪರ್ಕಗಳ ಅವ್ಯವಸ್ಥೆ

- ಮಣ್ಣಿನ ಸವೆತ
- ಮೂಲ ಸೌಲಭ್ಯಗಳ ವ್ಯತ್ಯಯ

**10. ಪ್ರವಾಹ ನಿಯಂತ್ರಣ ಕ್ರಮಗಳು ಯಾವುವು?**

- ಜಲಾನಯನ ಪ್ರದೇಶದಲ್ಲಿ ಅರಣ್ಯ ಬೆಳೆಸುವುದು ಮತ್ತು ವೇಗವಾದ ನೀರಿನ ಹರಿವು ನಿಯಂತ್ರಣ.
- ಅಣೆಕಟ್ಟುಗಳನ್ನು ನಿರ್ಮಿಸಿ ಜಲಾಶಯಗಳಲ್ಲಿ ನೀರು ಸಂಗ್ರಹಿಸಿ ನದಿ ನೀರಿನ ಪ್ರಮಾಣವನ್ನು ಕಡಿಮೆಮಾಡುವುದು. ಸಂಗ್ರಹಿಸಿದ ನೀರನ್ನು ನೀರಾವರಿ ಮೊದಲಾದ ಉದ್ದೇಶಗಳಿಗಾಗಿ ಬಳಕೆ.
- ಜನವಸತಿಗಳ ಪ್ರದೇಶ ಮತ್ತು ಕೃಷಿ ಭೂಮಿಗಳನ್ನು ಪ್ರವಾಹದಿಂದ ರಕ್ಷಿಸಲು ಒಡ್ಡುಗಳ ನಿರ್ಮಾಣ.
- ಪ್ರವಾಹಗಳ ಬಗ್ಗೆ ಮುನ್ಸೂಚನೆ ಮತ್ತು ಸಕಾಲಿಕ ಮುನ್ನೆಚ್ಚರಿಕೆ ನೀಡುವುದು.
- ಇದು ಜನ, ಜಾನುವಾರುಗಳ ಸಾವು– ನೋವು ಮತ್ತು ಆಸ್ತಿಗಳಿಗಾಗುವ ನಷ್ಟವನ್ನು ತಡೆಯು ಅಗತ್ಯವಾದ ಸಕಾಲಿಕ ಕ್ರಮ.

**11. ಭೂಕುಸಿತದ ನಿಯಂತ್ರಣ ಕ್ರಮಗಳು ಯಾವುವು?**

- ಇಳಿಜಾರನ್ನು ತಗ್ಗಿಸುವುದು.
- ಹೆದ್ದಾರಿಗಳ ಬದಿ ಮತ್ತಿತರ ಇಳಿಜಾರುಗಳಲ್ಲಿ ಬಂಡೆಗಳು ಬೀಳದಂತೆ ತಡೆಯುವುದು.
- ಕಡಿದಾದ ಇಳಿಜಾರುಳ್ಳ ಭಾಗ ಮತ್ತು ಜನವಸತಿಗಳ ಭಾಗಗಳಲ್ಲಿ ಗಣಿಗಾರಿಕೆ ಮತ್ತು ಕಲ್ಲುಗಣಿ ಚಟುವಟಿಕೆಗಳ ನಿಯಂತ್ರಣ, ಅರಣ್ಯೀಕರಣ ಮೊದಲಾದ ಕ್ರಮಗಳು ಭೂಕುಸಿತಗಳ ನಿಯಂತ್ರಣಕ್ಕೆ ಅವಶ್ಯ.

**12. ಭೂಕುಸಿತದ ನಿಯಂತ್ರಣ ಕ್ರಮಗಳು ಯಾವುವು?**

- ಇಳಿಜಾರನ್ನು ತಗ್ಗಿಸುವುದು.
- ಹೆದ್ದಾರಿಗಳ ಬದಿ ಮತ್ತಿತರ ಇಳಿಜಾರುಗಳಲ್ಲಿ ಬಂಡೆಗಳು ಬೀಳದಂತೆ ತಡೆಯುವುದು.
- ಕಡಿದಾದ ಇಳಿಜಾರುಳ್ಳ ಭಾಗ ಮತ್ತು ಜನವಸತಿಗಳ ಭಾಗಗಳಲ್ಲಿ ಗಣಿಗಾರಿಕೆ ಮತ್ತು ಕಲ್ಲುಗಣಿ ಚಟುವಟಿಕೆಗಳ ನಿಯಂತ್ರಣ, ಅರಣ್ಯೀಕರಣ ಮೊದಲಾದ ಕ್ರಮಗಳು ಭೂಕುಸಿತಗಳ ನಿಯಂತ್ರಣಕ್ಕೆ ಅವಶ್ಯ.

**13. ಸಮುದ್ರ ತೀರದ ಸವೆತದ ಪರಿಣಾಮಗಳು ಯಾವುವು?**

- ಕರಾವಳಿ ಪ್ರದೇಶದ ಕಟ್ಟಡ ಮತ್ತು ಮರಗಳು ಕೊಚ್ಚಿಹೋಗುವುದು.
- ಕರಾವಳಿಯ ರಸ್ತೆ ಮತ್ತು ರೈಲು ಮಾರ್ಗಗಳಿಗೆ ಧಕ್ಕೆ.
- ಹೆಚ್ಚು ಕಾಲ ಕರಾವಳಿಯಲ್ಲಿ ನೀರು ತುಂಬಿಕೊಳ್ಳುವುದರಿಂದ ಅಲ್ಲಿನ ಜನರಿಗೆ ಪುನರ್ವಸತಿ ಕಲ್ಪಿಸುವ ಸಮಸ್ಯೆ

**14. ಸಮುದ್ರ ತೀರದ ಸವೆತದ ನಿಯಂತ್ರಣ ಕ್ರಮಗಳು ಯಾವುವು?**

- ಸಮುದ್ರ ಅಲೆಗಳ ಹೊಡೆತವನ್ನು ನಿಯತ್ರಿಸಲು ಸಮುದ್ರ ಗೋಡೆ, ತಡೆಗಟ್ಟು ಮತ್ತು ಅಲೆತಡೆಗಳ ನಿರ್ಮಾಣ.
- ತೀರಗಳಲ್ಲಿ ಮರಳು ಮತ್ತು ಗಣಿಗಾರಿಕೆಗಳ ನಿಷೇದ.
- ಸಮುದ್ರ ದಡ ಮತ್ತು ಮರಳು ರಾಶಿಗಳನ್ನು ಉಳಿಸಲು ಮತ್ತು ಸುಸ್ಥಿರತೆಗಾಗಿ ಮರಗಳನ್ನು ಬೆಳೆಸುವುದು.

**15. ಭೂಕಂಪನಕ್ಕೆ ಕಾರಣಗಳು ಯಾವುವು?**

- ಭೂಕಂಪಗಳು ಭೂಫಲಕಗಳ ಚಲನೆ
- ಜ್ವಾಲಾಮುಖಿ
- ಶಿಲಾಸ್ತರಗಳ ಭಂಗ ಮತ್ತು ಮಡಿಕೆ
- ಭೂಕುಸಿತ
- ಅಂತರ್ಗುಹೆ ಮೇಲ್ಛಾವಣಿಯ ಕುಸಿತ
- ಮಾನವ ನಿರ್ಮಿತ ಜಲಾಶಯಗಳ ನೀರಿನ ಭಾರ

**16. ಭೂಕಂಪದ ಪರಿಣಾಮಗಳು ಯಾವುವು?**

- ನೆಲದ ಮೇಲಿನ ಬಿರುಕು
- ಕಟ್ಟಡ, ರೈಲು ಮಾರ್ಗ, ರಸ್ತೆ, ವಿದ್ಯುತ್ ಸಂಚಾರ, ಸಂಪರ್ಕ ಮಾದ್ಯಮ, ಸೇತುವೆ, ಅಣೆಕಟ್ಟುಗಳ ಒಡೆತ, ಕಾರ್ಖಾನೆಗಳಿಗೆ ಹಾನಿ.
- ಮಾನವ ಮತ್ತು ಜಾನುವಾರುಗಳ ಸಾವು ಮತ್ತು ಆಸ್ತಿಗಳಿಗೆ ಹಾನಿ
- ಬೆಂಕಿ ಅನಾಹುತ.
- ಭೂಕುಸಿತ
- ಅಂತರ್ಜಲ ಮಟ್ಟದಲ್ಲಿ ವ್ಯತ್ಯಾಸ
- ನದಿ ವ್ಯವಸ್ಥೆಯ ವಿಚಲನೆ ಅಥವಾ ಅಡಚಣೆ

# ಅಧ್ಯಾಯ–12
# ಭಾರತದ ಜನಸಂಖ್ಯೆ

**ಮುಖ್ಯಾಂಶಗಳು:**

- ಜನಸಂಖ್ಯಾ ಹಂಚಿಕೆಯನ್ನು ವಿವರಿಸಲು **ಸಾಂದ್ರತೆ** ಎಂಬ ಪದವನ್ನು ಬಳಸಲಾಗುವದು.
- 2011ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ **121 ಕೋಟಿ.**
- ಭಾರತದ ಸರಾಸರಿ ಜನಸಾಂದ್ರತೆಯ ಪ್ರಮಾಣ ಪ್ರ.ಚ.ಕಿ.ಮೀ.ಗೆ **382** ರಷ್ಟಿದೆ.
- ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ರಾಜ್ಯ **ಉತ್ತರ ಪ್ರದೇಶ.**
- ಅತಿ ಕಡಿಮೆ ಜನಸಂಖ್ಯೆಯನ್ನು ಹೊಂದಿದ ರಾಜ್ಯ **ಸಿಕ್ಕಿಂ.**
- ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆಯ ರಾಜ್ಯ **ಬಿಹಾರ.**
- ಭಾರತದಲ್ಲಿ ಅತಿ ಕಡಿಮೆ ಜನಸಾಂದ್ರತೆಯ ರಾಜ್ಯ **ಅರುಣಾಚಲ ಪ್ರದೇಶ.**
- ಭಾರತದಲ್ಲಿ ಮೊದಲ ಬಾರಿಗೆ **1872** ರಲ್ಲಿ ಜನಗಣತಿ ಆರಂಭವಾಯಿತು.
- 2011ರ ಜನಗಣತಿಯ ಪ್ರಕಾರ ಭಾರತದ ಸರಾಸರಿ ಸಾಕ್ಷರತೆಯ ಪ್ರಮಾಣ ಶೇ. **74.04**%.
- 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಗರಿಷ್ಟ ಸಾಕ್ಷರತೆಯನ್ನು ಹೊಂದಿದ ರಾಜ್ಯ **ಕೇರಳ.**
- 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಕನಿಷ್ಟ ಸಾಕ್ಷರತೆಯನ್ನು ಹೊಂದಿದ ರಾಜ್ಯ **ಬಿಹಾರ.**
- ಭಾರತದ ಸರಾಸರಿ ಲಿಂಗಾನುಪಾತ ಪ್ರತಿ 1000 ಪುರುಷರಿಗೆ **940** ಮಹಿಳೆಯರು.

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. 2011ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ **121.01** ಕೋಟಿಗಳಾಗಿತ್ತು.
2. ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಶೇ. **17.5** ಭಾಗ, ಭಾರತದಲ್ಲಿದೆ.
3. ಭಾರತದ ಜನಭರಿತವಾದ ರಾಜ್ಯ **ಉತ್ತರ ಪ್ರದೇಶ** .
4. ಕೇಂದ್ರಾಡಳಿತ ಪ್ರದೇಶಗಳಲ್ಲಿ **ಲಕ್ಷದ್ವೀಪ** ಅತಿ ಕಡಿಮೆ ಜನಸಂಖ್ಯೆ ಹೊಂದಿದೆ.
5. ಭಾರತದ ಅತಿ ಕಡಿಮೆ ಜನಸಾಂದ್ರತೆಯುಳ್ಳ ರಾಜ್ಯ **ಅರುಣಾಚಲಪ್ರದೇಶ** ಆಗಿದೆ.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

**1. ಜನಸಂಖ್ಯೆ ಎಂದರೇನು?**

ಒಂದು ಪ್ರದೇಶದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ವಾಸಿಸುತ್ತಿರುವ ಜನರ ಪ್ರಮಾಣವೇ ಅಲ್ಲಿನ ಜನಸಂಖ್ಯೆಯಾಗಿದೆ.

**2. ಜನಸಾಂದ್ರತೆ ಎಂದರೇನು?**

ಒಂದು ಭೂಪ್ರದೇಶದಲ್ಲಿರುವ ಒಟ್ಟು ಜನರ ಸಂಖ್ಯೆಯನ್ನು ಆ ಭೂ ಪ್ರದೇಶದ ಕ್ಷೇತ್ರದಿಂದ ಭಾಗಿಸಿದಾಗ ಬರುವ ಭಾಗಲಬ್ಧವೇ ಜನಸಾಂದ್ರತೆಯಾಗಿದೆ.

**3. ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಗೆ ಪ್ರಮುಖ ಕಾರಣಗಳನ್ನು ತಿಳಿಸಿ.**

- ಬಾಲ್ಯವಿವಾಹ
- ಧಾರ್ಮಿಕ ಮತ್ತು ಸಾಮಾಜಿಕ ಮೂಢನಂಬಿಕೆಗಳು
- ಬಹುಪತ್ನಿತ್ವ
- ಬಡತನ
- ಅನಕ್ಷರತೆ
- ಉಷ್ಣವಲಯದ ವಾಯುಗುಣ
- ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆ
- ಪ್ರಾಣಾಂತಿಕ ಸಾಂಕ್ರಾಮಿಕ ಪಿಡುಗುಗಳ ನಿಯಂತ್ರಣ
- ಶಿಶು ಮರಣದಲ್ಲಿ ಕುಸಿತ
- ಶಿಕ್ಷಣದ ಪ್ರಗತಿ

**4. ಭಾರತದ ಜನಸಂಖ್ಯೆಯ ಬೆಳವಣಿಗೆಯಿಂದಾಗುವ ಪರಿಣಾಮಗಳಾವುವು.**

- ನಿರುದ್ಯೋಗ,
- ಆಹಾರದ ಕೊರತೆ ಮತ್ತು ಅಪೌಷ್ಠಿಕತೆ
- ಹೆಚ್ಚು ಸಾಮಾಜಿಕ ಹೊಣೆ ಮತ್ತು ಮೂಲ ಸೌಲಭ್ಯಗಳ ಕೊರತೆ
- ಕಡಿಮೆ ತಲಾದಾಯ
- ನಿಧಾನ ಗತಿಯ ಆರ್ಥಿಕಾಭಿವೃದ್ಧಿ
- ಬಡತನ
- ಜೀವನ ಮಟ್ಟದಲ್ಲಿ ಕುಸಿತ
- ಪರಿಸರ ಮಾಲಿನ್ಯ ಮತ್ತು ರಾಜಕೀಯ ಆರಾಜಕತೆ

**5. ಭಾರತದ ಜನಸಂಖ್ಯೆಯ ಹಂಚಿಕೆಯನ್ನು ನಿಯಂತ್ರಿಸುವ ಪ್ರಮುಖ ಅಂಶಗಳನ್ನು ತಿಳಿಸಿ.**

- ಮೇಲ್ಮೈ ಲಕ್ಷಣಗಳು
- ವಾಯುಗುಣ
- ಮಣ್ಣು
- ಸಂಪನ್ಮೂಲಗಳು
- ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳು:

**6. ಭಾರತದ ಕೆಲವು ಭಾಗಗಳ ಕಡಿಮೆ ಜನ ಸಾಂದ್ರತೆಗೆ ಕಾರಣಗಳನ್ನು ಕುರಿತು ವಿವರಿಸಿ.**

- ಪರ್ವತ
- ಬೆಟ್ಟ ಗುಡ್ಡಗಳ ಭಾಗಗಳು
- ಅರಣ್ಯ ಪ್ರದೇಶ
- ಕನಿಷ್ಠ ಉಷ್ಣಾಂಶವುಳ್ಳ ಅಥವಾ ಅರೆಮರುಭೂಮಿ ವಾಯುಗುಣಗಳು.

**7. ಜನಸಂಖ್ಯಾ ಬೆಳೆವಣಿಗೆಯ ನಿಯಂತ್ರಣ ಕ್ರಮಗಳು ಯಾವುವು?**

- ಕುಟುಂಬ ಯೋಜನೆ
- ಮಹಿಳಾ ಕಲ್ಯಾಣ ಯೋಜನೆಗಳು
- ಪ್ರಚಾರ ಮತ್ತು ಜಾಹಿರಾತು
- ಗ್ರಾಮೀಣ ಪ್ರದೇಶದ ಜನರಲ್ಲಿ ಜನಸಂಖ್ಯಾ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು

**8. ಕಡಿಮೆ ಮರಣ ದರಕ್ಕೆ ಕಾರಣಗಳೇನು?**

- ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆ
- ಪ್ರಾಣಾಂತಿಕ ಸಾಂಕ್ರಾಮಿಕ ಪಿಡುಗುಗಳ ನಿಯಂತ್ರಣ
- ಶಿಶು ಮರಣದಲ್ಲಿ ಕುಸಿತ
- ಶಿಕ್ಷಣದ ಪ್ರಗತಿ

# ಅರ್ಥಶಾಸ್ತ್ರ
# ಅಧ್ಯಾಯ – 3
# ಹಣ ಮತ್ತು ಸಾಲ

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ:**

1. ಸಾಟಿ ವಿನಿಮಯ ಪದ್ಧತಿಯಲ್ಲಿ ವಸ್ತುಗಳ ಬದಲಿಗೆ **ವಸ್ತು** ವಿನಿಮಯ ಮಾಡಲಾಗುತ್ತಿತ್ತು.
2. ಚೆಕ್‌ಗಳು **ಬ್ಯಾಂಕು** ಹಣದ ಸಾಧನವಾಗಿವೆ.
3. ಭಾರತೀಯ ರಿಜರ್ವ ಬ್ಯಾಂಕು ಸ್ಥಾಪನೆಯಾದ ವರ್ಷವು **1935.**
4. ಜಪಾನ್ ದೇಶದ ಹಣವನ್ನು **ಯೆನ್** ಎಂದು ಕರೆಯುತ್ತೇವೆ.
5. ಭಾರತ ಸರ್ಕಾರ 14 ವಾಣಿಜ್ಯ ಬ್ಯಾಂಕುಗಳನ್ನು **1969** ರಲ್ಲಿ ರಾಷ್ಟ್ರೀಕರಿಸಿತು.
6. ಕಿರಿದಾದ ಹಣದ ಪೂರೈಕೆಯನ್ನು **M1** ಮತ್ತು **M2** ಮೂಲಕ ಅಳೆಯುತ್ತೇವೆ.
7. ಹಣದುಬ್ಬರವು ಹಣದ ಪೂರೈಕೆಯು ಸರಕು–ಸೇವೆಗಳ ಪೂರೈಕೆಗಿಂತ **ಜಾಸ್ತಿ** ಇದ್ದಾಗ ಸಂಭವಿಸುತ್ತದೆ.

**II. ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.**

**1. ಹಣ ಎಂದರೇನು?**

ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಇತರೆ ವಾಣಿಜ್ಯಿಕ ಸಾಲಗಳನ್ನು ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ.

**2. ಸಾಟಿ ವಿನಿಮಯ ಪದ್ಧತಿ ಎಂದರೇನು?**

ಪುರಾತನ ಕಾಲದಲ್ಲಿ ಜನರು ಹಣವನ್ನು ಬಳಸದೆ ಸರಕುಗಳನ್ನು ಸರಕುಗಳಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದರು.

**3. ವಸ್ತು ರೂಪದ ಹಣಕ್ಕೆ ಉದಾಹರಣೆ ಕೊಡಿ.**

ಗ್ರೀಸ್‌ನಲ್ಲಿ ಜಾನುವಾರುಗಳು; ರೋಮ್‌ನಲ್ಲಿ ಕುರಿಗಳು, ಚೀನಾದಲ್ಲಿ ಹಲ್ಲುಗಳು

**4. ಕಾಗದದ ಹಣಕ್ಕೆ ಉದಾಹರಣೆ ಕೊಡಿ.**

ಭಾರತದ ರೂಪಾಯಿ, ಅಮೇರಿಕದಲ್ಲಿ ಡಾಲರ್, ಇಂಗ್ಲೆಂಡಿನಲ್ಲಿ ಪೌಂಡ್, ಜಪಾನ್‌ನಲ್ಲಿ ಯೆನ್, ಚೀನಾದಲ್ಲಿ ಯುವಾನ್

**5. ಬ್ಯಾಂಕ್ ಹಣಕ್ಕೆ ಉದಾಹರಣೆ ಕೊಡಿ.**

ಚೆಕ್ಕುಗಳು, ಡ್ರಾಫ್ಟ್‌ಗಳು, ಠೇವಣಿ ರಸೀದಿ

**6. ಪ್ಲಾಸ್ಟಿಕ್ ಹಣಕ್ಕೆ ಉದಾಹರಣೆ ಕೊಡಿ**

ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ

**7. 'ಬ್ಯಾಂಕಿಂಗ್' ಎಂದರೇನು?**

'ಬ್ಯಾಂಕಿಂಗ್' ಎಂದರೆ ,ಸಾಲ ನೀಡುವ ಅಥವಾ ಬಂಡವಾಳ ಹೂಡುವ ಉದ್ದೇಶಕ್ಕಾಗಿ ಸಾರ್ವಜನಿಕರಿಂದ ಹಣವನ್ನು ಠೇವಣಿಯಾಗಿ ಸ್ವೀಕರಿಸಿ, ಬೇಡಿಕೆ ಅಥವಾ ಇತರೆ ಆಧಾರದ ಮೇಲೆ ಹಣ ಮರುಪಾವತಿಸುವುದಲ್ಲದೇ, ಚೆಕ್ಕುಗಳು, ಡ್ರಾಫ್ಟುಗಳು, ಆದೇಶಗಳು ಮುಂತಾದವುಗಳ ಮೂಲಕ ಹಣ ಹಿಂಪಡೆಯುವ ಪ್ರಕ್ರಿಯೆಯೇ ಬ್ಯಾಂಕಿಂಗ್ ಆಗಿರುತ್ತದೆ'.

**8. ಭಾರತೀಯ ರಿಜರ್ವ ಬ್ಯಾಂಕನ್ನು ಯಾವಾಗ ಸ್ಥಾಪಿಸಲಾಯಿತು?**

1935ರ ಎಪ್ರಿಲ್ 1

**9. ಭಾರತೀಯ ರಿಜರ್ವ ಬ್ಯಾಂಕನ್ನು ಯಾವಾಗ ರಾಷ್ಟ್ರೀಕರಣ ಮಾಡಲಾಯಿತು?**

ಜನವರಿ 1, 1949

**10. ಭಾರತದಲ್ಲಿ ಒಂದು ರೂಪಾಯಿಯ ನೋಟನ್ನು ಯಾರು ಮುದ್ರಿಸಿ ಚಲಾಯಿಸುತ್ತಾರೆ?**

ಒಂದು ರೂಪಾಯಿಯ ನೋಟನ್ನು ಸರ್ಕಾರದ ಪರವಾಗಿ ಆರ್‌ಬಿಐ ಮುದ್ರಿಸಿ ಚಲಾಯಿಸುತ್ತದೆ

**11. ಹಣಕಾಸು ನೀತಿ' ಎಂದರೇನು?**

ಹಣದ ಪೂರೈಕೆ ಮತ್ತು ಸಾಲದ ಪ್ರಮಾಣ ಮತ್ತು ಬಡ್ಡಿ ದರದ ನಿಯಂತ್ರಣಕ್ಕಾಗಿ ಇರುವ ಕ್ರಮಗಳನ್ನು ಒಟ್ಟಾಗಿ 'ಹಣಕಾಸು ನೀತಿ' ಎಂದು ಕರೆಯುತ್ತೇವೆ

**12. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ ನಾಲ್ಕು ಪರಿಕಲ್ಪನೆಗಳು ಯಾವುವು?**

M1, M2, M3 ಮತ್ತು M4

**13. ಬೇಡಿಕೆ ಅಥವಾ ಡಿಮಾಂಡ್ ಠೇವಣಿಗಳು ಎಂದರೇನು?**

ಖಾತೆಗಳಲ್ಲಿರುವ ಹಣವನ್ನು ಬ್ಯಾಂಕುಗಳಿಂದ ಅಲ್ಪಾವಧಿ ಸೂಚನೆ ನೀಡಿ ಅಥವಾ ಬೇಡಿಕೆಯಾಧಾರದ ಮೇಲೆ ಹೊರ ತೆಗೆಯಬಹುದಾದ್ದರಿಂದ ಇವುಗಳನ್ನು ಬೇಡಿಕೆ ಅಥವಾ ಡಿಮಾಂಡ್ ಠೇವಣಿಗಳು ಎಂದೂ ಕರೆಯುತ್ತಾರೆ.

**III.** **ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.**

**1. ಹಣದ ಕಾರ್ಯಗಳನ್ನು ವಿವರಿಸಿ.**

- ವಿನಿಮಯ ಮಾಧ್ಯಮ ಅಥವಾ ಸಂದಾಯ ಸಾಧನ
- ಮೌಲ್ಯ ನಿರ್ಣಯ
- ವಿಳಂಬಿತ ಸಂದಾಯದ ಪ್ರಮಾಣ
- ಮೌಲ್ಯ ಅಥವಾ ಖರೀದಿ ಶಕ್ತಿಯ ಸಂಗ್ರಹ
- ಮೌಲ್ಯ ವರ್ಗಾವಣೆ ಅಥವಾ ಖರೀದಿ ಶಕ್ತಿಯ ವರ್ಗಾವಣೆ

**2. ಬ್ಯಾಂಕುಗಳ ಮಹತ್ವವನ್ನು ವಿವರಿಸಿ.**

- ಆರ್ಥಿಕ ಅಭಿವೃದ್ಧಿಯಲ್ಲಿ ಬ್ಯಾಂಕುಗಳು ಮಹತ್ವದ ಪಾತ್ರ ವಹಿಸುತ್ತವೆ.
- ಅವು ಸಾರ್ವಜನಿಕರ ಉಳಿತಾಯವನ್ನು ಸಂಗ್ರಹಣೆ ಮಾಡಿ ಅವುಗಳನ್ನು ಹೂಡಿಕೆದಾರರಿಗೆ ಒದಗಿಸುತ್ತವೆ.
- ಈ ಮೂಲಕ ಬಂಡವಾಳ ಸಂಗ್ರಹಣೆ ಮತ್ತು ಸಂಚಯನದಲ್ಲಿ ಅವು ಪ್ರಮುಖ ಪಾತ್ರ ವಹಿಸುತ್ತವೆ.
- ವಿವಿಧ ಸಾಧನಗಳ ಮೂಲಕ ಗ್ರಾಹಕರಿಗೆ ಹಣಸಂದಾಯದ ಅನುಕೂಲಕರ ಮಾರ್ಗಗಳನ್ನು ಒದಗಿಸಿವೆ.
- ನಿರ್ದಿಷ್ಟ ಅವಧಿ ಠೇವಣಿಗಳಿಗೆ ಅಧಿಕ ಬಡ್ಡಿ ದರ ನೀಡುವುದಲ್ಲದೇ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಅಭಿವೃದ್ಧಿಗಾಗಿ ಸಾಲಗಳನ್ನೂ ಬ್ಯಾಂಕುಗಳು ನೀಡುತ್ತವೆ.
- ಅಲ್ಲದೆ ಅವು ಹುಂಡಿ ಗಳನ್ನು ವಟ್ಟಾಯಿಸುತ್ತವೆಯಲ್ಲದೇ ಡ್ರಾಫ್ಟುಗಳು, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳನ್ನೂ ನೀಡಿ ಸುಗಮ ವ್ಯವಹಾರಕ್ಕೆ ಇಂಬು ಕೊಡುತ್ತವೆ.

**3. ಆರ್‌ಬಿಐನ ಕಾರ್ಯಗಳು ಯಾವುವು?**

- ನೋಟು ಚಲಾವಣೆಯ ಏಕಸ್ವಾಮ್ಯ
- ಸರ್ಕಾರದ ಬ್ಯಾಂಕು ಆಗಿ ಕಾರ್ಯ ನಿರ್ವಹಣೆ
- ಬ್ಯಾಂಕುಗಳ ಬ್ಯಾಂಕು ಆಗಿ ಕಾರ್ಯ ನಿರ್ವಹಣೆ
- ರಾಷ್ಟ್ರೀಯ ಸಂದಾಯ ಕೇಂದ್ರವಾಗಿ ಕಾರ್ಯನಿರ್ವಹಣೆ
- ಸಾಲ ಪ್ರಮಾಣದ ನಿಯಂತ್ರಕ
- ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ
- ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ

**4. ಆರ್‌ಬಿಐ ಬಳಸುವ ಸಾಲ ನಿಯಂತ್ರಣ ಕ್ರಮಗಳನ್ನು ವಿವರಿಸಿ.**

- ಪರಿಮಾಣಾತ್ಮಕ ಸಾಲ ನಿಯಂತ್ರಣ ಕ್ರಮಗಳು:
- ಬ್ಯಾಂಕ್ ದರ
- ಮುಕ್ತ ಮಾರುಕಟ್ಟೆ ಕಾರ್ಯಾಚರಣೆ
- ಮೀಸಲು ಅನುಪಾತದ ಅವಶ್ಯಕತೆಯನ್ನು ಏರಿಳಿತಗೊಳಿಸುವುದು
- ಗುಣಾತ್ಮಕ ಸಾಲ ನಿಯಂತ್ರಣ ಕ್ರಮಗಳು
- ಮಾರ್ಜಿನ್ ಪ್ರಮಾಣದ ಬದಲಾವಣೆ
- ಸಾಲದ ಗರಿಷ್ಠ ಮಿತಿ ನಿಗದಿ ಅಥವಾ ಸಾಲದ ಪಡಿತರ
- ನೈತಿಕ ಒತ್ತಡ
- ನೇರ ಕ್ರಮ

**5. ಭಾರತದಲ್ಲಿ ಬಳಸಲಾಗುತ್ತಿರುವ ಹಣದ ಪೂರೈಕೆಯ ವಿವಿಧ ಪರಿಕಲ್ಪನೆಗಳನ್ನು ವಿವರಿಸಿ.**

- M1 = ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಬೇಡಿಕೆ ಠೇವಣಿಗಳು
- M2 = M1 + ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು
- M3 = M1 + ವಾಣಿಜ್ಯ ಬ್ಯಾಂಕುಗಳಲ್ಲಿರುವ ಮುದ್ದತ್ತು ಠೇವಣಿಗಳು
- M4 = M3 + ಅಂಚೆ ಕಛೇರಿಗಳಲ್ಲಿರುವ ಒಟ್ಟು ಠೇವಣಿಗಳು

# ಅಧ್ಯಾಯ – 4
# ಸಾರ್ವಜನಿಕ ಹಣಕಾಸು ಮತ್ತು ಆಯ-ವ್ಯಯ

**ಮುಖ್ಯಾಂಶಗಳು:**

- ಸರ್ಕಾರವು ಆಂತರಿಕ ಹಾಗೂ ವಿದೇಶಿ ಸಾಲಗಳ ಮೂಲಕ ಸಂಗ್ರಹಿಸುವ ಆದಾಯವನ್ನು **ಬಂಡವಾಳ ಆದಾಯ** ಎನ್ನುತ್ತಾರೆ.
- ಸರ್ಕಾರದ ಆದಾಯ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ **ಸಾರ್ವಜನಿಕ ಹಣಕಾಸು** ಆಗಿದೆ.
- ಭಾರತದಲ್ಲಿ ಕೇಂದ್ರ ಸರ್ಕಾರದ ಆಯ-ವ್ಯಯವನ್ನು **ಕೇಂದ್ರ ಹಣಕಾಸು** ಸಚಿವರು ಹಣಕಾಸು ಇಲಾಖೆಯ ಸಹಕಾರದೊಂದಿಗೆ ತಯಾರಿಸುತ್ತಾರೆ.
- ಆಯ-ವ್ಯಯದಲ್ಲಿ ಸರ್ಕಾರದ ಆದಾಯಕ್ಕಿಂತ ಅದರ ವೆಚ್ಚವು ಹೆಚ್ಚಾಗಿದ್ದರೆ ಅದನ್ನು **ಕೊರತೆಯ ಆಯ-ವ್ಯಯ** ಎಂದು ಕರೆಯುತ್ತಾರೆ.
- ಸರ್ಕಾರವು ತನ್ನ ವೆಚ್ಚಗಳನ್ನು ಭರಿಸಲು ವಿವಿಧ ಮೂಲಗಳಿಂದ ಹಣವನ್ನು ಸಂಗ್ರಹಿಸುತ್ತದೆ. ಇದನ್ನು **ಸಾರ್ವಜನಿಕ ಆದಾಯ** ಎನ್ನುತ್ತಾರೆ.
- ಸರ್ಕಾರವು ವಿವಿಧ ತೆರಿಗೆಗಳು & ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ಆದಾಯವನ್ನು**ಕಂದಾಯ ಆದಾಯ** ಎಂದು ಕರೆಯುತ್ತಾರೆ.
- ವ್ಯಕ್ತಿ ಅಥವಾ ಕುಟುಂಬದ ವರಮಾನ, ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿಕೊಡುವುದನ್ನು **'ವೈಯಕ್ತಿಕ ಹಣಕಾಸು'** ಎನ್ನುತ್ತೇವೆ.
- ಕೋಶೀಯ ಹೊಣೆಗಾರಿಕೆ ಮತ್ತು ಮುಂಗಡಪತ್ರ ನಿರ್ವಹಣೆ ಕಾಯ್ದೆ **2003** ರಲ್ಲಿ ಜಾರಿಗೆ ಬಂತು.

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸೂಕ್ತ ಉತ್ತರಗಳನ್ನು ಭರ್ತಿ ಮಾಡಿರಿ.**

1. ಸರ್ಕಾರವು ಸಾರ್ವಜನಿಕ ಹಣಕಾಸನ್ನು **ಕೋಶೀಯ** ನೀತಿಯ ಮೂಲಕ ನಿರ್ವಹಿಸುತ್ತದೆ.
2. ಆಯ-ವ್ಯಯದಲ್ಲಿ ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು **ಉಳಿತಾಯ ಆಯ-ವ್ಯಯ** ಎಂದು ಕರೆಯುತ್ತಾರೆ.
3. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕ ಸಭೆಯಲ್ಲಿ **ಹಣಕಾಸು ಸಚಿವರು** ಮಂಡಿಸುತ್ತಾರೆ.
4. ಜಿಎಸ್‌ಟಿ **ಜುಲೈ 1, 2017** ದಿನಾಂಕದಿಂದ ಜಾರಿಗೆ ಬಂದಿದೆ.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ.**
ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ ಸಾರ್ವಜನಿಕ ಹಣಕಾಸು.

**2. ಆಯವ್ಯಯ ಎಂದರೇನು?**
ಸರ್ಕಾರದ ಒಂದು ವರ್ಷದ ವರಮಾನ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು ಆಯ-ವ್ಯಯ ಪತ್ರ ಅಥವಾ ಮುಂಗಡ ಪತ್ರ ಎಂದು ಕರೆಯುತ್ತಾರೆ.

**3. ಕೊರತೆಯ ಆಯ-ವ್ಯಯದ ಅರ್ಥ ತಿಳಿಸಿರಿ.**
ವರಮಾನಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಕೊರತೆಯ ಆಯ-ವ್ಯಯ ಎನ್ನುವರು.

**4. ಪ್ರತ್ಯಕ್ಷ ತೆರಿಗೆ ಎಂದರೇನು?**
ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ತೆರಿಗೆಯನ್ನು ಪಾವತಿಸಿದರೆ, ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುತ್ತಾರೆ.

**5. ವಿತ್ತೀಯ ಕೊರತೆಯ ಸೂತ್ರ ಬರೆಯಿರಿ.**
ವಿತ್ತೀಯ ಕೊರತೆ = (ಕಂದಾಯ ವರಮಾನ + ಸಾಲೇತರ ಬಂಡವಾಳ ವರಮಾನ) – ಒಟ್ಟು ವೆಚ್ಚ

**III. ಮುಂದಿನ ಪ್ರಶ್ನೆಗಳಿಗೆ ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.**

**1. ಸಾರ್ವಜನಿಕ ವೆಚ್ಚದ ಏರಿಕೆಗೆ ಕಾರಣಗಳನ್ನು ವಿವರಿಸಿ**

- ಇಪ್ಪತ್ತನೆಯ ಶತಮಾನದಲ್ಲಿ ಸರ್ಕಾರದ ಪಾತ್ರಗಳ ವಿಸ್ತಾರವು ಅಧಿಕಗೊಂಡಿದ್ದರಿಂದ ಸಾರ್ವಜನಿಕ ವೆಚ್ಚವೂಏರಿಕೆಯಾಗಿದೆ.
- ಸಾರ್ವಜನಿಕ ವೆಚ್ಚವು ಆರ್ಥಿಕ ಅಭಿವೃದ್ಧಿಯನ್ನು ಪೋಷಿಸುವ ಸೌಕರ್ಯಗಳನ್ನು ಸೃಷ್ಟಿಸಿ ಪೊರೆಯಬೇಕಾಗುತ್ತದೆ.
- ಅದು ಬಂಡವಾಳ ಹೂಡಿಕೆಗೆ ಇರುವ ವಾತಾವರಣವನ್ನು ಸುಧಾರಿಸಬೇಕಾಗುತ್ತದೆ.
- ಉಳಿತಾಯ, ಹೂಡಿಕೆ ಮತ್ತು ಆವಿಷ್ಕಾರಗಳಿಗೆ ಉತ್ತೇಜಕಗಳನ್ನು ಒದಗಿಸಬೇಕಾಗುತ್ತದೆ.
- ಅಲ್ಲದೇ ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸಿ ಸ್ಥಿರತೆಯನ್ನೂ ಖಚಿತಪಡಿಸಬೇಕಾಗುತ್ತದೆ.

**2. ಸರ್ಕಾರವು ಯಾವ ವಿಧದ ತೆರಿಗೆಗಳನ್ನು ವಿಧಿಸುತ್ತದೆ?**
ಅ) ಪ್ರತ್ಯಕ್ಷ ತೆರಿಗೆಗಳು ಬ) ಪರೋಕ್ಷ ತೆರಿಗೆಗಳು.

**3. 2017-18ರ ಕೇಂದ್ರ ಸರ್ಕಾರದ ಆಯ-ವ್ಯಯದಲ್ಲಿ ಬಡ್ಡಿ ಪಾವತಿಯ ಪ್ರತಿಶತ ಪ್ರಮಾಣ ಎಷ್ಟು?**
**24.36%**

**4. ಕೇಂದ್ರ ಸರ್ಕಾರದ ತೆರಿಗೆಯೇತರ ವರಮಾನದ ಮೂಲಗಳನ್ನು ತಿಳಿಸಿ.**

1. ಭಾರತೀಯ ರಿಜರ್ವ್ ಬ್ಯಾಂಕು ಗಳಿಸುವ ಲಾಭ;
2. ಭಾರತೀಯ ರೈಲ್ವೆ ಗಳಿಸುವ ಲಾಭ;
3. ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ವರಮಾನ;
4. ಸಾರ್ವಜನಿಕ ಉದ್ಯಮಗಳು ಗಳಿಸುವ ವರಮಾನ;
5. ನಾಣ್ಯ ಮುದ್ರಣಾಲಯ ಮತ್ತು ಟಂಕಸಾಲೆಯಿಂದ ಬರುವ ವರಮಾನ;
6. ವಿವಿಧ ರೀತಿಯ ಶುಲ್ಕಗಳು, ದಂಡಗಳು; ಇತ್ಯಾದಿ.

**5. ಕೊರತೆಯ ಹಣಕಾಸು ಎಂದರೇನು? ಅದರ ವಿಧಗಳನ್ನು ತಿಳಿಸಿ.**

ಭಾರತೀಯ ರಿಜರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದು ಮತ್ತು ಹೊಸ ಹಣ ಸೃಷ್ಟಿಸುವುದನ್ನು ಕೊರತೆ ಹಣಕಾಸು ಎಂದು ಕರೆಯುತ್ತೇವೆ.

**i. ವಿತ್ತೀಯ ಕೊರತೆ (Fiscal Deficit):** ಆಯವ್ಯಯದಲ್ಲಿ ಸರ್ಕಾರದ ಕಂದಾಯ ವರಮಾನ ಮತ್ತು ಸಾಲೇತರ ಬಂಡವಾಳ ವರಮಾನಗಳಿಗಿಂತ ಸರ್ಕಾರದ ಒಟ್ಟು ವೆಚ್ಚ ಹೆಚ್ಚಾಗಿದ್ದರೆ, ಅದನ್ನು ವಿತ್ತೀಯ ಕೊರತೆ ಎನ್ನುತ್ತಾರೆ.

**ii. ರೆವೆನ್ಯೂ ಕೊರತೆ:** ರೆವೆನ್ಯೂ ಖಾತೆಯ ವೆಚ್ಚವು ರೆವೆನ್ಯೂ ಖಾತೆಯ ವರಮಾನಕ್ಕಿಂತ ಹೆಚ್ಚಾಗಿದ್ದಾಗ ರೆವೆನ್ಯೂ ಕೊರತೆ ಉಂಟಾಗುತ್ತದೆ.

**iii. ಪ್ರಾಥಮಿಕ ಕೊರತೆ:** ಚಾಲ್ತಿ ವರ್ಷದ ವಿತ್ತೀಯ ಕೊರತೆಯಿಂದ ಕಳೆದ ವರ್ಷದ ಬಡ್ಡಿ ಪಾವತಿಯನ್ನು ವಜಾಗೊಳಿಸಿದಾಗ ಪ್ರಾಥಮಿಕ ಕೊರತೆ ದೊರೆಯುತ್ತದೆ.

**iv. ಮುಂಗಡಪತ್ರ ಅಥವಾ ಆಯ-ವ್ಯಯ ಕೊರತೆ:** ಇದು ಒಟ್ಟಾರೆ ವರಮಾನ ಹಾಗೂ ವೆಚ್ಚಗಳ ನಡುವಿನ ಅಂತರವಾಗಿದೆ.

**6. ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳು ಯಾವುವು?**

i. ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುವುದು;
ii. ಉದ್ಯಮ, ವ್ಯವಹಾರ ಮತ್ತು ವಾಣಿಜ್ಯಗಳನ್ನು ಪ್ರೋತ್ಸಾಹಿಸುವುದು;
iii. ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು;
iv. ಸಮತುಲಿತ ಪ್ರಾದೇಶಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು;
v. ಸಾಮಾಜಿಕ-ಆರ್ಥಿಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು;
vi. ಸಂಪೂರ್ಣ ಉದ್ಯೋಗ ಸಾಧಿಸುವುದು; ಮತ್ತು
vii. ಸಾಮಾಜಿಕ ಕಲ್ಯಾಣವನ್ನು ಅಧಿಕಗೊಳಿಸುವುದು.

**7. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ**

- ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ ಸಾರ್ವಜನಿಕ ಹಣಕಾಸು.
- ಸರ್ಕಾರವು ಸಾಮಾನ್ಯವಾಗಿ ತಾನು ಸಂಗ್ರಹಿಸಿದ ವರಮಾನವನ್ನು ಅಥವಾ ಪಡೆದ ಸಾಲದ ಮೊತ್ತವನ್ನು ಅಭಿವೃದ್ಧಿ ಕಾರ್ಯಗಳ ಮೇಲೆ ವ್ಯಯಿಸುತ್ತದೆ.
- ಇದು ಬೆಳವಣಿಗೆ ದರವನ್ನು ವೃದ್ಧಿಸಿ ಎಲ್ಲರಿಗೂ ಪ್ರಯೋಜನ ದೊರಕಿಸುತ್ತದೆ.
- ಅದೇ ರೀತಿ ಆರ್ಥಿಕ ಹಿಂಜರಿತದ ಸಂದರ್ಭಗಳಲ್ಲಿ ವೆಚ್ಚವನ್ನು ಹಿಗ್ಗಿಸಿ, ಆರ್ಥಿಕ ಹಿಗ್ಗುವಿಕೆಯ ಸಂದರ್ಭಗಳಲ್ಲಿ ವೆಚ್ಚವನ್ನು ಕುಗ್ಗಿಸಿ, ಸರ್ಕಾರವು ಆರ್ಥಿಕ ಸ್ಥಿರತೆಯನ್ನು ಸಾಧಿಸುತ್ತದೆ.
- ಸರ್ಕಾರದ ವರಮಾನ, ವೆಚ್ಚ ಮತ್ತು ಅವುಗಳ ನಡುವಿನ ಹೊಂದಾಣಿಕೆಗಳು ವಾರ್ಷಿಕ ಆಯ-ವ್ಯಯ ಅಥವಾ ಮುಂಗಡ ಪತ್ರಗಳ ಭಾಗವಾಗಿರುವುದರಿಂದ, ಸಾರ್ವಜನಿಕ ಹಣಕಾಸಿನ ಅಧ್ಯಯನವು ಆಯ-ವ್ಯಯಗಸ ವಿಶ್ಲೇಷಣೆಗೂ ಸಹಾಯಕಾರಿಯಗುತ್ತದೆ

**8. ಆಯ-ವ್ಯಯ ಪತ್ರದ ವಿಧಗಳನ್ನು ವಿವರಿಸಿ**

- ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ, ಅದನ್ನು **ಉಳಿತಾಯ ಆಯ-ವ್ಯಯ** ಎನ್ನುವರು.
- ವರಮಾನಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು **ಕೊರತೆಯ ಆಯ-ವ್ಯಯ** ಎನ್ನುವರು.
- ವರಮಾನ ಮತ್ತು ವೆಚ್ಚಗಳೆರಡೂ ಸಮನಾಗಿದ್ದರೆ, ಅದನ್ನು **ಸಮತೋಲನ ಆಯ- ವ್ಯಯ** ಎನ್ನುವರು.

**9. ಪ್ರತ್ಯಕ್ಷ ತೆರಿಗೆ ಎಂದರೇನು ? ಅದರ ಮೂಲಗಳಾವುವು?**

ಸರಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿದ್ದರೆ ಅದನ್ನು ಪ್ರತ್ಯಕ್ಷ ತೆರಿಗೆ ಎನ್ನುತ್ತಾರೆ. ಅದರ ಮೂಲಗಳೆಂದರೆ, 1. ಆದಾಯ ತೆರಿಗೆ 2. ಕಂಪನಿ ತೆರಿಗೆ 3. ಸಂಪತ್ತು ತೆರಿಗೆ 4. ಇತರೆ ತೆರಿಗೆಗಳು.

**10. ಹಣಕಾಸು ವರ್ಷ ಎಂದರೇನು? ಭಾರತದ ಹಣಕಾಸು ವರ್ಷವು ಯಾವಾಗ ಪ್ರಾರಂಭವಾಗಿ ಯಾವಾಗ ಮುಕ್ತಾಯವಾಗುತ್ತದೆ?**

ಭಾರತದಲ್ಲಿ ಪ್ರತೀ ವರ್ಷದ ಏಪ್ರಿಲ್ 1 ರಿಂದ ಪ್ರಾರಂಭವಾಗಿ ಅದರ ಮುಂದಿನ ವರ್ಷದ ಮಾರ್ಚ್31 ರಂದು ಮುಕ್ತಾಯವಾಗುವ ಸರ್ಕಾರದ ಹಣಕಾಸಿನ ಅವಧಿಯನ್ನು ಹಣಕಾಸು ವರ್ಷ ಎನ್ನುವರು.

**11. ಬಂಡವಾಳ ವೆಚ್ಚ ಎಂದರೇನು?**
ಕೃಷಿ, ಕೈಗಾರಿಕೆ, ಸಾರಿಗೆ, ವಿದ್ಯುತ್, ನೀರಾವರಿ ಯೋಜನೆಗಳು ಮುಂತಾದ ಕ್ಷೇತ್ರಗಳ ಅಭಿವೃದ್ಧಿಗಾಗಿ ಮತ್ತು ಹೊಸ ಆಸ್ತಿಗಳ ನಿರ್ಮಾಣಕ್ಕಾಗಿ ಸರ್ಕಾರವು ಹೊಸದಾಗಿ ಬಂಡವಾಳ ಹೂಡಲು ಮುಂದಾಗುತ್ತದೆ. ಇಂತಹ ವೆಚ್ಚಕ್ಕೆ ಬಂಡವಾಳ ವೆಚ್ಚ ಎನ್ನುತ್ತಾರೆ.

**12. ಹೂಡಿಕೆ ಹಿಂತೆಗೆತ ಎಂದರೇನು?**
ಸರ್ಕಾರವು ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿರುವ ತನ್ನ ಬಂಡವಾಳವನ್ನು ಹಿಂದಕ್ಕೆ ಪಡೆಯುತ್ತದೆ. ಇದಕ್ಕೆ ಹೂಡಿಕೆ ಹಿಂತೆಗೆತ ಎನ್ನುತ್ತಾರೆ.

**13. ವಿತ್ತೀಯ ಕೊರತೆ ಎಂದರೇನು?**
ಆಯವ್ಯಯದಲ್ಲಿ ಕಂದಾಯ ಆದಾಯ ಮತ್ತು ಸಾಲೇತರ ಬಂಡವಾಳ ಆದಾಯಗಳಿಗಿಂತ ಸರ್ಕಾರದ ಒಟ್ಟು ವೆಚ್ಚ ಹೆಚ್ಚಾಗಿದ್ದರೆ, ಅದನ್ನು ವಿತ್ತೀಯ ಕೊರತೆ ಎನ್ನುತ್ತಾರೆ.

**14. ತೆರಿಗೆ ಎಂದರೇನು?**
ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆಯನ್ನು ತೆರಿಗೆ ಎನ್ನುವರು.

**15. ಪರೋಕ್ಷ ತೆರಿಗೆ ಎಂದರೇನು? ಅದರ ಮೂಲಗಳಾವುವು?**
ಸರ್ಕಾರವು ವಿಧಿಸುವ ತೆರಿಗೆಯ ಹೊರೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿದ್ದರೆ ಅಂತಹ ತೆರಿಗೆಯನ್ನು ಪರೋಕ್ಷ ತೆರಿಗೆ ಎನ್ನುವರು.
ಅದರ ಮೂಲಗಳೆಂದರೆ, 1. ಕೇಂದ್ರ ಅಬಕಾರಿ ತೆರಿಗೆ 2.ಆಮದು– ರಫ್ತು ತೆರಿಗೆ
3. ಸೇವಾ ತೆರಿಗೆ 4. ಇತರೆ ತೆರಿಗೆಗಳು

**16. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಯಾವ ಬಗೆಯ ಮುಂಗಡ ಪತ್ರ ಸೂಕ್ತವಾದುದು?**
ಇಂತಹ ರಾಷ್ಟ್ರಗಳಿಗೆ ಕೊರತೆ ಆಯವ್ಯಯ ಮುಂಗಡ ಪತ್ರ ಸೂಕ್ತವಾದುದು.

**17. ತೆರಿಗೆ ಆದಾಯ ಎಂದರೇನು ? ಅದರ ವಿಧಗಳಾವುವು?**
ಪ್ರಜೆಗಳು ಯಾವುದೇ ಪ್ರತಿಪಲಾಕ್ಷೆಯಿಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆಯನ್ನು ತೆರಿಗೆ ಆದಾಯ ಎನ್ನುವರು.
ಅದರ ವಿಧಗಳೆಂದರೆ, 1. ಪ್ರತ್ಯಕ್ಷ ತೆರಿಗೆ 2. ಪರೋಕ್ಷ ತೆರಿಗೆ

# ವ್ಯವಹಾರ ಅಧ್ಯಯನ

## ಅಧ್ಯಾಯ – 3

## ವ್ಯವಹಾರದ ಜಾಗತೀಕರಣ (Globalization)

**I. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1. ಜಾಗತೀಕರಣದಿಂದಾಗುವ ಅನುಕೂಲಗಳಾವುವು?**
**( ಸಕಾರಾತ್ಮಕ ಪರಿಣಾಮಗಳು )**

- ಜಾಗತೀಕರಣವು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿ, ಹೆಚ್ಚಿನ ಸರಕು & ಸೇವೆಗಳು ಉತ್ಪಾದನೆಯಾಗಲು ಸಹಾಯ ಮಾಡುತ್ತದೆ.
- ಜಾಗತೀಕರಣದಿಂದ ಪ್ರಪಂಚದಾದ್ಯಂತ ಒಂದೇ ರೀತಿಯ ವಸ್ತುಗಳು ದೊರಕಲು ಸಾಧ್ಯವಾಗುತ್ತದೆ.
- ಜಾಗತೀಕರಣವು ದೇಶದ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ.
- ಜಾಗತೀಕರಣವು ಒಂದು ದೇಶದ ಜನರ ವರಮಾನವನ್ನು ಹೆಚ್ಚಿಸುತ್ತದೆ.
- ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿ ಉಂಟಾಗಿ ಸರಕುಗಳ ಬೆಲೆಗಳು ಕಡಿಮೆ ಇರುತ್ತವೆ.
- ಬೇರೆ ಬೇರೆ ದೇಶಗಳ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕುವದರಿಂದ ಜನರಿಗೆ ವಸ್ತುಗಳ
- ಆಯ್ಕೆಯಲ್ಲಿ ವಿಶಾಲತೆ ಕಂಡುಬರುತ್ತದೆ.

**2. ಜಾಗತೀಕರಣವು ವಿಶ್ವದಲ್ಲಿ ಆರ್ಥಿಕ ಚಲನೆಗೆ ಹೇಗೆ ಸಹಾಯಕವಾಗಿದೆ? ಅಥವಾ ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳಾವುವು?**

- ರಾಜಕೀಯ ಅರಿಕೆಗಳಿಂದ ಗಡಿಭಾಗಗಳ ಸಂಬಂಧಗಳ ಮೂಲಕ ಅಂತರಾಷ್ಟ್ರೀಯ ಬಂಡವಾಳ & ವ್ಯಾಪಾರವನ್ನು ಪ್ರೋತ್ಸಾಹಿಸುವದು.
- ಆಮದು & ರಫ್ತುಗಳ ಸುಂಕಗಳನ್ನು ನಿರ್ಮೂಲನ ಮಾಡಿ ಮುಕ್ತ ವಲಯಗಳನ್ನು ಸೃಷ್ಟಿಸುವದು.
- ಬಂಡವಾಳ ಹತೋಟಿಯನ್ನು ಕಡಿಮೆಮಾಡುವದು. ಅಥವಾ ನಿರ್ಮೂಲನ ಮಾಡುವದು.
- ಸಾರಿಗೆ ವೆಚ್ಚವನ್ನು ಸಮುದ್ರಯಾನದಲ್ಲಿ ಕಂಟೈನರ್ ಸೇವೆಗೆ ಅಳವಡಿಕೆಯಿಂದ ಕಡಿಮೆ ಮಾಡುವದು.

**3. ವಿಶ್ವ ವ್ಯಾಪಾರ ಸಂಘಟನೆಯ ಗುರಿಗಳು ಯಾವುವು?**

- ಜೀವನ ವೆಚ್ಚವನ್ನು ಕಡಿಮೆಮಾಡಿ ಸದಸ್ಯ ರಾಷ್ಟ್ರಗಳಜನರ ಜೀವನಮಟ್ಟ ಹೆಚ್ಚಿಸುವುದು.
- ಸದಸ್ಯ ರಾಷ್ಟ್ರಗಳ ನಡುವೆ ಉದ್ಭವಿಸುವ ವ್ಯಾಪಾರ ವ್ಯಾಜ್ಯಗಳನ್ನು ಬಗೆಹರಿಸುವುದು.
- ಸದಸ್ಯ ರಾಷ್ಟ್ರಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಿ ಹೆಚ್ಚು ಉದ್ಯೋಗವಕಾಶಗಳನ್ನು ಕಲ್ಪಿಸುವುದು.

- ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವೆಚ್ಚಗಳನ್ನು ಕಡಿಮೆ ಮಾಡುವುದು.
- ಸದಸ್ಯ ರಾಷ್ಟ್ರಗಳಲ್ಲಿ ಉತ್ತಮ ಸರ್ಕಾರ ರಚಿಸಲು ಸಹಾಯ ಮಾಡುವುದು.
- ಸದಸ್ಯ ರಾಷ್ಟ್ರಗಳಲ್ಲಿ ಶಾಂತಿ, ಸ್ಥಿರತೆ ಅಥವಾ ದೃಡತೆ ಕಾಪಾಡಲು ಸಹಕರಿಸುವುದು.

**4. ಜಾಗತೀಕರಣ ಎಂದರೇನು? ವಿವರಿಸಿ.**

ಜಾಗತೀಕರಣವೆಂದರೆ ಸರಕು & ಸೇವೆಗಳು ಹಾಗೂ ಅಂತರಾಷ್ಟ್ರೀಯ ಬಂಡವಾಳದ ಹರಿವು, ತೀವ್ರ & ವ್ಯಾಪಕವಾದ ತಾಂತ್ರಿಕತೆಯ ಪ್ರಸರಣದ ಮೂಲಕ ಇಡಿ ವಿಶ್ವವನ್ನೇ ಒಂದು ಮಾರುಕಟ್ಟೆಯಾಗಿಸಿಕೊಂಡು ಕಚ್ಚಾ ವಸ್ತುಗಳು ಮತ್ತು ಇತರ ಸಂಪನ್ಮೂಲಗಳನ್ನು ವಿಶ್ವದ ಅಗ್ಗದ ಮಾರುಕಟ್ಟೆಯಿಂದ ಪಡೆಯುವದು ಎಂದರ್ಥ.

**5. ಜಾಗತೀಕರಣದಿಂದ ಉಂಟಾಗುವ ನಕರಾತ್ಮಕ ಪರಿಣಾಮಗಳನ್ನು ಉದಾಹರಣೆಯೊಂದಿಗೆ ವಿವರಿಸಿ.**

- ಜಾಗತೀಕರಣದಿಂದ ವಿಶ್ವಮಾರುಕಟ್ಟೆಯಲ್ಲಿ ತೀವ್ರವಾದ ಪೈಪೋಟಿ ಉಂಟಾಗಿ ಅನೇಕ ನೀತಿಬಾಹಿರ ಪದ್ದತಿಗಳು ವ್ಯವಹಾರ ವಹಿವಾಟುಗಳಲ್ಲಿ ರೂಡಿಗೆ ಬರುವ ಸಾಧ್ಯತೆ ಇದೆ.
- ಜಾಗತೀಕರಣದಿಂದಾಗಿ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಾಡಾಗುವ ಸಾಧ್ಯತೆ ಉಂಟಾಗಿದೆ.
- ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾರೆ. ಬಡವರು ಒಂದು ಊಟಕ್ಕೂ ಶ್ರಮಪಡಬೇಕಾಗುತ್ತದೆ.
- ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗಿದೆ.
- ಅಗ್ಗದ ವಸ್ತುಗಳ ಆಮದಿನಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಉತ್ಪಾದನೆಯು ಕಡಿಮೆಯಾಗಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತದೆ.

**6. ಜಾಗತೀಕರಣದಲ್ಲಿ ಗುರುತಿಸಬಹುದಾದ ಲಕ್ಷಣಗಳನ್ನು ಪಟ್ಟಿಮಾಡಿ.**

- ಜಾಗತೀಕರಣವು ವಿಶ್ವದ ಆರ್ಥಿಕತೆಯ ಏಳಿಗೆಗಿಂತ ತೀವ್ರವಾದ ಅಂತರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ.
- ಅಂತರಾಷ್ಟ್ರೀಯ ಬಂಡವಾಳವನ್ನು ವೃದ್ಧಿಸಿ ಬಂಡವಾಳದ ಹರಿವನ್ನು ಮತ್ತು ಬಂಡವಾಳದ ನೇರ ಹೂಡಿಕೆಯನ್ನು ಹೆಚ್ಚಿಸುತ್ತದೆ.
- ವಿಶ್ವ ಹಣಕಾಸಿನ ನೀತಿಯನ್ನು ಅಭಿವೃದ್ಧಿಪಡಿಸುತ್ತದೆ.
- ಅಂತರಾಷ್ಟ್ರೀಯ ಸಂಸ್ಥೆಗಳಾದ ವಿಶ್ವವ್ಯಾಪಾರ ಸಂಘಟನೆ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿಗಳ ಪಾತ್ರ ಹಚ್ಚಿಸುತ್ತದೆ.
- ಅಂತರಾಷ್ಟ್ರೀಯ ಸಂಚಾರ & ಪರ್ಯಟನೆಗಳಿಗೆ ಅವಕಾಶಗಳನ್ನು ಒದಗಿಸುತ್ತದೆ.
- ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೂ ಹಬ್ಬಲು ಸಾಧ್ಯವಾಗುತ್ತದೆ.

**7. ವಿಶ್ವವ್ಯಾಪಾರ ಸಂಘಟನೆಗಳ ಉದ್ದೇಶಗಳು ಯಾವುವು?**

- ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವದು.
- ಬಹುಪಕ್ಷೀಯ ವ್ಯಾಪಾರ ವ್ಯವಹಾರಗಳ ನಡುವೆ ಮಧ್ಯವರ್ತಿಯಾಗಿ ಕೆಲಸಮಾಡುವದು.
- ವಿಶ್ವದಾದ್ಯಂತ ಮುಕ್ತ ಹಾಗೂ ಸ್ವತಂತ್ರ ಅಂತರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು ನೀಡುವದು.
- ವಿವಿಧ ದೇಶಗಳ ನಡುವೆ ಉದ್ಭವಿಸುವ ವ್ಯಾಪಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಬರೆಹರಿಸುವದು.
- ಅಂತರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಯನ್ನು ಕಡಿಮೆ ಮಾಡುವದು.
- ಅಂತರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೊಳಪಡಿಸುವದು.
- ಅಂತರಾಷ್ಟ್ರೀಯ ವ್ಯಾಪಾರದಿಂದ ಹಿಂದುಳಿದ ರಾಷ್ಟ್ರಗಳು ಹೆಚ್ಚು ಪ್ರಯೋಜನ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

**8. ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗಿದೆ.ಹೇಗೆ?**

- ಕೈಗಾರಿಕೆಗಳಿಗೆ ಬೇಕಾದ ಕಚ್ಚಾಪದಾರ್ಥಗಳನ್ನು ನೈಸರ್ಗಿಕ ಸಂಪನ್ಮೂಲಗಳಿಂದ ಪಡೆಯುವುದರಿಂದ ಭೂಖಂಡದಲ್ಲಿ ಮಾಲಿನ್ಯವು ಹೆಚ್ಚಾಗಿ ನಾವು ಉಸಿರಾಡುವ ವಾಯು ಕೂಡ ಮಾಲಿನ್ಯದಿಂದ ಕೂಡಿ ಬದುಕುಳಿಯಲು ಕಷ್ಟಸಾಧ್ಯವಾಗುತ್ತದೆ

**9. ಜಾಗತೀಕರಣದಿಂದ ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.ಹೇಗೆ?**

- ಶೀಘ್ರ ಆಹಾರ ಸರಪಳಿಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚಾಗಿ ಹರಡುತ್ತವೆ. ಉದಾ : K.F.C. McDonald etc.
- ಇದರಿಂದಾಗಿ ಪ್ರಯೋಜನಕಾರಿಯಲ್ಲದ ಆಹಾರ (Junk food) ಸೇವನೆ ಜಾಸ್ತಿಯಾಗುತ್ತದೆ ಹಾಗೂ ಜನರ ಆರೋಗ್ಯದ ಅವನತಿ ಉಂಟಾಗಿ ಅನೇಕ ರೋಗ ರುಜಿನಗಳಿಗೆ ಎಡೆಮಾಡಿಕೊಡುತ್ತದೆ.
- ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.

**10. ವಿಶ್ವ ವ್ಯಾಪಾರ ಸಂಘಟನೆ ಯಾವಾಗ ಅಸ್ಥಿತ್ವಕ್ಕೆ ಬಂದಿತು?**

ಇದು 1995ರ ಜನವರಿ 1 ರಂದು ಅಸ್ಥಿತ್ವಕ್ಕೆ ಬಂದಿತು. 149 ದೇಶಗಳು ಈ ಸಂಘಟನೆಯ ಸದಸ್ಯ ರಾಷ್ಟ್ರಗಳಾಗಿವೆ.

**11. ವಿಶ್ವ ವ್ಯಾಪಾರ ಸಂಘಟನೆ ಕೇಂದ್ರ ಕಛೇರಿ ಎಲ್ಲಿದೆ?**

ಜಿನೇವಾ

# ಅಧ್ಯಾಯ – 4
# ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಗ್ರಾಹಕನಿಗಿರುವ ಮತ್ತೊಂದು ಹೆಸರು **ಮಾರುಕಟ್ಟೆಯ ರಾಜ** .
2. ಹಣಪಡೆದು ವಸ್ತು ಅಥವಾ ಸೇವೆಯನ್ನು ನೀಡುವಾತ **ಗ್ರಾಹಕ** .
3. ಪ್ರತಿವರ್ಷ ವಿಶ್ವ ಗ್ರಾಹಕರ ದಿನವನ್ನು **ಮಾರ್ಚ 15** ರಂದು ಆಚರಿಸುತ್ತೇವೆ.
4. ವಿಶ್ವಗ್ರಾಹಕ ಆಂದೋಲನದ ಚರಿತ್ರೆಯಲ್ಲಿ **ಮಾರ್ಚ್ 15, 1962** ಒಂದು ಮಹತ್ವದ ದಿನವಾಗಿದೆ.
5. ಪರಿಹಾರ ಮೊತ್ತವು 20 ಲಕ್ಷ ರೂಪಾಯಿಗಳನ್ನು ಮೀರಿದ್ದರೆ ದೂರನ್ನು **ರಾಜ್ಯ** ಆಯೋಗಕ್ಕೆ ಸಲ್ಲಿಸಬೇಕು.
6. ಪರಿಹಾರ ಮೊತ್ತವು ಒಂದು ಕೋಟಿ ರೂಪಾಯಿಗಿಂತ ಮೀರಿದ್ದರೆ ದೂರನ್ನು **ರಾಷ್ಟ್ರೀಯ** ಆಯೋಗಕ್ಕೆ ಸಲ್ಲಿಸಬೇಕು.

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಗ್ರಾಹಕ ಎಂದರೆ ಯಾರು?**

ಗ್ರಾಹಕರೆಂದರೆ ವಸ್ತುಗಳನ್ನು ಕೊಳ್ಳುವವರು ಅಥವಾ ಸೇವೆಗಳನ್ನು ಬೆಲೆಯ ರೂಪದಲ್ಲಿ ಹಣ ಅಥವಾ ವೇತನ ಪ್ರತಿಫಲಕೊಟ್ಟು ಕೆಲಸ ಮಾಡಿಸಿಕೊಳ್ಳುವವರಾಗಿದ್ದಾರೆ ಅಥವಾ ಪದಾರ್ಥಗಳನ್ನು ಬಳಸಿಕೊಳ್ಳುವವರಾಗಿದ್ದಾರೆ

**2. ಗ್ರಾಹಕ ಆಂದೋಲನದ ಮೂಲ ಆಶಯ ಯಾವುದು?**

ಗ್ರಾಹಕ ಆಂದೋಲನದ ಮೂಆಲಿಯ ನಿರಂತರ ಶೋಷಣೆಯಿಂದ ಗ್ರಾಹಕರ ರಕ್ಷಣೆ

**3. ಪ್ರತಿಯೊಬ್ಬ ಗ್ರಾಹಕನಿಗಿರುವ ಹಕ್ಕು ಯಾವುದು?**

ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.

**4. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಯಾವಾಗ ಜಾರಿಗೆ ಬಂತು?**

**1986**

**5. ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ?**

ರಾಜ್ಯ ಸರ್ಕಾರ

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು?**

- ಪದಾರ್ಥಗಳಿಗೆ ಅಧಿಕ ಬೆಲೆ ವಿಧಿಸುವುದು.
- ತೂಕ ಮತ್ತು ಅಳತೆಗಳಲ್ಲಿ ಮೋಸ.
- ಕಲಬೆರಕೆ ವಸ್ತುಗಳ ಮಾರಾಟ.
- ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಪರಿಸ್ಥಿತಿಯನ್ನು ಉಂಟುಮಾಡಿ ಅಧಿಕ ಲಾಭ ಗಳಿಸುವುದು.

**2. ಬಳಕೆದಾರರ ಶೋಷಣೆಗೆ ಕಾರಣಗಳಾವುವು?**

- ಒಂದು ಹಂತದಲ್ಲಿ ಉತ್ಪಾದಕರು ಸೇವೆ ಮತ್ತು ಸರಕುಗಳನ್ನು ಗ್ರಾಹಕರಿಗೆ ನೇರವಾಗಿ ತಲುಪಿಸುತ್ತಿದ್ದರು. ಉದಾಹರಣೆಗೆ: ಹಾಲು, ಹಣ್ಣು,ತರಕಾರಿ ಮುಂತಾದವು. ಇಲ್ಲಿ ಮಧ್ಯವರ್ತಿಗಳ ಹಾವಳಿ ಇರಲಿಲ್ಲ.
- ಬೇಸಾಯದ ಉದ್ಯಮ ಹಲವು ರೀತಿಗಳಲ್ಲಿ ಬೆಳೆದಂತೆ ಮಾರಾಟ ವಿಧಾನವು ಬದಲಾಯಿತು.
- ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿ ಇವರಿಬ್ಬರ ನಡುವೆ ನೇರ ವ್ಯವಹಾರ ಇಲ್ಲವಾಯಿತು.
- ಉತ್ಪಾದಕರು ಹಾಗೂ ಗ್ರಾಹಕರು ಕೂಡಿ ನಿರ್ಧರಿಸಬೇಕಾದ ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸತೊಡಗಿದರು.
- ಇದರಿಂದ ಗ್ರಾಹಕರಿಗೆ ಕಷ್ಟ ನಷ್ಟ ಮತ್ತು ಸಮಸ್ಯೆಗಳಾದವು.

**3. ಗ್ರಾಹಕ ಸಂರಕ್ಷಣಾ ಕಾಯ್ದೆಯ ನಾಲ್ಕು ಮುಖ್ಯ ಉದ್ದೇಶಗಳನ್ನು ತಿಳಿಸಿರಿ.**

- ಗ್ರಾಹಕ ಸಂರಕ್ಷಣಾ ಕಾಯ್ದೆಯು ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ ನೀಡುವುದು.
- ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ತಪ್ಪಿಸುವುದು.
- ಮಾರುಕಟ್ಟೆಯಲ್ಲಿ ನಡೆಯಬಹುದಾದ ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು.
- ಗುಣಮಟ್ಟ, ಅಳತೆ, ತೂಕ, ಬೆಲೆ ಇತ್ಯಾದಿಗಳ ಮೇಲೆ ನಿಗಾವಹಿಸುವುದು.
- ಬಳಕೆದಾರರು ತಾವು ಖರೀದಿಸುವ ವಸ್ತು ಅಥವಾ ಸೇವೆಗಳಿಂದ ತೊಂದರೆಗೆ ಒಳಗಾದಲ್ಲಿ ಅವರಿಗೆ
- ಸೂಕ್ತ ಪರಿಹಾರ ಕೊಡಿಸುವುದು.
- ಗ್ರಾಹಕ ಶಿಕ್ಷಣ ನೀಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.

**4. ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮುಖ್ಯ ಕಾರ್ಯವೇನು?**

- ನಿರಂತರ ಶೋಷಣೆಯಿಂದ ಬಳಕೆದಾರರ ಅಸಹಾಯಕತೆಯನ್ನು ಅರಿತು ಗ್ರಾಹಕರ ಪರವಾದ ಹೋರಾಟ, ಚಳವಳಿಗಳನ್ನು ನಡೆಸುವುದು.
- ಗ್ರಾಹಕರ ಹಿತಾಸಕ್ತಿಗಳನ್ನು ಕಾಪಾಡುವುದು.

**5. ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿರಿ.**

i) ಜಿಲ್ಲಾ ವೇದಿಕೆ (District Forum)

ii) ರಾಜ್ಯ ಆಯೋಗ (State commission)

iii) ರಾಷ್ಟ್ರೀಯ ಆಯೋಗ (National Commission)

**6. ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು?**

- ದೂರುಗಳು ಕೈಬರಹದ ಅಥವ ಬೆರಳಚ್ಚಿನ ಮಾದರಿಯಲ್ಲಿರಬೇಕು.
- ಈ ಮಾಹಿತಿಯಲ್ಲಿ ದೂರುಕೊಡುವವನ ಹೆಸರು, ವಿಳಾಸ ಮತ್ತು ದೂರವಾಣಿಯ ಸಂಖ್ಯೆ ಸರಿಯಾಗಿ ನಮೂದಿಸಿರಬೇಕು.
- ಯಾವ ವ್ಯಾಪಾರಿ ಅಥವಾ ಪೂರೈಕೆದಾರನ ವಿರುದ್ಧ ದೂರುಕೊಡಬೇಕೆಂಬುದನ್ನು ಪೂರ್ಣವಾಗಿ ನಮೂದಿಸಿರಬೇಕು.
- ಯಾವ ವಸ್ತುವಿನಿಂದ ನಷ್ಟವಾಗಿದೆ ಅಥವಾ ಮೋಸವಾಗಿದೆ ಎಂಬುದು ಮತ್ತು ನಷ್ಟ ಹೊಂದಿರುವ ಮೊಬಲಗೆಷ್ಟೆಂಬುದನ್ನು ಸರಿಯಾಗಿ ನಮೂದಿಸಿರಬೇಕು.
- ನಷ್ಟದ ಸೂಕ್ತ ಪರಿಹಾರದ ಮೊಬಲಗು ಹಾಗೂ ಇದಕ್ಕೆ ಸಂಬಂಧಪಟ್ಟ ರಸೀತಿ ಅಥವ ಬಿಲ್ಲನ್ನು ಲಗತ್ತಿಸಬೇಕು.
- ದೂರಿಗೆ ಯಾವುದೇ ಶುಲ್ಕ ಅಥವಾ ನೋಂದಾವಣಿ ಶುಲ್ಕ ಇರುವುದಿಲ್ಲ.
- ಗ್ರಾಹಕನೇ ನೇರವಾಗಿ ತನ್ನ ದೂರನ್ನು ಅಧ್ಯಕ್ಷರ ಮುಂದೆ ವಾದಿಸಬಹುದು ವಕೀಲರು ಬೇಕಾಗಿಲ್ಲ.

**7. ಗ್ರಾಹಕರ ಹಕ್ಕುಗಳನ್ನು ತಿಳಿಸಿ.**

- ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.
- ಮಾಹಿತಿ ಪಡೆಯುವ ಹಕ್ಕು.
- ವಸ್ತುಗಳ ಆಯ್ಕೆಯ ಹಕ್ಕು.
- ವಸ್ತುಗಳ ಬಗ್ಗೆ ಆಲಿಸುವ ಹಕ್ಕು.
- ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು.
- ಗ್ರಾಹಕ ಶಿಕ್ಷಣದ ಹಕ್ಕು.
- ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು ಮತ್ತು ಜೀವನ ರೀತಿಗಳನ್ನು ಉತ್ತಮ ಪಡಿಸಿಕೊಳ್ಳುವ ಹಕ್ಕು.

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ
## ಮಾದರಿ ಪ್ರಶ್ನೆಪತ್ರಿಕೆ : 2018–19
## ವಿಷಯ: ಸಮಾಜ ವಿಜ್ಞಾನ

**ಒಟ್ಟು ಪ್ರಶ್ನೆಗಳ ಸಂಖ್ಯೆ: 47** | **ವಿಷಯ ಸಂಕೇತ: 85ಕೆ**

**ಸಮಯ: 3 ಗಂಟೆ** | **ಗರಿಷ್ಠ ಅಂಕಗಳು: 80**

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ. ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

**1*10=10**

1. ಎರಡನೇ ಭಾಜೀರಾಯನು ಸಹಾಯಕ ಸೈನ್ಯ ಪದ್ಧತಿಗೆ ಒಳಪಡಲು ಕಾರಣ
   ಎ) ಹೊಳ್ಕರನ ಸೈನ್ಯ ಎರಡನೇ ಬಾಜೀರಾಯನ ಸೈನ್ಯವನ್ನು ಸೋಲಿಸಿತು.
   ಬಿ) ಮರಾಠ ಮನೆತನಗಳ ನಾಯಕರಲ್ಲಿ ಸಂಘರ್ಷವಿತ್ತು.
   ಸಿ) ಪಶ್ಚಿಮ ಸೈನ್ಯವನ್ನು ಲಾರ್ಡ್‌ವೆಲ್ಲೆಸ್ಲಿ ಸೋಲಿಸಿದನು.
   **ಡಿ) ಪೇಶ್ವೆ ಎರಡನೇ ಭಾಜೀರಾಯನು ಬ್ರಿಟೀಷರಿಂದ ಸೋಲನ್ನನುಭವಿಸಿದನು.**

2. 1905 ರಲ್ಲಿ ಬಂಗಾಳವನ್ನು ವಿಭಜಿಸಲು ಕಾರಣ
   **ಎ) ಹಿಂದೂ ಮುಸಲ್ಮಾನರನ್ನು ಬೇರ್ಪಡಿಸುವುದು.**
   ಬಿ) ಬ್ರಿಟೀಷರ ವಿರುದ್ಧ ಹೋರಾಟಗಳನ್ನು ಧಮನಗೊಳಿಸುವುದು.
   ಸಿ) ಪಶ್ಚಿಮ ಬಂಗಾಳ ಭಾಗವನ್ನು ಅಭಿವೃದ್ಧಿಗೊಳಿಸುವುದು.
   ಡಿ) ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸುವುದು.
3. (ಯು.ಎಸ್.ಎಸ್.ಆರ್.) ಸೋವಿಯಟ್ ರಷ್ಯಾದಲ್ಲಿ ಸಮಾಜವಾದ ಕುಸಿಯಲು ಕಾರಣ
   **ಎ) ಗೋರ್ಬೆಚೋವ್‌ನ ಸುಧಾರಣೆಗಳು**
   ಬಿ) ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದ
   ಸಿ) ಅಕ್ಟೋಬರ್ ಕ್ರಾಂತಿ
   ಡಿ) ಸಮಾಜವಾದಿ ರಾಷ್ಟಗಳ ಬಣದ ನಾಯಕತ್ವ ಜೋಸೆಫ್ ಸ್ಟಾಲಿನ್ ವಹಿಸಿದ್ದು

4. ಭಾರತದ ವಿದೇಶಾಂಗ ನೀತಿ ವಸಾಹತುಶಾಹಿತ್ವವನ್ನು ವಿರೋಧಿಸುತ್ತದೆ. ಏಕೆಂದರೆ ಭಾರತ
   **ಎ) ಆಂಗ್ಲರ ಆಡಳಿತದಿಂದ ಅದನ್ನು ಅನುಭವಿಸಿತ್ತು.**
   ಬಿ) ಪಂಚಶೀಲ ತತ್ವಗಳಿಗೆ ಸಹಿ ಹಾಕಿತು.
   ಸಿ) ತೃತೀಯ ಜಗತ್ತಿನ ನಾಯಕ
   ಡಿ) ಯುರೋಪಿಯನ್ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿದೆ.
5. ಭದ್ರತಾ ಸಮಿತಿಯು ವಿಶ್ವ ಸಂಸ್ಥೆಯ ಕ್ಯಾಬಿನೆಟ್‌ನಂತೆ ಕಾರಣ
   **ಎ) ಐದು ಕಾಯಂ ಸದಸ್ಯರನ್ನು ಹೊಂದಿದೆ.**
   ಬಿ) ಹತ್ತು ಹಂಗಾಮಿ ಸದಸ್ಯರನ್ನು ಹೊಂದಿದೆ.
   ಸಿ) ವಿಶೇಷ ಮತ ಚಲಾಯಿಸುವ ಅಧಿಕಾರ ಹೊಂದಿದೆ.
   ಡಿ) ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುತ್ತದೆ.

6. ಇತ್ತೀಚಿನ ದಿನಗಳಲ್ಲಿ ಭಾರತದಿಂದ ಮೈಕಾ ರಫ್ತು ಪ್ರಯಾಣ ಕಡಿಮೆಯಾಗಿದೆ. ಕಾರಣ
   ಎ) ಮೈಕಾದ ಉತ್ಕೃಷ್ಟತೆ ಕಡಿಮೆಯಾಗಿದೆ.
   **ಬಿ) ಕೃತಕ ಅಬ್ರಕದ ಉತ್ಪಾದನೆಯಿಂದ**
   ಸಿ) ಮೈಕಾ ನಿಕ್ಷೇಪಗಳು ಖಾಲಿಯಾಗಿವೆ.
   ಡಿ) ಮೈಕಾದ ಬಳಕೆ ನಿಷೇಧಿಸಲ್ಪಟ್ಟಿದೆ.

7. ಶಿವರಾಂ ಕಾರಂತರ ನೇತೃತ್ವದಲ್ಲಿ ಕರ್ನಾಟಕ ಕರಾವಳಿ ಜನ ಹೋರಾಟ ನಡೆಸಿದರು. ಅವರಿಗೆ
   **ಎ) ಅಣುಸ್ಥಾವರ ದಟ್ಟ ಅರಣ್ಯವನ್ನು ನಾಶಪಡಿಸಬಹುದಾದ ಭೀತಿಯಿತ್ತು.**
   ಬಿ) ಕಲಸಿ ಅರಣ್ಯದಲ್ಲಿ ಸರ್ಕಾರ ಮರ ಕಡಿಯುವುದನ್ನು ನಿಲ್ಲಿಸಬೇಕಿತ್ತು.
   ಸಿ) ಪರಿಸರ ಸಮತೋಲನ ಹಾಳಾಗುವ ಭಯವಿತ್ತು.
   ಡಿ) ಪರಿಸರ ಮಾಲಿನ್ಯ ಹೆಚ್ಚಾಗುತ್ತೆ ಅನ್ನಿಸಿತ್ತು.

8. ಇವುಗಳಲ್ಲಿ ಕೇವಲ ವ್ಯವಸಾಯಾಧಾರಿತ ಕೈಗಾರಿಕೆಗಳ ಗುಂಪು.
ಎ) ಕಬ್ಬಿಣ, ಅಲ್ಯುಮಿನಿಯಂ, ತಾಮ್ರ ಕೈಗಾರಿಕೆಗಳು
**ಬಿ) ಹತ್ತಿಬಟ್ಟೆ, ಸೆಣಬು, ಸಕ್ಕರೆ ಕೈಗಾರಿಕೆಗಳು**
ಸಿ) ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು
ಡಿ) ಚಿತ್ರೋದ್ಯಮ, ವಿದ್ಯುತ್ ಉಪಕರಣ, ಪ್ಲಾಸ್ಟಿಕ್ ಕೈಗಾರಿಕೆಗಳು.

9. ಭಾರತದ ಆಡಳಿತ ವ್ಯವಸ್ಥೆಯಲ್ಲಿ 73ನೇ ಸಂವಿಧಾನಾತ್ಮಕ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಕಾರಣ
ಎ) (ಸಿವಿಲ್ ಸರ್ವಿಸ್) ನಾಗರೀಕ ಸೇವಾ ಪದ್ಧತಿ ಜಾರಿಗೆ ಬಂದಿತು.
**ಬಿ) ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿತು.**
ಸಿ) ಮೀಸಲಾತಿ ಪದ್ಧತಿ ಜಾರಿಗೆ ಬಂದಿತು.
ಡಿ) ಸಂಸತ್ತಿನ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಲಾಯಿತು.

10. ಜಾಗತೀಕರಣ ಮುಕ್ತ ವ್ಯಾಪಾರ ವಲಯ ಸೃಷ್ಟಿಸುವುದು.
ಎ) ಕಂಟೇನರ್ ಸೌಲಭ್ಯ ಒದಗಿಸುವುದರ ಮೂಲಕ
ಬಿ) ಸಹಾಯಧನ ಸೃಷ್ಟಿಸುವುದರ ಮೂಲಕ
**ಸಿ) ಆಮದು ಮತ್ತು ರಫ್ತು ಸುಂಕಗಳನ್ನು ನಿರ್ಮೂಲನ ಮಾಡುವುದರ ಮೂಲಕ.**
ಡಿ) ರಾಜಕೀಯ ಅಡಚಣೆಗಳನ್ನು ನಿವಾರಿಸುವುದರ ಮೂಲಕ.

**ಆ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ : 1*14=14**

11. ಲಾರ್ಡ್ ವೆಲ್ಲೆಸ್ಲಿಯ ಕಾಲದಲ್ಲಿ ಬ್ರಿಟೀಷ್ ಆಡಳಿತದ ವಿಸ್ತರಣೆ ಸುಲಭವಾಯಿತು. ಏಕೆ ?
12. 'ಪಾಲಿಸಿ ಆಫ್ ಅಸರ್ಷನ್' (Policy of Assertion) ಎಂದರೇನು ?
13. ಎರಡನೆ ಆಂಗ್ಲೋ ಮೈಸೂರು ಕದನವನ್ನು ಕೊನೆಗೊಳಿಸಲು ಕೈಗೊಂಡ ಒಪ್ಪಂದ ಯಾವುದು ?
14. ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳುವ ನೀತಿಯಿಂದ ಭಾರತೀಯರ ಮತ್ತು ಬ್ರಿಟೀಷರ ನಡುವಿನ ಅಂತರ ಕಡಿಮೆಯಾಯಿತು. ಹೇಗೆ ?
15. ಭಾರತೀಯ ವೃತ್ತ ಪತ್ರಿಕೆಗಳ ಅಭಿವೃದ್ಧಿಯಲ್ಲಿ ದೇಶೀಯ ಭಾಷಾ ಪತ್ರಿಕಾ ಕಾಯ್ದೆ (ವರ್ನಾಕ್ಯುಲರ್ ಪ್ರೆಸ್ ಆಕ್ಟ್) ಒಂದು ತೊಡಕಾಗಿತ್ತು. ಏಕೆ ?
16. ವರ್ಣಭೇದ ನೀತಿಯನ್ನು ಜಗತ್ತಿನಲ್ಲಿ ಎಲ್ಲಿಯೂ, ಯಾವ ರಾಷ್ಟ್ರವೂ ಅನುಸರಿಸಬಾರದು ಎಂಬ ವಿದೇಶಾಂಗ ನೀತಿಯನ್ನು ಭಾರತ ಹೇಳಿದೆ.ಏಕೆ?
17. ಸಾಮಾಜಿಕ ಸ್ಥರ ವಿನ್ಯಾಸ ಎಂದರೇನು ?
18. ಮಹಿಳಾ ಚಳುವಳಿ ಎಂದರೇನು ?
19. ಸಾಂದ್ರ ಬೇಸಾಯವನ್ನು ವ್ಯಾಖ್ಯಾನಿಸಿ.
20. ಇಂದು ನಮ್ಮ ದೇಶದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳು ತೀವ್ರ ಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಉದ್ಯಮವಾಗಿದೆ. ಏಕೆ ?
21. ವಿಶ್ವ ವ್ಯಾಪಾರ ಸಂಸ್ಥೆಯ ಕೇಂದ್ರ ಕಛೇರಿ ಎಲ್ಲಿದೆ ?
22. RBI ಸ್ಥಾಪನೆಗೊಂಡಿದ್ದು ಯಾವಾಗ ?
23. ಭೌಗೋಳಿಕ ಮೇಲ್ಮೈ ಲಕ್ಷಣಗಳು ಜನಸಂಖ್ಯಾ ಹಂಚಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ?
24. ಜನಸಾಂದ್ರತೆ ಮತ್ತು ಜನಸಂಖ್ಯೆಗಳಿಗಿರುವ ವ್ಯತ್ಯಾಸವೇನು ?

**ಇ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 2*15=30**

25. ಮೂರನೆಯ ಕರ್ನಾಟಕ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳೇನು ?
26. ಭಾರತದ ಸಾಮಾಜಿಕ ಸುಧಾರಣಾ ಚಳುವಳಿಗೆ ಬ್ರಹ್ಮ ಸಮಾಜವು ಹೇಗೆ ಶ್ರಮಿಸಿತು. ಉತ್ತರಿಸಿ.
27. ರಾಜಕೀಯ ಅಂಶಗಳು ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೇಗೆ ದಾರಿಯಾಯಿತು ?
28. ಭಾರತವು ಸ್ವಾತಂತ್ರ್ಯ ಗಳಿಸಿದ ನಂತರ ಎದುರಿಸಿದ ಸಮಸ್ಯೆಗಳನ್ನು ಹೆಸರಿಸಿ.

ಅಥವಾ

ಭಾರತದ ಒಕ್ಕೂಟಕ್ಕೆ ಬಲವಂತವಾಗಿ ಸೇರಿಸಿಕೊಳ್ಳಲ್ಪಟ್ಟ ದೇಶೀಯ ಸಂಸ್ಥಾನಗಳನ್ನು ಹೆಸರಿಸಿ.
29. ಶಸ್ತ್ರಾಸ್ತ್ರ ಸಂಗ್ರಹ ಪೈಪೋಟಿಯಲ್ಲಿ ಅಮೇರಿಕವು ಹೇಗೆ ಮೇಲುಗೈ ಸಾಧಿಸಿತು ?
30. ಅನ್ಯ ರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ ಹೊಂದುವುದು ಅನಿವಾರ್ಯವಾಗಿದೆ. ಏಕೆ ?
31. ತೃತೀಯ ಜಗತ್ತಿನ ರಾಷ್ಟ್ರಗಳು ಎದುರಿಸುತ್ತಿರುವ ಕುಂದು ಕೊರತೆಗಳೇನು ?

32. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ 2012 ಜಾರಿಗೆ ತರಲು ಕಾರಣಗಳೇನು ?

33. ಉತ್ತರದ ಮೈದಾನಗಳ ಪ್ರಾಮುಖ್ಯತೆಯನ್ನು ವಿವರಿಸಿ.

34. ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

35. ಅರಣ್ಯಗಳ ಪ್ರಾಮುಖ್ಯತೆಯಲ್ಲಿ ಯಾವುದಾದರೂ ನಾಲ್ಕನ್ನು ತಿಳಿಸಿ.

36. ಭಾರತಕ್ಕೆ ನೀರಾವರಿ ಸೌಲಭ್ಯ ಅತ್ಯಗತ್ಯ. ಏಕೆ ?

37. ಭಾರತದ ಸಾಗರ ಜಲಸಾರಿಗೆಗೆ ಪೂರಕವಾಗಿರುವ ಅಂಶಗಳಾವುವು ?

38. ಭಾರತದ ಸಂವಿಧಾನವು ಮಹಿಳೆಯರಿಗೆ ಪುರಷರಷ್ಟೆ ಸ್ವಾತಂತ್ರ್ಯ ಸಮಾನತೆ ನೀಡಿದ್ದರೂ ತಾರತಮ್ಯತೆ ಇನ್ನೂ ಕಡಿಮೆಯಾಗಿಲ್ಲ.ಏಕೆ?

39. ಒಬ್ಬ ಗ್ರಾಹಕನು ತಾನು ಕೊಂಡ ವಸ್ತುವಿಗೆ ಗ್ಯಾರೆಂಟಿ ಇದ್ದಾಗ್ಯೂ ತಿರಸ್ಕರಿಸಲ್ಪಟ್ಟಾಗ ಆತನು ಏನು ಮಾಡಬಹುದು ?

**ಈ. ಈ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ. 3*6=18**

40. ಭಾರತೀಯರ ಮೇಲೆ ಬ್ರಿಟೀಷ್ ಶಿಕ್ಷಣ ಪದ್ಧತಿಯು ಬೀರಿದ ಪರಿಣಾಮಗಳನ್ನು ವಿವರಿಸಿ.

ಅಥವಾ

ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿವರಿಸಿ.

41. ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳೇನು ?

ಅಥವಾ

ವಿಶ್ವಸಂಸ್ಥೆಯ ಗುರಿಗಳೇನು ?

42. ಶೈಕ್ಷಣಿಕ ಸಮಾನತೆಯನ್ನು ಸ್ಥಾಪಿಸಲು ನಮ್ಮ ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

ಅಥವಾ

ಭಾರತದ ದುಡಿಮೆಯೊಳಗಿರುವ ಅಸಮಾನತೆಗಳನ್ನು ವಿವರಿಸಿ.

43. ಮುಂಬಯಿ ನಗರವು ಇಂದಿಗೂ ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾಗಿದೆ. ಏಕೆ ?

ಅಥವಾ

ಪ್ರಪಂಚದಲ್ಲಿ ಇಂದು ಸಂಭವಿಸುವ ಭೂಕುಸಿತಗಳಿಗೆ ಮಾನವ ಕೃತ್ಯಗಳು ಕಾರಣವಾಗಿವೆ. ಹೇಗೆ ?

44. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳೇನು ?

ಅಥವಾ

ಸಾರ್ವಜನಿಕ ವೆಚ್ಚದ ಉದ್ದೇಶಗಳೇನು ?

45. ಅಂಚೆ ಕಛೇರಿಗಳು ಒದಗಿಸುವ ಸೇವೆಗಳೇನು ?

ಅಥವಾ

ಉದ್ಯಮಿಯ ಕಾರ್ಯಗಳೇನು ?

**ಉ. ಈ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4*1=4**

46. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪ್ರತಿಭಟನೆಗಳ ಪಾತ್ರವನ್ನು ವಿವರಿಸಿ.

47. ಭಾರತದ ನಕ್ಷೆ ಬರೆದು ಇವುಗಳನ್ನು ಗುರುತಿಸಿ. **1+3=4**

ಎ) 82 $^1/_2$ ಪೂರ್ವ ರೇಖಾಂಶ ಬಿ) ಎನ್ನೋರ್ ಸಿ) ನಹರ್ಕಾತಿಯ

**************